ಹುಬ್ಬಳ್ಳಿ
ಬುಧವಾರ, 13 ಮೇ 2026
ಸಂಪುಟ 16, ಸಂಚಿಕೆ 49, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸಾರಿಗೆ ನೌಕರರಿಗೆ ಶೇ.2.5 ವೇತನ ಹೆಚ್ಚಳ | 0೩ ಸುವೇಂದು ಆಪ್ತನ ಹತ್ಯೆ: ತನಿಖೆ ಆರಂಭ | 0೭ ಪಾಕ್‌ಗೆ ಚೀನಾ ನೆರವು ತಿಳಿದಿತ್ತು | 0೭

ವೈದ್ಯಕೀಯ ಪ್ರವೇಶ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ | ಓರ್ವ ಸೆರೆ

ನೀಟ್ ಮರು ಪರೀಕ್ಷೆ

• ಹೊಸದಿಲ್ಲಿ/ನಾಸಿಕ್: ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ಮೇ 3ರಂದು ನಡೆದಿದ್ದ ನೀಟ್(ಯುಜಿ) 2026 ಪರೀಕ್ಷೆಯನ್ನು ಮಂಗಳವಾರ ರದ್ದುಪಡಿಸಲಾಗಿದ್ದು, ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವಂತೆ ಕೇಂದ್ರ ಸರ್ಕಾರ ಸೂಚಿಸಿದ ನಂತರ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ವೈದ್ಯಕೀಯ ಕಾಲೇಜುಗಳ ಪದವಿ ಪೂರ್ವ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಈ ಪರೀಕ್ಷೆಯನ್ನು ನಡೆಸುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ), ಹೊಸ ದಿನಾಂಕಗಳನ್ನು ಮುಂದಿನ 7ರಿಂದ 10 ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದೆ.



ಸಿಬಿಐ ತನಿಖೆ

ಮೇ 3ರಂದು ನಡೆದ ಪರೀಕ್ಷೆಯ ಪ್ರಶ್ನೆಗಳು ಕೆಲವು ಕೋಚಿಂಗ್ ಕೇಂದ್ರಗಳಲ್ಲಿ ಹಂಚಿಕೆಯಾಗಿದ್ದ ಮಾದರಿ ಪ್ರಶ್ನೆ ಪತ್ರಿಕೆಗಳಿಗೆ ಹೋಲಿಕೆಯಾಗಿದ್ದವು ಎಂಬ ಆರೋಪಗಳು ಕೇಳಿಬಂದಿದ್ದು, ವಿಶೇಷವಾಗಿ ರಾಜಸ್ಥಾನದಲ್ಲಿ ಪರೀಕ್ಷೆಗೆ ಮುನ್ನವೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ ಸಾಕ್ಷ್ಯಗಳು ಲಭ್ಯವಾಗಿದ್ದರಿಂದ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿದೆ.ಈ ಬೆಳವಣಿಗೆಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಆತಂಕ ಉಂಟಾಗಿದ್ದು, ಪರೀಕ್ಷೆಯ ಪಾರದರ್ಶಕತೆ ಬಗ್ಗೆ ಪ್ರಶ್ನೆಗಳು ಕೇಳಿಬಂದಿವೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ನ್ಯಾಯಸಮ್ಮತ ಮೌಲ್ಯಮಾಪನಕ್ಕಾಗಿ ಇಡೀ ನೀಟ್(ಯುಜಿ) ಪರೀಕ್ಷೆಯನ್ನು ರದ್ದುಪಡಿಸಿರುವುದಾಗಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಘೋಷಿಸಿದೆ. ಎನ್‌ಟಿಎ ಅಧಿಕಾರಿಗಳ ಪ್ರಕಾರ, ಪರೀಕ್ಷೆ ಮೇ 3ರಂದು ನಡೆದಿದ್ದು, ಮೇ 7ರಂದು ಅಕ್ರಮಗಳ ಕುರಿತು ಪ್ರಾಥಮಿಕ ಮಾಹಿತಿ ಲಭ್ಯವಾಯಿತು. ತಕ್ಷಣವೇ ಕೇಂದ್ರ ತನಿಖಾ ಸಂಸ್ಥೆಗಳು ಮತ್ತು ಕಾನೂನು ಜಾರಿ ವಿಭಾಗಗಳಿಗೆ ಮಾಹಿತಿ ನೀಡಲಾಗಿತ್ತು. ಮೇ 8ರಂದು ನಡೆದ ಶೋಧ ಕಾರ್ಯಾಚರಣೆ ವೇಳೆ ರಾಜಸ್ಥಾನದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ನಡೆದಿರುವ ಬಗ್ಗೆ ಮಹತ್ವದ ಸುಳಿವುಗಳು ದೊರೆತಿವೆ ಎಂದು ಹೇಳಲಾಗಿದೆ.

ಕೇಂದ್ರ ತನಿಖಾ ಸಂಸ್ಥೆಗಳು ನೀಡಿದ ವರದಿಗಳ ಆಧಾರದ ಮೇಲೆ ನೀಟ್ ಪರೀಕ್ಷೆಯನ್ನು ರದ್ದುಪಡಿಸಿ ಮರುಪರೀಕ್ಷೆ ನಡೆಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಎನ್‌ಟಿಎ ಸ್ಪಷ್ಟಪಡಿಸಿದೆ. ಈ ಬಾರಿ ದೇಶದ 551 ನಗರಗಳು ಹಾಗೂ ವಿದೇಶಗಳ 14 ನಗರಗಳಲ್ಲಿ ಪರೀಕ್ಷೆ ಆಯೋಜಿಸಲಾಗಿತ್ತು. ಒಟ್ಟು 23 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.



ಮರುಪರೀಕ್ಷೆಯ ಹೊಸ ವೇಳಾಪಟ್ಟಿ ಮುಂದಿನ 7 ರಿಂದ 10 ದಿನಗಳಲ್ಲಿ ಪ್ರಕಟ: ಎನ್‌ಟಿಎ

ನಾಸಿಕ್‌ನಲ್ಲಿ ಓರ್ವನ ಬಂಧನ

ಇದರ ಬೆನ್ನಲ್ಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಒಬ್ಬ ಶಂಕಿತ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ರಾಜಸ್ಥಾನ ಪೊಲೀಸರ ಮನವಿಯ ಮೇರೆಗೆ ನಾಸಿಕ್ ಅಪರಾಧ ವಿಭಾಗದ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ಈ ಕುರಿತು ಮಾತನಾಡಿದ ಪೊಲೀಸ್ ಉಪ ಆಯುಕ್ತ ಕಿರಣ್ ಕುಮಾರ್ ಚವಾಣ್, ರಾಜಸ್ಥಾನ ಪೊಲೀಸರಿಂದ ಮಾಹಿತಿ ಬಂದ ತಕ್ಷಣ ಕಾರ್ಯಾಚರಣೆ ಕೈಗೊಳ್ಳಲಾಗಿದ್ದು, ಶಂಕಿತ ಆರೋಪಿಯನ್ನು ಬಂಧಿಸಲಾಗಿದೆ.

ಮರು ನೋಂದಣಿ ಅಗತ್ಯವಿಲ್ಲ

ನೀಟ್ ಪರೀಕ್ಷೆಗೆ ಹೊಸ ನೋಂದಣಿ ಅಗತ್ಯವಿಲ್ಲ ಮತ್ತು ಯಾವುದೇ ಹೆಚ್ಚುವರಿ ಪರೀಕ್ಷಾ ಶುಲ್ಕ ಪಾವತಿಸಬೇಕಿಲ್ಲ ಎಂದು ಎನ್‌ಟಿಎ ಹೇಳಿದೆ. ಈಗಾಗಲೇ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕವನ್ನು ಮರುಪಾವತಿಸಲಾಗುವುದು ಮತ್ತು ಎನ್‌ಟಿಎಯ ಆಂತರಿಕ ಸಂಪನ್ಮೂಲಗಳನ್ನು ಬಳಸಿ ಮರು ಪರೀಕ್ಷೆ ನಡೆಸಲಾಗುವುದು ಎಂದೂ ತಿಳಿಸಿದೆ.

ಸಿಬಿಐನಿಂದ ಎಫ್‌ಐಆರ್

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಸಿಬಿಐ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಅನ್ವಯ ಅಪರಾಧ ಸಂಚು, ಮೋಸ, ನಂಬಿಕೆ ದ್ರೋಹ, ಕಳ್ಳತನ ಹಾಗೂ ಸಾಕ್ಷ್ಯ ನಾಶಪಡಿಸುವ ಆರೋಪ ಜತೆಗೆ ಭ್ರಷ್ಟಾಚಾರ ತಡೆ ಕಾಯ್ದೆ ಹಾಗೂ ಸಾರ್ವಜನಿಕ ಪರೀಕ್ಷೆಗಳಲ್ಲಿ ಅನ್ಯಾಯ ಮಾರ್ಗ ತಡೆ ಕಾಯ್ದೆ 2024ರಲ್ಲಿ ಪ್ರಕರಣ ದಾಖಲಿಸಿದೆ. ಸಂಸ್ಥೆ ಹಲವು ವಿಶೇಷ ತಂಡಗಳನ್ನು ವಿವಿಧ ಸ್ಥಳಗಳಿಗೆ ಕಳುಹಿಸಿದ್ದು, ರಾಜಸ್ಥಾನ ಪೊಲೀಸರ ವಿಶೇಷ ಕಾರ್ಯಾಚರಣೆ ದಳದಿಂದ(ಎಸ್‌ಒಜಿ) ದಾಖಲೆಗಳನ್ನು ಕೂಡ ಸಂಗ್ರಹಿಸಲಿದೆ. ರಾಜಸ್ಥಾನ ಪೊಲೀಸ್ ಎಸ್‌ಒಜಿ, ಪರೀಕ್ಷೆಗೆ ಮುನ್ನ ವಿದ್ಯಾರ್ಥಿಗಳ ನಡುವೆ ಹರಡಲಾಗಿದ್ದ ಎನ್ನಲಾದ ರಸಾಯನಶಾಸ್ತ್ರದ ಗೆಸ್ ಪೇಪರ್‌ನಲ್ಲಿ ಸುಮಾರು 410 ಪ್ರಶ್ನೆಗಳಿದ್ದು, ಅವುಗಳಲ್ಲಿ ಸುಮಾರು 120 ಪ್ರಶ್ನೆಗಳು ನೈಜ ಪ್ರಶ್ನೆಪತ್ರಿಕೆಯಲ್ಲಿ ಇದ್ದವು ಎಂದು ಹೇಳಿತ್ತು.

ತ.ನಾಡು ಸರ್ಕಾರ ಮಹತ್ವದ ನಿರ್ಧಾರ

ದೇಗುಲ ಬಳಿ ಮದ್ಯ ಅಂಗಡಿಗಳಿಗೆ ಬೀಗ

• ಚೆನ್ನೈ: ತಮಿಳುನಾಡಿನಲ್ಲಿ ದೇವಾಲಯಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಬಸ್ ನಿಲ್ದಾಣಗಳ 500 ಮೀಟರ್ ವ್ಯಾಪ್ತಿಯಲ್ಲಿರುವ 717 ಟಾಸ್ಮಾಕ್ ಮದ್ಯದಂಗಡಿಗಳನ್ನು ಎರಡು ವಾರಗಳೊಳಗೆ ಮುಚ್ಚುವಂತೆ ಅಧಿಕಾರಿಗಳಿಗೆ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಮಂಗಳವಾರ ಸೂಚನೆ ನೀಡಿದ್ದಾರೆ.

ತಮಿಳುನಾಡು ಸರ್ಕಾರದ ಮಾಹಿತಿಯ ಪ್ರಕಾರ, ರಾಜ್ಯದಲ್ಲಿ ಪ್ರಸ್ತುತ ತಮಿಳುನಾಡು ಸ್ಟೇಟ್ ಮಾರ್ಕೆಟಿಂಗ್ ಕಾರ್ಪೊರೇಷನ್ (ಟಾಸ್ಮಾಕ್) ವತಿಯಿಂದ ಒಟ್ಟು 4,765 ಮದ್ಯ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ಮುಖ್ಯಮಂತ್ರಿ ಆದೇಶದ ನಂತರ ಅಧಿಕಾರಿಗಳು ರಾಜ್ಯವ್ಯಾಪಿ ಪರಿಶೀಲನೆ ನಡೆಸಿ, ದೇವಾಲಯಗಳು, ಶಾಲೆಗಳು, ಕಾಲೇಜುಗಳು ಹಾಗೂ ಬಸ್ ನಿಲ್ದಾಣಗಳ ಸಮೀಪ ದಲ್ಲಿರುವ ಮದ್ಯದಂಗಡಿಗಳ ಪಟ್ಟಿ ಸಿದ್ಧಪಡಿಸಿದ್ದಾರೆ. ಪರಿಶೀಲನೆಯಲ್ಲಿ 276 ಮದ್ಯದಂಗಡಿಗಳು ಧಾರ್ಮಿಕ ಸ್ಥಳಗಳ ಸಮೀಪ, 186 ಅಂಗಡಿಗಳು ಶಿಕ್ಷಣ ಸಂಸ್ಥೆಗಳ ಬಳಿ ಹಾಗೂ 255 ಅಂಗಡಿಗಳು ಬಸ್ ನಿಲ್ದಾಣಗಳ ಹತ್ತಿರ ಇರುವುದಾಗಿ ಪತ್ತೆಯಾಗಿವೆ. ಒಟ್ಟಾರೆ 717 ಮದ್ಯದಂಗಡಿಗಳನ್ನು ಮುಚ್ಚಲು ಸರ್ಕಾರ ತೀರ್ಮಾನಿಸಿದೆ. ಸಾರ್ವಜನಿಕರ ಆತಂಕ ಹಾಗೂ ಮಹಿಳೆಯರು ಮತ್ತು ವಿದ್ಯಾರ್ಥಿಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ➡ಪುಟ ೪



ಇಂದು ಸಿಎಂ ವಿಜಯ್‌ಗೆ ವಿಶ್ವಾಸಮತದ ಅಗ್ನಿಪರೀಕ್ಷೆ

• ಚೆನ್ನೈ: ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರ ವಿಧಾನಸಭೆಯಲ್ಲಿ ಬುಧವಾರ ವಿಶ್ವಾಸಮತ ಯಾಚನೆಯ ಅಗ್ನಿಪರೀಕ್ಷೆ ಎದುರಿಸಲಿದೆ. • ವಿವರ ಪುಟ ೭



ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿದ ಟಿವಿಕೆ ಶಾಸಕ

• ಹೊಸದಿಲ್ಲಿ: ಟಿವಿಕೆ ಶಾಸಕ ಆರ್. ಶ್ರೀನಿವಾಸ ಸೇತುಪತಿ ಅವರು ತಮಿಳುನಾಡು ವಿಧಾನಸಭೆಯಲ್ಲಿ ಮತ ಚಲಾಯಿಸಲು ಅವಕಾಶ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ವಿಧಾನಸಭೆಯ ವಿಶ್ವಾಸಮತ ಅಥವಾ ಯಾವುದೇ ಮತದಾನದಲ್ಲಿ ಭಾಗವಹಿಸಬಾರದು ಎಂದು ಮದ್ರಾಸ್ ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಅವರು ಮೇಲ್ಮನವಿ ಸಲ್ಲಿಸಿದ್ದಾರೆ.ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠದ ಮುಂದೆ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ತುರ್ತು ವಿಚಾರಣೆಗೆ ಮನವಿ ಮಾಡಿದ್ದು, ಸುಪ್ರೀಂ ಕೋರ್ಟ್ ಬುಧವಾರ ವಿಚಾರಣೆ ನಡೆಸಲು ಒಪ್ಪಿದೆ. ➡ಪುಟ ೪

ಟಿವಿಕೆಗೆ ಎಐಎಡಿಎಂಕೆ ಷಣ್ಮುಗಂ ಬಣ ಬೆಂಬಲ • ಪುಟ ೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ : ಏಕಾದಶಿ, ನಕ್ಷತ್ರ : ಉತ್ತರಭಾದ್ರ

ದಿನದ ಮಾತು

ಲೋಕದಲ್ಲಿ ಯಾವನ ಸತ್ಕೀರ್ತಿ ಬದುಕಿರುವುದೋ ಆತನೇ ಅಮರನು.

▲ ನೀತಿ ಕುಸುಮಮಾಲೆ

ಮೋದಿ ಹೇಳಿದರೆ ಜನ ಯಾಕೆ ಕೇಳುತ್ತಾರೆ?

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಚಾರಣಪಥ-ಸಂಚಾರಪಥ ತಾತ್ಕಾಲಿಕ ಸ್ಥಗಿತ: ಸಚಿವ

• ಬೆಂಗಳೂರು: ಚಾಮರಾಜನಗರದ ನಾಗಮಲೆ ಅರಣ್ಯದಲ್ಲಿ ಚಿರತೆ ದಾಳಿಯಿಂದ 10 ವರ್ಷದ ಬಾಲಕ ಮೃತಪಟ್ಟಿರುವ ಹಿನ್ನೆಲೆಯಲ್ಲಿ ವನ್ಯಜೀವಿ ಸಂಚಾರದಲ್ಲಿ ಎಲ್ಲ ಚಾರಣಪಥ ಮತ್ತು ಸಂಚಾರಪಥಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ಸಾರ್ವಜನಿಕರು ಮತ್ತು ಚಾರಣಿಗರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಆದೇಶದವರೆಗೆ ಚಿರತೆ, ಹುಲಿ, ಆನೆ, ಕರಡಿ ಮತ್ತಿತರೆ ವನ್ಯಜೀವಿಗಳು ಸಂಚರಿಸುವ ಮತ್ತು ಮಾನವ-ವನ್ಯಜೀವಿ ಸಂಘರ್ಷ ಸಂಭವಿಸಿರುವ ಕಡೆಗಳಲ್ಲಿ ಚಾರಣ ಮತ್ತು ಸಂಚಾರ ಪಥಗಳನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಲು ಸೂಚಿಸಲಾಗಿದೆ. ಈ ಸಂಬಂಧ ಅಧಿಕೃತ ಸುತ್ತೋಲೆ ಹೊರಡಿಸಲಾಗಿದೆ. ➡ಪುಟ ೪

ಪಾಕ್ ಮಾರುಕಟ್ಟೆಯಲ್ಲಿ ಸ್ಫೋಟ: 10 ಮಂದಿ ಸಾವು

• ಪುಟ ೭

ಕೈ ಸಿಎಂ ಆಯ್ಕೆ ಗೊಂದಲ ಮತದಾರರಿಗೆ ಅವಮಾನ

• ಪುಟ ೭

ಪ.ಬಂಗಾಳದಲ್ಲಿ ರಸ್ತೆ ಬದಿ ನಮಾಜ್‌ಗೆ ಅವಕಾಶವಿಲ್ಲ

• ಪುಟ ೭

ಮಧ್ಯವರ್ತಿ ಪಾಕ್‌ನ ಇಬ್ಬಗೆ ನೀತಿ ಬಯಲು

• ಪುಟ ೭

ಅನುಭವ ಮಂಟಪ ಶೀಘ್ರ ಪೂರ್ಣ: ಖಂಡ್ರೆ

• ಪುಟ ೩



ನೀಟಾದ ಪ್ರೈವೇಟ್ ಮಾಫಿಯಾ ಜಾಲ

• ಪುಟ ೭

ಸುದ್ದಿ ಸಮಗ್ರ

ಬಿಜೆಪಿಯ ಇಬ್ಬರು ಸೇರಿ 4 ಶಾಸಕರು ಸಚಿವರಾಗಿ ಪದಗ್ರಹಣ

ಅಸ್ಸಾಂ ಸಿಎಂ ಆಗಿ ಬಿಸ್ವಾ ಪ್ರಮಾಣ

• ಗುವಾಹತಿ: ಸತತ ದ್ವಿತೀಯ ಅವಧಿಗೆ ಅಸ್ಸಾಂ ಮುಖ್ಯಮಂತ್ರಿಯಾಗಿ ಹಿಮಂತ ಬಿಸ್ವಾ ಶರ್ಮಾ ಮಂಗಳವಾರ ಪ್ರಮಾಣವಚನ ಸ್ವೀಕರಿಸಿದರು. ತನ್ಮೂಲಕ ಈಶಾನ್ಯ ವಲಯದಲ್ಲಿ ಬಿಜೆಪಿ ನೇತೃತ್ವದ ತೃತೀಯ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಬಿಜೆಪಿಯ ರಾಮೇಶ್ವರ್ ತೇಲಿ ಹಾಗೂ ಅಜಂತ ನೆಯೋಗ್, ಎಜಿಪಿಯ ಅತುಲ್ ಬೋರಾ, ಬಿಪಿಎಫ್‌ನ ಛರಣ್ ಬೋರೋ ಹೊಸ ಸಂಪುಟ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಗುವಾಹತಿಗೆ ಸಮೀಪದ ಖಾನಪಾರಾ ಪ್ರದೇಶದಲ್ಲಿನ ವೆಟರಿನರಿ ಗ್ರೌಂಡ್‌ನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಸಿಎಂ ಶರ್ಮಾ ಹಾಗೂ ನಾಲ್ವರು ಶಾಸಕರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ ಸಿಂಗ್, ನಿತಿನ್ ಗಡ್ಕರಿ, ಸರ್ಬಾನಂದ ಸೋನೊವಾಲ್, ಪವಿತ್ರಾ ಮಾರ್ಗರಿಟಾ, ಬಿಜೆಪಿ ಆಳ್ವಿಕೆ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು, ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ➡ಪುಟ ೪



ಪ್ರಧಾನಿ ಮೋದಿ ಅಭಿನಂದನೆ

• ಪುಟ ೪

123 ಕೋಟಿ ರೂ. ವೆಚ್ಚದ ಯೋಜನೆ: ಎಚ್.ಡಿ. ಕುಮಾರಸ್ವಾಮಿ

1,243 ಇವಿ ಚಾರ್ಜಿಂಗ್ ಕೇಂದ್ರ

• ಬೆಂಗಳೂರು: ಕೇಂದ್ರ ಸರ್ಕಾರದ ಪಿಎಂ ಇ-ಡ್ರೈವ್ ಯೋಜನೆಯಲ್ಲಿ 123.26 ಕೋಟಿ ರೂ. ವೆಚ್ಚದಲ್ಲಿ ರಾಜ್ಯಕ್ಕೆ 1,243 ಹೊಸ ಇವಿ ಚಾರ್ಜಿಂಗ್ ಕೇಂದ್ರಗಳನ್ನು ನೀಡಲಾಗಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ಯಮಗಳ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.



ಮಂಗಳವಾರ ಖಾಸಗಿ ಹೋಟೆಲ್‌ನಲ್ಲಿ ಪಿಎಂ ಇ-ಡ್ರೈವ್ ಯೋಜನೆಯಲ್ಲಿ ರಾಷ್ಟ್ರವ್ಯಾಪಿ ಇವಿ ಚಾರ್ಜಿಂಗ್ ಮೂಲಸೌಕರ್ಯವನ್ನು ಸಕ್ರಿಯಗೊಳಿಸುವ ಕುರಿತು ನಡೆದ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಪಿಎಂ ಇ-ಡ್ರೈವ್ ಯೋಜನೆಯ ಮೂಲಕ ರಾಜ್ಯದ ಇವಿ ವಾಹನೋದ್ಯಮಕ್ಕೆ ಪರಿವರ್ತನಾತ್ಮಕ ವೇಗ ದೊರೆಯುತ್ತದೆ ಎಂದು ಪ್ರತಿಪಾದಿಸಿದರು. ➡ಪುಟ ೪



> ಬೆಂಗಳೂರು ದೇಶದ ಪ್ರಮುಖ ಇವಿ ಚಾರ್ಜಿಂಗ್ ಕೇಂದ್ರಗಳಲ್ಲಿ ಒಂದಾಗಿದೆ. ಭಾರತದ ಆಟೋಮೋಟಿವ್ ವಲಯವು ದೇಶದ ಒಟ್ಟು ಜಿಡಿಪಿಗೆ ಶೇ.7ಕ್ಕಿಂತ ಹೆಚ್ಚು ಕೊಡುಗೆ ನೀಡುತ್ತದೆ. ಉತ್ಪಾದನಾ ಜಿಡಿಪಿಯ ಸುಮಾರು ಅರ್ಧದಷ್ಟಿದೆ ಮತ್ತು ಸುಮಾರು 30 ದಶಲಕ್ಷದಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತಿದೆ.
>
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಹೆಸರು ಅಂತಿಮ, ಘೋಷಣೆಯಷ್ಟೇ ಬಾಕಿ

ಕೇರಳ ಹೊಸ ಸಿಎಂ ಕೆಸಿವಿ?

• ಹೊಸದಿಲ್ಲಿ: ಕೇರಳ ಮುಖ್ಯಮಂತ್ರಿ ಹೆಸರನ್ನು ಅಂತಿಮಗೊಳಿಸಿದ್ದೇವೆ. ಶೀಘ್ರದಲ್ಲಿ ಅಧಿಕೃತ ಘೋಷಣೆ ಮಾಡುವುದಾಗಿ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಅಧ್ಯಕ್ಷ ಸನ್ನಿ ಜೋಸೆಫ್ ಹೇಳಿದ್ದಾರೆ. ರಾಹುಲ್ ಆಪ್ತ ಮತ್ತು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮುಖ್ಯಮಂತ್ರಿ ಆಗುವ ಸಾಧ್ಯತೆ ಹೆಚ್ಚಾಗಿದೆ. ಕೇರಳ ಮುಖ್ಯಮಂತ್ರಿ ಆಯ್ಕೆ ವಿಚಾರವಾಗಿ ಸನ್ನಿ ಜೋಸೆಫ್‌ರನ್ನು ದಿಲ್ಲಿಗೆ ಕರೆಸಿಕೊಂಡು ವಿಪಕ್ಷ ನಾಯಕ ರಾಹುಲ್ ಗಾಂಧಿ ಚರ್ಚೆ ನಡೆಸಿದ್ದು, ಬಳಿಕ ಅವರು ಹೀಗೆ ಹೇಳಿದ್ದಾರೆ.ಇತರ ರಾಜ್ಯಗಳಲ್ಲೆಲ್ಲಾ ಮುಖ್ಯಮಂತ್ರಿಗಳ ಆಯ್ಕೆಯಾಗಿದ್ದು, ನೆರೆಯ ತಮಿಳುನಾಡಿನಲ್ಲಿ ವಿಜಯ್ ನೇತೃತ್ವದ ಟಿವಿಕೆ ಸರ್ಕಾರ ರಚನೆಯಾಗಿ ಬುಧವಾರ ವಿಶ್ವಾಸಮತ ಪರೀಕ್ಷೆ ಎದುರಿಸಲಿದೆ. ಆದರೆ ಕೇರಳ ಮುಖ್ಯಮಂತ್ರಿ ಹೆಸರನ್ನು ಕೈ ಹೈಕಮಾಂಡ್ ಇನ್ನೂ ಘೋಷಿಸಿಲ್ಲ. ➡ಪುಟ ೪

ಪೂರೈಕೆ ಅಬಾಧಿತ | ಮೋದಿ ಸಲಹೆ ಪಾಲಿಸಿ: ಕೇಂದ್ರ

ದೇಶದಲ್ಲಿ ಇಂಧನ ಬಿಕ್ಕಟ್ಟಿಲ್ಲ

• ಹೊಸದಿಲ್ಲಿ: ಭಾರತದಲ್ಲಿ ಎರಡು ತಿಂಗಳಿಗೆ ಸಾಕಾಗುವಷ್ಟು ಇಂಧನ ದಾಸ್ತಾನಿದೆ. ಜಾಗತಿಕ ಇಂಧನ ಪೂರೈಕೆ ವ್ಯವಸ್ಥೆ ಅಸ್ತವ್ಯಸ್ತಗೊಂಡಿರುವ ಹೊರತೂ, ಇಂಧನ ಪೂರೈಕೆ ವಿಚಾರದಲ್ಲಿ ಭಾರತಕ್ಕೆ ಯಾವುದೇ ಆತಂಕವಿಲ್ಲ ಎಂದು ಕೇಂದ್ರ ತೈಲ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.



ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗಬಹುದಾದ ಆರ್ಥಿಕ ಒತ್ತಡವನ್ನು ಕಡಿಮೆ ಮಾಡಲು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಯೋಚಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಮಿತವ್ಯಯದ ಮನವಿ, ಎಚ್ಚರಿಕೆಯ ಕರೆ ಆಗಿದೆ ಎಂದು ಇದೇ ವೇಳೆ ಅವರು ಹೇಳಿದರು. ಸಿಐಐ ವಾರ್ಷಿಕ ವಾಣಿಜ್ಯ ಶೃಂಗಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಚ್ಚಾತೈಲ ದರ ಏರಿಕೆ ಸ್ಥಿತಿ ನಿರಂತರಗೊಂಡಲ್ಲಿ ಮತ್ತು ಚಿಲ್ಲರೆ ಇಂಧನ ದರಗಳು ಸ್ಥಿರವಾಗುಳಿದಲ್ಲಿ ಅಥವಾ ಬದಲಾಗದಿದ್ದಲ್ಲಿ ಸರ್ಕಾರಿ ಸ್ವಾಮ್ಯದ ಚಿಲ್ಲರೆ ಇಂಧನ ಮಾರಾಟಗಾರರು ಕಾಲು ವರ್ಷದಲ್ಲಿ 1 ಲಕ್ಷ ಕೋಟಿ ರೂ. ನಷ್ಟ ಅನುಭವಿಸಬೇಕಾಗುವುದು ಎಂದರು. ➡ಪುಟ ೪



ಎಲ್‌ಪಿಜಿ ಉತ್ಪಾದನೆ ಗಣನೀಯ ಹೆಚ್ಚಳ

ಪೂರೈಕೆ ವಿಚಾರದಲ್ಲಿ ನಮಗೆ ಸಮಸ್ಯೆ ಇಲ್ಲ. ಬಿಕ್ಕಟ್ಟು ಶುರುವಾದಾಗಲೇ ಭಾರತವು ಸಾಮಾನ್ಯ ದಾಸ್ತಾನಿಗಿಂತಲೂ ಅಧಿಕ ಕಚ್ಚಾತೈಲ ಮತ್ತು ಎಲ್‌ಪಿಜಿ ದಾಸ್ತಾನು ಹೊಂದಲು ಆದ್ಯತೆ ನೀಡಿತ್ತು. ಆಗಲೇ ಎಲ್‌ಪಿಜಿ ಉತ್ಪಾದನೆ ಪ್ರಮಾಣವನ್ನು ಹಿಂದಿನ 36 ಸಾವಿರ ಟನ್‌ಗಳ ಬದಲು 54 ಸಾವಿರ ಟನ್‌ಗಳಿಗೇರಿಸಿದೆ. ಆದರೆ, ಚಿಲ್ಲರೆ ಇಂಧನ ಮಾರಾಟ ದರಗಳನ್ನು ಯಥಾವತ್ ಕಾಯ್ದುಕೊಂಡ ಪರಿಣಾಮ ವಿತ್ತೀಯ ಒತ್ತಡ ಬೆಳೆಯುತ್ತಲೇ ಇದೆ ಎಂದು ಸಚಿವ ಪುರಿ ಮಾಹಿತಿ ನೀಡಿದರು.

ಸನಾತನ ಧರ್ಮದ ಬಗ್ಗೆ ಉದಯನಿಧಿ ಉದ್ಧಟತನ ಮಾತು

• ಚೆನ್ನೈ: 2023 ಸೆಪ್ಟೆಂಬರ್‌ನಲ್ಲಿ ಹಿಂದು ಧರ್ಮವನ್ನು ಮಲೇರಿಯಾ, ಡೆಂಗ್ಯೂಗೆ ಹೋಲಿಸಿ ಅಸಂಬದ್ಧವಾಗಿ ಅವಹೇಳನ ಮಾಡುವ ಮುಖೇನ ಉದ್ಧಟತನ ಮೆರೆದಿದ್ದ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್‌ಗೆ, ಈ ಬಾರಿ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಸೋತು ಸುಣ್ಣವಾದರೂ ಬುದ್ಧಿ ಬಂದಂತಿಲ್ಲ. ಸನಾತನ ಧರ್ಮವನ್ನು ರದ್ದುಗೊಳಿಸಬೇಕೆಂದು ಮಂಗಳವಾರ ಮತ್ತೆ ನಿಂದೆ ಮಾಡುವ ಮೂಲಕ ಮತ್ತೆ ತಮ್ಮ ಅಪ್ರಬುದ್ಧತೆ ಮೆರೆದಿದ್ದಾರೆ.



• ವಿವರ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,90,000 (2,75,000)	ಅಪರಂಜಿ ಚಿನ್ನ: 1,53,980 (1,53,440)	ಆಭರಣ ಚಿನ್ನ: 1,41,150 (1,40,650)

ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ	ಬಿಎಸ್‌ಇ 74,559 (1456↓)	ಎನ್‌ಎಸ್‌ಇ 23,379 (436↓)	$1 = ₹95.80

ಕಿರುಸುದ್ದಿ

ಸಿಡಿಲು: ತೆಂಗಿನ ಮರಕ್ಕೆ ಬೆಂಕಿ



ಕುಂದಗೋಳ: ಪಟ್ಟಣ ಸೇರಿದಂತೆ ತಾಲೂಕಿನ ಶಿರೂರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಂಗಳವಾರ ಸಂಜೆ ಸುಮಾರು 40 ನಿಮಿಷಗಳ ಗಾಳಿ, ಗುಡುಗು ಸಹಿತ ಉತ್ತಮ ಮಳೆಯಾಯಿತು. ಬಿಸಿಲಿನ ತಾಪದಿಂದ ಬಳಲುತ್ತಿದ್ದ ಜನರಿಗೆ ಮಳೆಯ ತಂಪು ನಿರಾಳತೆ ತಂದಿತು. ಶಿರೂರ ಗ್ರಾಮದ ಇಮಾಮಹುಸೇನ ರಾಜೇಖಾನವರ ಅವರ ಮನೆಯ ಮುಂಭಾಗದ ತೆಂಗಿನ ಮರಕ್ಕೆ ಸಿಡಿಲು ಬಡಿದ ಪರಿಣಾಮ ಮರಕ್ಕೆ ಬೆಂಕಿ ಕಾಣಿಸಿಕೊಂಡಿತು. ಸ್ಥಳೀಯರು ತಕ್ಷಣವೇ ಎಚ್ಚರಿಕೆ ವಹಿಸಿದ ಪರಿಣಾಮ ಯಾವುದೇ ದೊಡ್ಡ ಅನಾಹುತ ಸಂಭವಿಸಿಲ್ಲ. ಕಳೆದ ಕೆಲವು ದಿನಗಳಿಂದ ಉಷ್ಣತೆಯಿಂದ ಕಂಗೆಟ್ಟಿದ್ದ ಜನರು ಮಳೆ ಆಗಮನದಿಂದ ಹರ್ಷ ವ್ಯಕ್ತಪಡಿಸಿದರು. ಮುಂಗಾರು ಬಿತ್ತನೆಗೆ ಹೊಲ ಸಿದ್ಧಪಡಿಸಿಕೊಂಡಿರುವ ರೈತರಿಗೆ ಈ ಮಳೆ ಆಶಾಭಾವನೆ ಮೂಡಿಸಿದೆ.

ಪ್ರತಿಭಾ ಪುರಸ್ಕಾರ ನಾಳೆ

ಧಾರವಾಡ: ಕರ್ನಾಟಕ ಮಹಾವಿದ್ಯಾಲಯದ 2025-26ನೇ ಸಾಲಿನ ಜಿಮಖಾನಾ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಮೇ 14ರಂದು ಬೆಳಗ್ಗೆ 11ಕ್ಕೆ ಕಾಲೇಜಿನ ಸ್ಫಾರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್, ರಂಗ ನಿರ್ದೇಶಕ ವಿಶ್ವೇಶ್ವರಿ ಹಿರೇಮಠ, ಕಾಲೇಜಿನ ವಿದ್ಯಾರ್ಥಿ ಕಾರ್ಯದರ್ಶಿ ಗೌರಿ, ಸೌಂದರ್ಯ ಪಾಲ್ಗೊಳ್ಳಲಿದ್ದಾರೆ. ಪ್ರಾಚಾರ್ಯ ಪ್ರೊ. ಐ.ಸಿ.ಮುಳಗುಂದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿಭಾಗದ ಅಧ್ಯಕ್ಷ ಡಾ. ಬಿ.ಎಸ್.ಭಜಂತ್ರಿ ಮತ್ತು ಉಪಾಧ್ಯಕ್ಷ ಪ್ರೊ. ಶಾಬನ್ ಗಾಂವಕರ ತಿಳಿಸಿದ್ದಾರೆ.

ನಾಟಕಗಳಲ್ಲಿ ನೈತಿಕತೆ ಅಡಕ



ಧಾರವಾಡ: ಗ್ರೀಕ್ ನಾಟಕಗಳು ಪ್ರಾಚೀನ ಸಂಸ್ಕೃತಿ, ರಂಗಭೂಮಿ ಜೊತೆ ತತ್ವಶಾಸ್ತ್ರ ಮತ್ತು ಮಾನವ ಶಾಸ್ತ್ರದ ತಳಹದಿಯಾಗಿ ಇಂದಿಗೂ ಗ್ರೀಕ್ ನಾಟಕಗಳಲ್ಲಿ ಪ್ರಸ್ತುತತೆ ಉಳಿಸಿಕೊಂಡಿವೆ ಎಂದು ಹಾಸನ ವಿವಿಯ ಕುಲಪತಿ ಪ್ರೊ. ತರೀಕೆರೆ ತಾರಾನಾಥ ಹೇಳಿದರು. ಧಾರವಾಡ ಕಟ್ಟೆ ಮತ್ತು ಹಾಸನ ವಿವಿಯ ಸಹಯೋಗದಲ್ಲಿ ನಗರದ ಕೆಎಲ್‌ಇ ಸಂಸ್ಥೆಯ ಮೃತ್ಯುಂಜಯ ಕಲಾ-ವಾಣಿಜ್ಯ ಭವನದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿದ ಅವರು, ಗ್ರೀಕ್ ನಾಟಕಗಳಲ್ಲಿ ಧರ್ಮ, ನ್ಯಾಯ, ನೈತಿಕ ಅಡಕ ಅಗಿದ್ದಾಗಿ ತಿಳಿಸಿದರು. ಮೃತ್ಯುಂಜಯ ಕಾಲೇಜಿನ ಪ್ರಾಚಾರ್ಯ ಡಾ.ನೀಲಕ್ಕ ಪಾಟೀಲ, ಲೇಖಕ ಡಾ. ವಿ.ಟಿ.ನಾಯಕ, ಹಂಪಿ ಕನ್ನಡ ವಿವಿ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ವೆಂಕಟಗಿರಿ ದಳವಾಯಿ ಮಾತನಾಡಿದರು. ಧಾರವಾಡ ಕಟ್ಟೆ ಅಧ್ಯಕ್ಷ ಡಾ.ಬಸವರಾಜ ಡೋಣೂರ್ ಅಧ್ಯಕ್ಷತೆ ವಹಿಸಿದ್ದರು. ಡಾ. ಡಿ.ಎಂ.ಹಿರೇಮಠ, ಧಾರವಾಡ ಕಟ್ಟೆ ಪ್ರಧಾನ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ದಾನರೆಡ್ಡಿ, ಕಾರ್ಯದರ್ಶಿ ಪ್ರಶಾಂತ ಮಾಂಡ್ರೆ, ಡಾ.ಬಸಯ್ಯ ಸ್ವಾಮಿ ಇದ್ದರು.

ಕಾನೂನು ದುರ್ಬಳಕೆ ಸಲ್ಲ



ಧಾರವಾಡ: ಕಾನೂನು ದುರ್ಬಳಸಿ, ಸುಳ್ಳು ಪ್ರಕರಣ ದಾಖಲಿಸುವವರ ವಿರುದ್ಧವೇ ಕಾನೂನು ಕ್ರಮ ಆಗಬೇಕು. ಕಾನೂನು ದುರ್ಬಳ ನ್ಯಾಯಾಂಗ ವ್ಯವಸ್ಥೆ ಮೇಲೆ ದುಷ್ಪರಿಣಾಮ ಬೀರುವುದಾಗಿ ನಿವೃತ್ತ ನ್ಯಾಯಾಧೀಶ ಎಸ್. ಎಚ್.ಮಿಟ್ಟಲಕೋಡ ಹೇಳಿದರು. ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ಕಾನೂನು ಮತ್ತು ನ್ಯಾಯ ಮಂಟಪ ಏರ್ಪಡಿಸಿದ್ದ ಪೋಕ್ಸೊ ಕಾನೂನು ಕುರಿತು ಉಪನ್ಯಾಸ ನೀಡಿದ ಅವರು, ಸುಳ್ಳು ಪ್ರಕರಣ ದಾಖಲಿಸುವ ಮತ್ತು ಶಾಮೀಲಾದ, ಸಾಕ್ಷಿದಾರರ ವಿರುದ್ಧವೂ ಸಹ ಕಠಿಣ ಶಿಕ್ಷೆ ವಿಧಿಸಬೇಕು. ಅಂದಾಗ ಖೊಟ್ಟಿ ಪ್ರಕರಣಗಳಿಗೆ ಕಡಿವಾಣ ಹಾಕಿದಾಗ ಮಾತ್ರವೇ ಸಾರ್ವಜನಿಕರಿಗೆ ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಬರುವುದಾಗಿ ತಿಳಿಸಿದರು. 2012ರಲ್ಲಿ ರಾಜ್ಯದಲ್ಲಿ ಪೋಕ್ಸೊ ಕಾಯ್ದೆ ಅನುಷ್ಠಾನದ ಬಳಿಕ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಕಡಿಮೆಯಾಗಿವೆ. ರಾಜ್ಯದಲ್ಲಿ ಪೋಕ್ಸೊ ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಬಹುತೇಕ ಖೊಟ್ಟಿಯಾಗಿವೆ ಎಂದು ಬೇಸರಿಸಿದರು. ಹುರಕಡ್ಲಿ ಕಾನೂನು ಕಾಲೇಜಿನ ಪ್ರಾಚಾರ್ಯ ಡಾ.ಸವಿತಾ ಪಾಟೀಲ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಧಾರವಾಡ ವಕೀಲರ ಸಂಘದ ಅಧ್ಯಕ್ಷ ಮಾತನಾಡಿರು. ಈ ವೇಳೆ ಧಾರವಾಡ ವಕೀಲರ ಸಂಘಕ್ಕೆ ಆಯ್ಕೆಯಾದ ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು. ಕವಿ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಬಸವಪ್ರಭು ಹೊಸಕೇರಿ, ಶಿವಾನಂದ ಭಾವಿಕಟ್ಟಿ, ಮಂಗಳಗೌರಿ ಹಿರೇಮಠ, ಗುರು ಕಲ್ಮಠ, ಪುಷ್ಪಾ ಒಂಟಿಗೋಡಿ, ಶಂಕರ ಹಲಗತ್ತಿ, ಡಾ.ಸುರೇಶ ಭಂಡಾರಿ, ಸಿ.ಎಸ್.ನಾಗಶೆಟ್ಟಿ, ಡಾ.ಲಿಂಗರಾಜ ಅಂಗಡಿ, ಮಹಾಂತೇಶ ನರೆಗಲ್ಲ ಇದ್ದರು.



ಹುಬ್ಬಳ್ಳಿ: ಹೆಸ್ಕಾಂ ಮೃತ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದಡಿ ನೇಮಕಾತಿ ಆದೇಶ ಪತ್ರವನ್ನು ಹೆಸ್ಕಾಂ ಅಧ್ಯಕ್ಷ ಸೈಯದ್ ಅಜೀಮ್‌ಪೀರ್ ಎಸ್. ಖಾದ್ರಿ ನೀಡಿದರು. ರೇಣವ್ವ ಹನುಮಂತ ತಳವಾರ, ಸಾಗರ ಮೋಹನ ರಾಠೋಡ ಹಾಗೂ ಶಂಕರ ಸುರೇಶ ಪೂಜಾರ ಅವರಿಗೆ ಅನುಕಂಪದ ಆಧಾರದಡಿ ನೇಮಕಾತಿ ಆದೇಶ ಪತ್ರ ನೀಡಿದರು. ಪ್ರಧಾನ ವ್ಯವಸ್ಥಾಪಕ ಮೊಹಮ್ಮದ ಖಿಜರ್, ಹೆಸ್ಕಾಂ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ವಿನಾಯಕ ಪಾಲನಕರ್ ಸೇರಿದಂತೆ ಹೆಸ್ಕಾಂ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ರಾಷ್ಟ್ರಕ್ಕೆ ವಿನಮ್ರತೆ ನಾಯಕರು ಅಗತ್ಯ

ಹುಬ್ಬಳ್ಳಿ: ನಗರದ ಇನ್ಸ್ಟಿಟ್ಯೂಟ್ ಆಫ್ ಎಕ್ಸಲೆನ್ಸ್ ಇನ್ ಮ್ಯಾನೇಜ್ಮೆಂಟ್ ಸೈನ್ಸ್ ತನ್ನ ಕ್ಯಾಂಪಸ್‌ನಲ್ಲಿ ಒಂದು ದಿನದ ಉತ್ತರ ಕರ್ನಾಟಕ ಕೆರಿಯರ್ ಸಮಾವೇಶ-2026 ಅನ್ನು ಆಯೋಜಿಸಿತ್ತು. ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸುರೇಶ್ ಜಂಗಮಶೆಟ್ಟಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಶಿಕ್ಷಣ, ಶಿಸ್ತು ಹಾಗೂ ವ್ಯಕ್ತಿ ಬೆಳವಣಿಗೆಯಲ್ಲಿ ಅವು ಜೊತೆ ಜೊತೆಯಲ್ಲಿ ಹೋಗಬೇಕು. ವ್ಯಕ್ತಿ ಜೀವನದ ಆರಂಭಿಕ ಆಯ್ದ ಜೀವನ ಸುಲಭಗೊಳಿಸುತ್ತದೆ ಎಂದರು. ಮೌಲ್ಯಗಳು ಹಾಗೂ ನೀತಿ ಶಾಸ್ತ್ರಗಳನ್ನು ಅನುಸರಿಸುವುದು ಸಮಾಜದಲ್ಲಿ ಬದಲಾವಣೆಗಳನ್ನು ತರುತ್ತದೆ. ರಾಷ್ಟ್ರಕ್ಕೆ ವಿನಮ್ರತೆ ಹೊಂದಿರುವ ನಾಯಕರ ಅಗತ್ಯವಿದೆ ಎಂದರು. ಯುಪಿಎಸ್‌ಸಿ ರಾಜ್ಯಕ್ಕೆ ಟಾಪರ್ ಆದ ಇಂಜಿನಿಯರ್ ಶರಣ ಕಮತ ಮಾತನಾಡಿ, ಪರೀಕ್ಷೆಗಳನ್ನು ಪಾಸು ಮಾಡಲು ಕಠಿಣ ಪರಿಶ್ರಮ, ಸಮರ್ಪಣೆ, ತಾಳ್ಮೆ ಮತ್ತು ಸಹಿಷ್ಣುತೆ ಯಶಸ್ಸಿನ ಕೀಲಿಕೈಗಳಾಗಿವೆ ಎಂದರು. ಡಾ.ಮೋತಿಲಾಲ್ ರಾಥೋಡ ಮಾತನಾಡಿ, ಯಶಸ್ಸು ಕಠಿಣ ಪರಿಶ್ರಮ ಮತ್ತು ಸಮರ್ಪಣೆಯ ಉತ್ಪನ್ನವಾಗಿದೆ ಎಂದರು. ಸಂಸ್ಥೆಯ ಗೌರವ ಅಧ್ಯಕ್ಷ ಚಾರ್ಟರ್ಡ್ ಅಕೌಂಟೆಂಟ್ ಡಾ.ಎಸ್.ಎಚ್.ಚಿಕ್ಕಮಠ, ಗುರಿಗಳನ್ನು ತಲುಪಲು ಪರಿಶ್ರಮದ ಬಗ್ಗೆ ಪ್ರಸ್ತಾಪಿಸಿದರು. ಕುಟುಂಬ ಮತ್ತು ಸಮಾಜವು ಜೀವನದಲ್ಲಿ ಯಶಸ್ವಿಯಾಗಲು ಬೆನ್ನೆಲುಬು ಎಂದರು. ಈ ಸಂದರ್ಭದಲ್ಲಿ ಉಪನ್ಯಾಸಕರಿಂದ ಹಲವು ಗೋಷ್ಠಿಗಳು ನಡೆದವು. ಡಾ. ರಾಮಾಂಜನೇಯಲು, ಗುರುರಾಜ್ ಬಲುಂಡಗಿ, ವಿಜಯ್ ಭಾರತಿ, ಸಂಸ್ಥೆ ನಿರ್ದೇಶಕ ಡಾ. ವೀರಣ್ಣ ಡಿ.ಕೆ., ಪ್ರೀತಿ ಬೆಳಗಾಂವ್ಕರ್, ಪ್ರೀತಿ ಗೌಡರ, ಸ್ವಪ್ನಾ ಕಾಮಡೊಳ್ಳಿ ಇದ್ದರು.



ಹುಬ್ಬಳ್ಳಿ: ನಗರದ ಇನ್ಸ್ಟಿಟ್ಯೂಟ್ ಆಫ್ ಎಕ್ಸಲೆನ್ಸ್ ಇನ್ ಮ್ಯಾನೇಜ್ಮೆಂಟ್ ಸೈನ್ಸ್ ತನ್ನ ಕ್ಯಾಂಪಸ್‌ನಲ್ಲಿ ಒಂದು ದಿನದ ಉತ್ತರ ಕರ್ನಾಟಕ ಕೆರಿಯರ್ ಸಮಾವೇಶ-2026 ಅನ್ನು ಆಯೋಜಿಸಿತ್ತು. 150 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜಿಲ್ಲಾ ವಿಪತ್ತು ನಿರ್ವಹಣಾ ಸಭೆ | ಸಚಿವ ಸಂತೋಷ ಲಾಡ್ ಭರವಸೆ

ಕಲಘಟಗಿಗೆ ನಿರಂತರ ನೀರು

ಧಾರವಾಡ: ಜಿಲ್ಲೆಯ ಕಲಘಟಗಿ ಪಟ್ಟಣದ 17 ವಾರ್ಡ್‌ಗಳಿಗೆ ದಿನದ 24 ಗಂಟೆ ಕುಡಿಯುವ ನೀರು ಸರಬರಾಜು ಯೋಜನೆ ಬರುವ ಜೂ.15ರಂದು ಅನುಷ್ಠಾನಕ್ಕೆ ತರುವುದಾಗಿಯೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಭರವಸೆ ನೀಡಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಅಕಾಲಿಕ ಮಳೆ ಹಾನಿ, ಜಾನುವಾರಗಳ ಸಾವು ಮತ್ತು ಬೇಸಿಗೆ ವೇಳೆ ಕುಡಿಯುವ ನೀರಿನ ಸಮಸ್ಯೆಗಳ ಪರಿಶೀಲನೆ ಸಭೆಯಲ್ಲಿ ಹೇಳಿದರು. ಕಲಘಟಗಿಯ 17 ವಾಡ್‌ಗಳಲ್ಲಿ 19 ಸಾವಿರ ಜನಸಂಖ್ಯೆ ಇದೆ. ನಿತ್ಯವೂ 3 ಎಂಎಲ್‌ಡಿ ನೀರು ಪೂರೈಸಲಿದೆ. 2024ರ ಮೇ 18ಕ್ಕೆ ಆರಂಭದ ಯೋಜನೆ 2026 ಏ.24ಕ್ಕೆ ಮುಗಿಸಬೇಕಿತ್ತು. ಗುತ್ತಿಗೆದಾರರಿಂದ ವಿಳಂಬವಾಗಿದೆ ಎಂದರು.

ಪ್ರಸ್ತುತ ಕಾಮಗಾರಿ ಮುಕ್ತಾಯದ ಹಂತ ತಲುಪಿದೆ. ಸುಮಾರು ರೂ.25.38 ಕೋಟಿ ಮೊತ್ತದ ಈ 24x7 ಕುಡಿಯುವ ನೀರು ಪೂರೈಸುವ ಯೋಜನೆ ಜೂ. 15ರಿಂದ ಆರಂಭಗೊಳ್ಳಲಿದೆ. ಈ ವ್ಯವಸ್ಥೆ ಜಿಲ್ಲೆಯಲ್ಲೂ ಅನುಷ್ಠಾನಿಸುವುದಾಗಿ ಹೇಳಿದರು.

ಅಣ್ಣಿಗೇರಿ, ನವಲಗುಂದ, ಕುಂದಗೋಳ ಪಟ್ಟಣದಲ್ಲೂ ಕೂಡ ಶೀಘ್ರ ಕಾಮಗಾರಿ ಮುಗಿಸಲು ಸೂಚಿಸಿದ ಅವರು, ದಿನದ 24 ಗಂಟೆ ಕುಡಿಯಲು ನೀರು ಪೂರೈಕೆ ಯೋಜನೆ ಆರಂಭಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಸ್ನೇಹಲ್ ಆರ್., ಜಿಪಂ ಸಿಇಒ ಭುವನೇಶ ಪಾಟೀಲ, ಪಾಲಿಕೆ ಆಯುಕ್ತ ಡಾ.ರುದ್ರೇಶ ಘಾಳಿ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ತಹಶೀಲ್ದಾರ್‌ಗಳು, ತಾಪಂ ಇಒಗಳು, ಪಾಲಿಕೆಯ ಅಧಿಕಾರಿಗಳು ಇದ್ದರು.



ರೈತ ಸ್ನೇಹಿ ನೀತಿ

ರೈತರ ಹಿತಕ್ಕಾಗಿ 7 ಎ ಪ್ರಕರಣಗಳನ್ನು ಪರಿಹರಿಸಬೇಕು. ದಾಖಲಾತಿಗಳ ನ್ಯೂನ್ಯತೆ ಹಾಗೂ ಕೊರತೆ ಕಂಡುಬಂದಲ್ಲಿ ನಿಯಮಾನುಸಾರ ರೈತರಿಗೆ ಅವಕಾಶ ನೀಡಿ, ಸಮಸ್ಯೆ ಇತ್ಯರ್ಥಪಡಿಸಬೇಕು. ರೈತಸ್ನೇಹಿ ನೀತಿ ಅನುಸರಿಸುವಂತೆ ಸಚಿವ ಸಂತೋಸ ಲಾಡ್ ಆದೇಶ ಮಾಡಿದರು.

ಭೂಸ್ವಾಧೀನ ಪ್ರಗತಿಯಲ್ಲಿ

ಕೈಗಾರಿಕಾ ವಲಯ ಅಭಿವೃದ್ಧಿ ಮತ್ತು ಮೂಲ ಸೌಕರ್ಯಗಳ ಉನ್ನತೀಕರಣಕ್ಕೆ ಸರ್ಕಾರ ಆದ್ಯತೆ ನೀಡಿದೆ. ವಿವಿಧ ಕಾರ್ಯಗಳಿಗೆ ಭೂಸ್ವಾಧೀನ ಕಾರ್ಯವೂ ಸಹ ಪ್ರಗತಿಯಲ್ಲಿದೆ. ಭೂಸ್ವಾಧೀನ ಮಾಡಿಕೊಂಡ ರೈತರಿಗೆ ಪರಿಹಾರ ವಿತರಿಸಲು ಸೂಚಿಸಿದ ಸಚಿವ ಲಾಡ್, ಸರ್ಕಾರವು ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಕಾರ್ಯವನ್ನು ಆದ್ಯತೆ ಮೇಲೆ ಕೈಗೊಳ್ಳಲು ಸೂಚಿಸಿದರು.

> ಅಕಾಲಿಕ ಮಳೆಯಿಂದ ಭೂಮಿ ಹದಗೊಂಡ ಕಾರಣ ರೈತರು ಕೃಷಿ ಚಟುವಟಿಕೆ ಆರಂಭಿಸಿದ್ದು, ಮುಂಗಾರು ಹಂಗಾಮಿಗೆ ಬೇಕಾದ ಅಗತ್ಯ ಬೀಜ-ರಸಗೊಬ್ಬರ ದಾಸ್ತಾನು ಇರಿಸಬೇಕು. ಅಗತ್ಯಕ್ಕೆ ಅನುಸಾರವಾಗಿ ವಿತರಿಸಬೇಕು.
>
> ■ ಸಂತೋಷ ಲಾಡ್, ಜಿಲ್ಲಾ ಉಸ್ತುವಾರಿ ಸಚಿವ

ಧಾರವಾಡ ಪ್ರತ್ಯೇಕ ಪಾಲಿಕೆಗೆ ಆಗ್ರಹ



ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಆಗ್ರಹಿಸಿ ಮೇಯರ್ ಜ್ಯೋತಿ ಪಾಟೀಲ ಮನೆಗೆ ಕಾಂಗ್ರೆಸ್ ಮುಖಂಡ ದೀಪಕ ಚಿಂಚೋರೆ ನೇತೃತ್ವದಲ್ಲಿ ನೂರಾರು ಜನ ಮಂಗಳವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ ಪ್ರತಿಭಟನಕಾರರು, ಮೇಯರ್‌ಗೆ ಘೇರಾವ್ ಹಾಕಿ, ಮೇಯರ್ ನಿವಾಸದ ಮುಂಭಾಗದಲ್ಲಿ ಧರಣಿ ಕುಳಿತು, ತಕ್ಷಣವೇ ಪ್ರತ್ಯೇಕ ಪಾಲಿಕೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಒತ್ತಾಯಿಸಿದರು.

ನೇತೃತ್ವ ವಹಿಸಿದ್ದ ಮುಖಂಡ ದೀಪಕ ಚಿಂಚೋರೆ ಮಾತನಾಡಿ, ಅನುದಾನ ಮತ್ತು ಅಭಿವೃದ್ಧಿಯಲ್ಲಿ ಧಾರವಾಡಕ್ಕೆ ಅನ್ಯಾಯವಾದರೂ ಮೇಯರ್ ಮೌನ ಸರಿಯಲ್ಲ. ಹುಬ್ಬಳ್ಳಿಗೆ ಆದ್ಯತೆ ನೀಡಿ ಧಾರವಾಡ ನಿರ್ಲಕ್ಷಿಸಲಾಗುತ್ತಿದೆ ಎಂದು ಆರೋಪಿಸಿದರು.

ಪ್ರತ್ಯೇಕತೆ ಕೂಗು: ಅವಳಿನಗರದ ಆಡಳಿತ ವ್ಯವಸ್ಥೆಯಿಂದ ಧಾರವಾಡದ ಪ್ರಗತಿ ಕುಂಠಿತವಾಗಿದೆ. ನಮ್ಮ ತೆರಿಗೆ ನಮ್ಮ ಅಭಿವೃದ್ಧಿಗೆ ಎಂಭ ಘೋಷಣೆ ಕೂಗಿದರಲ್ಲದೆ, ಧಾರವಾಡಕ್ಕೆ ಸ್ವತಂತ್ರ ಅಸ್ತಿತ್ವ ಬೇಕು. ಹೀಗಾಗಿ ಪ್ರತ್ಯೇಕ ಪಾಲಿಕೆಗೆ ಬೆಂಬಲಿಸಲು ಆಗ್ರಹಿಸಿದರು.

ತಾರತಮ್ಯ: ದಶಕಗಳಿಂದ ಧಾರವಾಡ ಜನತೆ ಅನ್ಯಾಯ ಸಹಿಸುತ್ತಿದ್ದಾರೆ. ಅನುದಾನ ಹಂಚಿಕೆ ವೇಳೆ ತಾರತಮ್ಯವಾಗುತ್ತಿದೆ. ಮೂಲಭೂತ ಸೌಕರ್ಯಗಳಿಗೆ ಪಾಲಿಕೆಯೂ ಸ್ಪಂದಿಸುತ್ತಿಲ್ಲ. ಇದಕ್ಕೆ ಪ್ರತ್ಯೇಕತೆ ಒಂದೇ ಪರಿಹಾರ ಎಂದರು.

ಹೋರಾಟದ ಎಚ್ಚರಿಕೆ: ಧಾರವಾಡಿಗರಿಗೆ ಅನುಕೂಲಕ್ಕೆ ನಮ್ಮ ಕ್ಷೇತ್ರದ ಶಾಸಕರು ಮತ್ತು ಸಂಸದರ ಜೊತೆ ಚರ್ಚಿಸಿ ಸಭೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಮೇಯರ್ ಭರವಸೆಗೆ ಪ್ರತಿಭಟನಕಾರರು, ಶೀಘ್ರ ಕ್ರಮ ಕೈಗೊಳ್ಳದಿದ್ದರೆ ಹೋರಾಟ ಮಾಡುವುದಾಗಿಯೂ ಎಚ್ಚರಿಸಿದರು.

ತಳ್ಳಾಟ-ನೂಕಾಟ: ಮೇಯರ್ ನಿವಾಸದ ಸುತ್ತಮುತ್ತ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ಬ್ಯಾರಿಕೇಡ್ ಹಾಕಿ ಪ್ರತಿಭಟನಕಾರರನ್ನು ತಡೆಯಲು ಯತ್ನಿಸಿದರು. ಈ ವೇಳೆ ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ತಳ್ಳಾಟ ಮತ್ತು ನೂಕಾಟ ನಡೆಯಿತು.

ಕನ್ನಡಿಗ ಅಭ್ಯರ್ಥಿಗಳಿಗೆ ಸಮಾನ ಅವಕಾಶ ನೀಡಿ

ಹುಬ್ಬಳ್ಳಿ: ಕನ್ನಡಿಗರಿಗೆ ರೈಲ್ವೆ ನೇಮಕಾತಿಯಲ್ಲಿ ಅನ್ಯಾಯವಾಗುತ್ತಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ ಕುಮಾರ ಶೆಟ್ಟಿ ಬಣ)ಯ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಮಂಗಳವಾರ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಮಾವೇಶಗೊಂಡ ಕಾರ್ಯಕರ್ತರು ಅಲ್ಲಿಂದ ಗದಗ ರಸ್ತೆಯ ರೇಲ್ ಸೌಧದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ರೈಲ್ವೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಹಾಗೂ ಕನ್ನಡಿಗ ಅಭ್ಯರ್ಥಿಗಳಿಗೆ ಸಮಾನ ಅವಕಾಶ ದೊರೆಯುತ್ತಿಲ್ಲ. ಬಡ್ತಿ ಪರೀಕ್ಷೆಯಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಮಾತ್ರ ಅವಕಾಶ ನೀಡುತ್ತಿದ್ದು, ಕನ್ನಡವನ್ನು ಕಡೆಗಣಿಸಲಾಗಿದೆ. ಕನ್ನಡಿಗರಿಗೂ ಅವಕಾಶ ನೀಡಬೇಕು ಎಂದು ಆಗ್ರಹಿಸಿ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಪಿ.ಅನಂತ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಆಯಾ ರಾಜ್ಯದ ಮಾತೃ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ. ಇಲ್ಲಿ ಅದು ಪಾಲನೆಯಾಗುತ್ತಿಲ್ಲ. ನೇಮಕಾತಿ ಅಧಿಸೂಚನೆಗಳನ್ನು ಕನ್ನಡದಲ್ಲಿಯೇ ಪ್ರಕಟಿಸಬೇಕು. ಅರ್ಜಿ ಮಾಹಿತಿ, ಸೇವಾ ನಿಯಮಗಳು ಹಾಗೂ ತರಬೇತಿ ಮಾಹಿತಿ ಸಹ ಕನ್ನಡದಲ್ಲಿ ಇರಬೇಕು. ಹಿಂದಿ ಬಳಕೆಗೆ ಒತ್ತಡ ಹೇರಬಾರದು. ರೈಲ್ವೆ ನಿಲ್ದಾಣಗಳಲ್ಲಿ ಕನ್ನಡ ಭಾಷೆಯನ್ನು ನಿರ್ಲಕ್ಷಿಸಬಾರದು ಆಗ್ರಹಿಸಿದರು.

ಕರವೇ ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ ಲೂತಿಮಠ ಮಾತನಾಡಿ, ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದೆ ಅಧಿಸೂಚನೆ ಹೊರಡಿಸಿದರೆ ರಾಜ್ಯದಾದ್ಯಂತ ತೀವ್ರ ಸ್ವರೂಪದಲ್ಲಿ ಹೋರಾಟ ನಡೆಸಲಾಗುವುದು. ರೈಲ್ವೆ ನೇಮಕಾತಿಯಲ್ಲಿ ಸ್ಥಳೀಯ ರಾಜ್ಯದ ಅಭ್ಯರ್ಥಿಗಳಿಗೆ ಶೇ.75ರಷ್ಟು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಕರವೇ ಪದಾಧಿಕಾರಿಗಳಾದ ಪಾಪು ಧಾರೆ, ಬಸವರಾಜ ತಾಳಿಕೋಟಿ, ಅರಗಿಣಿ ಶೆಟ್ಟಿ, ಮಂಜುನಾಥ ವಾಲಿಕಾರ, ತಿಮ್ಮಣ್ಣ ದೋಣಿ, ಪ್ರವೀಣ ಗಾಯಕವಾಡ, ಅಕ್ಷಯ, ಶ್ರೀಶೈಲಂ ಮಿರ್ಜಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

> ಬಡ್ತಿ ಪರೀಕ್ಷೆಗಳಲ್ಲೂ ಕನ್ನಡ ಬಳಕೆ ಕುರಿತು ಹಿರಿಯ ಅಧಿಕಾರಿಗಳಿಗೆ ತಿಳಿಸಲಾಗುವುದು. ಕನ್ನಡ ಭಾಷೆ ಬಗ್ಗೆ ಅಭಿಮಾನವಿದ್ದು, ಮುಂಬರುವ ಪರೀಕ್ಷೆ ಕನ್ನಡದಲ್ಲಿ ನಡೆಸಲಾಗುವುದು.
>
> ■ ಪಿ. ಅನಂತ, ಪ್ರಧಾನ ವ್ಯವಸ್ಥಾಪಕ, ನೈಋತ್ಯ ರೈಲ್ವೆ



ಸೈನಿಕರ ಸೇವೆ ಅಮೂಲ್ಯ



ಕುಂದಗೋಳ: ತಾಲೂಕಿನ ಚಿಕ್ಕನರ್ತಿ ಗ್ರಾಮದಲ್ಲಿ ಅಶ್ವಮೇಧ ಗೆಳೆಯರ ಬಳಗ ಹಾಗೂ ಸರ್ವೋದಯ ಮಹಿಳಾ ಗ್ರಾಮ ಒಕ್ಕೂಟದ ಆಶ್ರಯದಲ್ಲಿ ನಿವೃತ್ತ ಯೋಧ ಹನುಮಂತಪ್ಪ ರೊಟ್ಟಿಗವಾಡ ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ನಡೆಯಿತು.

ಕುಂದಗೋಳ ಕಲ್ಯಾಣಪುರಮಠದ ಅಭಿನವ ಬಸವಣ್ಣಜ್ಜನವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದೇಶ ರಕ್ಷಣೆ ಮಾಡುವ ಸೈನಿಕರ ಸೇವೆ ಅಮೂಲ್ಯವಾಗಿದ್ದು, ದೇಶಸೇವೆಯೇ ಈಶಸೇವೆ ಎಂದರು.

ಅಮರೇಶ್ವರ ಬೃಹನ್ಮಠದ ಡಾ. ನೀಲಕಂಠ ಶಿವಾಚಾರ್ಯರು ಮಾತನಾಡಿ, ಭಾರತೀಯ ನೌಕಾದಳದಲ್ಲಿ 15 ವರ್ಷ ಸೇವೆ ಸಲ್ಲಿಸಿದ ಹನುಮಂತಪ್ಪ ರೊಟ್ಟಿಗವಾಡ ಗ್ರಾಮದ ಹೆಮ್ಮೆ ಎಂದರು.

ಚಿಕ್ಕನರ್ತಿ ಗ್ರಾಮಸ್ಥರ ಪರವಾಗಿ ನಿವೃತ್ತ ಯೋಧ ಹನುಮಂತಪ್ಪ ರೊಟ್ಟಿಗವಾಡ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕ ಪಡೆದ ಗ್ರಾಮದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಹಾಗೂ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಾಧಕರನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ಮಾರುತಿ ಬಡಿಗೇರ ಪ್ರಾಸ್ತಾವಿಸಿದರು. ದೇವಕ ಪತ್ತಾರ ವಿದ್ಯಾರ್ಥಿಗಳ ಕುರಿತು ಕಿರುಪರಿಚಯ ನೀಡಿದರು. ಮಂಜುನಾಥ ರೊಟ್ಟಿಗವಾಡ ನಿರೂಪಿಸಿದರು. ಗ್ರಾಮದ ಚನ್ನವೀರಯ್ಯ ಮಠದ , ಮುಖಂಡರಾದ ಅಪ್ಪಣ್ಣ ನದಾಫ್, ಗುರುಪಾದ ಸ್ವಾದಿ ಸಂಜೀವ ಸೋಮರೆಡ್ಡಿ, ಅಣ್ಣಪ್ಪ ದೇವನೂರು ಬಸವರಾಜ ಅರಳಿಕಟ್ಟಿ, ರವಿ ಮುಳ್ಳೊಳ್ಳಿ, ಪ್ರಕಾಶ ಬಿಳೇಬಾಳ, ಅಣ್ಣಪ್ಪ ಬಿಳೇಬಾಳ ಬಸವರಾಜ ಪಾಟೀಲ, ಚಂದ್ರು ಶಾನವಾಡ, ಮುತ್ತಪ್ಪ ದೊಡ್ಡಮನಿ, ಮುದುಕಪ್ಪ ಮುಸುಂಡಿ, ಅಣ್ಣಪ್ಪ ದೂಳನವರ, ಯಲ್ಲಪ್ಪ ಅಡರಕಟ್ಟಿ, ಈರಣ್ಣ ಶಾನವಾಡ, ಲಕ್ಷ್ಮಣ ರೊಟ್ಟಿಗವಾಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಕ್ಕಳಲ್ಲಿ ಓದುವ ಕ್ಷಮತೆ ಹೆಚ್ಚಲಿ

ಧಾರವಾಡ: ಸಾಮಾಜಿಕ ಜಾಲತಾಣ ಪ್ರಭಾವ ಮತ್ತು ಸಂಸ್ಕಾರದ ಕೊರತೆಯಿಂದ ಮಕ್ಕಳಲ್ಲಿ ಓದುವ ಕ್ಷಮತೆ ಕ್ಷೀಣಿಸಿದೆ. ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರಯುತ ಶಿಕ್ಷಣ ನೀಡಿದಾಗ, ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ಧಾರವಾಡದ ಸಾಕಾರ ಸಾಂಸ್ಕೃತಿಕ ಮತ್ತು ಮಾಧ್ಯಮ ಪ್ರತಿಷ್ಠಾನ ನಗರದ ಜನತಾ ಶಿಕ್ಷಣ ಸಮಿತಿಯ ಉತ್ಸವ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮಕ್ಕಳ ಯಕ್ಷಗಾನ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಕಲಾ ಪೋಷಕ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಸುಪ್ರದಾ ಕಸ್ಟಕ್ಷನ್‌ನ ಸೀತಾರಾಮ ಶೆಟ್ಟಿ ಮಾತನಾಡಿ, ಯಕ್ಷಗಾನ ಪುರಾತನ ಮತ್ತು ಅಪ್ಪಟ ಕನ್ನಡ ಕಲೆ. ಇದರಲ್ಲಿ ಎಲ್ಲ ಕಲೆಗಳ ಅಂಶಗಳು ಒಳಗೊಂಡಿವೆ. ದಕ್ಷಿಣಕ್ಕೆ ಸೀಮಿತವಾದ ಈ ಕಲೆಯನ್ನು ಕಳೆದ 13 ವರ್ಷಗಳಿಂದ ಉತ್ತರ ಕರ್ನಾಟಕದ ಮಕ್ಕಳಿಗೂ ಪರಿಚಯಿಸಿದ್ದಾಗಿ ತಿಳಿಸಿದರು.

ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಬಸವರಾಜ ನಾಲವತ್ತವಾಡ ಮಾತನಾಡಿ, ಪಾಲಕರು ತಮ್ಮ ಮಕ್ಕಳಿಗೆ ಶಿಬಿರದ ಮೂಲಕ ಕಲೆಗಳನ್ನು ಪರಿಚಯಿಸುವ ಜೊತೆ ಅವರಿಗೆ ಆಸಕ್ತಿಯ ಕ್ಷೇತ್ರದಲ್ಲಿ ಪ್ರೋತ್ಸಾಹ ನೀಡಬೇಕು. ಇದರಿಂದ ಜ್ಞಾನವೂ ವೃದ್ಧಿಸಿ ಸಾಧನೆ ಮಾಡಲು ಸಾಧ್ಯವಿದೆ ಎಂದರು.

ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪಡೆದ ವಿದೂಷಿ ನಾಗರತ್ನಾ ಹಡಗಲಿ ಅವರಿಗೆ ಸನ್ಮಾನಿಸಲಾಯಿತು. ನಂತರ ನಡೆದ ಶಿಬಿರದಲ್ಲಿ ಪಾಲ್ಗೊಂಡು ಸುಮಾರು 25 ಮಕ್ಕಳಿಂದ ಮಕ್ಕಳ ಯಕ್ಷಗಾನ ಪ್ರದರ್ಶನ ಗಮನ ಸೆಳೆಯಿತು. ಸಾಕಾರಾ ಸಂಸ್ಥೆಯ ಅಧ್ಯಕ್ಷೆ ಡಾ.ಶುಭದಾ ಅಧ್ಯಕ್ಷತೆ ವಹಿಸಿದ್ದರು. ಜೆಎಸ್ಎಸ್ ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ, ಡಾ.ಪ್ರಕಾಶ ಭಟ್, ನಾಗರಾಜ ಹಡಗಲಿ, ದಾಬಡೆ ದಂಪತಿಗಳು ಪಾಲ್ಗೊಂಡಿದ್ದರು.



ಸಮಸ್ಯೆಗಳ ನಿವಾರಣೆಗೆ ಕ್ರಮವಹಿಸಿ: ಟೆಂಗಿನಕಾಯಿ

ಹುಬ್ಬಳ್ಳಿ: ಇ-ಸ್ವತ್ತು, ನಾಲಾ ಸ್ವಚ್ಛತೆ, ರಸ್ತೆ ತೆಗ್ಗು ಗುಂಡಿ ಮುಚ್ಚುವುದು, ಒಳಚರಂಡಿ ಸಮಸ್ಯೆ ಪರಿಹರಿಸುವುದು, ರಸ್ತೆ ಅಭಿವೃದ್ಧಿ, ಫ್ಲೈಓವರ್ ಕಾಮಗಾರಿ ಸೇರಿದಂತೆ ವಿವಿಧ ಸಮಸ್ಯೆಗಳನ್ನು ತಕ್ಷಣ ಸರಿಪಡಿಸಿ ಅಭಿವೃದ್ಧಿ ಕೆಲಸ ಮಾಡಬೇಕು ಎಂದು ಶಾಸಕ ಮಹೇಶ ಟೆಂಗಿನಕಾಯಿ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ನಗರದ ಹು-ಧಾ ಮಹಾನಗರ ಪಾಲಿಕೆ ಆಯುಕ್ತರ ಕಚೇರಿಯಲ್ಲಿ ಹು-ಧಾ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು. ಸೆಂಟ್ರಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲ ನಾಲಾಗಳ ಹೂಳೆತ್ತುವ ಕೆಲಸ ತಕ್ಷಣ ಆಗಬೇಕು. ದೇಶಪಾಂಡೆ ನಗರ ಹಾಗೂ ಗ್ರೀನ್ ಕಾರಿಡಾರ್‌ನಲ್ಲಿ ಈಗಾಗಲೇ ಅರ್ಧಕ್ಕೂ ಹೆಚ್ಚು ನೀರು ಸಂಗ್ರಹವಾಗಿದೆ. ಮುಂದೆ ದೊಡ್ಡ ಮಳೆಯಾದರೆ ಆ ಪ್ರದೇಶ ಸುತ್ತಮುತ್ತಲಿನ ಮನೆ, ಕಟ್ಟಡಗಳಿಗೆ ನೀರು ನುಗ್ಗುವ ಸಾಧ್ಯತೆಯಿದೆ. ಜಗದೀಶ ನಗರದಲ್ಲಿ ಕಳೆದ ಬಾರಿ ತೊಂದರೆಯಾಗಿದೆ. ಈ ಬಾರಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕು ಎಂದು ಸೂಚಿಸಿದರು. ಪ್ರತಿಯೊಂದು ವಾರ್ಡ್‌ನಲ್ಲಿ ಪೌರಕಾರ್ಮಿಕರಿಂದ ಗಟಾರುಗಳನ್ನು ಸ್ವಚ್ಛ ಮಾಡಿಸಬೇಕು. ಮಳೆಗಾಲ ಆರಂಭಕ್ಕೂ ಮುಂಚೆ ರಸ್ತೆ ತೆಗ್ಗು-ಗುಂಡಿಗಳ ಮುಚ್ಚಿಸಬೇಕು. ಪಾದಚಾರಿ ರಸ್ತೆಯಲ್ಲಿ ಕಿತ್ತು ಹೋದ ಪೇವರ್ಸ್ ಅಳವಡಿಸಿ. ಇದಕ್ಕೆ ಸ್ಪಂದಿಸಿದ ಅಧಿಕಾರಿಗಳು ನಾಲಾ ಸ್ವಚ್ಛತೆ 40 ಲಕ್ಷ ರೂ. ಮೀಸಲಿಡಲಾಗಿದೆ. ಚೆಂಬರ್ ದುರಸ್ತಿಗೆ ಟೆಂಡರ್ ಕರೆಯಲಾಗಿದೆ. 15 ದಿನದಲ್ಲಿ ಎಲ್ಲ ನಾಲಾ ಸ್ವಚ್ಛತೆ ಮಾಡಿಸಲಾಗುವುದು ಎಂದರು. ಪ್ರತಿ ವಾರ್ಡ್‌ಗೆ ಭೇಟಿ ನೀಡಿದಾಗ ಸಾರ್ವಜನಿಕರಿಂದ ಹೆಚ್ಚು ಯುಜಿಡಿ ಸಮಸ್ಯೆ ಕೇಳಿ ಬರುತ್ತಿವೆ. ಅಧಿಕಾರಿಗಳು ವಾರ್ಡ್‌ಗಳಿಗೆ ಭೇಟಿ ನೀಡಿ ಯುಜಿಡಿ ಸಮಸ್ಯೆಗಳ ಪರಿಹರಿಸಬೇಕು. ಇನ್ನೂ ಕ್ಷೇತ್ರದಲ್ಲಿ 70-80 ಕಿ.ಮೀ. ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯಲಿದ್ದು, ಅಷ್ಟರಲ್ಲಿ ಯುಜಿಡಿ ಕಾಮಗಾರಿ ಮುಗಿಸಬೇಕು. ರಸ್ತೆ ಅಭಿವೃದ್ಧಿ ಬಳಿಕ ರಸ್ತೆ ಅಗೆಯುವ ಕೆಲಸ ಮಾಡಬಾರದು ಎಂದು ಎಚ್ಚರಿಕೆ ನೀಡಿದರು.

ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಶಹರ ತಶೀಲ್ದಾರ ಮಹೇಶ ಗಸ್ತೆ ಸೇರಿದಂತೆ ಅನೇಕರಿದ್ದರು.



ಎಲ್‌ಇಡಿ ವಿದ್ಯುತ್ ದೀಪ ಅಳವಡಿಸಿ

ಎಲ್‌ಇಡಿ ವಿದ್ಯುತ್ ದೀಪ ಅಳವಡಿಸುವ ಯೋಜನೆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕ ಮಹೇಶ ಟೆಂಗಿನಕಾಯಿ ಅವರು, ತಕ್ಷಣ ನಗರದ ಪ್ರವೇಶ ಪ್ರದೇಶದಲ್ಲಿ ವಿದ್ಯುತ್ ದೀಪ ಅಳವಡಿಸಲು. ಗಬ್ಬೂರ ವೃತ್ತ, ಗದಗ ರಸ್ತೆ, ಕುಸುಗಲ್ ರಸ್ತೆ ಕತ್ತಲು ಆವರಿಸಿದೆ. ಮೊದಲು ಆದ್ಯತೆ ಮೇರೆಗೆ ಇಲ್ಲಿ ವಿದ್ಯುತ್ ದೀಪ ಅಳವಡಿಸಬೇಕು. ಬಳಿಕ ವಾರ್ಡ್‌ಗಳಲ್ಲಿ ದೀಪಗಳ ಅಳವಡಿಸಿ ಎಂದು ಸೂಚಿಸಿದರು.

ವಾರ್ಡ್ ಮಟ್ಟದಲ್ಲಿ ಇ-ಸ್ವತ್ತು ಅಭಿಯಾನ

ಮೇ 18,19,20 ರಂದು ಇಲ್ಲಿಯ ಗೋಕುಲ ರಸ್ತೆ ಕೈಗಾರಿಕಾ ಪ್ರದೇಶದಲ್ಲಿ ಇ ಸ್ವತ್ತು ಡ್ರೈವ್ ಮಾಡಲಾಗುತ್ತಿದೆ. ಈಗಾಗಲೇ ಅಧಿಕಾರಿಗಳಿಗೆ ಚೆಕ್‌ಲಿಸ್ಟ್ ನೀಡಲು ಸೂಚಿಸಿದ್ದೇವೆ. ಕೈಗಾರಿಕೋದ್ಯಮಿಗಳಿಗೆ 6 ವರ್ಷದ ತೆರಿಗೆ ನೀಡುವ ಮೂಲಕ ಇ-ಸ್ವತ್ತು ಪಡೆಯಲು ತಿಳಿಸಿದ್ದೇವೆ. ಇದಾದ ಬಳಿಕ ಅಮರಗೋಳದ ಎಪಿಎಂಸಿಯಲ್ಲಿ ಮುಂದಿನ ದಿನಗಳಲ್ಲಿ ಡ್ರೈವ್ ಮಾಡಲಾಗುವುದು. ಮುಂದಿನ ದಿನಗಳಲ್ಲಿ ವಾರ್ಡ್ ಮಟ್ಟದಲ್ಲಿ ಇ-ಸ್ವತ್ತು ಡ್ರೈವ್ ಮಾಡಲಾಗುವುದು. ಕಸ ವಾಹನದ ಧ್ವನಿ ವರ್ಧಕದ ಮೂಲಕ ದಿನ ತಿಳಿಸಲಾಗುವುದು ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

- ಕಟ್ಟಡ ಪರವಾನಗಿ, ಜನನ, ಮರಣ ಪ್ರಮಾಣ ಪತ್ರ ನಿಗದಿತ ಸಮಯಕ್ಕೆ ವಿತರಿಸಿ
- ಸೆಂಟ್ರಲ್ ಕ್ಷೇತ್ರದ ವ್ಯಾಪ್ತಿಗೆ ಬರುವ ಐದು ವೃತ್ತಗಳ ಅಭಿವೃದ್ಧಿ ಕಾರ್ಯ ಬೇಗ ಆರಂಭಿಸಿ
- ಪಾಲಿಕೆ ಹಾಗೂ ವಲಯ ಕಚೇರಿಯಲ್ಲಿ ದಲ್ಲಾಳಿಗಳ ಹಾವಳಿ ತಡೆಯಿರಿ
- ಶಾಲೆ ಆರಂಭವಾದ ತಕ್ಷಣ ಮಕ್ಕಳಿಗೆ ಪುಸ್ತಕ, ಬೂಟ್, ಸಾಕ್ಸ್ ವಿತರಿಸಿ
- ಗೃಹ ಲಕ್ಷ್ಮೀ, ವಿಧವಾ ವೇತನ, ವೃದ್ಧಾಪ್ಯ ವೇತನ, ಅಂತರ್ಜಾತಿ ಪ್ರೋತ್ಸಾಹ ಧನ ಸರಿಯಾಗಿ ನೀಡಿ
- ಸೆಂಟ್ರಲ್ ಕ್ಷೇತ್ರದ ಪ್ರತಿ ವಾರ್ಡ್‌ಗೂ 4 ದಿನಕ್ಕೊಮ್ಮೆ ನೀರು ಸರಬರಾಜು ಆಗುವಂತೆ ಕ್ರಮ ಕೈಗೊಳ್ಳಿ ಎಂದು ಸೂಚಿಸಿದ ಶಾಸಕ ಮಹೇಶ ಟೆಂಗಿನಕಾಯಿ

> ಮೇ 20 ರಿಂದ ಮಳೆಗಾಲ ಆರಂಭವಾಗಲಿದ್ದು, ಅಷ್ಟರಲ್ಲಿ ನಾಲಾ ಸ್ವಚ್ಛತೆ ಮುಗಿಯಬೇಕು. ಇಂದಿನಿಂದಲೇ ಕಾಮಗಾರಿ ಆರಂಭಿಸಿ.
>
> ■ ಡಾ. ರುದ್ರೇಶ ಘಾಳಿ, ಆಯುಕ್ತ, ಹು-ಧಾ ಮಹಾನಗರ ಪಾಲಿಕೆ

ಬೆಣ್ಣೆಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿ ವೀಕ್ಷಣೆ

ನವಲಗುಂದ: ಮಂಗಳವಾರ ನವಲಗುಂದ ವಿಧಾನಸಭಾ ಕ್ಷೇತ್ರದ ಹುಬ್ಬಳ್ಳಿ ತಾಲೂಕಿನ ಹೆಬಸೂರ ಗ್ರಾಮದ ಹತ್ತಿರ ಬೆಣ್ಣೆಹಳ್ಳ ಅಗಲೀಕರಣ ಹಾಗೂ ಹೆಬಸೂರ-ಬೆನ್ನೂರ ನಡುವೆ ಇರುವ ಬೆಣ್ಣೆಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿಯನ್ನು ಜಿಲ್ಲಾಧಿಕಾರಿ ಸ್ನೇಹಲ್ ಆರ್. ವೀಕ್ಷಿಸಿದರು. ಹೆಬಸೂರದಿಂದ ಕಾಲವಾಡ ವರೆಗೆ ಬೆಣ್ಣೆಹಳ್ಳ ದಂಡೆಗುಂಟ ನಿರ್ಮಿಸಿದ ರಸ್ತೆಯ ಮೇಲೆ ಬಂದು ನವಲಗುಂದ ತಾಲೂಕಿನ ಕಾಲವಾಡ-ಕರ್ಲವಾಡ-ಯಮನೂರ, ನವಲಗುಂದ, ಬೆಳವಟಗಿ, ಗುಡಿಸಾಗರ, ತಡಹಾಳ ಹತ್ತಿರ ಬೆಣ್ಣೆಹಳ್ಳ ಪ್ರವಾಹ ತಡೆಯುವ ಕಾಮಗಾರಿ ವೀಕ್ಷಣೆ ಮಾಡಿ ಮಾತನಾಡಿದ ಅವರು, ಸರ್ಕಾರ 2025-26ನೇ ಸಾಲಿನ ಆಯವ್ಯಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 200 ಕೋಟಿ ಅನುದಾನ ಘೋಷಣೆ ಮಾಡಿದ ನಂತರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಟೆಂಡರ್ ಕರೆದು ಕಾರ್ಯಾದೇಶ ನೀಡಿ ರೈತರ ಜಮೀನಿಗೆ ಹಾಗೂ ಗ್ರಾಮಗಳಿಗೆ ಅಲ್ಲಲ್ಲಿ ಹೋಗಿ ಬರಲು ಕಾಲವಾಡ-ಬೆಳಹಾರ ರಸ್ತೆ, ಆರೇಕುರಹಟ್ಟಿ-ಚಿಲಕವಾಡ ನಡುವೆ ಇರುವ ಬೆಣ್ಣೆಹಳ್ಳಕ್ಕೆ ಸೇತುವೆ ನಿರ್ಮಿಸುವ ಕಾಮಗಾರಿ ವೀಕ್ಷಿಸಿ ರೈತರ ಜಮೀನುಗಳಿಗೆ ನೀರು ನುಗ್ಗದಂತೆ ಕಂಟಿ ತೆಗೆದು ಅಗಲೀಕರಣ ಮಾಡಿ ಅಲ್ಲಲ್ಲಿ ಸೇತುವೆ, ತಡೆಗೋಡೆ ನಿರ್ಮಿಸಿ ನೀರು ಹೊರಚಲ್ಲದಂತೆ ಕಾಮಗಾರಿ ವೇಗದಲ್ಲಿ ನಡೆದಿದ್ದು ಯಮನೂರ ಚಾಂಗದೇವ ಬಾಗಸವಾರ ಜಾತ್ರೆಗೆ ಲಕ್ಷಾಂತರ ಜನ ಭಕ್ತಾದಿಗಳಿಗೆ ಸ್ನಾನ ಮಾಡಲು ಬೆಣ್ಣೆಹಳ್ಳಕ್ಕೆ ಮೆಟ್ಟಿಲು ಹಾಗೂ ಸ್ನಾನಗೃಹ ನಿರ್ಮಿಸುವ ಯಮನೂರ ಆರತಿ ಎಂಬ ಹೆಸರಿನಲ್ಲಿ ರೂ. 11 ಕೋಟಿ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ ಎಂದರು. ತಡಹಾಳ ಗ್ರಾಮದ ಹತ್ತಿರ



ಬೆಣ್ಣೆಹಳ್ಳ-ದೊಡ್ಡಹಳ್ಳ ಪ್ರವಾಹ ಬಂದು ಸೇತುವೆ ಕುಸಿದು ಹೋಗಿದ್ದು ಸೇತುವೆ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಯಿಂದ ರೂ. 80 ಕೋಟಿ ಅನುದಾನ ಬಿಡುಗಡೆಯಾಗಿದೆ. ತಾತ್ಕಾಲಿಕವಾಗಿ ಸಾರ್ವಜನಿಕರಿಗೆ ಓಡಾಡಲು ಸ್ಟೀಲ್ ಬ್ರಿಡ್ಜ್ ನಿರ್ಮಿಸುತ್ತಿರುವುದನ್ನು ಹಿರಿಯ ಅಧಿಕಾರಿಗಳ ತಂಡ ವೀಕ್ಷಿಸಿದರು. ನಂತರ ನವಲಗುಂದ ತಹಶೀಲ್ದಾರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಶಾಸಕ ಎನ್.ಎಚ್. ಕೋನರಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ ಆರ್ಯಾ, MRBCC SC ಮಹಾವೀರ ಗಣಿ, ಇಇ ರಾಘವೇಂದ್ರ ಜಾಲಗಾರ, ತಹಶೀಲ್ದಾರ್‌ಗಳಾದ ಸುಧೀರ ಸಾವಕಾರ, ಮಂಜುನಾಥ ದಾಸಪ್ಪನವರ, ಜೆ.ಬಿ ಮಜ್ಜಗಿ, ತಾ.ಪಂ ಇಒ ರವೀಂದ್ರಗೌಡ ಪಾಟೀಲ, ರಾಮಚಂದ್ರ ಹೊಸಮನಿ, ಪಿಡಬ್ಲ್ಯೂಡಿ ಎಇಇ ಸೋಮನಗೌಡ ಪಾಟೀಲ, ಮುಖ್ಯಾಧಿಕಾರಿ ಎಸ್.ಪಿ. ಪೂಜಾರ, ಸಿಪಿಐ ರವಿ ಕಪ್ಪತ್ತವರ, ಪಿಎಸ್‌ಐ ಜನಾರ್ಧನ ಬಟ್ರಳ್ಳಿ, ಮಲಪ್ರಭಾ ನೀರು ಬಳಕೆದಾರರ ಸಂಘದ ಅಧ್ಯಕ್ಷರಾದ ಸದುಗೌಡ ಪಾಟೀಲ, ದಾವಲಸಾಬ ಖುದ್ದಣ್ಣವರ, ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ವರ್ಧಮಾನಗೌಡ ಹಿರೇಗೌಡರ, ಶಿವಾನಂದ ಭೂಮಣ್ಣವರ ಇತರರಿದ್ದರು.

ಕಾಂಗ್ರೆಸ್‌ಗೆ ಆರ್ಥಿಕ ಶಿಸ್ತು ಇಲ್ಲ: ಆರ್. ಅಶೋಕ

ಬೆಂಗಳೂರು: ಪ್ರಧಾನ ಮಂತ್ರಿ, ನರೇಂದ್ರ ಮೋದಿ ಮಾತ್ರವಲ್ಲ, ಹಣಕಾಸು ಸಚಿವ ಪಿ.ಚಿದಂಬರಂ ಕೂಡ ಚಿನ್ನ ಖರೀದಿಸದಂತೆ ಮನವಿ ಮಾಡಿದ್ದರು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಮಾಡಿರುವ ಅವರು, ಕಾಂಗ್ರೆಸ್ಸಿಗರ ಆರ್ಥಿಕ ಅಜ್ಞಾನ ಮತ್ತು ಅಂಧ ವಿರೋಧಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ? ಎಂದು ಪ್ರಶ್ನಿಸಿದ್ದಾರೆ. ಇತಿಹಾಸದ ಅರಿವೂ ಇಲ್ಲದ, ಆರ್ಥಿಕ ನಿರ್ವಹಣೆಯ ಗಂಧ-ಗಾಳಿಯೂ ಗೊತ್ತಿಲ್ಲದ ಇಂದಿನ ಕಾಂಗ್ರೆಸ್ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಯೊಂದು ನಡೆಯನ್ನೂ ವಿರೋಧಿಸುವುದೇ ಒಂದು ನಿತ್ಯ ಕಾಯಕವಾಗಿಬಿಟ್ಟಿದೆ. ರಾಷ್ಟ್ರದ ಹಿತದೃಷ್ಟಿಯಿಂದ ಮೋದಿ ನೀಡುವ ದೂರದೃಷ್ಟಿಯ ಆರ್ಥಿಕ ಸಲಹೆಗಳನ್ನು ಲೇವಡಿ ಮಾಡುವ ಈ ಕಾಂಗ್ರೆಸ್ಸಿಗರು ಒಮ್ಮೆ ತಮ್ಮದೇ ಪಕ್ಷದ ಇತಿಹಾಸವನ್ನು ತಿರುವಿ ಹಾಕಲಿ. 1967ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ದೇಶದ ಆರ್ಥಿಕ ಶಿಸ್ತಿಗಾಗಿ ಚಿನ್ನ ಕೊಳ್ಳಬೇಡಿ ಎಂದು ಜನರಲ್ಲಿ ಮನವಿ ಮಾಡಿದ್ದರು. 2013 ರಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ವಿದ್ದಾಗ ಹಣಕಾಸು ಸಚಿವ ಪಿ. ಚಿದಂಬರಂ ಅವರು ಚಾಲ್ತಿ ಖಾತೆ ಕೊರತೆ ಸರಿದೂಗಿಸಲು ಚಿನ್ನದ ಮೇಲಿನ ವ್ಯಾಮೋಹ ಬಿಡಿ ಎಂದು ಪದೇ ಪದೇ ಗೋಗರೆದಿದ್ದರು ಎಂದಿದ್ದಾರೆ.

ದೊರೆ ಮಾಡಿದರೆ ದಂಡವಿಲ್ಲ ಎಂಬಂತೆ, ಅಂದಿನ ಕಾಂಗ್ರೆಸ್ ಸರ್ಕಾರಗಳು ಕರೆ ನೀಡಿದರೆ ಅದು ಆರ್ಥಿಕ ನೀತಿ. ಆದರೆ, ರಾಷ್ಟ್ರದ ಹಿತದೃಷ್ಟಿಯಿಂದ ಮೋದಿ ಅವರು ಕರೆ ನೀಡಿದರೆ ಅದು ಇವರಿಗೆ ತಪ್ಪಾಗಿ ಕಾಣುತ್ತಿರುವುದು ಕಾಂಗ್ರೆಸ್ ನಾಯಕರ ಎಡಬಿಡಂಗಿತನಕ್ಕೆ ಹಿಡಿದ ಕನ್ನಡಿ ಎಂದು ಟೀಕಿಸಿದ್ದಾರೆ. ತರ್ಕವಿಲ್ಲದೆ ಮಾತನಾಡುವ ಕಾಂಗ್ರೆಸ್ ನಾಯಕರು ಮೊದಲು ಆರ್ಥಿಕತೆಯ ಮೂಲಪಾಠಗಳನ್ನು ಕಲಿಯಲಿ ಎಂದರು.

ಸಿಎಂ ಜತೆ ಚರ್ಚೆ



ರಾಜ್ಯ ವಾಲ್ಮೀಕಿ ಸಮುದಾಯದ ಮುಖಂಡರು ಮತ್ತು ಸ್ವಾಮೀಜಿಗಳ ನಿಯೋಗ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿಯಾಗಿ ಪರಿಶಿಷ್ಟ ಜಾತಿ ಮೀಸಲಾತಿ ಪ್ರಮಾಣ ಹೆಚ್ಚಿಸುವ ಕುರಿತು ಚರ್ಚೆ ನಡೆಸಿತು.

ಟೈಮರ್ ಪತ್ತೆ, ಜಿಲೆಟಿನ್ ಕಡ್ಡಿ ಪ್ರಕರಣ ಸಮಗ್ರ ತನಿಖೆ: ಪರಂ

ಬೆಂಗಳೂರು: ಜಿಲೆಟಿನ್ ಕಡ್ಡಿ ಹಾಗೂ ಟೈಮರ್ ಪತ್ತೆಯಾಗಿರುವ ಪ್ರಕರಣವನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಈ ಕುರಿತು ಸಮಗ್ರ ತನಿಖೆ ಪ್ರಗತಿಯಲ್ಲಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಸ್ಫೋಟಕ ಇರಿಸಿರುವ ಬಗ್ಗೆ ಕರೆ ಮಾಡಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದು, ಆತನ ವಿಚಾರಣೆ ನಡೆಸಲಾಗುತ್ತಿದೆ. ಘಟನಾ ಸ್ಥಳದಲ್ಲಿ ಜಿಲೆಟಿನ್ ಕಡ್ಡಿ ಸೇರಿದಂತೆ ಪತ್ತೆಯಾಗಿರುವ ಎಲ್ಲಾ ವಸ್ತುಗಳನ್ನು ವಶಕ್ಕೆ ಪಡೆದು ವೈಜ್ಞಾನಿಕ ತನಿಖೆಗೆ ಒಳಪಡಿಸಲಾಗಿದೆ. ಈ ಪ್ರಕರಣದ ತನಿಖೆಯಲ್ಲಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಕೂಡ ಕೈಜೋಡಿಸುತ್ತಿದ್ದು, ರಾಜ್ಯ ಪೊಲೀಸರು ಅವರಿಗೆ ಸಂಪೂರ್ಣ ಸಹಕಾರ ನೀಡಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಭದ್ರತೆಯಲ್ಲಿ ಲೋಪವಿಲ್ಲ: ಪ್ರಧಾನಮಂತ್ರಿಯವರ ಭೇಟಿಯ ಹಿನ್ನೆಲೆಯಲ್ಲಿ ಬಿಗಿ ಭದ್ರತೆ ಇರುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯದೊಂದಿಗೆ ಹೈ-ಲೆವೆಲ್ ಸೆಕ್ಯೂರಿಟಿ ಒದಗಿಸುತ್ತವೆ. ಕಾರ್ಯಕ್ರಮ ಆರಂಭವಾಗುವ ಎರಡು ಗಂಟೆಗಳ ಮೊದಲು, ಈ ಸ್ಫೋಟಕಗಳು ಪತ್ತೆಯಾಗಿರುವುದು ಪೊಲೀಸರ ಜಾಗರೂಕತೆಗೆ ಸಾಕ್ಷಿಯಾಗಿದೆ. ಇದು ಒಂದು ರೀತಿಯಲ್ಲಿ ಉತ್ತಮ ಬೆಳವಣಿಗೆಯಾಗಿದ್ದು, ಅಹಿತಕರ ಘಟನೆ ನಡೆಯುವ ಮುನ್ನವೇ ಪತ್ತೆ ಹಚ್ಚಲಾಗಿದೆ ಎಂದರು.

ಭಯೋತ್ಪಾದನಾ ನಂಟು ಶಂಕೆ: ಈ ಪ್ರಕರಣಕ್ಕೆ ಭಯೋತ್ಪಾದನಾ ಚಟುವಟಿಕೆಗಳ ನಂಟು ಇರುವ ಸಾಧ್ಯತೆಗಳ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಹಂತದಲ್ಲಿ ಯಾವುದೇ ಖಚಿತ ತೀರ್ಮಾನಕ್ಕೆ ಬರುವುದು ಕಷ್ಟ. ತನಿಖೆ ಪೂರ್ಣಗೊಂಡ ನಂತರವಷ್ಟೇ ಸತ್ಯಾಸತ್ಯತೆ ಹೊರಬರಲಿದೆ. ಅಲ್ಲಿಯವರೆಗೆ ಕಾದು ನೋಡಬೇಕಿದೆ ಎಂದು ತಿಳಿಸಿದರು.

ಕಿರುಸುದ್ದಿ

ಸಾರಿಗೆ ನೌಕರರಿಗೆ ಶೇ.2.5 ವೇತನ ಹೆಚ್ಚಳ

ಬೆಂಗಳೂರು: ಸಾರಿಗೆ ನೌಕರರಿಗೆ 2025 ಏ.1ರಿಂದ ಜಾರಿಗೆ ಬರುವಂತೆ ಶೇ2.5 ವೇತನ ಪರಿಷ್ಕರಣೆಗೆ ರಾಜ್ಯ ಸರ್ಕಾರವು ಅನುಮೋದನೆ ನೀಡಿದೆ. ಈ ವೇತನ ಪರಿಷ್ಕರಣೆ ಯಿಂದ ನಾಲ್ಕು ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳು 72.80 ಕೋಟಿ ರೂ., ಪ್ರತಿ ವರ್ಷ 873.64 ಕೋಟಿ ರೂ. ಹೆಚ್ಚುವರಿ ವೆಚ್ಚವಾಗಲಿದೆ. ನಾಲ್ಕು ಸಾರಿಗೆ ಸಂಸ್ಥೆಗಳ 1ಲಕ್ಷದ 5 ಸಾವಿರ ಸಿಬ್ಬಂದಿಗಳಿಗೆ ವೇತನ ಪರಿಷ್ಕರಣೆ ಅನ್ವಯವಾಗಲಿದೆ. ವೇತನ ಪರಿಷ್ಕರಣೆಯನ್ನು ಜು.1ಮಾಹೆಯ ವೇತನದಲ್ಲಿ ಅನುಷ್ಠಾನಗೊಳಿಸಿ ಎಲ್ಲಾ ಅರ್ಹ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಲಾಗುತ್ತದೆ. ಈಗಾಗಲೇ 2023ರ ಮಾರ್ಚ್‌ನ ವೇತನ ಪರಿಷ್ಕರಣೆಯ 26 ತಿಂಗಳ ಹಿಂಬಾಕಿ ಮೊತ್ತ 1271.92 ಕೋಟಿ ರೂ. ಗಳಲ್ಲಿ ಮೊದಲ ಕಂತಿನ ಹಣ 450 ಕೋಟಿ ರೂ. ಸರ್ಕಾರ ಬಿಡುಗಡೆ ಮಾಡಿದ್ದು, ನೌಕರರ ಖಾತೆಗಳಿಗೆ ಜಮಾ ಮಾಡಲಾಗಿದೆ. 2025 ಏ.1ರಿಂದ ಜೂ.30 ರವರೆಗಿನ ವೇತನ ಪರಿಷ್ಕರಣೆ ಹೆಚ್ಚಳದ ಹಿಂಬಾಕಿ ಮೊತ್ತವನ್ನು ಮುಂದಿನ ದಿನಗಳಲ್ಲಿ ಪಾವತಿ ಮಾಡಲಾಗುವುದು ಎಂದು ಆದೇಶದಲ್ಲಿ ತಿಳಿಸಿದೆ.

ದೇಶಕ್ಕೆ ಬಿಜೆಪಿ ಉಪಯೋಗವೇ ಇಲ್ಲ: ಸಚಿವ ಸಂತೋಷ ಲಾಡ್

ಧಾರವಾಡ: ದೇಶದ ಗುಡಿ-ಗುಂಡಾರ ಭೇಟಿ, ಫೋಟೋ ಶೂಟ್‌ಗಳಿಗೆ ನರೇಂದ್ರ ಮೋದಿ ಸಿಮೀತವಾಗಿದ್ದು, ಚುನಾವಣೆ ವೇಳೆ ಮಾತ್ರ ಪ್ರತ್ಯಕ್ಷವಾಗಿ ನಂತರ ಮರೆ ಆಗುವುದು ಮೋದಿ ಸ್ಕೀಮ್ ಎಂದು ಕಾರ್ಮಿಕ ಇಲಾಖೆಯ ಸಚಿವ ಸಂತೋಷ ಲಾಡ್ ವ್ಯಂಗ್ಯವಾಡಿದರು. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಳೆದ 11 ವರ್ಷಗಳಲ್ಲಿ ಮೋದಿ ಅವರು ಜನರಿಗೆ ಸಿಗುತ್ತಿಲ್ಲ, ದೇವಸ್ಥಾನಗಳಿಗೆ ಭೇಟಿ ನೀಡುತ್ತ ದೇಶದ ಅಭಿವೃದ್ಧಿ ಮರೆತಿದ್ದಾರೆ. ಬಿಜೆಪಿಯಿಂದ ದೇಶಕ್ಕೆ ನೈಯಾಪೈಸೆ ಉಪಯೋಗವಿಲ್ಲ ಎಂದು ಕಿಡಿಕಾರಿದರು. ಮೋದಿ ಅವರ ಆಡಳಿತದಲ್ಲಿ ಇಡೀ ದೇಶದಲ್ಲಿ ಒಂದು ಲಕ್ಷಕ್ಕೂ ಅಧಿಕ ಶಾಲೆಗಳು ಮುಚ್ಚಿವೆ. ಈ ಕುರಿತು ಸ್ವತಃ ಬಿಜೆಪಿ ಸರ್ಕಾರವೇ ಹೇಳಿದೆ. ಪ್ರಧಾನಿ ಹುದ್ದೆಯಲ್ಲಿ ಇದ್ದುಕೊಂಡು ಆನ್‌ಲೈನ್ ಕ್ಲಾಸ್ ಮಾಡುವಂರೆ ಹೇಳುವುದು ಸರಿಯಾದ ನಡೆ ಅಲ್ಲ ಎಂದು ಹೇಳಿದರು. ದೇಶದ ಹಲವು ರಾಜ್ಯಗಳಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ಹಾಗೂ ಭ್ರಷ್ಟಾಚಾರ ನಡೆಯುತ್ತಿವೆ. ಈ ಬಗ್ಗೆ ಯಾರು ಪ್ರಶ್ನಿಸುತ್ತಿಲ್ಲ ಎಂದರು.

ವಿದ್ಯಾರ್ಥಿಗಳ ಭವಿಷ್ಯದ ಜತೆ ಕೇಂದ್ರ ಚೆಲ್ಲಾಟ: ಹೆಬ್ಬಾಳ್ಕರ್

ಬೆಳಗಾವಿ: ನೀಟ್ ಪರೀಕ್ಷೆ ಪ್ರಶ್ನೆ ಪತ್ರಿಕೆಯ ಸೋರಿಕೆಯಾಗಿದ್ದು, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಕೇಂದ್ರ ಸರ್ಕಾರದ ಚೆಲ್ಲಾಟ ಆಡುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಆರೋಪಿಸಿದರು.



ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವ ಅವರು, ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಅತ್ಯಂತ ದುರದೃಷ್ಟಕರ ಮತ್ತು ಖಂಡನೀಯ. ಒಂದು ದೇಶದ ಅತ್ಯುನ್ನತ ಪರೀಕ್ಷೆಗಳನ್ನು ಕೂಡ ಪಾರದರ್ಶಕವಾಗಿ ನಡೆಸಲಾಗದ ಕೇಂದ್ರ ಸರ್ಕಾರದ ಆಡಳಿತ ವೈಫಲ್ಯಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ. ಪರೀಕ್ಷಾ ಅಕ್ರಮಗಳು ಮತ್ತು ಆಡಳಿತಾತ್ಮಕ ಅಸಮರ್ಥತೆಯಿಂದಾಗಿ ಇಂದು ನಮ್ಮ ದೇಶದ ಪ್ರತಿಭಾವಂತ ವಿದ್ಯಾರ್ಥಿಗಳು ಬೀದಿಗೆ ಬೀಳುವಂತಾಗಿದೆ ಎಂದರು.

ಕುಕ್ಕೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ

ರಾಜ್ಯದಲ್ಲಿ ಬಿಜೆಪಿಗೆ ಅಧಿಕಾರ

ಸುಬ್ರಹ್ಮಣ್ಯ: ಪಶ್ಚಿಮಬಂಗಾಳದಜನತೆಯತೀರ್ಪು ಹಿಂದೂ ವಿರೋಧಿ ನೀತಿಗಳಿಗೆ ಸ್ಪಷ್ಟ ಪ್ರತಿಕ್ರಿಯೆ ನೀಡಿದಂತಾಗಿದೆ. ಪ್ರಧಾನಿ ಮೋದಿ ಅವರ ನಾಯಕತ್ವದ ಮೇಲೆ ಇಟ್ಟಿರುವ ನಂಬಿಕೆಯಿಂದ ಜನರು ನಿರ್ಣಾಯಕ ತೀರ್ಪು ನೀಡಿದ್ದಾರೆ. ಅಸ್ಸಾಂ ಮತ್ತು ಪಾಂಡಿಚೇರಿ ರಾಜ್ಯಗಳಲ್ಲಿ ಬಿಜೆಪಿ ಪುನಃ ಅಧಿಕಾರಕ್ಕೆ ಬಂದಿರುವುದು ಆಡಳಿತದ ಜನಪರತೆ ಮತ್ತು ಅಭಿವೃದ್ಧಿ ಕಾರ್ಯಗಳ ಫಲವಾಗಿದೆ. ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ದೊರೆತ ಯಶಸ್ಸು ಕಾರ್ಯಕರ್ತರ ಪರಿಶ್ರಮ ಮತ್ತು ಜನಬೆಂಬಲದಿಂದ ಸಾಧ್ಯವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಅವರು ವಾಸ್ತವ್ಯ ಹೂಡಿದ ಕುಕ್ಕೆ ಸುಬ್ರಹ್ಮಣ್ಯದ ಆರ್.ಎನ್.ಎಸ್ ವನ್ ವಸತಿ ಗೃಹದಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಆತ್ಮ ವಿಶ್ವಾಸ ಹೆಚ್ಚಿಸಿದೆ: ಪಂಚ ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ದಾಖಲಿಸಿರುವುದು ಪಕ್ಷದ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ವಿವಿಧ ರಾಜ್ಯಗಳಲ್ಲಿ ಬಿಜೆಪಿ ಸಾಧಿಸಿರುವ ಗೆಲುವುಗಳು ಸಂಘಟನೆಯ ಶಕ್ತಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಮೇಲಿನ ಜನರ ವಿಶ್ವಾಸದ ಪ್ರತಿಫಲವಾಗಿವೆ ಎಂದರು. ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲೂ ಬಿಜೆಪಿ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬರುವ ವಿಶ್ವಾಸವಿದೆ. ಜನತೆ ನಮಗೆ ಆಶೀರ್ವದಿಸಲಿದ್ದಾರೆ ಎಂದು ಹೇಳಿದರು.

ಸರಕಾರದೊಂದಿಗೆ ಕರಜೋಡಿಸಬೇಕು: ಪಶ್ಚಿಮ ಏಷ್ಯಾ ಯುದ್ಧ ಹಾಗೂ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮಿತವ್ಯಯ ಕ್ರಮಗಳನ್ನು ಕೈಗೊಳ್ಳುವಂತೆ ಪ್ರಧಾನಿ ಮೋದಿ ನೀಡಿರುವ ಸಲಹೆಯನ್ನು ಕಾಂಗ್ರೆಸ್ ಟೀಕಿಸಿರುವುದಕ್ಕೆ ಪ್ರತಿಕ್ರಿಯಿಸಿದ ವಿಜಯೇಂದ್ರ, ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಜವಾಬ್ದಾರಿಯುತವಾಗಿ ವರ್ತಿಸಬೇಕಾದ ಕಾಂಗ್ರೆಸ್ ಅನಗತ್ಯ ರಾಜಕೀಯ ಟೀಕೆಗಳಲ್ಲಿ ತೊಡಗಿದೆ ಎಂದು ಆರೋಪಿಸಿದರು. ರಾಷ್ಟ್ರಹಿತದ ವಿಚಾರಗಳಲ್ಲಿ ಎಲ್ಲರೂ ಸರ್ಕಾರದೊಂದಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಯಡಿಯೂರಪ್ಪ ಅವರ ಹೋರಾಟದ ಬದುಕಿನ ವಿವಿಧ ಹಂತಗಳನ್ನು ಸ್ಮರಿಸಿದರು. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಕಳುಹಿಸಿದ್ದ ಎರಡು ಪುಟಗಳ ಸಂದೇಶವೂ ವಿಶೇಷ ಗಮನ ಸೆಳೆದಿದ್ದು, ಯಡಿಯೂರಪ್ಪ ಮತ್ತು ಮೋದಿ ಅವರ ನಡುವಿನ ಆತ್ಮೀಯ ಬಾಂಧವ್ಯವನ್ನು ಅದು ಪ್ರತಿಬಿಂಬಿಸಿತು ಎಂದು ಹೇಳಿದರು. ಯಡಿಯೂರಪ್ಪ ಅವರು ಕೇವಲ ನಾಯಕನಲ್ಲ, ಜನಶಕ್ತಿಯ ಪ್ರತೀಕ ಎಂಬುದನ್ನು ತೋರಿಸಿದೆ. ಕೇವಲ ಹದಿನೈದು ದಿನಗಳ ಅವಧಿಯಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜಿಸಲು ಕಾರ್ಯಕರ್ತರ ಸಮರ್ಪಿತ ಪರಿಶ್ರಮವೇ ಪ್ರಮುಖ ಕಾರಣ ಎಂದು ವಿಜಯೇಂದ್ರ ಹೇಳಿದರು. ಶಾಸಕರಾದ ಭಾಗೀರಥಿ ಮುರುಳ್ಯ, ಹರೀಶ್ ಪೂಂಜ, ಸುಬ್ರಹ್ಮಣ್ಯ ಬಿಜೆಪಿ ಶಕ್ತಿ ಕೇಂದ್ರದ ಪ್ರಮುಖ ರಾಜೇಶ್ ಎನ್.ಎಸ್., ಪ್ರಮುಖರಾದ ಪ್ರಸನ್ನ ದರ್ಬೆ ಮತ್ತಿತರರು ಉಪಸ್ಥಿತರಿದ್ದರು.



ಅಭಿಮಾನೋತ್ಸವ ಐತಿಹಾಸಿಕ ಕ್ಷಣ


ಚಿತ್ರದುರ್ಗದ ಕೋಟೆನಗರಿಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ 50ನೇ ವರ್ಷದ ಅಂಗವಾಗಿ ನಡೆದ 'ಅಭಿಮಾನೋತ್ಸವ' ಕಾರ್ಯಕ್ರಮ ರಾಜ್ಯ ರಾಜಕಾರಣದಲ್ಲಿ ಐತಿಹಾಸಿಕ ಕ್ಷಣವಾಗಿ ಗುರುತಿಸಿಕೊಂಡಿದೆ.ರಾಜ್ಯದ ಮೂಲೆಮೂಲೆಗಳಿಂದ ಲಕ್ಷಾಂತರ ಕಾರ್ಯಕರ್ತರು ಸ್ವಯಂಪ್ರೇರಿತವಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದು, ವಿವಿಧ ಸಮಾಜಗಳ ಸಾವಿರಾರು ಮಠಾಧೀಶರೂ ಭಾಗವಹಿಸಿರುವುದು ಕಾರ್ಯಕ್ರಮದ ವೈಶಿಷ್ಟ್ಯವಾಗಿತ್ತು ಎಂದರು.

ಉಪ ಚುನಾವಣೆ ಮಾನದಂಡವಲ್ಲ

ಇತ್ತೀಚಿನ ಉಪಚುನಾವಣೆ ಫಲಿತಾಂಶಗಳ ಕುರಿತು ಮಾತನಾಡಿದ ಅವರು, ಹಿಂದೆ ಆಡಳಿತ ಪಕ್ಷಗಳು ಉಪಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದರೂ ನಂತರದ ಸಾರ್ವತ್ರಿಕ ಚುನಾವಣೆಯಲ್ಲಿ ಸರ್ಕಾರವೇ ಪತನವಾದ ಉದಾಹರಣೆಗಳಿವೆ ಎಂದು ಹೇಳಿದ ಅವರು, ಈ ಫಲಿತಾಂಶವನ್ನು ಮುಂದಿನ ಚುನಾವಣೆಯ ಮಾನದಂಡವಾಗಿ ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಅನುಭವ ಮಂಟಪ ಶೀಘ್ರ ಪೂರ್ಣ: ಖಂಡ್ರೆ

ಬೆಂಗಳೂರು: ಬಸವಕಲ್ಯಾಣದಲ್ಲಿ ನಿರ್ಮಿಸಲಾಗುತ್ತಿರುವ ಆಧುನಿಕ ಅನುಭವ ಮಂಟಪವನ್ನು ಬರುವ ಮಾರ್ಚ್ ತಿಂಗಳೊಳಗೆ ಪೂರ್ಣಗೊಳಿಸಲಾಗುವುದು. ಪ್ರಸಕ್ತ ಶೇ.70ರಷ್ಟು ಕಾಮಗಾರಿಯೂ ಪೂರ್ಣ ಗೊಂಡಿದೆ ಎಂದು ಅರಣ್ಯ ಸಚಿವ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆಯಲ್ಲಿ ವರ್ಚುವಲ್ ಮೂಲಕ ನಡೆದ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಯ ಸಭೆಯಲ್ಲಿ ಭಾಗಿಯಾಗಿ ಮಾತನಾಡಿ, ಮುಂದಿನ ಮಾರ್ಚ್‌ನಲ್ಲಿ ಕಾಮಗಾರಿ ಮುಗಿಯ ಬೇಕಿದ್ದರೆ ಕಾಮಗಾರಿಯನ್ನು ತ್ವರಿತಗೊಳಿ ಸುವ ಅಗತ್ಯವಿದೆ ಎಂದರು.

ಕಾಮಗಾರಿ ವಿಳಂಬ ವಾಗದಂತೆ ಕ್ರಮ ವಹಿಸಿ ಅನುಭವ ಮಂಟಪ ಹಾಗೂ ಇನ್ನಿತರ ಸ್ಮಾರಕಗಳ ಅಭಿವೃದ್ಧಿಯನ್ನು ಗಡುವಿನಲ್ಲಿ ಪೂರ್ಣ ಗೊಳಿಸಬೇಕು ಎಂದರು.

ಸಭೆಯಲ್ಲಿ ಬಸವ ಸಮಿತಿಯ ಅರವಿಂದ ಜತ್ತಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ, ಬೀದರ್ ಜಿಲ್ಲಾಧಿಕಾರಿ ಶಿಲ್ಪಾಶರ್ಮಾ ಮತ್ತಿತರರು ಪಾಲ್ಗೊಂಡಿದ್ದರು.

280 ಕೋಟಿ ರೂ. ಮಂಜೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಕೂಡ ಪ್ರಗತಿ ಪರಿಶೀಲನೆ ಸಭೆ ನಡೆದಿದ್ದು, ಅವರ ಮಾರ್ಗದರ್ಶನದಂತೆ ಈಗಾಗಲೇ ಕ್ರಮ ವಹಿಸಲಾಗಿದೆ. ಜಿಲ್ಲಾಡಳಿತ ಮತ್ತು ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಹೆಚ್ಚು ಕ್ರಿಯಾಶೀಲವಾಗಿ ನಿಗದಿತ ಕಾಲಮಿತದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಶ್ರಮವಹಿಸಬೇಕು. 2023ರಿಂದೀಚೆಗೆ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 280 ಕೋಟಿ ರೂ. ಗಳನ್ನು ಅನುಭವ ಮಂಟಪ ಅಭಿವೃದ್ಧಿಗೆ ಮಂಜೂರು ಮಾಡಿದ್ದಾರೆ. ಶೇ.65ರಷ್ಟು ಆರ್ಥಿಕ ಪ್ರಗತಿಯಾಗಿದೆ. ಶೇ.70ರಷ್ಟು ಕಾಮಗಾರಿಯೂ ಪೂರ್ಣಗೊಂಡಿದೆ ಎಂದು ಖಂಡ್ರೆ ತಿಳಿಸಿದರು.

ಮೋದಿ ಹೇಳಿಕೆ ಬಗ್ಗೆ ಕೈ ಸಣ್ಣತನ

ಬೆಂಗಳೂರು: ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಹೇಳಿಕೆ ಬಗ್ಗೆ ಪ್ರತಿಪಕ್ಷ ಕಾಂಗ್ರೆಸ್ ಸಣ್ಣತನದಿಂದ ಮಾತನಾಡುವುದು ಸರಿಯಲ್ಲ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಹರಿಹಾಯ್ದರು.



ಮಂಗಳವಾರ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಇತರ ಅನೇಕ ದೇಶಗಳಿಗೆ ಹೋಲಿಕೆ ಮಾಡಿದರೆ ಭಾರತದ ಆರ್ಥಿಕ ಪರಿಸ್ಥಿತಿ ಬಹಳ ಉತ್ತಮವಾಗಿದೆ. ಆದರೆ, ನಾವು ಕೂಡ ನಮ್ಮ ಹಣಕಾಸು ವ್ಯವಸ್ಥೆಯನ್ನು ಹಾಳು ಮಾಡಿಕೊಳ್ಳಬಾರದಲ್ಲವೇ ಎಂದರು.

ತೈಲ ಬಿಕ್ಕಟ್ಟು ಎಲ್ಲ ದೇಶಗಳನ್ನು ಬಾಧಿಸುತ್ತಿದೆ. ಭಾರತದಲ್ಲಿ ತೈಲ ಉತ್ಪಾದನೆ ಆಗುತ್ತಿಲ್ಲ, ಬದಲಿಗೆ ಬೇರೆ ದೇಶಗಳಿಂದಲೇ ಆಮದು ಮಾಡಿಕೊಳ್ಳಬೇಕಾಗುತ್ತದೆ ಎನ್ನುವುದು ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿಲ್ಲವೇ? ರಾಷ್ಟ್ರದ ಹಿತ ದೃಷ್ಟಿಯಿಂದ ಪ್ರಧಾನಿಗಳು ಮಾತ್ರ ನೀಡಿದ್ದಾರೆ. ಇದರ ಬಗ್ಗೆ ಕಾಂಗ್ರೆಸ್ ನಾಯಕರು ಸಣ್ಣತನದಿಂದ ಮಾತನಾಡುವುದು ಸರಿಯಲ್ಲ ಎಂದು ಕಿಡಿಕಾರಿದರು. ತಲಾ ಆದಾಯದಲ್ಲಿ ರಾಜ್ಯವು ಮುಂದೆ ಇದೆ ಎಂದು ಮುಖ್ಯಮಂತ್ರಿಗಳು ಹೇಳಿಕೊಳ್ಳುತ್ತಾರೆ.

ಆ ಮಾನದಂಡದಲ್ಲಿ ನಾವು ರಾಜ್ಯದ ಅಭಿವೃದ್ಧಿಯನ್ನು ಅಳೆಯಲು ಆಗುವುದಿಲ್ಲ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ನೋಡಿದರೆ ಜನ ಯಾವ ಪರಿಸ್ಥಿತಿಯಲ್ಲಿ ಇದ್ದಾರೆ ಅನ್ನೋದು ಗೊತ್ತಾಗುತ್ತದೆ ಎಂದು ಕೇಂದ್ರ ಸಚಿವರು ಕಟುವಾಗಿ ಟೀಕಿಸಿದರು. ರಾಷ್ಟ್ರದ ಜನತೆಯ ಹಿತದೃಷ್ಟಿಯಿಂದ ಪ್ರಧಾನಿಗಳು ಕಾಳಜಿ ವ್ಯಕ್ತಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ ಹಣಕಾಸು ವ್ಯವಸ್ಥೆಗೆ ಹಿನ್ನಡೆ ಉಂಟಾಗಬಾರದು ಎಂದು ಅವರು ರಾಷ್ಟ್ರದ ಜನತೆಗೆ ಕೆಲವು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಇದರಲ್ಲಿ ತಪ್ಪು ಹುಡುಕುವಂಥದ್ದು ಏನಿದೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಕಾಂಗ್ರೆಸ್ಸಿಗರು ಚಿದಂಬರಂ ಹೇಳಿಕೆ ನೆನಪಿಸಿಕೊಳ್ಳಲಿ

ಪ್ರಧಾನಿ ಮೋದಿ ಅವರ ಸಲಹೆ ಕುರಿತು ಕಾಂಗ್ರೆಸ್ ನಾಯಕರ ಹೇಳಿಕೆಗೆ ಮಾಜಿ ಸಚಿವ ಶ್ರೀರಾಮುಲು ಪ್ರತಿಕ್ರಿಯಿಸಿದ್ದು, ಈ ಹಿಂದೆ ಕೇಂದ್ರದಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, ಹಣಕಾಸು ಸಚಿವ ಚಿದಂಬರಂ ಅವರ ಹೇಳಿಕೆಯನ್ನು ಕಾಂಗ್ರೆಸ್ಸಿಗರು ನೆನಪು ಮಾಡಿಕೊಳ್ಳಬೇಕು ತಿರುಗೇಟು ನೀಡಿದ್ದಾರೆ.



ಅಮೆರಿಕ, ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದಿಂದ ದೇಶದಲ್ಲಿ ಕಷ್ಟದ ಪರಿಸ್ಥಿತಿ ಇದೆ. ಪೆಟ್ರೋಲ್, ಡೀಸೆಲ್ ಅನ್ನು ಮಿತವಾಗಿ ಬಳಸಿ ಎಂದು ಹೇಳಿದ್ದಾರೆ. ಇವುಗಳನ್ನು ಆಮದು ಮಾಡಿಕೊಳ್ಳಲು ತೊಂದರೆ ಇದೆ. ಆದ್ದರಿಂದ ಬಳಕೆಗೆ ಮಿತಿ ಇರಲಿ ಎಂದು ಪ್ರಧಾನಿ ಸಲಹೆ ನೀಡಿದ್ದಾರೆ. ಇದು ಬಿಟ್ಟರೆ ಬೇರೆ ಉದ್ದೇಶವಿಲ್ಲ. ಚಿದಂಬರಂ ಅವರ ಹೇಳಿಕೆಗಳನ್ನು ಮರೆತ ಕಾಂಗ್ರೆಸ್ ಅನ್ನು ದೇಶದ ಜನರು ಮರೆಯುತ್ತಾರೆ. ಕಾಂಗ್ರೆಸ್‌ನವರಿಗೆ ಬುದ್ಧಿ ಕಡಿಮೆ ಎಂದು ಶ್ರೀರಾಮುಲು ಲೇವಡಿ ಮಾಡಿದರು.

ಪ್ರತಿ ಟನ್ ಕಬ್ಬಿಗೆ 50 ರೂ. ಜಮೆ: ಸಿಎಂ ಸೂಚನೆ

ಬೆಂಗಳೂರು: ದಕ್ಷಿಣ ಕರ್ನಾಟಕ ಭಾಗದ ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ 50 ರೂ. ಜಮೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.



ದಕ್ಷಿಣ ಕರ್ನಾಟಕದ 7 ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಆಗುತ್ತಿರುವ ಸಮಸ್ಯೆ ಬಗ್ಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಸಲ್ಲಿಸಿದ ಮನವಿಗೆ ಮುಖ್ಯಮಂತ್ರಿಗಳು ಸ್ಪಂದಿಸಿದ್ದು, ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸಕ್ಕರೆ ನಿರ್ದೇಶನಾಲಯದ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಇದರ ಬೆನ್ನಲ್ಲೇ 7 ಸಕ್ಕರೆ ಕಾರ್ಖಾನೆಗಳು ರೈತರ ಖಾತೆ ವಿವರವನ್ನು ನೀಡಿದ್ದು, ರೈತರ ಖಾತೆಗಳಿಗೆ ಹಣ ಜಮೆ ಮಾಡುವಂತೆ ಖಜಾನೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ವಿವರಗಳನ್ನು ನೀಡಿದ್ದಾರೆ. ಶೀಘ್ರದಲ್ಲೇ ರೈತರಿಗೆ ಸರ್ಕಾರದ ಪಾಲಿನ 50 ರೂ. ಪ್ರೋತ್ಸಾಹ ಧನ ಜಮೆಯಾಗಲಿದೆ.

ನೀಟ್ ಅಕ್ರಮ: ತನಿಖೆಗೆ ಎಬಿವಿಪಿ ಆಗ್ರಹ

ಬೆಂಗಳೂರು: ನೀಟ್ ಪರೀಕ್ಷಾ ವ್ಯವಸ್ಥೆಗೆ ಹೊಡೆತ ಮಾತ್ರವಲ್ಲ, ವರ್ಷವಿಡೀ ಶ್ರಮಿಸಿದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೂ ಅನ್ಯಾಯವಾಗುತ್ತದೆ. ಈ ಬಗ್ಗೆ ಕೇಂದ್ರೀಯ ಸಂಸ್ಥೆಗಳು ನಿಷ್ಪಕ್ಷಪಾತ ಮತ್ತು ಸಮಯೋಚಿತ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಎಬಿವಿಪಿ ಒತ್ತಾಯಿಸಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಎಬಿವಿಪಿಯ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯದರ್ಶಿ ಗೋಪಿ ರಂಗಸ್ವಾಮಿ, ದೇಶಾದ್ಯಂತ ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ನೀಟ್ ಪರೀಕ್ಷಾ ವ್ಯವಸ್ಥೆಯ ವಿಶ್ವಾಸಾರ್ಹತೆಯ ಬಗ್ಗೆ ಗಂಭೀರ ಕಳವಳವನ್ನು ಹುಟ್ಟುಹಾಕಿದೆ. ಪ್ರವೇಶ ಪರೀಕ್ಷೆಗಳ ಸಮಗ್ರತೆ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಯಾವುದೇ ರಾಜಿ ಮಾಡಿಕೊಳ್ಳಬಾರದು ಎಂಬುದು ಸ್ಪಷ್ಟವಾಗಿದೆ ಎಂದರು. ಪ್ರಶ್ನೆ ಪತ್ರಿಕೆ ಅಥವಾ ಸಂಬಂಧಿತ ಪ್ರಕ್ರಿಯೆಗಳು ಪರೀಕ್ಷೆಗೆ ಮೊದಲೇ ಕೆಲವು ವ್ಯಕ್ತಿಗಳನ್ನು ತಲುಪಿದ್ದರೆ, ಅದು ಪರೀಕ್ಷಾ ವ್ಯವಸ್ಥೆಗೆ ಹೊಡೆತ ಮಾತ್ರವಲ್ಲ, ವರ್ಷವಿಡೀ ಶ್ರಮಿಸಿದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೂ ಅನ್ಯಾಯವಾಗುತ್ತದೆ. ಈ ಸಂಪೂರ್ಣ ವಿಷಯದ ಬಗ್ಗೆ ಕೇಂದ್ರೀಯ ಸಂಸ್ಥೆಗಳು ನಿಷ್ಪಕ್ಷಪಾತ ಮತ್ತು ಸಮಯೋಚಿತ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರು, ಪರೀಕ್ಷಾ ಮಾಫಿಯಾ ಮತ್ತು ಯಾವುದೇ ಮಟ್ಟದಲ್ಲಿ ಸಹಕರಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತದೆ.

ದೇಶಾದ್ಯಂತ ಲಕ್ಷಾಂತರ ವಿದ್ಯಾರ್ಥಿಗಳು ವರ್ಷಗಳ ಕಠಿಣ ಪರಿಶ್ರಮಮತ್ತುಹೋರಾಟದನಂತರನೀಟ್‌ನಂತಹಪರೀಕ್ಷೆಗಳಿಗೆ ಹಾಜರಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ, ಯಾವುದೇ ಅಕ್ರಮವು ಅವರ ನೈತಿಕತೆ ಮತ್ತು ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ, ಇದೇ ವಿಷಯವನ್ನು ನಿಷ್ಪಕ್ಷಪಾತವಾಗಿ ತನಿಖೆ ಮಾಡುವುದು ಅತ್ಯಗತ್ಯ ಮತ್ತು ಅಪರಾಧಿಗಳನ್ನು ಯಾವುದೇ ಸಂದರ್ಭದಲ್ಲೂ ಬಿಡಬಾರದು. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ತಾಂತ್ರಿಕ ಭದ್ರತೆ, ಪ್ರಶ್ನೆ ಪತ್ರಿಕೆ ಗೌಪ್ಯತೆ, ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ವ್ಯವಸ್ಥೆಗಳನ್ನು ಬಲಪಡಿಸಬೇಕೆಂದು ಒತ್ತಾಯಿಸಿದ್ದಾರೆ.

ವಿಜಯಪುರ, ಇಂಡಿ ತಾಲೂಕುಗಳೇ ಹಾಟ್‌ಸ್ಪಾಟ್ | ಜನರಲ್ಲಿ ಆತಂಕ ಮೂಡಿಸಿದ ಬೀದಿನಾಯಿ ಕಡಿತ ಪ್ರಕರಣ

ನಾಲ್ಕು ತಿಂಗಳಲ್ಲಿ 13,992 ನಾಯಿ ದಾಳಿ ಪ್ರಕರಣ ಪತ್ತೆ

ಪರಶುರಾಮ ಶಿವಶರಣ

ದಿಗಂತ ವಿಶೇಷ

ವಿಜಯಪುರ: ಜಿಲ್ಲೆಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಿದ್ದು, ಅದರಲ್ಲೂ ಈ ನಾಯಿಗಳ ಕಡಿತ ಪ್ರಕರಣಕ್ಕೆ ವಿಜಯಪುರ ಹಾಗೂ ಇಂಡಿ ತಾಲೂಕುಗಳೇ ಹಾಟ್‌ಸ್ಪಾಟ್ ಆಗಿವೆ ಎನ್ನುವುದು ತೀವ್ರ ಆತಂಕದ ಸಂಗತಿ.

ನಗರದ ಕೊಳಚೆ ಪ್ರದೇಶ ಸೇರಿದಂತೆ ಪ್ರತಿಷ್ಠಿತ ಬಡಾವಣೆಗಳಲ್ಲೂ ಬೀದಿ ನಾಯಿಗಳ ಉಪಟಳ ಹೆಚ್ಚುತ್ತಲೇ ಇದೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಪ್ರಸಕ್ತ ವರ್ಷವೂ ಬೀದಿ ನಾಯಿ ಕಡಿತ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದೆ. ಇಲ್ಲಿನ ರಸ್ತೆಗಳಲ್ಲಿ ಮಕ್ಕಳು, ವೃದ್ಧರು, ಮಹಿಳೆಯರು ಒಬ್ಬಂಟಿಯಾಗಿ ತೆರಳುವಂತಿಲ್ಲ. ಅದರಲ್ಲೂ ತಮ್ಮ ಮನೆಗಳ ಎದುರಿನಲ್ಲಿ ಪುಟ್ಟ ಮಕ್ಕಳು ಆಟವಾಡುವಂತಿಲ್ಲ. ಏಕಾಂಗಿಯಾಗಿ ಆಟವಾಡುವ ಪುಟ್ಟ ಮಕ್ಕಳು ಕಂಡರೆ ಸಾಕು ಬೀದಿ ನಾಯಿಗಳು ನರಭಕ್ಷಕನಂತೆ ಮಕ್ಕಳ ಮೈಮೇಲೆ ಎಗರಿ ಕಚ್ಚಿ, ಅಟ್ಟಾಡಿಸುತ್ತಿರುವುದು ದುರಂತ.

ನಗರದ ರಾಜಕುಮಾರ ಲೇಔಟ್‌ನ ಮನೆಯೊಂದರ ಎದುರು ಈಚೆಗೆ ಪುಟ್ಟ ಬಾಲಕ ವಿರಾಜ್ ಬಿರಾದಾರ (3) ಆಟವಾಡುತ್ತಿದ್ದ ವೇಳೆ ರಕ್ಕಸ ಬೀದಿ ನಾಯಿ, ಬಾಲಕನ ಮೇಲೆ ದಾಳಿ ಮಾಡಿ, ಬಾಯಿಯಲ್ಲಿ ಕಚ್ಚಿ ಎಳೆಯ್ದೊದಿತ್ತು. ಇದನ್ನ ಕಂಡ ಸ್ಥಳೀಯರು ನಾಯಿ ಬೆನ್ನತ್ತಿ ಓಡಿ ಹೋಗಿದ್ದರಿಂದ ಬಾಲಕನನ್ನು ರಕ್ಷಣೆ ಮಾಡಲಾಯಿತು. ಅದೃಷ್ಟವಶಾತ್ ಅಂತಹದೇನೂ ದುರಂತ ನಡೆಯಲಿಲ್ಲ.



> ಜಿಲ್ಲೆಯಲ್ಲಿ ಬೀದಿ ನಾಯಿಗಳ ನಿಯಂತ್ರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಸುಪ್ರೀಂಕೋರ್ಟ್ ಆದೇಶದಂತೆ ಬೀದಿ ನಾಯಿಗಳ ಚಿಕಿತ್ಸೆ, ಪುನರ್ ವಸತಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
>
> ■ ಡಾ.ಆನಂದ ಕೆ., ಜಿಲ್ಲಾಧಿಕಾರಿ, ವಿಜಯಪುರ

ಆಘಾತ ಮೂಡಿಸುವ ನಾಯಿ ಕಡಿತ ಪ್ರಕರಣ

ಜಿಲ್ಲೆಯಲ್ಲಿ ನಾಯಿ ಕಡಿತ ಪ್ರಕರಣಗಳು ಕಳೆದ 2025ರಲ್ಲಿ ಒಟ್ಟು 32,317 ಕಂಡು ಬಂದಿದ್ದು, ಈ ಪೈಕಿ 3 ಜನ ಶಂಕಿತ ರೇಬಿಸ್‌ನಿಂದ ಸಾವಿಗೀಡಾಗಿದ್ದಾರೆ. ಇನ್ನು ಏಪ್ರಿಲ್ 2026ರ ವರೆಗೆ ಕೇವಲ 4 ತಿಂಗಳಲ್ಲಿ 13,992 ಪ್ರಕರಣ ದಾಖಲಾಗಿದ್ದು, ಈ ಪೈಕಿ ಓರ್ವ ಶಂಕಿತ ರೇಬಿಸ್‌ನಿಂದ ಮೃತಪಟ್ಟಿದ್ದಾರೆ. ಕಳೆದ 2025 ರಲ್ಲಿ ವಿಜಯಪುರ ತಾಲೂಕು 11,715, ಬಸವನಬಾಗೇವಾಡಿ 4,778, ಮುದ್ದೇಬಿಹಾಳ 3,239, ಇಂಡಿ 8,235, ಸಿಂದಗಿ 4,011 ಹಾಗೂ ಇತರೆ ಜಿಲ್ಲೆ 339 ಸೇರಿ ಒಟ್ಟು 32,317 ನಾಯಿ ಕಡಿತ ಪ್ರಕರಣ ದಾಖಲಾಗಿವೆ. ಇನ್ನು ಏಪ್ರಿಲ್ 2026ರ ವರೆಗೆ ವಿಜಯಪುರ ತಾಲೂಕು 4,611, ಬಸವನಬಾಗೇವಾಡಿ 1,870, ಮುದ್ದೇಬಿಹಾಳ 1,321, ಇಂಡಿ 4,008, ಸಿಂದಗಿ 2,023 ಹಾಗೂ ಇತರೆ ಜಿಲ್ಲೆ 159 ಸೇರಿ ಒಟ್ಟು 13,992 ನಾಯಿ ಕಡಿತ ಪ್ರಕರಣಗಳು ದಾಖಲಾಗಿವೆ. ಹೀಗೆ ಜಿಲ್ಲೆಯಲ್ಲಿ ಅತಿ ಹೆಚ್ಚು ನಾಯಿ ಕಡಿತ ಪ್ರಕರಣದಲ್ಲಿ ವಿಜಯಪುರ ತಾಲೂಕು ಮೊದಲ ಸ್ಥಾನದಲ್ಲಿದ್ದರೆ, ಇನ್ನು ಎರಡನೇ ಸ್ಥಾನದಲ್ಲಿ ಇಂಡಿ ತಾಲೂಕು ಆಗಿದ್ದು, ಈ ಅಂಕಿ-ಅಂಶ ಜನರನ್ನು ಬೆಚ್ಚಿ ಬೀಳಿಸುವಂತೆ ಮಾಡಿದೆ.

ಈ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಇದನ್ನು ಕಂಡ ಜನರ ಎದೆ ಝಲ್ ಎನ್ನುವಂತಾಗಿತ್ತು. ಸದ್ಯ ಬಾಲಕ ವಿರಾಜ್ ಚಿಕಿತ್ಸೆ ಪಡೆದು ಗುಣಮುಖನಾಗಿದ್ದಾನೆ.

ಗುಂಪಾಗಿತಿರುಗುವಬೀದಿನಾಯಿಗಳು: ಬೀದಿನಾಯಿಗಳು ಗುಂಪು ಗುಂಪಾಗಿ ರಸ್ತೆಗಳಲ್ಲಿ ಸಂಚರಿಸುತ್ತ, ಅಮಾಯಕ ಜೀವಗಳಿಗೆ ಕುತ್ತಾಗುತ್ತಿವೆ. ಮಕ್ಕಳು, ಮಹಿಳೆಯರು, ವೃದ್ಧರು ಒಬ್ಬಂಟಿಯಾಗಿ ಬಡಾವಣೆಗಳಲ್ಲಿ ಹಾಗೂ ತಮ್ಮದೇ ಮನೆ ಎದುರು ಸಂಚರಿಸಲು ಭೀತಿಗೊಳ್ಳುವಂತಾಗಿದೆ. ಮನುಷ್ಯನ ನಂಬಿಕಸ್ತ ಪ್ರಾಣಿ ನಾಯಿಗಳಾದರೂ, ಬೀದಿ ನಾಯಿಗಳು ತಮ್ಮ ಸೌಮ್ಯ ಸ್ವಭಾವ ಕಳೆದುಕೊಂಡು ಕ್ರೂರತನದಿಂದ ವರ್ತಿಸುತ್ತಿದ್ದು, ಈ ಬಗ್ಗೆ ಜಿಲ್ಲಾಡಳಿತ ಹಾಗೂ ಸಂಬಂಧಿಸಿದ ಇಲಾಖೆಗಳು ಗಂಭೀರತೆ ವಹಿಸಿ, ಸುಪ್ರೀಂಕೋರ್ಟ್ ಆದೇಶದನ್ವಯ ಇಂತಹ ನಾಯಿಗಳಿಗೆ ಸೂಕ್ತ ಚಿಕಿತ್ಸೆ ನೀಡಿ, ಪುನರ್ ವಸತಿ ಕಲ್ಪಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸುತ್ತಾರೆ.

ಪರರ ನಿಂದನೆಯಲ್ಲಿ ಸಿಎಂ ಕಾಲಹರಣ: ಜೋಶಿ

ನವದೆಹಲಿ: ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬರೀ ಬೆಲೆ ಏರಿಕೆ, ತುಷ್ಟೀಕರಣ, ಶಾಸಕ-ಸಚಿವರ ತಲೆ ಎಣಿಕೆಯಲ್ಲೇ ಮುಳುಗಿದೆ. ಸಿಎಂ ತಮ್ಮನೆ ರಿಪೇರಿ ಬಿಟ್ಟು ಪರರ ನಿಂದನೆಯಲ್ಲಿ ಕಾಲಹರಣ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಿಡಿ ಕಾರಿದ್ದಾರೆ.



ಪ್ರಧಾನಿ ಮೋದಿ ಅವರ ಭಾಷಣ ಸುಳ್ಳು ಮತ್ತು ದ್ವೇಷದಿಂದ ಕೂಡಿದೆ ಎಂದ ಸಿಎಂಗೆ ಖಾರವಾಗಿಯೇ ತಿರುಗೇಟು ನೀಡಿರುವ ಜೋಶಿ, ಪ್ರಧಾನಿ ಮೋದಿ ಅವರನ್ನು ಟೀಕಿಸುವ ಮುನ್ನ ಸಿದ್ದರಾಮಯ್ಯ ತಮ್ಮ ಸರ್ಕಾರದ ಆಡಳಿತ ವೈಫಲ್ಯ, ಅಧಿಕಾರಕ್ಕಾಗಿ ಕಿತ್ತಾಟ ಬಗ್ಗೆ ಉತ್ತರಿಸಲಿ ಎಂದು ಸವಾಲು ಹಾಕಿದ್ದಾರೆ. ಜಾಹೀರಾತುಗಳಲ್ಲೇ ಮುನ್ನಲೆಯಲ್ಲಿರುವ ಕಾಂಗ್ರೆಸ್ ಸರ್ಕಾರದ ಅಸಲಿಯತ್ತು ಈಗ ಬಯಲಾಗಿದೆ ಎಂದು ರಾಜ್ಯ ಸರ್ಕಾರದ ಆಡಳಿತ ವೈಫಲ್ಯಗಳನ್ನು ಒಂದೊಂದಾಗೇ ಪಟ್ಟಿ ಮಾಡಿ. ಗ್ಯಾರಂಟಿಗಳ ನೆಪದಲ್ಲಿ ಕಾಂಗ್ರೆಸ್ ಸರ್ಕಾರ ಕರ್ನಾಟಕವನ್ನು ಸಾಲದ ಶೂಲಕ್ಕೆ ತಳ್ಳಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಆರ್ಥಿಕ ಅಧೋಗತಿಗೆ ತಳ್ಳಿದ್ದಾರೆ: ಮಾತೆತ್ತಿದರೆ ತಾವೊಬ್ಬ 'ಆರ್ಥಿಕ ತಜ್ಞ' ಎನ್ನುವ ಸಿಎಂ ಕರ್ನಾಟಕದ ಆರ್ಥಿಕತೆಯನ್ನು ಅಧೋಗತಿಗೆ ತಳ್ಳಿದ್ದಾರೆ. ಅಲ್ಲದೆ, ಕುರ್ಚಿ ಕಿತ್ತಾಟದಲ್ಲಿ ಆಡಳಿತವೂ ಹಳಿ ತಪ್ಪಿದೆ. ಸಾಲದ್ದಕ್ಕೆ ಹಾಲು, ಇಂಧನ ಹೀಗೆ 48 ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿ ಜನರಿಗೆ ದ್ರೋಹ ಮಾಡಿದೆ ಎಂದು ಹರಿ ಹಾಯ್ದಿದ್ದಾರೆ.

ಗೋಡೆ ಕುಸಿತ ಪ್ರಕರಣ: ಆಸ್ಪತ್ರೆ ಆಡಳಿತ ಮಂಡಳಿ ಲೋಪ

ಬೆಂಗಳೂರು: ಏಳು ಜನರ ಸಾವಿಗೆ ಕಾರಣವಾದ ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿತ ಪ್ರಕರಣದಲ್ಲಿ, ಗುತ್ತಿಗೆದಾರರು ಮತ್ತು ಎಂಜಿನಿಯರ್ ಹಾಗೂ ಆಸ್ಪತ್ರೆ ಆಡಳಿತ ಮಂಡಳಿ ಲೋಪಗಳಿವೆ ಎಂದು ಜಿಲ್ಲಾಧಿಕಾರಿಗಳ ತನಿಖಾ ವರದಿ ಉಲ್ಲೇಖಿಸಿದೆ.

ಘಟನೆ ನಡೆದ ಬಳಿಕ ರಾಜ್ಯ ಸರ್ಕಾರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿತ್ತು. ಮೃತಪಟ್ಟ ಲೋಕಾಯುಕ್ತರು ಮತ್ತು ಆ ತನಿಖೆಗೆ ನಿರ್ದೇಶನ ನೀಡಿದ್ದರು. ಲೋಕಾಯುಕ್ತರ ತನಿಖಾ ತಂಡದಲ್ಲಿ, ಜಿಲ್ಲಾ ನ್ಯಾಯಾಧೀಶರು, ಎಸ್ಪಿ, ದರ್ಜೆಯ ಅಧಿಕಾರಿ ಹಾಗೂ ಲೋಕಾಯುಕ್ತ ಇಂಜಿನಿಯರಿಂಗ್ ವಿಭಾಗದ ಅಧಿಕಾರಿ ಕೆಲಸ ನಿರ್ವಹಿಸಿದ್ದಾರೆ.

ಕುಸಿದ ಗೋಡೆಯ ಮರಳು, ಮಣ್ಣು ಹಾಗೂ ಕಲ್ಲುಗಳ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಬಹುತೇಕ ಮುಂದಿನ ವಾರದ ಬಳಿಕ ತನಿಖಾ ವರದಿ ಲೋಕಾಯುಕ್ತರ ಕೈ ಸೇರುವ ಸಾಧ್ಯತೆ ಇದೆ. ಅದಕ್ಕೂ ಮುನ್ನಾ ಜಿಲ್ಲಾಧಿಕಾರಿಗಳ ನೇತೃತ್ವದ ತಂಡ ಕಂಡ ವರದಿಯನ್ನು ಸಿದ್ಧಪಡಿಸಿದ್ದ ಸರ್ಕಾರಕ್ಕೆ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಲು ತೀರ್ಮಾನಿಸಿದೆ. ಆಸ್ಪತ್ರೆ, ಗೋಡೆ ಪ್ರಕರಣದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಣ್ಣು ಸುರಿದಿರುವುದು ದುರಂತಕ್ಕೆ ಮೂಲ ಕಾರಣ ಎಂದು ಜಿಲ್ಲಾಧಿಕಾರಿಗಳ ವರದಿ ಶಂಕಿಸಿದೆ. ಸುರಿದಿದ್ದ ಮಣ್ಣನ್ನು ಸೂಕ್ತ ಸಮಯದಲ್ಲಿ ತೆರವುಗೊಳಿಸದೆ ಗುತ್ತಿಗೆದಾರರು ಮತ್ತು ವ್ಯಕ್ತಿ ಕೆಲಸ ಮಾಡಿದರು ಎಂದು ಇಂಜಿನಿಯರ್‌ಗಳು ನಿರ್ಲಕ್ಷ್ಯ ವಹಿಸಿದ್ದಾರೆ.

> **ಸರ್ಕಾರ ತನಿಖೆಗೆ ಸೂಚಿಸಿತ್ತು, ಕೂಲಂಕುಷವಾಗಿ ತನಿಖೆಯನ್ನು ಮಾಡಿ, ವರದಿ ಸಲ್ಲಿಕೆ ಮಾಡಿದ್ದೇವೆ. ಮುಚ್ಚಿದ ಲಕೋಟೆಯಲ್ಲಿ ನೀಡಿದ್ದೇನೆ. ಸರ್ಕಾರ ಏನು ಕ್ರಮ ವಹಿಸುತ್ತೋ ಕಾದು ನೋಡಬೇಕು.**
> ■ **ಜಗದೀಶ್, ಜಿಲ್ಲಾಧಿಕಾರಿ**

ರಾಮ ಬಾಣ



ಮೀಸಲಾತಿ ಹೆಚ್ಚಳ ರದ್ದು: ಸಂಸದ ಬೊಮ್ಮಾಯಿ ಖಂಡನೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಸ್ಸಿ-ಎಸ್ಟಿ ಸಮುದಾಯಕ್ಕೆ ಹೆಚ್ಚಳ ಮಾಡಿದ್ದ ಮೀಸಲಾತಿಯನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ರದ್ದು ಮಾಡಿರುವುದನ್ನು ಖಂಡಿಸಿ ಬಿಜೆಪಿ ವತಿಯಿಂದ ರಾಜ್ಯದ ಜನತೆಗೆ ಜಾಗೃತಿ ಮೂಡಿಸಲು ತೀರ್ಮಾನಿಸಲಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ತಮ್ಮ ನಿವಾಸದಲ್ಲಿ ನಡೆದ ಬಿಜೆಪಿಯ ಎಸ್ಸಿ-ಎಸ್ಟಿ ಮುಖಂಡರ ಜೊತೆಗಿನ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಸ್ಸಿ-ಎಸ್ಟಿ ಮತ್ತು ಒಬಿಸಿ ಜನಾಂಗಕ್ಕೆ ಬಹಳ ದೊಡ್ಡ ಅನ್ಯಾಯ ಮಾಡುತ್ತಿದೆ ಅಹಿಂದ ಹೆಸರಲ್ಲಿ ರಾಜಕಾರಣ ಮಾಡುತ್ತಿರುವ ಸಿಎಂ ಸಿದ್ದರಾಮಯ್ಯ ಅವರು ಯಾವ ವರ್ಗದಿಂದ ಬೆಂಬಲ ಪಡೆದಿದ್ದಾರೆ ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ ಕಿಡಿಕಾರಿದರು.

ಎಸ್ಸಿ-ಎಸ್ಟಿ ಒಳ ಮೀಸಲಾತಿ ಗೊಂದಲದ ಬಗ್ಗೆ ಸಂವಿಧಾನ ಪೀಠ ರಾಜ್ಯ ಸರ್ಕಾರಗಳಿಗೆ ಅಧಿಕಾರ ಕೊಟ್ಟಿದೆ ಅದನ್ನು ತೆಲಂಗಾಣ, ಹರಿಯಾಣ ಸೇರಿದಂತೆ ಅನೇಕ ರಾಜ್ಯಗಳು ಜಾರಿ ಮಾಡಿವೆ. ಒಳ ಮೀಸಲಾತಿ ಜಾರಿ ಮಾಡಲು ರಾಜ್ಯ ಕಾಂಗ್ರೆಸ್ ಗೆ ಹಾಗೂ ಅಲ್ಲಿನ ದಲಿತ ನಾಯಕರಿಗೆ ಆಸಕ್ತಿ ಇಲ್ಲ ಎಂದು ಆರೋಪಿಸಿದರು. ಮೀಸಲಾತಿ ಹೆಚ್ಚಳದ ಕುರಿತು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನಾಗಮೋಹನ್ ದಾಸ್ ವರದಿ ಬಂದಿದೆ. ನಾನು ಸಿಎಂ ಆಗಿದ್ದಾಗ ಎಸ್ಸಿ ಸಮುದಾಯಕ್ಕೆ ಶೇ.15 ರಿಂದ 17 ರಷ್ಟು ಹಾಗೂ ಎಸ್ಟಿ ಸಮುದಾಯಕ್ಕೆ ಶೇ.3 ರಿಂದ ಶೇ.7 ರಷ್ಟು ಮೀಸಲಾತಿ ಹೆಚ್ಚಿಗೆ ಮಾಡಿದ್ದೇನೆ. ಇದರಿಂದ ಎಸ್ಸಿ-ಎಸ್ಟಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಸುಮಾರು ನಾಲ್ಕು ಸಾವಿರ ಎಂಜನಿಯರಿಂಗ್ ಹಾಗೂ ಸುಮಾರು ನಾಲ್ಕು ನೂರು ವೈದ್ಯಕೀಯ ಸೀಟುಗಳು ಹೆಚ್ಚಿಗೆ ಲಭ್ಯವಾಗಿವೆ. ಈ ಆದೇಶ ಜಾರಿಯಾಗಿ ನಾಲ್ಕು ವರ್ಷ ಆಗಿದೆ ಎಂದು ಹೇಳಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◆ **ಚಿನ್ನ ಖರೀದಿಸಬೇಡಿ, ಪೆಟ್ರೋಲ್ ಮತ್ತು ಖಾದ್ಯ ತೈಲಗಳ ಬಳಕೆ ಕಮ್ಮಿ ಮಾಡಿ, ರಸಗೊಬ್ಬರ ಕಮ್ಮಿ ಬಳಸಿ ಎಂದು ಪ್ರಧಾನಿ ಬೇಡಿಕೊಳ್ಳುವುದು ಯಾವ ಅಭಿವೃದ್ಧಿಯ ಸಂಕೇತ – ಸಿದ್ದರಾಮಯ್ಯ**

- ಇದು ದೇಶಾಭಿಮಾನ ವೃದ್ಧಿಯ ಸಂಕೇತ, ಪಕ್ಷಾಭಿಮಾನವನ್ನು ಮೀರಿದ ಮಂದಿಗೆ ಮಾತ್ರ ಇದು ಅರ್ಥವಾದೀತು. ಅಂದ ಹಾಗೆ ನಿಮ್ಮದೇ ಪಕ್ಷದ ಸರಕಾರವಿದ್ದಾಗ ಲಾಲ್ ಬಹಾದುರ್ ಶಾಸ್ತ್ರಿಯವರು ಪ್ರಜೆಗಳಲ್ಲಿ ಒಂದು ಹೊತ್ತಿನ ಊಟವನ್ನು ಬಿಡಿ ಅಂತ ಕೇಳಿಕೊಂಡಿದ್ದರು, ಅಲ್ಲದೆ ಇಂದಿರಾಗಾಂಧಿಯವರೇ ಒಮ್ಮೆ ಜನತೆಗೆ ಚಿನ್ನವನ್ನು ಖರೀದಿಸಬೇಡಿ ಅಂತ ಕರೆ ನೀಡಿದ್ದು ಮರೆತುಹೋಯಿತಾ?

ದಿನ ಭವಿಷ್ಯ

ಮೇಷ
ಮನೆಯಲ್ಲಿ ವಾಗ್ಯುದ್ಧ ನಡೆದೀತು. ಮಾತಿಗೆ ಮಾತು ಕೊಡಿಸಬೇಡಿ. ಅನಿರೀಕ್ಷಿತ ಖರ್ಚು ಒದಗಲಿದೆ. ಖರೀದಿ ಕಡಿಮೆ ಮಾಡಿ.

ವೃಷಭ
ಕೆಲಸದ ಒತ್ತಡ ಹೆಚ್ಚು. ಕೆಲಸದ ಗುಣಮಟ್ಟ ಹೆಚ್ಚಿಸಲು ಆದ್ಯತೆ ಕೊಡಿ. ಆಪ್ತರ ಜತೆ ಮನಬಿಚ್ಚಿ ಮಾತನಾಡಿ. ಮುಚ್ಚುಮರೆ ಬೇಡ.

ಮಿಥುನ
ಸುಗಮ ಕಾರ್ಯ. ಗುರಿ ಈಡೇರಿಕೆ. ಕೌಟುಂಬಿಕ ಬದ್ಧತೆ ಈಡೇರಿಸಿ. ಕೆಲಸ ಬಾಕಿ ಇಡಬೇಡಿ. ಹಣ ಗಳಿಕೆ ತೃಪ್ತಿ ತರಲಿದೆ.

ಕಟಕ
ಮನೆಯಲ್ಲಿ ತಾಳ್ಮೆಯಿಂದ ವ್ಯವಹರಿಸಿ. ಜಗಳಕ್ಕೆ ಆಸ್ಪದ ನೀಡದಿರಿ. ಹೆಚ್ಚುವರಿ ಖರ್ಚು. ನಿಮ್ಮ ನಿರ್ಧಾರ ಉತ್ತಮ ಫಲ ನೀಡದಿರಬಹುದು.

ಸಿಂಹ
ಕೆಲವಾರು ವಿಷಯದತ್ತ ಏಕಕಾಲದಲ್ಲಿ ಗಮನ ಹರಿಸಬೇಕಾದ ಒತ್ತಡ. ಆರ್ಥಿಕ ಪ್ರಗತಿ ಕುಂಠಿತ. ಕೆಲವರಿಗೆ ಕಾಲು ನೋವು ಬಾಧಿಸಬಹುದು.

ಕನ್ಯಾ
ಉತ್ಸಾಹದ ದಿನ. ವೃತ್ತಿಯಲ್ಲಿ ಹೊಸ ಅವಕಾಶ ಪ್ರಾಪ್ತಿ. ವಿವಾಹಿತ ದಂಪತಿಗೆ ಶುಭ ಸುದ್ದಿ. ಆತ್ಮೀಯರ ಜತೆಗೆ ಮನಸ್ತಾಪ ಮಾಡದಿರಿ.

ತುಲಾ
ಹೊಣೆಗಾರಿಕೆ ಸಕಾಲದಲ್ಲಿ ಪೂರೈಸುವಿರಿ. ಆದಾಯ ಏರಿಕೆ. ಸಣ್ಣ ಚಿಂತೆಗೆ ಕಾರಣವಾಗಿದ್ದ ವಿಷಯ ಇತ್ಯರ್ಥ. ಬಂಧುಗಳ ಸಹಕಾರ.

ವೃಶ್ಚಿಕ
ಇಚ್ಚಿತ ಕಾರ್ಯ ನಿಧಾನವಾಗಲಿದೆ. ಅದರಿಂದ ಅಸಹನೆ. ವ್ಯವಹಾರದಲ್ಲಿ ಹಣ ಹೂಡಿಕೆ ಲಾಭ ತರಲಿದೆ. ಖರ್ಚು ಅಧಿಕ.

ಧನು
ನಿಮ್ಮ ದುಡಿಮೆಗೆ ತಕ್ಕ ಫಲ. ಘನತೆ ಹೆಚ್ಚಳ. ನಿಮ್ಮ ನಡೆನುಡಿ ಎಲ್ಲರ ಮೆಚ್ಚುಗೆ ಗಳಿಸಲಿದೆ. ಆದಾಯ ಏರಿಕೆ. ಕೌಟುಂಬಿಕ ಅಶಾಂತಿ ನಿವಾರಣೆ.

ಮಕರ
ಎಂದಿಗಿಂತ ಹೆಚ್ಚು ಹೊಣೆ. ಕೆಲವರ ಅಸಹಕಾರ. ಹಣದ ತೊಡಕು ಕಾಡಲಿದೆ. ಊಟ ಸಕಾಲದಲ್ಲಿ ಮಾಡಿ. ಆರೋಗ್ಯಕ್ಕೆ ಗಮನ ಕೊಡಿ.

ಕುಂಭ
ವೃತ್ತಿಯಲ್ಲಿನ ಒತ್ತಡ ನಿಭಾಯಿಸಲು ಸಫಲ. ಸಂಗಾತಿ ಜತೆ ಉತ್ತಮ ಹೊಂದಾಣಿಕೆ. ಆರೋಗ್ಯ ಸಮಸ್ಯೆ ಪರಿಹಾರ. ಮಾನಸಿಕ ನಿರಾಳತೆ.

ಮೀನ
ಕೆಲಸದ ಒತ್ತಡ ಕಡಿಮೆ ಮಾಡುವ ಅವಕಾಶ ಸಿಗಲಿದೆ. ಮನೆಯಲ್ಲಿ ಸೌಹಾರ್ದ ವಾತಾವರಣ. ಹಣ ಹೂಡಿಕೆಯಿಂದ ಲಾಭ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,7,0,3

ಕೇರಳದಲ್ಲೂ ಗೊಂದಲ ಇದೆ: ಸಚಿವ ಸತೀಶ್ ಜಾರಕಿಹೊಳಿ

ನಾಯಕತ್ವ ಬದಲು ಸದ್ಯಕ್ಕಿಲ್ಲ

ಬೆಂಗಳೂರು: ಕೇರಳದಲ್ಲಿ ಸರ್ಕಾರದ ರಚನೆ ಪ್ರಕ್ರಿಯೆ ಮುಗಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಹೋಗಬಹುದು ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.



ಮಂಗಳವಾರ ಮಾಧ್ಯಮಗಳ ಜತೆಗೆ ಮಾತನಾಡಿ, ನಾಯಕತ್ವ ಬದಲಾವಣೆ ವಿಚಾರದ ಬಗ್ಗೆ ಇನ್ನೂ ಸಮಯ ಇದೆ. ಕೇರಳದಲ್ಲಿ ಸರ್ಕಾರದ ರಚನೆ ಪ್ರಕ್ರಿಯೆ ಇದೆ, ಅಲ್ಲಿ ಸ್ಥಳೀಯವಾಗಿ ಏನು ಇದೆಯೋ ಗೊತ್ತಿಲ್ಲ, ಹೈಕಮಾಂಡ್ ಏನ್ ಮಾಡುತ್ತೋ ಗೊತ್ತಿಲ್ಲ, ಇರೋ ಸಂಘರ್ಷ ಬಗೆಹರಿಯಬೇಕು ಅಷ್ಟೇ, ಕೇರಳದಲ್ಲೂ ಗೊಂದಲ ಇದೆ, ಅದನ್ನ ಹೈಕಮಾಂಡ್ ಬಗೆಹರಿಸುತ್ತೆ ಎಂದರು.

ಸಿಎಂ ಬದಲಾವಣೆ ಬಗ್ಗೆ ಪ್ರಧಾನಿ ಹೇಳಿಕೆ ಕುರಿತು ಮಾತನಾಡಿದ ಅವರು, ಅದು ನಮ್ಮ ಪಕ್ಷದ ಆಂತರಿಕ ವಿಚಾರ, ಇದನ್ನು ಸರಿಪಡಿಸಲು ಹೈಕಮಾಂಡ್ ಇದೆ, ಸಿಎಲ್‌ಪಿ ಇದೆ ಎಂದು ಹೇಳಿದರು. ಪ್ರಧಾನಿ ಅವರು ಹೇಳಿದ್ದನ್ನು ಮಾಡೋದು ಕಷ್ಟ, ಪೆಟ್ರೋಲ್ ಬೇಡ, ಡೀಸೇಲ್ ಬೇಡ ಅಂದ್ರೆ ಆಗಲ್ಲ, ಬಸ್ ಬಳಸಿ ಅಂದ್ರೆ ಎಲ್ಲರಿಗೆ ಕಷ್ಟ, ಕೆಲವು ಕಡೆ ಅಗತ್ಯತೆ ಇರುತ್ತೆ ಓಡಾಡಬೇಕಾಗುತ್ತದೆ. ಕೆಲವೊಂದನ್ನು ಮಾತ್ರ ಮಾಡಬಹುದು ಎಂದು ಅಭಿಪ್ರಾಪಟ್ಟರು.

ಹೈಕಮಾಂಡ್ ಗೊಂದಲ ನಿವಾರಿಸಲಿ: ಪಂಚರಾಜ್ಯ ಚುನಾವಣೆ ಪ್ರಕ್ರಿಯೆ ಪೂರ್ಣವಾಗಿಲ್ಲ, ಕೇರಳದಲ್ಲಿ ಇನ್ನೂ ನಾಯಕನ ಆಯ್ಕೆ ಇದೆ. ಇದೆಲ್ಲ ಪೂರ್ಣಗೊಂಡ ನಂತರ ಬೆಳವಣಿಗೆ ಶುರುವಾಗುತ್ತವೆ. ಗೊಂದಲ ಇದ್ದರೆ ಆಡಳಿತ ನಡೆಯಲ್ಲ, ವಿಪಕ್ಷಗಳಿಗೆ ಇದು ಹಾಸಿಗೆ ಹಾಕಿ ಕೊಟ್ಟಂತಿದೆ. ಸರ್ಕಾರ ಹೆಚ್ಚು ಸಕ್ರಿಯವಾಗಿ ಕೆಲಸ ಮಾಡಬೇಕು. ಅದಕ್ಕೆ ಹೈಕಮಾಂಡ್ ಗೊಂದಲ ನಿವಾರಿಸಬೇಕು ಎಂದರು.

ಸಿದ್ದರಾಮಯ್ಯ ಮುಂದುವರಿಯಲಿ: ರಾಜಣ್ಣ

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮುಂದುವರಿಯಬೇಕು, ಸಂಪುಟ ಪುನಾರಚನೆಗೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ಗೊಂದಲ ಮುಂದುವರಿಯುತ್ತಲೇ ಇರುತ್ತೆ ಎಂದು ಶಾಸಕ ಕೆ.ಎನ್. ರಾಜಣ್ಣ ತಿಳಿಸಿದ್ದಾರೆ. ನಗರದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಹಲವರು ಸಂಪುಟ ಪುನಾರಚನೆಗೆ ಕೇಳುತ್ತಿದ್ದಾರೆ. ಬಹಳಷ್ಟು ಶಾಸಕರು ದಿಲ್ಲಿಗೆ ಹೋಗಿ ಬಂದಿದ್ದಾರೆ. ಸಿದ್ದರಾಮಯ್ಯಗೆ ಅವಕಾಶ ಸಿಗಲಿದೆ. ಸಂಪುಟ ಪುನರ್ ರಚನೆಗೆ ಅವಕಾಶ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



> **ನಾನು ಮೇನಲ್ಲಿ ಬದಲಾವಣೆ ಎಂದಿದ್ದೆ. ಮೇ 20 ಅಂತ ನಾನು ಡೆಡ್ ಲೈನ್ ಕೊಟ್ಟಿಲ್ಲ, ಏನಾಗುತ್ತದೆ ಅಂತ ನೋಡೋಣ, ಈಗ ಗೊಂದಲದ ಪರಿಸ್ಥಿತಿ ಇದೆ. ಆ ಗೊಂದಲದ ಪರಿಸ್ಥಿತಿ ನಿವಾರಣೆ ಮಾಡಬೇಕು. ಗೊಂದಲ ನಮ್ಮ ಪಕ್ಷದಲ್ಲೂ ಆಗುತ್ತವೆ, ಬೇರೆ ಪಕ್ಷದಲ್ಲೂ ಆಗುತ್ತದೆ.**
> ■ **ಕೆ.ಎನ್.ರಾಜಣ್ಣ, ಶಾಸಕ**

ಅಸ್ಸಾಂ ಸಿಎಂ ಆಗಿ ಬಿಸ್ವಾ ಪ್ರಮಾಣ

ಪುಟ 1 → ಪ್ರಮಾಣವಚನ ಸ್ವೀಕರಿಸಿದ ಸಚಿವರುಗಳ ಪೈಕಿ ನೆಯೋಗ್, ಬೋರಾ ಮತ್ತು ಬೋರೋ ಸಿಎಂ ಶರ್ಮಾ ಅವರ ಪ್ರಥಮ ಸಚಿವ ಸಂಪುಟದ ಸದಸ್ಯರು. ಕೇಂದ್ರದ ಮಾಜಿ ಸಚಿವ ತೇಲಿ ರಾಜ್ಯ ರಾಜಕೀಯರಂಗಕ್ಕೆ ಮರಳಿದವರು. ನಿರ್ಗಮನ ಸರಕಾರದಲ್ಲಿ ನೆಯೋಗ್, ಬೋರಾ ಮತ್ತು ಬೋರೋ ಕ್ರಮವಾಗಿ ಹಣಕಾಸು ಸಚಿವ, ಕೃಷಿ ಸಚಿವ, ಸಾರಿಗೆ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದರು.

ಜನಸೇವೆ ಮಾಡಲು ಕಾತರ: ಮಾ ಕಾಮಾಕ್ಯ, ಮಹಾಪುರುಷ ಶ್ರೀಮಂತ ಶಂಕರದೇವರ ದಯೆ ಮತ್ತು ಅಸ್ಸಾಮ್ ಜನತೆಯ ಆಶೀರ್ವಾದಬಲದಿಂದ ತಾನು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿರುವೆ. ಸಂಪುಟ ಸಚಿವರ ಜತೆ ಕೈಜೋಡಿಸಿಕೊಂಡು ಜನಸೇವೆ ಮಾಡಲು, ರಾಜ್ಯದ ಜನತೆಯ ಆಶೋತ್ತರಗಳ ಸಾಕಾರಗೊಳಿಸಲು ನಾವು ಕಾತರರಿದ್ದೇವೆ ಎಂದು ಮುಖ್ಯಮಂತ್ರಿ ಶರ್ಮಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ರಾಜ್ಯದ ಜನತೆಯ ಮುಖ್ಯಸೇವಕನಾಗಿ ಮತ್ತೆ ಪ್ರಮಾಣವಚನ ಸ್ವೀಕರಿಸಲು ತಾನು ಹೆಮ್ಮೆಪಡುವುದಾಗಿ ಸಿಎಂ ಶರ್ಮಾ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅಭಿನಂದನೆ

ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ನಾಲ್ವರು ಸಚಿವರುಗಳನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದರು. ಪ್ರಮಾಣವಚನ ಕಾರ್ಯಕ್ರಮ ಮುಗಿಸಿ ನಿರ್ಗಮಿಸುವ ಕ್ಷಣಗಳಲ್ಲಿ ಅಸ್ಸಾಂನ ಜನತೆ ಮತ್ತು ವೇದಿಕೆಯಲ್ಲಿದ್ದವರಿಗೆ ಪ್ರಧಾನಿ ಶುಭಾಶಯ ಕೋರಿದರು.

ಗಮೋಸಾದಲ್ಲಿ ಮಿಂಚಿದ ಸಿಎಂ: ಧೋತಿ ಮತ್ತು ಕುರ್ತಾಧಾರಿಯಾಗಿದ್ದು, ಕುತ್ತಿಗೆಗೆ ಸಾಂಪ್ರದಾಯಿಕ ಗಮೋಸಾ ಸುತ್ತಿಕೊಂಡಿದ್ದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಅಸ್ಸಾಮಿ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಶಾಸಕರಾದ ತೇಲಿ, ಬೋರಾ ಮತ್ತು ನೆಯೋಗ್ ಅವರೂ ಅಸ್ಸಾಮಿಯಲ್ಲೇ ಪ್ರಮಾಣವಚನ ಸ್ವೀಕರಿಸಿದರು. ಬಿಪಿಎಫ್ ಸಚಿವರು ಬೋಡೋ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ದೇಗುಲ ಬಳಿ ಮದ್ಯ ಅಂಗಡಿಗಳಿಗೆ ಬೀಗ

ಪುಟ 1 → ವಿಶೇಷವಾಗಿ ಶಾಲೆ ಮತ್ತು ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿನಿಯರು ಮದ್ಯದಂಗಡಿಗಳ ಬಳಿ ಅಸಭ್ಯ ವರ್ತನೆ ಮತ್ತು ಕಿರುಕುಳ ಎದುರಿಸುತ್ತಿರುವ ಬಗ್ಗೆ ಅನೇಕ ದೂರುಗಳು ಬಂದಿದ್ದವು ಎನ್ನಲಾಗಿದೆ. ಮೈತ್ರಿ ಪಕ್ಷಗಳ ಬೆಂಬಲದೊಂದಿಗೆ ಸರ್ಕಾರ ರಚಿಸಿರುವ ವಿಜಯ್, ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಜನಪರ ಕ್ರಮಗಳನ್ನು ಆರಂಭಿಸಿರುವುದಕ್ಕೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.2025ರಲ್ಲಿ ತಮಿಳುನಾಡಿನಲ್ಲಿ ಮದ್ಯ ಮಾರಾಟದಿಂದ 48,344 ಕೋಟಿ ರೂ. ಆದಾಯ ಬಂದಿದೆ. ರಾಜ್ಯದಲ್ಲಿ 551 ವಿದೇಶಿ ಮದ್ಯ ಬ್ರ್ಯಾಂಡ್‌ಗಳು ಮಾರಾಟವಾಗುತ್ತಿವೆ. ರಾಜ್ಯವನ್ನು ಮಾದಕವಸ್ತು ಮುಕ್ತಗೊಳಿಸುವ ಭರವಸೆಯನ್ನು ವಿಜಯ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದೆ.

ನಿರ್ಧಾರ ಸ್ವಾಗತಿಸಿದ ಕಮಲ್ ಹಾಸನ್: ಈ ನಿರ್ಧಾರವನ್ನು ನಟ ಹಾಗೂ ರಾಜಕೀಯ ನಾಯಕ ಕಮಲ್ ಹಾಸನ್ ಸ್ವಾಗತಿಸಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ, ದೇವಾಲಯಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಬಸ್ ನಿಲ್ದಾಣಗಳ ಬಳಿ ಇರುವ ಮದ್ಯದಂಗಡಿಗಳನ್ನು ತೆರವುಗೊಳಿಸಬೇಕೆಂಬ ಜನರ ನಿರೀಕ್ಷೆಯನ್ನು ಮುಖ್ಯಮಂತ್ರಿ ವಿಜಯ್ ಅಧಿಕಾರಕ್ಕೆ ಬಂದ ತಕ್ಷಣವೇ ಈಡೇರಿಸಿದ್ದಾರೆ. ಸರ್ಕಾರ ಮದ್ಯ ಮಾರಾಟ ಮಾಡುವುದಕ್ಕಿಂತ ಮದ್ಯ ನಿಯಂತ್ರಣದ ಹೊಣೆ ಹೊತ್ತುಕೊಳ್ಳಬೇಕು. 717 ಅಂಗಡಿಗಳ ಮುಚ್ಚುವಿಕೆಯಿಂದ ಆರಂಭವಾದ ಈ ಕ್ರಮ ಮುಂದುವರಿಯಬೇಕು ಎಂದು ಹೇಳಿದ್ದಾರೆ.

ವಿಜಯ್‌ಗೆ ನಟ ವಿಶಾಲ್ ಶ್ಲಾಘನೆ: ನಟ ವಿಶಾಲ್ ಕೂಡ ಸಿಎಂ ವಿಜಯ್ ಅವರನ್ನು ಶ್ಲಾಘಿಸಿದ್ದಾರೆ. ಆರ್‌ಕೆ ನಗರದಲ್ಲಿರುವ ಒಂದು ವಿದ್ಯಾರ್ಥಿನಿ ಪ್ರತಿದಿನ ಟಾಸ್ಮಾಕ್ ಅಂಗಡಿ ಎದುರಿನಿಂದ ಹೋಗುವಾಗ ಭಯ ಮತ್ತು ಕಿರುಕುಳ ಅನುಭವಿಸುತ್ತಿದ್ದಾಳೆ ಎಂದು ನನಗೆ ತಿಳಿದಿದೆ. ಇಂತಹ ಅನೇಕ ವಿದ್ಯಾರ್ಥಿನಿಯರಿಗೆ ಈ ನಿರ್ಧಾರ ನೆಮ್ಮದಿ ನೀಡಲಿದೆ. ಮುಖ್ಯಮಂತ್ರಿ ವಿಜಯ್ ಅವರ ಈ ಹೆಜ್ಜೆ ಜನರ ಮುಖದಲ್ಲಿ ನಗು ತರಲಿದೆ ಎಂದು ಅವರು ಹೇಳಿದ್ದಾರೆ.

ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿದ ಟಿವಿಕೆ ಶಾಸಕ

ಪುಟ 1 → ಶಿವಗಂಗಾ ಜಿಲ್ಲೆಯ ತಿರುಪತ್ತೂರು ಕ್ಷೇತ್ರದಲ್ಲಿ ಸೇತುಪತಿ ಕೇವಲ ಒಂದು ಮತದ ಅಂತರದಿಂದ ಡಿಎಂಕೆ ನಾಯಕ ಕೆ.ಆರ್. ಪೆರಿಯಕುರುಪ್ಪನ್ ಅವರನ್ನು ಸೋಲಿಸಿದ್ದರು. ಅಂಚೆ ಮತಪತ್ರ ಎಣಿಕೆಯಲ್ಲಿ ಗೊಂದಲ ನಡೆದಿದೆ ಎಂದು ಆರೋಪಿಸಿ ಪೆರಿಯಕರುಪ್ಪನ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ಅಂತಿಮ ತೀರ್ಪು ಬರುವವರೆಗೆ ಸೇತುಪತಿ ವಿಧಾನಸಭೆ ಮತದಾನದಲ್ಲಿ ಪಾಲ್ಗೊಳ್ಳಬಾರದು ಎಂದು ಹೈಕೋರ್ಟ್ ಆದೇಶಿಸಿತ್ತು.

1,243 ಇವಿ ಚಾರ್ಜಿಂಗ್ ಕೇಂದ್ರ

ಪುಟ 1 → ಈ ಘೋಷಣೆಯು ಕರ್ನಾಟಕದ ಇವಿ ಚಲನಶೀಲತೆಯತ್ತ ದಾಪುಗಾಲು ಎಂದೇ ಕರೆಯಲಾಗುತ್ತಿದೆ. ಭಾರತದ ಇವಿ ಪರಿವರ್ತನೆಗೆ ಈ ಯೋಜನೆಯು ಮತ್ತಷ್ಟು ವೇಗ ನೀಡುತ್ತದೆ. ರಾಜ್ಯದ ಹಸಿರು ಚಲಶೀಲತೆಗೆ ಉತ್ತೇಜನ ನೀಡುವ ಮೂಲಕ ಇಂಗಾಲ ಹೊರಸೂಸುವಿಕೆ ತಡೆಗಟ್ಟಲು ದೊಡ್ಡ ಕೊಡುಗೆ ನೀಡುತ್ತದೆ ಎಂದು ಹೇಳಿದರು. ಇವಿ ಬಳಕೆದಾರರು ಒಂದೇ ವಿಶ್ವಾಸಾರ್ಹ ಇಂಟರ್ಫೇಸ್ ಮೂಲಕ ಬಹು ಆಪರೇಟರ್‌ಗಳ ಚಾರ್ಜಿಂಗ್ ನೆಟ್‌ವರ್ಕ್‌ಗಳಲ್ಲಿ ಅನ್ವೇಷಿಸಲು, ಪ್ರವೇಶಿಸಲು ಮತ್ತು ಪಾವತಿಸಲು ವೇದಿಕೆಯು ಗುರಿಯನ್ನು ಹೊಂದಿದೆ. ಯುಪಿಐನ ಡಿಜಿಟಲ್ ಪಾವತಿಗಳ ರೂಪಾಂತರಕ್ಕೆ ಅದರ ಸಂಭಾವ್ಯ ಪರಿಣಾಮವನ್ನು ಹೋಲಿಸಿದಾಗ, ಈ ಉಪಕ್ರಮವು ಭಾರತದ ಇವಿ ಚಾರ್ಜಿಂಗ್ ಪರಿಸರ ವ್ಯವಸ್ಥೆಯನ್ನು ಗಮನಾರ್ಹವಾಗಿ ಬಲಪಡಿಸುತ್ತದೆ. ರಾಷ್ಟ್ರೀಯ ಏಕೀಕೃತ ಇವಿ ಚಾರ್ಜಿಂಗ್ ಅಪ್ಲಿಕೇಶನ್ ಏಕೀಕೃತ ಭಾರತ್ ಇ-ಚಾರ್ಜ್(ಯುಬಿಸಿ) ಕುರಿತು ಈಗಾಗಲೇ ವಿಸ್ತೃತವಾಗಿ ಕೆಲಸ ನಡೆಯುತ್ತಿದೆ ಎಂದರು.

4,874 ಇವಿ ಚಾರ್ಜಿಂಗ್ ಕೇಂದ್ರ ಸ್ಥಾಪನೆಗೆ ಅನುಮತಿ: 2070ರ ವೇಳೆಗೆ ಇಂಗಾಲದ ನಿವ್ವಳ ಶೂನ್ಯ ಹೊರಸೂಸುವಿಕೆಯನ್ನು ಸಾಧಿಸಲು ದೃಢವಾಗಿ ಬದ್ಧರಾಗಿದ್ದೇವೆ. ಅಲ್ಲದೆ, 2047ರ ವೇಳೆಗೆ ವಿಕಸಿತ ಭಾರತ ಸಾಧನೆಯ ದೃಷ್ಟಿಕೋನಕ್ಕೆ ಅನುಗುಣವಾಗಿ ಮುನ್ನಡೆಯುತ್ತಿದ್ದೇವೆ. ವಿವಿಧ ರಾಜ್ಯಗಳು ಮತ್ತು ಕೇಂದ್ರ ಸರ್ಕಾರಿ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ 4,874 ಇವಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಈವರೆಗೆ 503.86 ಕೋಟಿ ರೂ. ಮೌಲ್ಯದ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಇವಿ ಮೂಲಸೌಕರ್ಯಕ್ಕೆ 2 ಸಾವಿರ ಕೋಟಿ ರೂ.: ಪಿಎಂ ಇ-ಡ್ರೈವ್ ಯೋಜನೆಯನ್ನು ಭಾರತದ ಇವಿ ರೂಪಾಂತರದ ಮೂಲಾಧಾರವೆಂದು ವಿವರಿಸಿದ ಬಣ್ಣಿಸಿದ ಸಚಿವರು, 10,900 ಕೋಟಿ ರೂ.ಗಳ ಈ ಯೋಜನೆಯು, ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು, ಬಸ್ಸುಗಳು ಮತ್ತು ಟ್ರಕ್‌ಗಳ ಅಳವಡಿಕೆಯನ್ನು ವೇಗಗೊಳಿಸುತ್ತಿದೆ ಮತ್ತು ಅದೇ ಸಮಯದಲ್ಲಿ ದೇಶಾದ್ಯಂತ ದೃಢವಾದ ಇವಿ ಚಾರ್ಜಿಂಗ್ ಮೂಲ ಸೌಕರ್ಯವನ್ನು ಸೃಷ್ಟಿಸುತ್ತಿದೆ. ದೇಶಾದ್ಯಂತ ಇವಿ ಸಾರ್ವಜನಿಕ ಚಾರ್ಜಿಂಗ್ ಮೂಲಸೌಕರ್ಯ ನಿಯೋಜನೆಗಾಗಿ 2,000 ಕೋಟಿ ರೂ.ಗಳನ್ನು ನಿರ್ದಿಷ್ಟವಾಗಿ ಮೀಸಲಿಡಲಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದರು.

ಸಾಲಬಾಧೆಗೆ ರೈತ ಆತ್ಮಹತ್ಯೆ

ಮಳವಳ್ಳಿ: ಸಾಲಬಾಧೆಯಿಂದ ತಾಲೂಕಿನ ಹೆಬ್ಬಣಿ ಗ್ರಾಮದ ಮಹದೇವಪ್ಪ(52) ಎಂಬ ರೈತನೊಬ್ಬ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ. ಗ್ರಾಮದ ಬಸವೇಶ್ವರ ದೇವಸ್ಥಾನದ ಅರ್ಚಕರಾಗುವುದರ ಜೊತೆಗೆ ಕೃಷಿ ಮಾಡಿಕೊಂಡಿದ್ದರು ಎನ್ನಲಾಗಿದೆ. ಏಳು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ತಾಲೂಕಿನ ಪಂಡಿತಹಳ್ಳಿ ಕೃಷಿಪತ್ತಿನ ಸಹಕಾರ ಸಂಘದಲ್ಲಿ 60 ಸಾವಿರ, ಕುರಿ ಸಾಕಾಣಿಕೆಗೆ 1.20 ಲಕ್ಷ ಸೇರಿದಂತೆ ಇತರೆ ವ್ಯಕ್ತಿಗಳಿಂದ ಸುಮಾರು 6 ಲಕ್ಷಕ್ಕೂ ಹೆಚ್ಚು ಸಾಲ ಮಾಡಿಕೊಂಡಿದ್ದರು. ಮಳೆಯ ಅಭಾವದಿಂದಾಗಿ ರಾಗಿ ಬೆಳೆಯಲ್ಲಿ ನಷ್ಟ ಹಾಗೂ ಅನಾರೋಗ್ಯದ ಸಮಸ್ಯೆಗಳಿಂದ ಸಾಲ ತೀರಿಸಲಾಗದೇ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಮೃತ ಪತ್ನಿ ದಾಕ್ಷಯಿಣಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೇಶದಲ್ಲಿ ಇಂಧನ ಬಿಕ್ಕಟ್ಟಿಲ್ಲ

ಪುಟ 1 → ವಾಸ್ತವ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮಾರಾಟ ಮಾಡುತ್ತಿರುವ ಚಿಲ್ಲರೆ ಮಾರಾಟಗಾರರು ಎಷ್ಟು ಸಮಯವರೆಗೆ ನಷ್ಟಗಳನ್ನು ಭರಿಸಬಲ್ಲರು ಎಂಬುದರ ಬಗ್ಗೆ ಒಂದಷ್ಟು ಹಂತದಲ್ಲಿ ಅಂದಾಜು ಅಥವಾ ಅವಲೋಕನ ಕೂಡ ಮುಖ್ಯವೆಂದು ಸಚಿವರು ಹೇಳಿದ್ದಾರೆ. ಶೀಘ್ರದಲ್ಲೇ ದರ ಹೆಚ್ಚಳ ಸಾಧ್ಯತೆಯಿದೆಯೇ ಎಂಬುದಕ್ಕೆ ಪ್ರತಿಕ್ರಿಯಿಸಲು ಸಚಿವರು ನಿರಾಕರಿಸಿದರು.

ತೈಲ ಕಂಪೆನಿಗಳು ದಿನಕ್ಕೆ 1 ಸಾವಿರ ಕೋಟಿ ರೂ. ನಷ್ಟ ಅನುಭವಿಸುತ್ತಿವೆ. ವೆಚ್ಚಕ್ಕಿಂತ ಕಡಿಮೆ ದರಕ್ಕೆ ಇಂಧನ ಮಾರಾಟದಿಂದಾಗಿರುವ ವ್ಯತ್ಯಯ ಮೊತ್ತ 1.98 ಲಕ್ಷ ಕೋಟಿ ರೂ.ಗಳಿಗೆ ತಲುಪಿದ್ದು, ಕಾಲು ವರ್ಷದ ಅವಧಿಯಲ್ಲಾಗುವ 1 ಲಕ್ಷ ಕೋಟಿ ನಷ್ಟವು ರಂಗದ ವಾರ್ಷಿಕ ಲಾಭಗಳನ್ನೇ ಕಬಳಿಸಿಬಿಡಲಿದೆ. 10 ವಾರಗಳ ಹಿಂದೆ ಪಶ್ಚಿಮ ಏಷ್ಯಾ ಬಿಕ್ಕಟ್ಟು ಶುರುವಾದ ಕ್ಷಣದಿಂದ ಸರಕಾರಿ ಸ್ವಾಮ್ಯದ ತೈಲ ಮಾರ್ಕೆಟಿಂಗ್ ಕಂಪನಿಗಳು ವಾಸ್ತವ ವೆಚ್ಚಕ್ಕಿಂತಲೂ ಕಡಿಮೆ ದರದಲ್ಲಿ ಅಬಾಧಿತವಾಗಿ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಎಲ್‌ಪಿಜಿ ಪೂರೈಸುತ್ತಿವೆ. ವಿದೇಶಗಳಲ್ಲಿ ಇವುಗಳ ದರದಲ್ಲಿ ಮಿತಿಮೀರಿ ಏರಿಕೆಯಾಗಿದೆ ಮತ್ತು ರೇಶನಿಂಗ್ ವ್ಯವಸ್ಥೆ ಜಾರಿಯಾಗಿದೆ.

ವೆಚ್ಚಕ್ಕಿಂತ ಕಡಿಮೆ ದರಕ್ಕೆ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಪೂರೈಕೆಯ ಪರಿಣಾಮ ಸರ್ಕಾರಿ ಸ್ವಾಮ್ಯದ ತೈಲ ಮಾರ್ಕೆಟಿಂಗ್ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಶನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿ.(ಬಿಪಿಸಿಎಲ್), ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿ.ಗಳು(ಎಚ್‌ಪಿಸಿಎಲ್) ಕಂಡರಿಯದ ಪ್ರಮಾಣದಲ್ಲಿ ನಷ್ಟ ಅನುಭವಿಸುತ್ತಿವೆ. ಎಷ್ಟು ಸುದೀರ್ಘಾವಧಿವರೆಗೆ ತೈಲ ಕಂಪನಿಗಳು ಈ ರೀತಿ ನಷ್ಟವನ್ನು ಧೈರ್ಯದಿಂದ ಅನುಭವಿಸಬಲ್ಲವು ಎಂಬುದೀಗ ನಮ್ಮನ್ನು ಕಾಡುತ್ತಿರುವ ಆತಂಕವಾಗಿದೆ ಎಂದು ಸಚಿವರು, ಅಗಾಧ ನಷ್ಟದಿಂದಾಗಿ ಇಂಧನಗಳ ದರ ಶೀಘ್ರ ಏರುವುದೇ ಎಂಬ ಪ್ರಶ್ನೆಗೆ ಉತ್ತರಿಸಿದರು.

ಪ್ರಧಾನಿಗೆ ಭದ್ರತೆ ನೀಡದ ಸರ್ಕಾರ: ಶ್ರೀರಾಮುಲು

ಬೆಂಗಳೂರು: ಪ್ರಧಾನಿಯವರು ಬೆಂಗಳೂರಿಗೆ ಬಂದಾಗ ನೂರು ಮಂದಿ ಇನ್ಸ್‌ಪೆಕ್ಟರ್‌ಗಳನ್ನು ಸರ್ಕಾರ ವರ್ಗಾವಣೆ ಮಾಡಿದೆ. ಇದಕ್ಕೆ ಅಂತಹ ತುರ್ತು ಏನಿತ್ತು. ಪ್ರಧಾನಿಯವರು ಸಾಗುವ ನಿಗದಿತ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಸಿಕ್ಕಿವೆ. ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಯಾರು ಹೊಣೆ ಎಂದು ಮಾಜಿ ಸಚಿವ ಶ್ರೀರಾಮುಲು ಪ್ರಶ್ನಿಸಿದ್ದಾರೆ.


ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಪ್ರಧಾನಿಯವರು ಬಂದಾಗ ಕಾಂಗ್ರೆಸ್ ಸರ್ಕಾರ ಸರಿಯಾದ ಭದ್ರತೆ ನೀಡದೆ ಲೋಪ ಎಸಗಿದೆ. ಮೋದಿ ಅವರು ವಿಶ್ವದೆಲ್ಲೆಡೆ ಹೋದರೆ ಸರಿಯಾದ ಭದ್ರತೆ ಒದಗಿಸಲಾಗುತ್ತದೆ. ಹಾಗಿದ್ದಾಗ, ರಾಜ್ಯಕ್ಕೆ ಬಂದಾಗ ಭದ್ರತಾ ವ್ಯವಸ್ಥೆ ಸರಿ ಇರಲಿಲ್ಲ ಎಂದರೆ ಹೇಗೆ ಎಂದು ಪ್ರಶ್ನಿಸಿದರು.

ಚಾರಣಪಥ-ಸಂಚಾರಪಥ ತಾತ್ಕಾಲಿಕ ಸ್ಥಗಿತ: ಸಚಿವ

ಪುಟ 1 → ಅರಣ್ಯ ಸಚಿವ ಖಂಡ್ರೆ ಚಾರಣ ಚಟುವಟಿಕೆಗಳನ್ನು ಸುರಕ್ಷಿತ ಮತ್ತು ಜವಾಬ್ದಾರಿಯುತ ರೀತಿಯಲ್ಲಿ ನಡೆಸುವಂತೆ ಸೂಚಿಸಿದ್ದಾರೆ. ಇತ್ತೀಚೆಗಷ್ಟೇ ಬಿಡುಗಡೆ ಮಾಡಿದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ)ಗಳನ್ನು ಕಡ್ಡಾಯವಾಗಿ ಪಾಲಿಸುವಂತೆಯೂ ಸೂಚನೆ ನೀಡಿದ್ದಾರೆ. ಒಂದೊಮ್ಮೆ ಎಸ್‌ಒಪಿ ಪಾಲನೆಗೆ ಸಿದ್ಧತೆ ಮಾಡಿಕೊಳ್ಳದೇ ಇದ್ದಲ್ಲಿ ಅಂತಹ ಚಾರಣ ಪಥಗಳಲ್ಲಿ ಚಟುವಟಿಕೆಯನ್ನು ಸ್ಥಗಿತಗೊಳಿಸಲು ಸಚಿವರು ಸೂಚಿಸಿದ್ದಾರೆ. ಮುಖ್ಯ ವನ್ಯಜೀವಿ ಪರಿಪಾಲಕರಿಂದ ಸುತ್ತೋಲೆ ಕರ್ನಾಟಕ ಅರಣ್ಯ ಇಲಾಖೆ ಮತ್ತು ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ಮೇಲ್ವಿಚಾರಣೆಯಲ್ಲಿ ಕೈಗೊಳ್ಳುವ ಚಾರಣಪಥಗಳಲ್ಲಿ ಎಸ್‌ಒಪಿ ಪಾಲನೆಗೆ ಪೂರ್ವಸಿದ್ಧತೆ ಮಾಡಿಕೊಂಡು ನಂತರ ಚಾರಣ ಚಟುವಟಿಕೆ ಮುಂದುವರಿಸುವಂತೆ ಆದೇಶ ನೀಡಲಾಗಿದೆ. ಅಧಿಕೃತವಾಗಿ ಈ ಸಂಬಂಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು ಎರಡು ಪ್ರತ್ಯೇಕ ಸುತ್ತೋಲೆಗಳನ್ನು ಹೊರಡಿಸಿದ್ದಾರೆ.

ಬೆಟ್ಟಕ್ಕೆ ಜಾತ್ರೆ ವೇಳೆ ಮಾತ್ರ ಅವಕಾಶ

ಬೆಂಗಳೂರು: ನಾಗಮಲೆಯಲ್ಲಿ ಚಿರತೆ ದಾಳಿಯಿಂದ ಬಾಲಕ ಮೃತಪಟ್ಟ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟಕ್ಕೆ ಶಿವರಾತ್ರಿ, ಯುಗಾದಿ ಜಾತ್ರೆ ವೇಳೆ ಮಾತ್ರವೇ ಕಾಲ್ನಡಿಗೆಯಲ್ಲಿ ಸಾಗಲು ಅವಕಾಶ ನೀಡುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ನಿರ್ದೇಶನ ನೀಡಿದ್ದಾರೆ.



ವಿಕಾಸಸೌಧದಲ್ಲಿ ಮಂಗಳವಾರ ಹಿರಿಯ ಅಧಿಕಾರಿಗಳು ಹಾಗೂ ಚಾಮರಾಜನಗರ ಅರಣ್ಯಾಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿದ ಅವರು, ನಾಗಮಲೆಗೆ 14 ಕಿ.ಮೀ. ನಡೆದು ಹೋಗಲು ಅವಕಾಶ ನೀಡದೆ, ಕೇವಲ 3 ಕಿ.ಮೀ. ಮಾತ್ರ ಅವಕಾಶ ನೀಡಿ. ವಾಕಿ ಟಾಕಿ ಮತ್ತು ಅಗತ್ಯ ಸುರಕ್ಷತಾ ಸಲಕರಣೆಯೊಂದಿಗೆ ಮಾರ್ಗದರ್ಶಕರ (ಗೈಡ್) ಸೇವೆ ಒದಗಿಸುವಂತೆ ಸೂಚಿಸಿದರು.

ಟಿಕೆಟ್ ಕೌಂಟರ್ ಬಳಿಯಿಂದ ನಾಗಮಲೆಯ ಭಕ್ತರು ಜೀಪ್‌ನಲ್ಲಿ ಹೋಗುವುದನ್ನು ಕಡ್ಡಾಯ ಮಾಡಬೇಕು. ಉಳಿದ 3 ಕಿ.ಮೀ. ದುರ್ಗಮ ಅರಣ್ಯದ ಸಂಚಾರ ಪಥದ ಎರಡೂ ಬದಿಯಲ್ಲಿ ವನ್ಯಮೃಗಗಳು ಕಾಣುವಂತೆ ಗೋಚರರೇಖೆ (ವ್ಯೂ ಲೈನ್)ಯ ಕಳೆ ತೆಗೆಯಬೇಕು. ಅದೇ ರೀತಿ ಮಾದಪ್ಪನ ದರ್ಶನಕ್ಕೆ 7 ಕಿ.ಮೀ. ಬೆಟ್ಟ ಹತ್ತಿ ಹೋಗಲು ವರ್ಷವಿಡೀ ಅವಕಾಶ ನೀಡದೆ ಭಕ್ತರ ಸುರಕ್ಷತೆಯ ದೃಷ್ಟಿಯಿಂದ ಕೇವಲ ಶಿವರಾತ್ರಿ ಮತ್ತು ಯುಗಾದಿ ಸಂದರ್ಭದಲ್ಲಿ ಮಾತ್ರವೇ ಅವಕಾಶ ನೀಡಿ, ಆ ಸಂದರ್ಭದಲ್ಲಿ ಹೆಚ್ಚಿನ ಅರಣ್ಯ ಸಿಬ್ಬಂದಿಯನ್ನು ಭಕ್ತರ ಸುರಕ್ಷತೆಗಾಗಿ ನಿಯೋಜಿಸುವಂತೆ ಅವರು ನಿರ್ದೇಶಿಸಿದರು.


ಮಲೆ ಮಹದೇಶ್ವರ ಬೆಟ್ಟದ ಮೆಟ್ಟಿಲುಗಳ ಬಳಿ ಮತ್ತು ಟಿಕೆಟ್ ಕೌಂಟರ್ ಬಳಿ ಫಲಕಗಳನ್ನು ಹಾಕಿ ಆನೆ, ಚಿರತೆ, ಹುಲಿ ಸೇರಿದಂತೆ ವನ್ಯಮೃಗಗಳಿವೆ; ಬಸ್ ಸೌಲಭ್ಯ ಬಳಸಿಕೊಂಡು ಹೋಗುವುದು ಉತ್ತಮ ಎಂಬ ಜಾಗೃತಿ ಮೂಡಿಸಲೂ ಸಲಹೆ ನೀಡಿದರು.

ಕೇರಳ ಹೊಸ ಸಿಎಂ ಕೆಸಿವಿ?

ಪುಟ 1 → ಕೇರಳ ವಿಧಾನಸಭೆಯ ವಿಪಕ್ಷ ನಾಯಕ (ಎಲ್‌ಒಪಿ) ವಿ.ಡಿ. ಸತೀಶನ್, ಹಿರಿಯ ನಾಯಕ ರಮೇಶ್ ಚೆನ್ನಿತ್ತಲ (ಮಾಜಿ ಎಲ್‌ಒಪಿ) ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೆಸರುಗಳು ಮುಖ್ಯಮಂತ್ರಿ ಆಕಾಂಕ್ಷಿಗಳ ಓಟದಲ್ಲಿವೆ. ಕೇರಳ ಮುಖ್ಯಮಂತ್ರಿ ಆಯ್ಕೆ ಅಂತಿಮಗೊಳ್ಳುವ ಮುನ್ನ ಕಾಂಗ್ರೆಸ್ ಹೈಕಮಾಂಡ್ ಇನ್ನೊಮ್ಮೆ ಸಭೆ ಸೇರಿ ಚರ್ಚೆ ನಡೆಸುವ ಸಾಧ್ಯತೆಯಿದೆ. ಈ ಸಭೆಯಲ್ಲಿ ಹಿರಿಯ ನಾಯಕಿ ಸೋನಿಯಾ ಗಾಂಧಿ ಮತ್ತು ಪ್ರಿಯಾಂಕಾ ವಾದ್ರಾ ಪಾಲ್ಗೊಳ್ಳುವ ಸಾಧ್ಯತೆ ಇದೆಯೆಂದು ತಿಳಿದುಬಂದಿದೆ. 140 ಕ್ಷೇತ್ರಗಳಿಗಾಗಿ ನಡೆದ ಕೇರಳ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 63 ಮತ್ತು ಮುಸ್ಲಿಂ ಲೀಗ್ 22 ಸ್ಥಾನಗಳನ್ನು ಗೆದ್ದುಕೊಂಡಿದ್ದು, ಯುಡಿಎಫ್ ಒಟ್ಟು 102 ಶಾಸಕರ ಬಲ ಹೊಂದಿದೆ.

ನಕಲಿ ದಾಖಲೆ: ತನಿಖೆಗೆ ಜೋಶಿ ಆಗ್ರಹ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನ ನಿವೃತ್ತ ಉದ್ಯೋಗಿಯಾಗಿರುವ ಪ್ರಭಾರಿ ವ್ಯವಸ್ಥಾಪಕ ಪಾರ್ಶ್ವನಾಥ್ ಎಂಬುವವರು ದುರುದ್ದೇಶದಿಂದ ನಕಲಿ ದಾಖಲೆ ಸೃಷ್ಟಿಸಿ ಸಾಹಿತ್ಯ ಪರಿಷತ್ ಆಡಳಿತಾಧಿಕಾರಿಗಳಿಗೂ ವಾಸ್ತವ ವಿಷಯ ಮುಚ್ಚಿಟ್ಟು ತಮ್ಮ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಹೇಳಿರುವ ಪಾರ್ಶ್ವನಾಥ್ ಎನ್ನುವವರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಮಹೇಶ್ ಜೋಶಿ ವಿವಿಪುರಂ ಪೊಲೀಸರಿಗೆ ದೂರು ನೀಡಿದ್ದಾರೆ.



ಸಾಹಿತ್ಯ ಪರಿಷತ್‌ನಲ್ಲಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಪಾರ್ಶ್ವನಾಥ್ ಎನ್ನುವವರು ನಿವೃತ್ತಿಯಾಗಿದ್ದಾರೆ. ನಿವೃತ್ತಿ ಬಳಿಕ ನನ್ನ ವಿರುದ್ಧ ಕೆಲವು ದಿನಾಂಕಗಳಿಲ್ಲದ ದಾಖಲೆಗಳನ್ನು ಸೃಷ್ಟಿಸಿ ಆಡಳಿತಾಧಿಕಾರಿಯಾಗಿರುವ ಕೆ.ಎಂ. ಗಾಯತ್ರಿ ಅವರಿಗೂ ವಾಸ್ತವ ವಿಷಯವನ್ನು ಮುಚ್ಚಿಟ್ಟು ನನ್ನ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸುತ್ತಾರೆ. ಆದರೆ, ನನ್ನ ವಿರುದ್ಧ ಮಾಡಿರುವ ಆರೋಪಗಳ ದಾಖಲೆಗಳನ್ನು ಮಾಹಿತಿ ಹಕ್ಕಿನಡಿ ಪಡೆದು ಪರಿಶೀಲಿಸಿದಾಗ, ಅವುಗಳಲ್ಲಿ ಯಾವುದೇ ದಿನಾಂಕಗಳಿಲ್ಲದಿರುವುದು ಹಾಗೂ ಹೈಕೋರ್ಟ್‌ನಲ್ಲಿ ಹೂಡಿರುವ ಪ್ರಕರಣದ ಕೇವಿಯಟ್ ಬಗ್ಗೆಯೂ ನಮೂದಿಸಿರುವ ಹಲವು ಸಂಶಯಕ್ಕೆ ಎಡೆಮಾಡಿದೆ. ಹೀಗಾಗಿ ಈ ದಾಖಲೆಗಳು ಮೇಲ್ನೋಟಕ್ಕೆ ನಕಲಿ ಎಂಬುದು ಸಂಶಯ ಮೂಡಿದ್ದು, ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ ತಮಗೆ ನ್ಯಾಯ ಒದಗಿಸಬೇಕು ಎಂದು ಜೋಶಿ ಅವರು ನೀಡಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ.

ಬಹುಮಾನ ಪಾವತಿಸಲು ಹೈಕೋರ್ಟ್ ನಿರ್ದೇಶನ

ಬೆಂಗಳೂರು: ಕಾಡುಗಳ್ಳ ವೀರಪ್ಪನ್ ಹಿಡಿಯಲು ನೇಮಕವಾಗಿದ್ದ ವಿಶೇಷ ಕಾರ್ಯಾಚರಣಾ ಪಡೆ (ಎಸ್‌ಟಿಎಫ್) ಭಾಗವಾಗಿದ್ದ 72 ಮಂದಿಗೆ ಬಹುಮಾನದ ಮೊತ್ತವನ್ನು ಮೂರು ತಿಂಗಳಲ್ಲಿ ಪಾವತಿಸುವಂತೆ ರಾಜ್ಯ ಸರ್ಕಾರ ಮತ್ತು ಅರಣ್ಯ ಇಲಾಖೆಗೆ ಹೈಕೋರ್ಟ್ ನಿರ್ದೇಶಿಸಿದೆ.

2005ರ ಜು. 8ರ ಸರ್ಕಾರಿ ಆದೇಶದ ಪ್ರಕಾರ ಫಲಾನುಭವಿಗಳಿಗೆ ಬಹುಮಾನ ವಿತರಿಸುವಂತೆ ನ್ಯಾ. ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠವು ಸರ್ಕಾರಕ್ಕೆ ಆದೇಶಿಸಿದೆ.

ಮುಂಗಾರು ಮಳೆ ಉತ್ತಮವಾಗುವ ನಿರೀಕ್ಷೆ | ಕೃಷಿ ಪರಿಕರಗಳ ದಾಸ್ತಾನು ಆರಂಭ

ಬಿತ್ತನೆ ಕಾರ್ಯಕ್ಕೆ ಸಕಲ ಸಿದ್ಧತೆ

▸ ರುದ್ರಗೌಡ ಪಾಟೀಲ

ಗದಗ: ಪೂರ್ವ ಮುಂಗಾರು ಮಳೆ ಉತ್ತಮವಾಗಿ ಶುರುವಾಗಿದ್ದು ಮುಂಗಾರು ಮಳೆಯೂ ಕೂಡ ಉತ್ತಮವಾಗುವ ನಿರೀಕ್ಷೆಯಿದೆ. ರೈತ ಬಾಂಧವರು ಮಾಗಿ ಉಳುಮೆ ಕೈಗೊಳ್ಳಲು ಸೂಕ್ತ ಸಮಯವಾಗಿದೆ. ಜಿಲ್ಲೆಯಲ್ಲಿ ರೈತರು ಬಿತ್ತನೆ ಕಾರ್ಯಕ್ಕೆ ಬೇಕಾದ ರೀತಿಯಲ್ಲಿ ಹೊಲ ಹದ ಮಾಡಿಕೊಳ್ಳುತ್ತಿರುವ ದೃಶ್ಯಗಳು ಜಿಲ್ಲೆಯಲ್ಲಿ ಸಾಮಾನ್ಯವಾಗಿವೆ.

ಪ್ರಸ್ತುತ ಸಾಲಿನ ಮುಂಗಾರು ಪೂರ್ವ ಮಳೆ ಆರಂಭವಾಗಿದೆ. ಹೀಗಾಗಿ ರೈತರಿಗೆ ಅವಶ್ಯವಿರುವ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಇತರೆ ಕೃಷಿ ಪರಿಕರಗಳನ್ನು ಕೃಷಿ ಇಲಾಖೆಯಿಂದ ರಿಯಾಯಿತಿ ದರದಲ್ಲಿ ವಿತರಿಸಲು ತಯಾರಿ ಮಾಡಿಕೊಳ್ಳಲಾಗಿದೆ. ಜಿಲ್ಲೆಯ ರೈತರು ಈ ಬಾರಿ ಉತ್ತಮ ಮಳೆ ನಿರೀಕ್ಷೆ ಹೊಂದಿದ್ದಾರೆ.

ಕೃಷಿ ಇಲಾಖೆ ಕೂಡ ರೈತರಿಗೆ ಬೇಕಾದ ಬಿತ್ತನೆ ಬೀಜ, ರಸಗೊಬ್ಬರ ಮತ್ತಿತರ ಕೃಷಿ ಪರಿಕರಗಳ ದಾಸ್ತಾನು ಪ್ರಕ್ರಿಯೆಯಲ್ಲಿ ತೊಡಗಿದೆ. ಈಗಾಗಲೇ ರೈತ ಸಂಪರ್ಕ ಕೇಂದ್ರಗಳಿಂದ ರೈತರ ಬೇಡಿಕೆ ಪಡೆದುಕೊಂಡಿರುವ ಕೃಷಿ ಇಲಾಖೆ ಜಿಲ್ಲೆಗೆ ಅವಶ್ಯಕವಾಗಿರುವ ಬಿತ್ತನೆ ಬೀಜ, ರಸಗೊಬ್ಬರ ತರಿಸಿಕೊಳ್ಳಲು ಮುಂದಾಗಿದೆ.

3,13,719 ಹೆಕ್ಟೇರ್ ಬಿತ್ತನೆ ಗುರಿ: ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ 3,13,719 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಜಿಲ್ಲೆಯ ಪ್ರಮುಖ ಬೆಳೆಗಳಾದ ಮೆಕ್ಕೆಜೋಳ 1,55,463 ಹೆಕ್ಟೇರ್, ಹೆಸರು 1,17,000 ಹೆಕ್ಟೇರ್, ಶೇಂಗಾ 14,485 ಹೆಕ್ಟೇರ್, ಸೂರ್ಯಕಾಂತಿ 8,115 ಹೆಕ್ಟೇರ್, ಹತ್ತಿ 9,000 ಹೆಕ್ಟೇರ್ ಸೇರಿದಂತೆ ಒಟ್ಟು 3,13,719 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ.



ಅಧಿಕೃತ ಪರವಾನಗಿ ಹೊಂದಿದ ಮಳಿಗೆಗಳಲ್ಲಿ ಮಾತ್ರ ಬೀಜ, ರಸಗೊಬ್ಬರ ಹಾಗೂ ಕೀಟನಾಶಕ ಖರೀದಿಸಬೇಕು. ಕೃಷಿ ಪರಿಕರಗಳನ್ನು ಎಂ.ಆರ್.ಪಿ.ಗಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡಿದಲ್ಲಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳು ಮತ್ತು ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಗಮನಕ್ಕೆ ತರಲು ಕೋರಿದೆ. ಅಂತಹವರ ಮೇಲೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

■ **ಚೇತನ ಪಾಟೀಲ್, ಜಂಟಿ ಕೃಷಿ ನಿರ್ದೇಶಕ**

ರಸಗೊಬ್ಬರಗಳ ದಾಸ್ತಾನು: ಕೃಷಿ ಇಲಾಖೆಯ ಬೀಜ ವಿತರಣೆ ಯೋಜನೆಯಡಿ ಸಣ್ಣ ಅತೀಸಣ್ಣ ರೈತರಿಗೆ ಹಿಡುವಳಿ ಅನ್ವಯ ಹಾಗೂ ದೊಡ್ಡ ರೈತರಿಗೆ ಗರಿಷ್ಠ 5 ಎಕರಿಗೆ ಸೀಮಿತವಾಗಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸಲಾಗುವುದು. ಬೀಜಗಳ ಕೊರತೆಯಾಗದಂತೆ ಜಿಲ್ಲೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ವಿವಿಧ ಬೆಳೆಗಳ ಬಿತ್ತನೆ ಬೀಜದ ದಾಸ್ತಾನು ಪ್ರಗತಿಯಲ್ಲಿರುತ್ತದೆ. ಜಿಲ್ಲೆಯ ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆಯಾಗದಂತೆ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನೀಕರಿಸಲು ಕ್ರಮ ಕೈಗೊಳ್ಳಲಾಗಿದೆ.

ಕಳೆದ ಸಾಲಿನಂತೆ ಪ್ರಸ್ತುತ ವರ್ಷವೂ ಕೂಡ ಜಿಲ್ಲೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ರಿಯಾಯಿತಿ ದರದಲ್ಲಿ ಇಲಾಖೆಯ ಮಾರ್ಗಸೂಚಿಯನ್ವಯ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತದೆ. ಕರ್ನಾಟಕ ರಾಜ್ಯ ಬೀಜ ನಿಗಮ, ರಾಷ್ಟ್ರೀಯ ಬೀಜ ನಿಗಮ ಮತ್ತು ಖಾಸಗಿ ಮಾರಾಟ ಮಳಿಗೆಗಳಲ್ಲಿ ವಿವಿಧ ಬೆಳೆಗಳ ಬಿತ್ತನೆ ಬೀಜದ ದಾಸ್ತಾನು ಮಾಡಿಕೊಳ್ಳಲಾಗಿದೆ. ಇಲಾಖೆಯ ಮೂಲಕ ಬೀಜ ಬದಲಾವಣೆ ಅನುಪಾತಕ್ಕನುಗುಣವಾಗಿ (ಮೆಕ್ಕೆಜೋಳ ಹೊರತಾಗಿ ಉಳಿದೆಲ್ಲ ಬೀಜಗಳು 33% ಮಾತ್ರ) ಬೀಜಗಳನ್ನು ಪೂರೈಸಲಾಗುತ್ತದೆ. ಕಾರಣ, ರೈತರು ಹಿಂದಿನ ಹಂಗಾಮುಗಳಲ್ಲಿ ತಮ್ಮಲ್ಲಿ ಕಾಯ್ದಿರಿಸಿಕೊಂಡ ಬೀಜಗಳನ್ನು ಉಪಯೋಗಿಸಲು ಕೋರಿದೆ.

ರೈತರು ಬೀಜೋಪಚಾರ ಮಾಡಿ: ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಂಡು ಕೃಷಿ ತ್ಯಾಜ್ಯಗಳ ಮರುಬಳಕೆ ಮಾಡಿಕೊಳ್ಳಲು ಕೋರಲಾಗಿದೆ. ಇದರಿಂದ ಸಾಂಪ್ರದಾಯಿಕ ರಸಗೊಬ್ಬರಗಳ ಬಳಕೆ ಪ್ರಮಾಣ ತಗ್ಗಿಸಬಹುದಾಗಿರುವುದಲ್ಲದೇ ಮಣ್ಣಿನಲ್ಲಿರುವ ಸೂಕ್ಷ್ಮ ಪೋಷಕಾಂಶಗಳು ಬೆಳೆಗಳಿಗೆ ಸಿಗುವಂತಾಗಿ ಮಣ್ಣಿನ ಫಲವತ್ತತೆಯನ್ನೂ ಕಾಪಾಡಿಕೊಂಡಂತಾಗುತ್ತದೆ.

ರೈಜೋಬಿಯಂ, ಅಜಟೋಬ್ಯಾಕ್ಟರ್ ಹಾಗೂ ಅಝೋಸ್ಪಿರುಲ್ಲಂ ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಕೈಗೊಂಡು ಬಿತ್ತನೆ ಮಾಡಿದಲ್ಲಿ ಮಣ್ಣಿನಲ್ಲಿರುವ ಸಾರಜನಕವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗಲು ಸಾಧ್ಯವಾಗುತ್ತದೆ.

ತಾಂತ್ರಿಕ ದೋಷದಿಂದ ದಾಖಲಾಗದ ಹಾಜರಾತಿ

ಆಮ್ಸ್‌ನಿಂದ ಸಿಬ್ಬಂದಿಗೆ ತೊಂದರೆ

▸ ವಾಗೀಶ ವೀ. ಪಾಟೀಲ

ದಿಗಂತ ವಿಶೇಷ

ಬಯೋಮೆಟ್ರಿಕ್ ವ್ಯವಸ್ಥೆ ಉತ್ತಮ

ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್ಮೆಂಟ್ ಸಿಸ್ಟಮ್ ವ್ಯವಸ್ಥೆ ಅಥವಾ ಕರ್ತವ್ಯ ಆ್ಯಪ್ ಅಳವಡಿಸಿಕೊಳ್ಳುವ ಮೂಲಕ ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿನ ಸಿಬ್ಬಂದಿ ನೆಟ್‌ವರ್ಕ್ ಸಮಸ್ಯೆಯಿಂದ ತೊಂದರೆ ಆಗುತ್ತಿದೆ. ಇದಕ್ಕಿಂತ ಬಯೋಮೆಟ್ರಿಕ್ ವ್ಯವಸ್ಥೆಯೇ ತ್ವರಿತವಾಗಿ ಹಾಜರಾತಿ ಹಾಕುವುದಕ್ಕೆ ಸಾಧ್ಯವಾಗುತ್ತಿತ್ತು ಎನ್ನುತ್ತಾರೆ ಅನೇಕ ಸರ್ಕಾರಿ ನೌಕರರು.

ರಾಯಚೂರು: ರಾಜ್ಯ ಸರ್ಕಾರಿ ನೌಕರರ ಹಾಜರಾತಿ ಖಚಿತಪಡಿಸಿಕೊಳ್ಳುವುದಕ್ಕೆ ಕರ್ನಾಟಕ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್ಮೆಂಟ್ ಸಿಸ್ಟಮ್ (ಆಮ್ಸ್) ಅನ್ನು ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳಲ್ಲಿ ಈಗಾಗಲೇ ರಾಜ್ಯದ ಕೆಲ ಜಿಲ್ಲೆಗಳಲ್ಲಿ ಜಾರಿಗೊಳಿಸಿದೆ.

ಆದರೆ, ಸರ್ಕಾರ ಇದನ್ನು ಜಾರಿಗೊಳಿಸುವುದಕ್ಕೂ ಪೂರ್ವದಲ್ಲಿ ಇದಕ್ಕೆ ಅಡಚಣೆ ಆಗುವ ತಾಂತ್ರಿಕ ದೋಷಗಳನ್ನು ಸರಿಪಡಿಸದೇ ಇದ್ದುದರಿಂದಾಗಿ ಸಿಬ್ಬಂದಿ ಕೆಲ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.



ಈ ಹಿಂದೆ ನೌಕರರ ಹಾಜರಾತಿ ಖಚಿತಪಡಿಸಿಕೊಳ್ಳುವುದಕ್ಕಾಗಿ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತಂದಿತ್ತು. ಈ ವ್ಯವಸ್ಥೆ ಬದಲಿಗೆ ಕರ್ನಾಟಕ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್ಮೆಂಟ್ ಸಿಸ್ಟಮ್ ಜಾರಿಗೆ ತರುವುದರಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುತ್ತಿಲ್ಲ ಎನ್ನಲಾಗುತ್ತಿದೆ.

ರಾಜ್ಯ ಸರ್ಕಾರ ಕಳೆದ ಒಂದು ವರ್ಷದಿಂದ ಹಾಜರಾತಿ ಖಚಿತಪಡಿಸಿಕೊಳ್ಳುವುದಕ್ಕೆ ರಾಜ್ಯದ ಕೆಲ ಜಿಲ್ಲೆಗಳ ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದಿತ್ತು. ಪ್ರಸಕ್ತ ಸಾಲಿನಲ್ಲಿ ಇದನ್ನು ಇನ್ನು ಅನೇಕ ಜಿಲ್ಲೆಗಳಿಗೆ ವಿಸ್ತರಿಸುವುದಕ್ಕೆ ಮುಂದಾಗುತ್ತಿದೆ. ಆರೋಗ್ಯ, ಶಿಕ್ಷಣ ಇಲಾಖೆಗಳಲ್ಲದೆ ಈಗ ಪಂಚಾಯತ್‌ರಾಜ್ ಇಲಾಖೆಗೂ ವಿಸ್ತರಿಸುವ ಉದ್ದೇಶವನ್ನು ಹೊಂದಿದೆ ಎನ್ನಲಾಗುತ್ತಿದೆ.

ನೌಕರರು ತಮ್ಮ ಮೊಬೈಲ್ ಮೂಲಕ ಪ್ರಾರಂಭದಲ್ಲಿ ಈ ವ್ಯವಸ್ಥೆಗೆ ನೋಂದಾಯಿಸಿಕೊಳ್ಳುವ ಸಂದರ್ಭದಲ್ಲಿ ಆ ವ್ಯಕ್ತಿಯ ಮುಖ ಮತ್ತು ಜಿಯೋ-ಲೊಕೇಶನ್ ಅಪ್‌ಲೋಡ್ ಮಾಡಬೇಕಾಗುತ್ತದೆ. ಕೆಲಸಕ್ಕೆ ಹಾಜರಾಗುವ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುವ ಕಚೇರಿಯ ಸ್ಥಳದಲ್ಲಿ ನಿಂತು ಹಾಜರಾತಿಯನ್ನು ಮೊಬೈಲ್ ಮೂಲಕ ಹಾಕಬೇಕಾಗುತ್ತದೆ.

ಈ ವ್ಯವಸ್ಥೆ ಮೊಬೈಲ್ ನೆಟ್ ವರ್ಕ್ ಸಮರ್ಪಕವಾಗಿರುವ ನಗರ, ಪಟ್ಟಣ ಪ್ರದೇಶಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಬಹುದು. ಆದರೆ, ಸಮರ್ಪಕವಾದ ನೆಟ್‌ವರ್ಕ್ ಇಲ್ಲದ ಗ್ರಾಮೀಣ ಭಾಗಗಳಲ್ಲಿ ಎಷ್ಟು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತದೆ ಎನ್ನುವುದು ಯಕ್ಷ ಪ್ರಶ್ನೆಯಾಗಿ ಉಳಿದಿದೆ.

ಇದು ಹಳೆಯ ಬಯೋಮೆಟ್ರಿಕ್ ವ್ಯವಸ್ಥೆಗಳಿಗಿಂತ ಸುಧಾರಿತವಾಗಿದ್ದು ಎಂದು ಹೇಳಲಾಗುತ್ತಿದ್ದರೂ ಇದರಿಂದ ಸಿಬ್ಬಂದಿಗಳು ಅನೇಕ ಸಮಸ್ಯೆಗಳನ್ನು ಎದುರಿಸುವಂತಾಗುತ್ತಿದೆ ಎನ್ನುವುದು ಅಷ್ಟೇ ಸತ್ಯ.

ಕಳೆದ 5-6 ತಿಂಗಳಿಂದ ಸಿಬ್ಬಂದಿ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್ಮೆಂಟ್ ಸಿಸ್ಟಮ್ ವ್ಯವಸ್ಥೆ ಅಳವಡಿಸಿಕೊಳ್ಳುತ್ತಿದ್ದಾರೆ. ಜಿಲ್ಲೆಯಲ್ಲಿನ ಎರಡು ಸಾವಿರಕ್ಕೂ ಅಧಿಕ ಸಿಬ್ಬಂದಿ ಈ ವ್ಯವಸ್ಥೆಯಡಿ ಬರುತ್ತಿದ್ದಾರೆ. ಪ್ರಸಕ್ತ ಶೇ.75ರಷ್ಟು ಸಿಬ್ಬಂದಿ ಈ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಂಡಿದ್ದಾರೆ. ಇನ್ನು ಸಮರ್ಪಕವಾಗಿ ಜಾರಿಗೆ ತರುವುದಕ್ಕಾಗಿ ಕೆಲಸ ಮಾಡಲಾಗುತ್ತಿದೆ.

■ **ಡಾ.ಸುರೇಂದ್ರಬಾಬು, ಡಿಎಚ್‌ಒ**

ಗ್ರಾಮೀಣ ಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರೋಗ್ಯ ಇಲಾಖೆಯ ಸಿಬ್ಬಂದಿಯೋರ್ವರು ನಮ್ಮ ಕಚೇರಿಯ ಕಂಪೌಂಡ್ ಹೊರಗಡೆ ಹೋದರೆ ಮಾತ್ರ ನೆಟ್ ವರ್ಕ್ ದೊರೆಯುತ್ತದೆ.

ಒಳಗಡೆ ಇದ್ದರೆ ನೆಟ್‌ವರ್ಕ್ ದೊರೆಯುವುದೇ ಇಲ್ಲ. ಇದರಿಂದ ಹಾಜರಾತಿ ಹಾಕುವುದು ಸಮಸ್ಯೆಯಾಗುತ್ತಿದೆ. ಇದರಿಂದ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಗೆ ಹಾಜರಾತಿ ದಾಖಲಾಗುವುದೇ ಇಲ್ಲ ಇದರಿಂದ ವೇತನ ಕಡಿತವಾಗುವ ಸಾಧ್ಯತೆಯೂ ಇದೆ ಎನ್ನುತ್ತಾರೆ.

ಕಿರುಸುದ್ದಿ

ಕನಕಗಿರಿ ಉತ್ಸವ ಜೂನ್‌ಗೆ ಮುಂದೂಡಿಕೆ

ಕೊಪ್ಪಳ: ಮೇ 16, 17ಕ್ಕೆ ನಿಗದಿಯಾಗಿದ್ದ ಕನಕಗಿರಿ ಉತ್ಸವವು ಆಡಳಿತಾತ್ಮಕ ಕಾರಣಗಳಿಂದ ಜೂನ್ 10 ಮತ್ತು 11ಕ್ಕೆ ಮುಂದೂಡಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. ಕನಕಗಿರಿ ಉತ್ಸವಕ್ಕೆ ಸರ್ಕಾರ 6 ಕೋಟಿ ರೂ.ಬಿಡುಗಡೆ ಮಾಡಿದ್ದು, ಮೇ 16, 17ಕ್ಕೆ ನಿಗದಿ ಮಾಡಲಾಗಿತ್ತು. ಈ ಸಂಬಂಧ ವಿವಿಧ ಸಮಿತಿ ರಚಿಸಿ, ಆಮಂತ್ರಣ ಪತ್ರಿಕೆ ಮುದ್ರಿಸಲು ಸಿದ್ಧತೆ ನಡೆಸಲಾಗಿತ್ತು. ಕಾರಣಾಂತರಗಳಿಂದ ಉತ್ಸವ ಮುಂದೂಡಲಾಗಿದೆ. ಮಂಗಳವಾರ ಸಂಜೆ ಉತ್ಸವದ ಸಿದ್ಧತೆ ಕುರಿತು ಸಭೆ ಹಾಗೂ ಪತ್ರಿಕಾಗೋಷ್ಠಿ ನಡೆಸಲಾಗಿತ್ತು.

ಲೈಂಗಿಕ ದೌರ್ಜನ್ಯ ಪ್ರಕರಣ: ಡಿ ಗ್ರೂಪ್ ನೌಕರ ಅಮಾನತು

ವಿಜಯನಗರ: ಹೊಸಪೇಟೆ ನಗರದ ಉಪವಿಭಾಗದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಇತ್ತೀಚೆಗೆ ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಡಿ ಬಂಧನಕ್ಕೊಳಗಾಗಿರುವ 'ಡಿ' ಗ್ರುಪ್ ನೌಕರನನ್ನು ಅಮಾನತುಗೊಳಿಸಿ ಡಿಎಚ್‌ಒ ಡಾ.ಎಲ್.ಆರ್.ಶಂಕರ್ ನಾಯ್ಕ ಆದೇಶಿಸಿದ್ದಾರೆ. ಆಸ್ಪತ್ರೆಯ ಗ್ರೂಪ್ ಡಿ ನೌಕರ ಅಜಯ್ ಸೇವೆಯಿಂದ ಅಮಾನತುಗೊಂಡಿದ್ದಾರೆ. ತನ್ನ ತಾಯಿಗೆ ಚಿಕಿತ್ಸೆ ಕೊಡಿಸಲು ಬಂದಿದ್ದ ಅಪ್ರಾಪ್ತೆಯನ್ನು ಪುಸಲಾಯಿಸಿ, ಪಾಳು ಬಿದ್ದ ಕೊಠಡಿಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎಂಬ ಆರೋಪದಡಿ ಅಜಯ್‌ನನ್ನು ಬಡಾವಣೆ ಪೊಲೀಸರು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1589	5810
ಒಣ ಮೆಣಸಿನಕಾಯಿ	49200	49200
ಹೆಸರುಕಾಳು	1610	5209
ನೆಲಗಡಲೆ (ಶೇಂಗಾ)	6300	7516
ಹುರುಳಿ ಕಾಳು	3510	4052
ಜೋಳ	1610	3356
ಮೆಕ್ಕೆಜೋಳ	1919	1935
ಮಡಿಕೆ (ಮಟಕಿ)	8659	14233
ಸಾಸುವೆ	4459	4459
ಈರುಳ್ಳಿ	500	1800
ಆಲೂಗಡ್ಡೆ	1200	1900
ಕುಸುಬೆ	5239	5516
ಸೋಯಾಬಿನ್	5750	7210
ತೊಗರಿ	1119	4269
ಗೋಧಿ	1810	3759

ತರಕಾರಿ ಮಾರುವವರ ವೇಷದಲ್ಲಿ ಮನೆಗಳ್ಳತನ

ಖತರ್ನಾಕ್ ಕಳ್ಳರ ಗ್ಯಾಂಗ್ ಬಂಧನ

ಬೆಳಗಾವಿ: ತರಕಾರಿ ಮಾರುವವರ ವೇಷದಲ್ಲಿ ಬಂದು ಮನೆಗಳಲ್ಲಿ ಕಳ್ಳತನ ನಡೆಸಿ ಬಳಿಕ ಗೋವಾದಲ್ಲಿ ಮೋಜು ಮಸ್ತಿ ಮಾಡ್ತಿದ್ದ ಖತರ್ನಾಕ್ ಕಳ್ಳರ ಗ್ಯಾಂಗ್‌ನ್ನು ಬೆಳಗಾವಿ ಪೊಲೀಸರು ಬಂಒಸಿದ್ದಾರೆ.

ಪ್ರತ್ಯೇಕ ಪ್ರಕರಣ ಸಂಬಂಧ ಆರೋಪಿಗಳನ್ನು ಬಂಒಸಲಾಗಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ಆಭರಣಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಒತರು ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ಮೂಲದವರು ಎಂದು ತಿಳಿದುಬಂದಿದೆ.ಕಳ್ಳತನಕ್ಕೂ ಪೂರ್ವದಲ್ಲಿ ಏರಿಯಾಗಳಲ್ಲಿ ತರಕಾರಿ ಮಾರುವವರ ವೇಷದಲ್ಲಿ ಓಡಾಟ ನಡೆಸುತ್ತಿದ್ದ ಆರೋಪಿಗಳು, ಈ ವೇಳೆ ಬೀಗ ಹಾಕಿದ ಮನೆಗನ್ನ ಪತ್ತೆ ಮಾಡಿಕೊಂಡ ಬಳಿಕ ರಾತ್ರಿ ಗ್ಯಾಂಗ್ ಕಟ್ಟಿಕೊಂಡು ಬಂದು ಮನೆ ಬೀಗ ಮುರಿದು ಕಳ್ಳತನ ಮಾಡಿ ಎಸ್ಕೇಪ್ ಆಗುತ್ತಿದ್ದರು.

ಈ ಕುರಿತು ಎಪಿಎಂಸಿ ಹಾಗೂ ಶಹಾಪುರ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದ ಪೊಲೀಸರು ಇದಕ್ಕಾಗಿ ಎರಡು ತಂಡ ರಚನೆ ಮಾಡಿದ್ದರು. ಎಪಿಎಂಸಿ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ ಮಹಾರಾಷ್ಟ್ರ ಮೂಲದ ದೇವೇಂದ್ರ ವಾಘಮೋರೆ, ಸಚಿನ್ ಗೌಳಿ, ಕಪಿಲ್ ಜಾಧವನನ್ನು ಅರೆಸ್ಟ್ ಮಾಡಿ, ಅವರಿಂದ 4.71 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಾಗ್ರಿ, ಎರಡು ಬೈಕ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ.

ಇನ್ನು ಶಹಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ ಖತರ್ನಾಕ್ ಗ್ಯಾಂಗ್‌ನ ಕಿಂಗ್‌ಪಿನ್‌ನನ್ನು ಪೊಲೀಸರು ಖೆಡ್ಡಾಕ್ಕೆ ಕೆಡವಿದ್ದಾರೆ. ಉತ್ತರ ಪ್ರದೇಶ ಮೂಲದ ಮಿಂಟು ವಿಶ್ವಾಸ್ ಬಂಒತ ಆರೋಪಿಯಾಗಿದ್ದು, ಈತನಿಂದ 44 ಲಕ್ಷ 86 ಸಾವಿರ ರೂಪಾಯಿ ಮೌಲ್ಯದ 290ಗ್ರಾಂ ಚಿನ್ನ ಹಾಗೂ ಬೈಕ್ ವಶಕ್ಕೆ ಪಡೆಯಲಾಗುದೆ. ಈ ಎರಡೂ ಗ್ಯಾಂಗ್ ಶಿವಮೊಗ್ಗ, ಕಲಬುರ್ಗಿ ಪೊಲೀಸರು ಸೇರಿದಂತೆ ಗೋವಾ, ಮಹಾರಾಷ್ಟ್ರ, ಉತ್ತರ ಪ್ರದೇಶ, ಮಧ್ಯ ಪ್ರದೇಶದ ಪೊಲೀಸರಿಗೆ ಬೇಕಾಗಿದ್ದವರು ಎಂಬುದು ತನಿಖೆ ವೇಳೆ ಗೊತ್ತಾಗಿದೆ. ಕಳ್ಳತನ ಮಾಡಿದ್ದನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಗೋವಾಗೆ ತೆರಳಿ ಕೆಸಿನೋಗಳಲ್ಲಿ ಮೋಜು ಮಸ್ತಿ ಮಾಡುತ್ತಿದ್ದ ಖದೀಮರೀಗ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾರೆ.

ಗಾಂಜಾ ಮಾರಾಟ: ವ್ಯಕ್ತಿ ಬಂಧನ

ಬೆಳಗಾವಿ: ನಗರದಲ್ಲಿ ಅಕ್ರಮ ಚಟುವಟಿಕೆಗಳ ವಿರುದ್ಧ ಸಿಸಿಬಿ ಪೊಲೀಸರು ಕಾರ್ಯಾಚರಣೆ ತೀವ್ರಗೊಳಿಸಿದ್ದಾರೆ. ಕಾಕತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಅಡ್ಡೆ ಮೇಲೆ ದಾಳಿ ನಡೆಸಿ ಓರ್ವ ವ್ಯಕ್ತಿಯನ್ನು ಸಿಸಿಬಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಳಗಾವಿಯ ಕಾಕತಿ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ-48ರ ಸರ್ವಿಸ್ ರಸ್ತೆಯ ಬಳಿ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ದಾಳಿ ಮಾಡಲಾಗಿದೆ. ಆರೋಪಿ ಸೈಯ್ಯದ್ ನಿಸಾರ್ ತಂದೆ ಸೈಯ್ಯದ್ ಇಸಾಕ್ (40), ಅರುಣಾದ ನಗರ, ವಾರಳಿ, ಮಹಾರಾಷ್ಟ್ರದ ನಿವಾಸಿಯಾಗಿದ್ದು, ಸುಮಾರು 6 ಕೆಜಿ 145 ಗ್ರಾಂ ಗಾಂಜಾ ಮೌಲ್ಯ 3,05,000 ಹಾಗೂ ವಿವೋ ಮೊಬೈಲ್ ಫೋನ್ ಸೇರಿದಂತೆ



ಒಟ್ಟು ಸುಮಾರು 3,10,000 ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಸಿಸಿಬಿ ಘಟಕದ ಇನ್ಸಪೆಕ್ಟರ್ ಮಂಜುನಾಥ ನಾಯಕ, ಮಂಜುನಾಥ ಭಜಂತ್ರಿ ಹಾಗೂ ಸಿಬ್ಬಂದಿಯ ನೇತೃತ್ವದಲ್ಲಿ ದಾಳಿ ನಡೆಸಿ ಓರ್ವ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕುರಿತು ಕಾಕತಿ ಪೊಲೀಸ್ ಠಾಣೆಯಲ್ಲಿ ಎನ್ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ. ಕಾಕತಿ ಪೊಲೀಸರ ಈ ಕಾರ್ಯಾಚರಣೆಗೆ ಬೆಳಗಾವಿ ನಗರ ಪೊಲೀಸ್ ಆಯುಕ್ತರು ಹಾಗೂ ಡಿಸಿಪಿ ಅವರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಸಚಿವ ಸಂತೋಷ ಲಾಡ್ ಭರವಸೆ

ರಾಜ್ಯಪಾಲರ ಭೇಟಿಗೆ ಸಚಿವರೊಂದಿಗೆ ಚರ್ಚೆ

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆ ವಿಷಯ ರಾಜ್ಯ ಸಚಿವ ಸಂಪುಟದಲ್ಲಿ ಚರ್ಚಿಸಿ, ರಾಜ್ಯಪಾಲರ ಭೇಟಿಗೆ ಸಮಯ ಕೇಳುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ವಾಗ್ದಾನ ಮಾಡಿದರು.

ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ಮಂಗಳವಾರ ಪ್ರತ್ಯೇಕ ಮಹಾನಗರ ಪಾಲಿಕೆಯ ಹೋರಾಟಗಾರರೊಂದಿಗೆ ಚರ್ಚೆ ನಡೆಸಿದ ಅವರು, ಧಾರವಾಡ ಪ್ರತ್ಯೇಕ ಪಾಲಿಕೆ ಹೋರಾಟಕ್ಕೆ ತಮ್ಮ ಬೆಂಬಲವೂ ಇದೆ ಎಂದರು.

ಸಚಿವರೊಂದಿಗೆ ಚರ್ಚೆ: ರಾಜ್ಯದ ಕಾನೂನು ಸಚಿವ ಎಚ್.ಕೆ.ಪಾಟೀಲ ಮತ್ತು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಅವರೊಂದಿಗೆ ಚರ್ಚಿಸಿ, ಈ ಪ್ರಸ್ತಾವನೆ ಸರ್ಕಾರದ ಮಟ್ಟದಲ್ಲೂ ಗಂಭೀರ ಪರಿಗಣಿಸಲು ಒತ್ತಡ ಹೇರುವುದಾಗಿ ಭರವಸೆ ನೀಡಿದರು.



ರಾಜ್ಯಪಾಲರ ಭೇಟಿಗೆ ಸಮಯ: ಕಾನೂನು ಸಚಿವರ ನೇತೃತ್ವದಲ್ಲಿ ರಾಜ್ಯಪಾಲರ ಭೇಟಿಗೆ ಸಮಯ ಕೋರಲಿದೆ. ಈ ಮೂಲಕವೇ ಪ್ರತ್ಯೇಕ ಪಾಲಿಕೆ ಕಡತಕ್ಕೆ ಅಂಕಿತ ಹಾಕಲು ಮನವೊಲಿಸುವ ಕಾರ್ಯವನ್ನು ಸರ್ಕಾರವೂ ಮಾಡಲಿದೆ ಎಂದು ತಿಳಿಸಿದರು.

ನಾನೂ ಹೋರಾಡುವೆ: ಒಂದು ವೇಳೆ ಈ ಪ್ರಸ್ತಾವನೆಗೆ ಅಂಕಿತ ಹಾಕಲು ರಾಜ್ಯಪಾಲರು ನಿರಾಕರಿಸಿದಲ್ಲಿ ಅಥವಾ ವಿಳಂಬ ಧೋರಣೆ ಅನುಸರಿಸಿದರೆ, ತಾವು ಕೂಡ ಹೋರಾಟಗಾರರ ಜತೆ ಬೀದಿಗೆ ಇಳಿವುದಾಗಿಯೂ ಕೂಡ ವಾಗ್ದಾನ ಮಾಡಿದರು.

ಧಾರವಾಡದ ಅಭಿವೃದ್ಧಿ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಅವಳಿನಗರದ ಪಾಲಿಕೆ ವಿಭಜಿಸಿ, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಅಸ್ತಿತ್ವ ನೀಡಬೇಕು ಎಂದು ಸಭೆಯಲ್ಲಿದ್ದ ಬಹುತೇಕ ಹೋರಾಟಗಾರರು ಆಗ್ರಹ ಮಾಡಿದರು.

ಪ್ರತ್ಯೇಕ ಪಾಲಿಕೆ ಧಾರವಾಡ ಜನರ ಹಕ್ಕು. ಒಂದು ವೇಳೆ ರಾಜ್ಯಪಾಲರು ಕಡತಕ್ಕೆ ಸಹಿ ಹಾಕಲು ನಿರಾಕರಿಸಿದರೆ, ನಾನು ಸಚಿವ ಸ್ಥಾನದ ಹಂಗು ತೊರೆದು ನಿಮ್ಮ ಜೊತೆಗೆ ಬೀದಿಗೆ ಇಳಿದು ಹೋರಾಟ ಮಾಡುವೆ.

■ **ಸಂತೋಷ ಲಾಡ್, ಜಿಲ್ಲಾ ಉಸ್ತುವಾರಿ ಸಚಿವರು**

ಸಭೆಯಲ್ಲಿ ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ, ಡಾ.ಅಜಿತ ಪ್ರಸಾದ, ಗುರುರಾಜ ಹುಣಸಿಮರದ, ಬಿ.ಡಿ.ಹಿರೇಮಠ, ಮನೋಜ ಪಾಟೀಲ, ವಸಂತ ಅರ್ಕಚಾರ, ವೆಂಕಟೇಶ ಮಾಚಕನೂರ ಅನೇಕರು ಇದ್ದರು.

ಬೀದಿ ನಾಯಿಗಳಿಗೆ ವಿಷ ಹಾಕಿದ ದುಷ್ಕರ್ಮಿಗಳು

ವಿಜಯಪುರ: ನಗರದ ರಾಜಕುಮಾರ್ ಲೇಔಟ್‌ನಲ್ಲಿ ಪುಟ್ಟ ಬಾಲಕನ ಮೇಲೆ ಬೀದಿ ನಾಯಿ ದಾಳಿ ನಡೆಸಿದ ಘಟನೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದ್ದ ಬೆನ್ನಲ್ಲೇ, ಇಲ್ಲಿನ ಶಾಸ್ತ್ರೀ ನಗರದಲ್ಲಿ ಕೆಲ ದುಷ್ಕರ್ಮಿಗಳು ಬೀದಿ ನಾಯಿಗಳಿಗೆ ಆಹಾರದಲ್ಲಿ ವಿಷ ಬೆರೆಸಿದ ಅಮಾನವೀಯ ಕೃತ್ಯ ನಡೆದಿದೆ.

ಈ ದುಷ್ಕೃತ್ಯದಿಂದ ಒಂದು ಮೂಕ ಪ್ರಾಣಿ ಬಲಿಯಾಗಿದ್ದು, ಪ್ರಾಣಿ ಪ್ರಿಯರ ಕೆಂಗಣ್ಣಿಗೆ ಗುರಿಯಾಗಿದೆ. ವಿಷ ಪ್ರಾಷದಿಂದ ಬಳಲಿದ ಎರಡು ಬೀದಿ ನಾಯಿಗಳಿಗೆ ಶ್ವಾನ ಪ್ರಿಯರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದಾರೆ.

ಇಲ್ಲಿನ ರಾಜಕುಮಾರ್ ಲೇಔಟ್‌ನಲ್ಲಿ ಈಚೆಗೆ ಬಾಲಕನೊಬ್ಬ ನಾಯಿ ಕಡಿತಕ್ಕೆ ಒಳಗಾಗಿದ್ದನ್ನು ವಿರೋಧಿಸಿ ಜನರು ಆಕ್ರೋಶ ಹೊರಹಾಕಿದ್ದರು. ಇದರ ಬೆನ್ನಲ್ಲೇ ಎಚ್ಚೆತ್ತ ಮಹಾನಗರ ಪಾಲಿಕೆ ಸಿಬ್ಬಂದಿಗಳು ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಹಾಗೂ ಸ್ಥಳಾಂತರಕ್ಕೆ ಯೋಜನೆ ರೂಪಿಸಿತ್ತು. ಆದರೆ, ಈ ಪ್ರಕ್ರಿಯೆ ನಡೆಯುವ ಮುನ್ನವೇ ಕೆಲ ಕಿಡಿಗೇಡಿಗಳು ಇಲ್ಲಿನ ಶಾಸ್ತ್ರೀ ನಗರ ಬಡಾವಣೆಯಲ್ಲಿ ಒಟ್ಟು 3 ಬೀದಿ ನಾಯಿಗಳಿಗೆ ವಿಷ ಹಾಕಿದ್ದು, ಈ ಪೈಕಿ ಒಂದು ಸ್ಥಳದಲ್ಲೇ ಸಾವಿಗೀಡಾಗಿದ್ದರೆ, ಇನ್ನೊಂದು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದೆ. ಇನ್ನೊಂದಕ್ಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಸಿಡಿಲು ಬಡಿತಕ್ಕೆ ರೈತ ಬಲಿ

ಹನುಮಸಾಗರ: ಸಮೀಪದ ಕಬ್ಬರಗಿ ಗ್ರಾಮದ ರೈತ ಶರಣಪ್ಪ ಮಾಸಪ್ಪ ಹೂಲಗೇರಿ (51) ಅವರು ಸಿಡಿಲು ಬಡಿದ ಘಟನೆ ಮಂಗಳವಾರ ಸಂಜೆ ನಡೆದಿದೆ.

ಸಂಜೆ ತಮ್ಮ ಹೊಲದಲ್ಲಿ ಕೃಷಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಏಕಾಏಕಿ ಗುಡುಗು, ಮಿಂಚಿನೊಂದಿಗೆ ಸುರಿದ ಮಳೆಯ ವೇಳೆ ಸಿಡಿಲು ಬಡಿದು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಮೃತರಿಗೆ ಮೂವರು ಗಂಡು ಮಕ್ಕಳು ಇದ್ದಾರೆ. ಅವರ ಅಗಲಿಕೆಯಿಂದ ಕುಟುಂಬಸ್ಥರು ಹಾಗೂ ಗ್ರಾಮಸ್ಥರಲ್ಲಿ ದುಃಖದ ವಾತಾವರಣ ನಿರ್ಮಾಣವಾಗಿದೆ.

ಮೇ 16ರಿಂದ 12ನೇ ಮೇ ಸಾಹಿತ್ಯ ಸಮ್ಮೇಳನ

ಗದಗ: ದಲಿತರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ಮೇ ಸಾಹಿತ್ಯ ಮೇಳ ಪ್ರತಿ ವರ್ಷ ಆಯೋಜನೆ ಮಾಡಿಕೊಂಡು ಬರಲಾಗಿದ್ದು, ಪ್ರಸಕ್ತ ವರ್ಷ ಸಂವಿಧಾನಿಕ ಪ್ರಜಾಸತ್ತೆಯ ಮೇಲಿನ ದಾಳಿ ಎನ್ನುವ ಹೆಸರಿನ ಮೇಲೆ 12ನೇ ಮೇ ಸಾಹಿತ್ಯ ಸಮ್ಮೇಳನ ಮೇ 16, 17ರಂದು ಹುಬ್ಬಳ್ಳಿಯಲ್ಲಿ ನಡೆಯಲಿದೆ ಎಂದು ಡಾ.ರಾಮಚಂದ್ರ ಹಂಸನೂರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದ ಉದ್ಘಾಟನೆಯನ್ನು ಮಾನಸ, ಬೆಂಗಳೂರು ನೇರವೇರಿಸಲಿದ್ದಾರೆ. ಅತಿಥಿಗಳಾಗಿ ಪಲ್ಲವ ವೆಂಕಟೇಶ, ಸುರೇಶ ಬಿಜಾಪುರ, ಎಸ್.ಎ.ಮುಲ್ಲಾ, ಎಲ್.ಎಚ್.ಅರುಣಕುಮಾರ ಆಗಮಿಸಲಿದ್ದಾರೆ. 'ಚಿತ್ರಕಲಾ ಪ್ರದರ್ಶನ ಮಳಿಗೆ'ಯನ್ನು ಶ್ಯಾಮಲಾ ಗುರುಪ್ರಸಾದ್ ಉದ್ಘಾಟಿಸಲಿದ್ದಾರೆ ಎಂದರು.

ದಿಕ್ಸೂಚಿಮಾತುಗಳನ್ನಾಡಲು ನ್ಯಾ.ಬಿ.ಜಿ.ಕೋಳ್ಸೆಪಾಟೀಲ್ ಮುಂಬೈನ ಪಾಣೆಯಿಂದ ಆಗಮಿಸಲಿದ್ದಾರೆ. ಜೊತೆಗೆ ವಿ. ಬಾಲಸುಬ್ರಮಣಿಯನ್ ಹಾಗೂ ಕೆ.ನೀಲಾ ಆಗಮಿಸಲಿದ್ದಾರೆ. ಗುರುನಾಥ ಉಳ್ಳಿಕಾಶಿ, ಮಹೇಶ ಪತ್ತಾರ ಹಕ್ಕೊತ್ತಾಯಗಳ ಮಂಡನೆ ಮಾಡಲಿದ್ದಾರೆ ಎಂದರು.

ಈ ಕಾರ್ಯಕ್ರಮದಲ್ಲಿ ಹಲವಾರು ವಿಷಯಗಳ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಯಲಿದ್ದು, ಜಿಲ್ಲೆಯಿಂದ 15,00ಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ. ಸಂವಿಧಾನ ಅಪಾಯದಲ್ಲಿದ್ದು, ಇದನ್ನು ಕಾಪಾಡುವ ಹಿತ ದೃಷ್ಟಿಯಿಂದಾಗಿ ಇಂತಹ ಹಲವಾರು ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತಿದೆ ಎಂದರು.

ಬಿ.ಕೆ. ಪೂಜಾರ, ನೂರುಂದಪ್ಪ ಕೋಳೂರು, ಸರೋಜಾ ಕೋಳೂರು, ಶರಣು ಪೂಜಾರ, ಪರಶು ಕಾಳೆ, ರಮೇಶ್ ಕೋಳೂರು, ಯೂಸೂಪ್ ಮಜ್ಜಗಿ, ಮಲ್ಲಪ್ಪ ಕೊಳೂರು ಇದ್ದರು.

6ನೇ ದಿನಕ್ಕೆ ಮುಂದುವರಿದ ಧರಣಿ ಸತ್ಯಾಗ್ರಹ

ಅಂಕೋಲಾ: ಗೃಹ ಇಲಾಖೆಯ ಸಚಿವರು ಬಂದು ಅಹವಾಲು ಆಲಿಸಬೇಕು ಎಂದು ವಕೀಲ ನಾಗರಾಜ ನಾಯಕ ನಡೆಸುತ್ತಿರುವ ಧರಣಿ ಸತ್ಯಾಗ್ರಹ 6ನೇ ದಿನಕ್ಕೆ ಮುಂದುವರಿದಿದ್ದು, ಶಾಂತಿಯುತ ಧರಣಿಗೆ ಅನುಮತಿ ನಿರಾಕರಿಸಿದ ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆಯ ಕ್ರಮಕ್ಕೆ ನಾಗರಾಜ ನಾಯಕ ಆಕ್ರೋಶ ವ್ಯಕ್ತಪಡಿಸಿದರು.

ಜೈಹಿಂದ್ ಹೈಸ್ಕೂಲ್ ಮೈದಾನದ ಪ್ರವೇಶ ದ್ವಾರದಲ್ಲಿ ಧರಣಿ ಮುಂದುವರಿಸಿದ ಅವರು ಶಾಂತಿಯುತ ಧರಣಿ ಸತ್ಯಾಗ್ರಹ ಜನತೆಯ ಮೂಲಭೂತ ಹಕ್ಕಾಗಿದ್ದು ಈಗಲೂ ಪೊಲೀಸರು ಅಡ್ಡಿಪಡಿಸಿದರೆ ನದಿಯಲ್ಲಿ ಇಳಿದು ಸತ್ಯಾಗ್ರಹ ನಡೆಸುವುದಾಗಿ ಹೇಳಿದರು.

ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ತಹಶೀಲ್ದಾರರ ಮೂಲಕ ಜಿಲ್ಲಾಧಿಕಾರಿಗೆ



ಮನವಿ ಸಲ್ಲಿಸಿದ ಅವರು ತಾಲೂಕಿನಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳು ಅದರಲ್ಲಿ ಶಾಮೀಲಾಗಿರುವ ಅಧಿಕಾರಿಗಳ ಕುರಿತಂತೆ ತನಿಖೆ ನಡೆಯಬೇಕು ಎಂದು ಮನವಿಯಲ್ಲಿ ಕೋರಿದ್ದು, ಜಿಲ್ಲಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸುವಂತೆ ಆಗ್ರಹಿಸಿದರು.

ಸಾಮಾಜಿಕ ಕಾರ್ಯಕರ್ತ ಜಿ.ಜಿ.ಶಂಕರ್, ಭಾರತೀಯ ಜನತಾ ಪಕ್ಷದ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಶಿವಾನಿ ಶಾಂತಾರಾಮ, ಶಿರಸಿ ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷೆ ಉಷಾ ಹೆಗಡೆ, ವಕೀಲ ಮಂಗಲಮೂರ್ತಿ ಸಭಾಹಿತ, ಬಿಜೆಪಿ ಪ್ರಮುಖ ಕುಮಾರ ಮಾರ್ಕಂಡೆ, ಜಿಲ್ಲಾ ಕಾರ್ಯದರ್ಶಿ ಸುಬ್ರಾಯ ದೇವಾಡಿಗ, ಆರತಿ ಗೌಡ, ವಕೀಲ ಪ್ರಶಾಂತ ನಾಯ್ಕ, ಜಿಲ್ಲಾ ಕಾಂಗ್ರೆಸ್ ಸದಸ್ಯ ಉದಯ ನಾಯಕ, ರಾಜೇಶ ನಾಯಕ, ಬಿಂದೇಶ ನಾಯಕ, ಧೀರಜ ಬೆಲೇಕೇರಿ ಮೊದಲಾದವರು ಧರಣಿಯಲ್ಲಿ ಪಾಲ್ಗೊಂಡು ಬೆಂಬಲ ಸೂಚಿಸಿದರು.



ಸಂಪಾದಕೀಯ

ವಿದ್ಯಾರ್ಥಿಗಳ ಸಂಕಷ್ಟಕ್ಕೆ ಯಾರು ಹೊಣೆ?

ದೇಶದ ಅತಿದೊಡ್ಡ ವೈದ್ಯಕೀಯ ಪ್ರವೇಶ ಪರೀಕ್ಷೆಯಾದ 'ನೀಟ್-ಯುಜಿ' ಮತ್ತೊಮ್ಮೆ ವಿವಾದಕ್ಕೆ ಸಿಲುಕಿದೆ. ಮೇ 3ರಂದು ನಡೆದ ನೀಟ್ ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಪರೀಕ್ಷೆಗಿಂತ ಮೊದಲೇ ಸೋರಿಕೆಯಾಗಿವೆ ಎಂಬ ಆರೋಪದಡಿ ಈಗ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ. ಇಡೀ ಪರೀಕ್ಷೆಯನ್ನು ಮತ್ತೊಮ್ಮೆ ನಡೆಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಿರ್ಧರಿಸಿದೆ. ಪರೀಕ್ಷೆಯ ಮೊದಲು ಕೆಲವು ವಿದ್ಯಾರ್ಥಿಗಳ ಕೈಯಲ್ಲಿ ಹರಿದಾಡಿದ ಊಹನ ಪತ್ರಿಕೆಯಲ್ಲಿ ಕಂಡುಬಂದ ಬಹಳಷ್ಟು ಪ್ರಶ್ನೆಗಳು ಪರೀಕ್ಷಾ ಕಾಲದ ಪ್ರಶ್ನೆಪತ್ರಿಕೆಯಲ್ಲಿದ್ದ ಪ್ರಶ್ನೆಗಳೊಂದಿಗೆ ತಾಳೆಯಾಗಿರುವುದು ಬಳಿಕ ಕಂಡುಬಂದ ಹಿನ್ನೆಲೆಯಲ್ಲಿ ಈ ಪರೀಕ್ಷೆಯನ್ನು ರದ್ದುಪಡಿಸದೆ ಗತ್ಯಂತರವಿಲ್ಲವಾಗಿದೆ.



ಆದರೆ ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಭದ್ರತೆಯ ಹೆಸರಲ್ಲಿ ಅತಿರೇಕವಾಗಿ ವರ್ತಿಸುವ, ಮೂಗುತಿ, ಕಿವಿಯೋಲೆಗಳನ್ನು ಕೂಡ ತೆಗೆಸುವವರಿಗೆ ಪ್ರಶ್ನೆಪತ್ರಿಕೆ ಸೋರಿಕೆಯಂತಹ ಅಪಸವ್ಯವನ್ನು ತಡೆಯಲಾಗುವುದಿಲ್ಲ ಎನ್ನುವುದು ವಿಪರ್ಯಾಸ. ಪ್ರಶ್ನೆಗಳು ಸೋರಿಕೆಯಾಗಿರುವುದು ನಿಜವೇ ಆಗಿದ್ದಲ್ಲಿ, ಅದರಲ್ಲಿ ವ್ಯವಸ್ಥೆಯ ಒಳಗಿನ ಮಂದಿಯೂ ಶಾಮೀಲಾಗಿರುವ ಶಂಕೆಯೂ ಮೂಡುತ್ತದೆ. ಇದು ಎಲ್ಲಕ್ಕಿಂತ ಹೆಚ್ಚು ಗಂಭೀರ ವಿಚಾರ. ಇದು ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟವಾಡಿದಂತೆ!

ನಡೆದ ಪರೀಕ್ಷೆ ರದ್ದುಪಡಿಸಿ ಹೊಸ ಪರೀಕ್ಷೆ ನಡೆಸುವುದು ಇಲಾಖೆಯ ಪಾಲಿಗೆ ದೊಡ್ಡ ಕೆಲಸವೆನಿಸದು. ಆದರೆ ಇಲ್ಲಿ ಸಂಕಷ್ಟ ಅನುಭವಿಸುವವರು ತಿಂಗಳುಗಟ್ಟಲೆ ಅಧ್ಯಯನ ನಡೆಸಿ ಪರೀಕ್ಷೆ ಬರೆದ ಪ್ರಾಮಾಣಿಕ ವಿದ್ಯಾರ್ಥಿಗಳು. ಸುಮಾರು 22.79 ಲಕ್ಷ ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆ ಬರೆದಿದ್ದಾರೆ. ನೀಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ವಿದ್ಯಾರ್ಥಿಗಳು ಅದೆಷ್ಟು ಕಠಿಣ ಅಭ್ಯಾಸ ನಡೆಸುತ್ತಾರೆ, ಅದೆಷ್ಟು ಮಾನಸಿಕ ಒತ್ತಡ ಅನುಭವಿಸುತ್ತಾರೆ ಎಂಬುದು ತಿಳಿಯದ್ದಲ್ಲ. ವಿದ್ಯಾರ್ಥಿಗಳಷ್ಟೇ ಅಲ್ಲದೆ ಅವರ ಹೆತ್ತವರು ಕೂಡಾ ಇದೇ ಬಗೆಯ ಒತ್ತಡಗಳನ್ನು ಅನುಭವಿಸುತ್ತಾರೆ. ಪರೀಕ್ಷೆ ಮುಗಿದೊಡನೆ ದೊಡ್ಡ ಹೊರೆಯೊಂದನ್ನು ತಲೆಯಿಂದ ಕೆಳಗಿಳಿಸಿದ ನಿರಾಳತೆ ಅನುಭವಿಸಿದ ವಿದ್ಯಾರ್ಥಿಗಳು ಇನ್ನೀಗ ಮತ್ತೆ ಅದೇ ಬಗೆಯ ಪರೀಕ್ಷಾ ಸಿದ್ಧತೆ ಮಾಡಬೇಕಾಗಿದೆ ಎಂಬುದು ಮಾನಸಿಕ ಚಿತ್ರಹಿಂಸೆಯೇ ಸರಿ. ಹೊಸದಾಗಿ ಪರೀಕ್ಷೆ ನಡೆದು ನೇಮಕಾತಿ ಪ್ರಕ್ರಿಯೆ ಮುಗಿಯುವಾಗ ಬಹಳಷ್ಟು ಸಮಯವೂ ವ್ಯರ್ಥವಾಗಿರುತ್ತದೆ. ಇದು ಇನ್ನಿತರ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳ ಭವಿಷ್ಯದ ಮೇಲೂ ಪರಿಣಾಮ ಬೀರುತ್ತದೆ. ಒಟ್ಟಿನಲ್ಲಿ ವ್ಯವಸ್ಥೆಯ ಲೋಪಕ್ಕೆ ಪಾಪದ ವಿದ್ಯಾರ್ಥಿಗಳು ಬೆಲೆ ತೆರುವ ಸಂಕಷ್ಟ ಅನುಭವಿಸುವಂತಾಗಿದೆ.

ಮೋದಿ ಹೇಳಿದರೆ ಜನ ಯಾಕೆ ಕೇಳುತ್ತಾರೆ?

ಖಾರಾ ಬಾತ್
ವಿನಾಯಕ ಭಟ್ಟ ಮೂರೂರು
vakradanta@gmail.com



ಪ್ರಧಾನಿ ನರೇಂದ್ರ ಮೋದಿಯವರು ಎರಡು- ಮೂರು ದಿನದಿಂದ ಮಿತ ಬಳಕೆ ಬಗ್ಗೆ, ಸ್ವಲ್ಪ ಸಮಯ ನಾವು ಅನುಸರಿಸಬಹುದಾದ ಸಂಯಮದ ಬಗ್ಗೆ ಹೇಳುತ್ತಿದ್ದಾರೆ. ಅವರು ಹಾಗೆ ಹೇಳುತ್ತಿದ್ದಂತೆ ಕಾಂಗ್ರೆಸ್ ನಾಯಕರೆಲ್ಲ ಭಾರೀ ಚುರುಕಾಗಿ ಪ್ರತಿಕ್ರಿಯಿಸಲಾರಂಭಿಸಿದ್ದಾರೆ. ಮೋದಿ ಆಡಳಿತದ ವೈಫಲ್ಯ, ಅದಕ್ಕಾಗಿಯೇ ಅವರು ಜನರು ಮಿತ ಬಳಕೆ ಮಾಡಿ ಎಂದು ಹೇಳುತ್ತಿದ್ದಾರೆ, ಮೋದಿ ಭಕ್ತರೆಲ್ಲ ಈಗ ಮಿತ ಬಳಕೆ ಮಾಡದವರನ್ನು ದೇಶ ವಿರೋಧಿಗಳು ಅನ್ನುತ್ತಾರೆ ಎಂದೆಲ್ಲ ಬೊಬ್ಬೆ ಹೊಡೆಯುತ್ತಿದ್ದಾರೆ.

ಯಾರು ಏನೇ ಬೊಬ್ಬೆ ಹೊಡೆಯಲಿ, ಕೂಗಾಡಲಿ, ವಾದ ಮಾಡಲಿ, ಆರೋಪಿಸಲಿ, ಆದರೆ ಜನ ನರೇಂದ್ರ ಮೋದಿಯವರು ಹೇಳಿದ್ದನ್ನು ನಂಬುತ್ತಾರೆ. ಅವರು ಒಂದು ಮಾತು ಹೇಳಿದರೆ ಅದನ್ನು ಪಾಲಿಸುವ ಕೋಟ್ಯಂತರ ಜನರಿದ್ದಾರೆ. ನರೇಂದ್ರ ಮೋದಿಯವರು ಇಂಧನ ಮಿತ ಬಳಕೆ ಮಾಡಿ, ಮನೆಯಿಂದಲೇ ಕೆಲಸ ಮಾಡಿ, ಚಿನ್ನ ಖರೀದಿ ಮುಂದೂಡಿ, ವಿದೇಶ ಪ್ರವಾಸಕ್ಕೆ ಹೋಗುವ ಬದಲು ಸ್ವದೇಶ ಪ್ರವಾಸ ಮಾಡಿ ಎಂದು ಹೇಳಿದ್ದರ ಹಿಂದೆ ಒಂದು ಕಾರಣವಿದೆ. ಇಸ್ರೇಲ್- ಅಮೆರಿಕ- ಇರಾನ್ ಯುದ್ಧದ ಪರಿಣಾಮದಿಂದ ಈಗಾಗಲೇ ಸಾಕಷ್ಟು ಆರ್ಥಿಕ ದುಷ್ಪರಿಣಾಮಗಳಾಗಿವೆ. ಅದಕ್ಕೂ ಮೊದಲು ಭಾರತಕ್ಕೆ ರಷ್ಯಾ ಕಡಿಮೆ ದರದಲ್ಲಿ ಕಚ್ಚಾ ತೈಲ ಮಾರಾಟ ಮಾಡುತ್ತಿತ್ತು. ರಷ್ಯಾದಿಂದ ತೈಲ ಖರೀದಿಸಿ, ಅದನ್ನು ಐರೋಪ್ಯ ರಾಷ್ಟ್ರಗಳಿಗೆ ಮಾರಾಟ ಮಾಡಿದ್ದರಿಂದ ಸಾಕಷ್ಟು ಲಾಭವಾಗಿತ್ತು. ಆ ಲಾಭದ ಬಲದಿಂದ ಇಂದಿಗೂ ಪೆಟ್ರೋಲ್- ಡೀಸೆಲ್ ಬೆಲೆ ಏರಿಕೆ ಮಾಡದೆ ಮುಂದುವರಿಯುತ್ತಿದ್ದೇವೆ. ಯುದ್ಧ ನಡೆಯುತ್ತಿದ್ದಾಗಲೂ ನಮ್ಮ ದೇಶದಲ್ಲಿ ಇಂಧನ ತೈಲಕ್ಕೆ ಸಮಸ್ಯೆ ಆಗದಂತೆ ನೋಡಿಕೊಳ್ಳಲಾಗಿದೆ. ನಮ್ಮ ಪಕ್ಕದ ಪಾಕಿಸ್ತಾನದಲ್ಲಿ ಪೆಟ್ರೋಲ್ ದರ ದುಪ್ಪಟ್ಟು ಹೆಚ್ಚಳವಾಗಿದ್ದರೆ, ವಿಶ್ವದ ಮುಂದುವರಿದ ದೇಶಗಳಲ್ಲೂ ಕೂಡ ಇಂಧನ ದರ ಹೆಚ್ಚಿಸಲಾಗಿದೆ. ದೇಶವಾಸಿಗಳ ಹಿತ, ದೇಶದ ಹಿತ ಗಮನದಲ್ಲಿರಿಸಿಕೊಂಡು ಇಷ್ಟು ಸಮಯ ಇಂಧನ ತೈಲದ ದರ ಹೆಚ್ಚಳ ಮಾಡಲಾಗಿಲ್ಲ, ಆದರೆ ಎಷ್ಟು ಸಮಯ ಆ ಒತ್ತಡ ತಡೆಯಲು ಸಾಧ್ಯ? ಯುದ್ಧ ಸದ್ಯಕ್ಕೆ ನಿಂತಿದೆಯಾದರೂ, ಸಮಸ್ಯೆ ಇನ್ನೂ ಬಗೆಹರಿದಿಲ್ಲ, ಯುದ್ಧ ಸಮಯದಲ್ಲಿ ಏರಿಕೆಯಾದ ಕಚ್ಚಾತೈಲ ದರ ಇನ್ನೂ ಇಳಿಕೆಯಾಗಿಲ್ಲ, ಯುದ್ಧ ಪರಿಸ್ಥಿತಿ ಇನ್ನೂ ಸಂಪೂರ್ಣ ತಿಳಿಯಾಗಿಲ್ಲ, ಈಗಲೂ ಅಲ್ಲಲ್ಲಿ ಸಣ್ಣಪುಟ್ಟ ದಾಳಿಗಳು ನಡೆಯುತ್ತಲೇ ಇವೆ. ಯುದ್ಧ ಸಮಯದಲ್ಲಿ ಅರಬ್ ರಾಷ್ಟ್ರಗಳ ತೈಲ ನಿಕ್ಷೇಪಗಳ ಮೇಲೆ ದಾಳಿ ನಡೆದಿದೆ. ಹಾಗೆಯೇ ಇರಾನ್‌ನ ತೈಲ ನಿಕ್ಷೇಪಗಳ ಮೇಲೂ ದಾಳಿ ನಡೆದಿದೆ. ಹಾಗಾಗಿ ವಿಶ್ವದಾದ್ಯಂತ ತೈಲ ಉತ್ಪಾದನೆಯೇ ಕಡಿಮೆಯಾಗಿದೆ. ಅದಕ್ಕೆ ತಕ್ಕ ಪ್ರಮಾಣದಲ್ಲಿ ಬಳಕೆ ಕಡಿಮೆಯಾಗದಿದ್ದರೆ, ಆವಾಗ ಸಹಜವಾಗಿ ಕೊರತೆ ಆಗಲೇಬೇಕಲ್ಲ?

ಅದಕ್ಕಾಗಿಯೇ ಅನಗತ್ಯ ಬಳಕೆ ಕಡಿಮೆ ಮಾಡಿ ಎಂದು ಮೋದಿ ಹೇಳಿದ್ದು. ಅವರೆಲ್ಲೂ ಅಗತ್ಯ ಬಳಕೆ ಕಡಿಮೆ ಮಾಡಿ ಎಂದು ಹೇಳಿಲ್ಲ. ನರೇಂದ್ರ ಮೋದಿ ಹೀಗೆ ಹೇಳಿದ್ದಾರೆಂದರೆ ಅದರ ಹಿಂದೆ ಬಲವಾದ ಕಾರಣ ಇರಲೇಬೇಕು. ಅದಕ್ಕಾಗಿಯೇ ಅವರು ಜನರಿಗೆ ಈ ರೀತಿ ಕರೆ ನೀಡಿದ್ದಾರೆ. ಅವರು ಕರೆ ನೀಡಿದರೆ ಅದನ್ನು ಪಾಲಿಸುವ ದೊಡ್ಡ ಸಂಖ್ಯೆಯ ಜನ ದೇಶದಲ್ಲಿದ್ದಾರೆ. ಅದಕ್ಕೆ ಕಾರಣ ಅವರ ಮೇಲಿನ ನಂಬಿಕೆ.

ನರೇಂದ್ರ ಮೋದಿಗೆ ಯಾವುದೇ ಖಾಸಗಿ ಅಜೆಂಡಾಗಳಿಲ್ಲ ಎಂಬುದು ಜನರ ಅಚಲ ನಂಬಿಕೆ. ಅವರಿಗೆ ಕುಟುಂಬವಿಲ್ಲ, ಸ್ವಂತಕ್ಕಾಗಿ ಏನೂ ಮಾಡಿಕೊಂಡವರೂ ಅಲ್ಲ. 2002ರಿಂದ ಗುಜರಾತ್ ಮುಖ್ಯಮಂತ್ರಿಯಾಗಿ, 2014ರಿಂದ ದೇಶದ ಪ್ರಧಾನಿಯಾಗಿ ಅವರು ಮಾಡಿದ ಕೆಲಸವನ್ನು ಜನ ನೋಡಿದ್ದಾರೆ. ದೇಶದ ಹಿತಕ್ಕಾಗಿ ಮೋದಿಯವರು ಶ್ರಮಿಸುವುದನ್ನು ಕಂಡಿದ್ದಾರೆ. ಇಷ್ಟು ದೀರ್ಘಕಾಲ ರಾಜಕೀಯದಲ್ಲಿದ್ದು, ಉನ್ನತ



ಅಧಿಕಾರದಲ್ಲಿದ್ದು ಜನರ ನಂಬಿಕೆ ಉಳಿಸಿಕೊಂಡವರು ತುಂಬಾ ಕಡಿಮೆ. ನರೇಂದ್ರ ಮೋದಿಯವರು ಅಧಿಕಾರಕ್ಕೆ ಬರುವಾಗ ರಾಜಕಾರಣಿಗಳ ಮೇಲೆ ನಮ್ಮ ಜನ ಬಹುತೇಕ ನಂಬಿಕೆ ಕಳೆದುಕೊಂಡಿದ್ದರು. ರಾಜಕಾರಣಿಗಳು ಅಂದರೆ ಹೇಳುವುದು ಒಂದು, ಮಾಡುವುದು ಇನ್ನೊಂದು ಎಂಬಂತಾಗಿತ್ತು. ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಅಂತಹ ವ್ಯವಸ್ಥೆಯನ್ನು ಸರಿ ಮಾಡುವುದು ಸುಲಭದ ಕೆಲಸವೇನಲ್ಲ. ಆದರೂ 2014ರಿಂದ ಈವರೆಗೆ ಒಂದೇ ಒಂದು ಹಗರಣವಿಲ್ಲದೆ ಸರ್ಕಾರ ನಡೆಸುವ ಮೂಲಕ, ನಾನೂ ತಿನ್ನುವುದಿಲ್ಲ, ತಿನ್ನಲೂ ಬಿಡುವುದಿಲ್ಲ ಎಂಬ ಮಾತಿಗೆ ಬದ್ಧರಾಗಿ ನಡೆದುಕೊಂಡಿದ್ದಾರೆ. ಚುನಾವಣೆ ಸಮಯದಲ್ಲಿ ಜನರಿಗೆ ನೀಡಿದ ಭರವಸೆಗಳನ್ನು ಒಂದೊಂದಾಗಿ (ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ರದ್ದು, ರಾಮ ಮಂದಿರ ನಿರ್ಮಾಣ, ಒಂದು ದೇಶ ಒಂದು ಧ್ವಜ, ತ್ರಿವಳಿ ತಲಾಖ್ ರದ್ದು, ಕಡಿಮೆ ಕಾನೂನು- ಹೆಚ್ಚು ಕೆಲಸ) ಈಡೇರಿಸಿದ್ದಾರೆ. ಕೇವಲ ತಾವಷ್ಟೇ ಒಳ್ಳೆಯ ಆಡಳಿತ ನೀಡಿದ್ದಲ್ಲ, ಬದಲಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಬಿಜೆಪಿಯ ಸರ್ಕಾರ ಸ್ಥಾಪನೆಯಾದಾಗ ಅಲ್ಲಿ ಕೂಡ ಉತ್ತಮ ನಾಯಕರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿ, ಅವರಿಂದಲೂ ಒಳ್ಳೆಯ ಆಡಳಿತ ಕೊಡಿಸಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ, ಮಧ್ಯಪ್ರದೇಶ ಮತ್ತು ಗುಜರಾತ್ ಸರ್ಕಾರಗಳು ಈಗ ತುಂಬಾ ವರ್ಷದಿಂದ ಅತ್ಯುತ್ತಮ ಆಡಳಿತ ನೀಡುತ್ತಿದ್ದಾರೆ. ಇದೆಲ್ಲದರಿಂದಾಗಿ ಜನರಿಗೆ ರಾಜಕಾರಣಿಗಳ ಮೇಲೆ, ಆಳುವವರ ಮೇಲೆ ಮತ್ತೆ ನಂಬಿಕೆ ಮೂಡಲಾರಂಭಿಸಿದೆ. ಜನ ನಂಬಿಕೆ ಇಟ್ಟು ಆರಿಸಿದಾಗ, ಆ ನಂಬಿಕೆ ಉಳಿಸುವ, ಆ ಮೂಲಕ ಮತ್ತೆ ಮತ್ತೆ ಆಯ್ಕೆಯಾಗುವ ಸಂಪ್ರದಾಯಕ್ಕೆ ಮೋದಿ ನಾಂದಿ ಹಾಡಿದ್ದಾರೆ. ಅದು ಜನರ ವಿಶ್ವಾಸ ಗಳಿಸಲು ಯಶಸ್ವಿಯಾಗಿದೆ.

ಕ್ಲಿಷ್ಟ ಸನ್ನಿವೇಶದಲ್ಲಿ ತುಂಬಾ ಕಷ್ಟಕರ ನಿರ್ಧಾರಗಳನ್ನು ದೇಶದ ಹಿತದ ಕಾರಣಕ್ಕೆ ತೆಗೆದುಕೊಂಡಿದ್ದಾರೆ. ಭಾರತದ ಮೇಲೆ ದಾಳಿ ನಡೆದಾಗೆಲ್ಲ ಅದಕ್ಕೆ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. ವಿಶ್ವದಾದ್ಯಂತ ದೇಶಕ್ಕೊಂದು ಹೆಸರು, ಹೆಮ್ಮೆ ತಂದುಕೊಟ್ಟಿದ್ದಾರೆ. ಇದೆಲ್ಲವನ್ನೂ ನೋಡಿದ ದೇಶದ ಜನಕ್ಕೆ ನರೇಂದ್ರ ಮೋದಿಯವರ ಮೇಲೊಂದು ನಂಬಿಕೆ ಇದೆ. ಅದೇನೆಂದರೆ ದೇಶಕ್ಕೆ ಯಾವುದು ಹಿತವೊ ಅದನ್ನು ಅವರು ಮಾಡುತ್ತಾರೆ. ಅದರ ಹೊರತಾದ ಯಾವ ಉದ್ದೇಶವೂ ಅವರಲ್ಲಿಲ್ಲ ಎಂಬ ಅಚಲ ನಂಬಿಕೆ ಜನರಲ್ಲಿದೆ. ಆ ನಂಬಿಕೆಯನ್ನು ಅವರು ತಮ್ಮ ಶ್ರಮದ ಮೂಲಕ ಗಳಿಸಿಕೊಂಡಿದ್ದಾರೆ.

ತುಂಬಾ ಕಷ್ಟದ ಸನ್ನಿವೇಶದಲ್ಲಿ ನೇರವಾಗಿ ಜನರಲ್ಲಿ ಮನವಿ ಮಾಡುವ ಮೂಲಕ ಅದನ್ನು ಸಾಧಿಸಿದ್ದಾರೆ. ಉದಾಹರಣೆಗೆ ಪ್ರಧಾನಿಯಾದ ಮೊದಲ ಅವಧಿಯಲ್ಲಿ ಅಡುಗೆ ಅನಿಲಕ್ಕೆ ನೀಡಲಾಗುತ್ತಿದ್ದ ಸಬ್ಸಿಡಿ ನಿಲ್ಲಿಸುವ ಬದಲು, ಅವರು ಜನರೇ ಸ್ವಯಂ ಪ್ರೇರಿತರಾಗಿ ಸಬ್ಸಿಡಿ ತ್ಯಜಿಸುವಂತೆ ಕರೆ ನೀಡಿದ್ದರು. ಅವರು ಕರೆಯ ಹಿಂದಿನ ಉದ್ದೇಶ ಅರ್ಥಮಾಡಿಕೊಂಡ ಲಕ್ಷಾಂತರ ಜನ ಅಡುಗೆ ಅನಿಲ ಸಬ್ಸಿಡಿಯನ್ನು ತಾವಾಗೇ ತ್ಯಜಿಸಿದ್ದರು. ಅದರ ಬದಲು ಸರ್ಕಾರ ಸಬ್ಸಿಡಿ ರದ್ದುಪಡಿಸಿದ್ದರೆ ಅದು ಜನರ ವಿರೋಧಕ್ಕೆ ಕಾರಣವಾಗುತ್ತಿತ್ತು. ಕೊರೋನಾ ಸಂದರ್ಭದಲ್ಲಿ, ನೋಟು ರದ್ದತಿ ಸಮಯದಲ್ಲಿ ನರೇಂದ್ರ ಮೋದಿಯವರು ದೇಶವನ್ನು ಉದ್ದೇಶಿಸಿ ಮಾತನಾಡುವ ಮೂಲಕ ಜನರ ವಿಶ್ವಾಸ ಗೆದ್ದಿದ್ದರು.

ಆವಾಗಲೂ- ಈಗಲೂ ದೇಶದ ದೊಡ್ಡ ಸಂಖ್ಯೆಯ ಜನ ಅವರು ಹೇಳಿದ್ದನ್ನು ಅನುಸರಿಸಲು ಸಿದ್ಧರಿದ್ದಾರೆ ಎಂದರೆ ಅದಕ್ಕೆ ಕಾರಣ ಅವರ ಮೇಲಿನ ಭಕ್ತಿ, ಅಭಿಮಾನವಲ್ಲ. ಬದಲಾಗಿ ಅವರ ಮೇಲೆ ಜನರಿಗಿರುವ ವಿಶ್ವಾಸ, ನಂಬಿಕೆ. ಈಗಲೂ ಅವರೇನು ದಿನಕ್ಕೆ ಒಂದೇ ಹೊತ್ತು ಊಟ ಮಾಡಿ, ಬೆಳಗ್ಗೆದ್ದು ಚಾ ಕುಡಿಯಬೇಡಿ ಎಂದೇನೂ ಹೇಳಿಲ್ಲ. ಬದಲಾಗಿ ಅನಗತ್ಯ ಬಳಕೆಯನ್ನು ಅಥವಾ ಬೇಕಾಬಿಟ್ಟಿ ಬಳಕೆಯನ್ನು ಕಡಿಮೆ ಮಾಡೋಣ ಎಂದಷ್ಟೇ ಹೇಳಿದ್ದಾರೆ. ವಿದೇಶ ಪ್ರವಾಸಕ್ಕೆ ಹೋಗದಿದ್ದರೆ ಅದು ಪ್ರವಾಸವೇ ಅಲ್ಲ ಎಂದು ಕೆಲವರಿಗೆ ಅನ್ನಿಸಬಹುದು. ಆದರೆ ಆರು ತಿಂಗಳು ಅಥವಾ ಇದೊಂದು ವರ್ಷ ವಿದೇಶ ಪ್ರವಾಸ ಹೋಗದೆ ಇದ್ದರೆ ಜಗತ್ತೇನೂ ಮುಳುಗಿ ಹೋಗುವುದಿಲ್ಲ. ಅದರ ಬದಲು ನಮ್ಮ ದೇಶದ ಒಳಗೇ ಸಾಕಷ್ಟು ಸುಂದರ ಪ್ರವಾಸಿ ತಾಣಗಳಿವೆ, ಅವುಗಳನ್ನು ನೋಡಬಹುದು.

ನರೇಂದ್ರ ಮೋದಿಯವರು ಹೇಳಿದ್ದು ದೊಡ್ಡ ಸಂಖ್ಯೆಯ ಜನರಿಗೆ ಅರ್ಥವಾಗಿದೆ. ಅದರಲ್ಲಿ ಒಂದಷ್ಟು ಜನ ಅದನ್ನು ಪಾಲಿಸಿದರೂ ಅದು ದೊಡ್ಡ ಪರಿಣಾಮವನ್ನೇ ಬೀರುತ್ತದೆ. ಇನ್ನು ಮನೆ ಹೊತ್ತಿ ಉರಿಯುತ್ತಿರುವಾಗ ಅದರಲ್ಲೇ ಸಿಗರೇಟು ಹಚ್ಚಿಕೊಳ್ಳುವವರು ಇದ್ದೇ ಇರುತ್ತಾರೆ. ಅವರ ಬಗ್ಗೆ ಹೆಚ್ಚು ಗಮನಕೊಡುವ ಅಗತ್ಯವಿಲ್ಲ.

ಬಂಗಾರದ ಜಿಂಕೆ ಮತ್ತು ಆರ್ಥಿಕ ಆತ್ಮನಿಗ್ರಹ

ಚಿನ್ನವು ಬಹುಪಾಲು ಸಂದರ್ಭಗಳಲ್ಲಿ ಉತ್ಪಾದಕ ಆಸ್ತಿ ಅಲ್ಲ. ಅದರಿಂದ ಹೊಸ ಉತ್ಪಾದನೆ, ಉದ್ಯೋಗ ಅಥವಾ ಆರ್ಥಿಕ ಚಟುವಟಿಕೆ ಸೃಷ್ಟಿಯಾಗುವುದಿಲ್ಲ.

ಡಾ. ರವೀಶ ಎನ್. ಎಸ್.

ಭಾರತೀಯ ಸಂಸ್ಕೃತಿಯಲ್ಲಿ ಸಂಪತ್ತು ಎಂದರೆ ಕೇವಲ ವೈಯಕ್ತಿಕ ಐಶ್ವರ್ಯವಲ್ಲ; ಅದು 'ಲಕ್ಷ್ಮಿ'ಯ ರೂಪ. ಆದರೆ ಆ ಸಂಪತ್ತು ರಾಷ್ಟ್ರದ ಹಿತಾಸಕ್ತಿಗೆ ಪೂರಕವಾಗಿರಬೇಕು ಎಂಬುದೇ ನಮ್ಮ ಸನಾತನ ಆರ್ಥಿಕ ತತ್ವದ ಮೂಲಸಾರ. ರಾಮಾಯಣದಲ್ಲಿ ಸೀತಾದೇವಿಯು ಕಾಂಚನ ಮೃಗದ ಹೊಳಪಿಗೆ ಮರುಳಾಗಿ ಅದನ್ನು ಪಡೆಯಬೇಕೆಂದು ಬಯಸಿದಾಗ, ಸಾಕ್ಷಾತ್ ಶ್ರೀರಾಮನೇ ಅದರ ಬೆನ್ನತ್ತಿ ಅರಣ್ಯಕ್ಕೆ ತೆರಳಬೇಕಾಯಿತು. ಆ ಒಂದು ಕ್ಷಣಿಕ ಮೋಹವೇ ರಾಮಾಯಣದ ಮಹಾಸಂಗ್ರಾಮಕ್ಕೆ ನಾಂದಿಯಾಯಿತು. ಇಂದಿನ ಜಾಗತಿಕ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದರೆ, ಚಿನ್ನದ ಮೇಲಿನ ಅತಿಯಾದ ವ್ಯಾಮೋಹವೂ ಇದೇ ರೀತಿಯ ಆಧುನಿಕ 'ಮಾಯಾ ಜಿಂಕೆ'ಯಾಗಿದೆ. ಹೊಳೆಯುವ ಬಂಗಾರವು ವ್ಯಕ್ತಿಯ ಭದ್ರತೆಯ ಸಂಕೇತವಾಗಬಹುದು; ಆದರೆ ಅದರಿಂದಾಗಿ ದೇಶದ ಅಮೂಲ್ಯ ವಿದೇಶಿ ವಿನಿಮಯ ಸಂಪತ್ತು ಹೊರಹೋಗುವಾಗ, ಅದು ರಾಷ್ಟ್ರದ ಆರ್ಥಿಕ ಸ್ವಾವಲಂಬನೆಗೆ ಹೊಡೆತ ನೀಡುತ್ತದೆ.

ಅಯೋಧ್ಯಾಕಾಂಡದಲ್ಲಿಯೂ ಶ್ರೀರಾಮನು ಭರತನಿಗೆ ನೀಡುವ ಉಪದೇಶಗಳಲ್ಲಿ ಆರ್ಥಿಕ ನೈತಿಕತೆಯ ಸ್ಪಷ್ಟ ಚಿತ್ರಣ ಕಾಣಿಸುತ್ತದೆ. ಭರತನು ರಾಜ್ಯಭಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಶ್ರೀರಾಮನು ಅನೇಕ ಪ್ರಶ್ನೆಗಳ ಮೂಲಕ ರಾಜಧರ್ಮವನ್ನು ನೆನಪಿಸುತ್ತಾನೆ. ಅದರಲ್ಲಿ ಗೋಸಂಪತ್ತಿನ ರಕ್ಷಣೆಯ ಬಗ್ಗೆ ವಿಶೇಷವಾಗಿ ಪ್ರಶ್ನಿಸುತ್ತಾನೆ ''ಗೋವುಗಳನ್ನು ಸಮರ್ಪಕವಾಗಿ ಕಾಯಲಾಗುತ್ತಿದೆಯೇ? ಕೃಷಿ ಮತ್ತು ಪಶುಸಂಪತ್ತು ಸಮೃದ್ಧವಾಗಿದೆಯೇ?'' ಎಂಬ ಅರ್ಥದ ಉಪದೇಶ ನೀಡುತ್ತಾನೆ. ಇಲ್ಲಿ 'ಗೋವು' ಎನ್ನುವುದು ಕೇವಲ ಹಸು ಅಥವಾ ಪಶುಸಂಪತ್ತಿನ ಸೀಮಿತ ಅರ್ಥದಲ್ಲಿಲ್ಲ; ಅದು ಸಮಾಜಕ್ಕೆ ಉತ್ಪಾದನೆ ನೀಡುವ ಸಂಪನ್ಮೂಲಗಳ ಪ್ರತೀಕವಾಗಿದೆ. ಕೃಷಿ, ಪಶುಸಂಗೋಪನೆ, ಜಲಸಂಪತ್ತು, ವ್ಯಾಪಾರ, ಕೈಗಾರಿಕೆ, ಮಾನವ ಸಂಪನ್ಮೂಲ ಇವೆಲ್ಲವೂ ರಾಷ್ಟ್ರದ ಜೀವಂತ ಆರ್ಥಿಕ ಶಕ್ತಿಗಳಾಗಿವೆ ಎಂಬ ಸಂದೇಶವನ್ನು ರಾಮಾಯಣವು ಸಾಂಕೇತಿಕವಾಗಿ ನೀಡುತ್ತದೆ. ಅಂದರೆ ಶ್ರೀರಾಮನ ದೃಷ್ಟಿಯಲ್ಲಿ 'ಉತ್ಪಾದಕ ಆರ್ಥಿಕತೆ'ಯೇ ರಾಮರಾಜ್ಯದ ಮೂಲತತ್ವ. ಅನಾವಶ್ಯಕ ವೈಭವ, ಸಂಗ್ರಹ ಮತ್ತು ನಿರ್ಜೀವ ಸಂಪತ್ತಿಗಿಂತ ಸಮಾಜಕ್ಕೆ ಮೌಲ್ಯ ಸೃಷ್ಟಿಸುವ ಸಂಪನ್ಮೂಲಗಳೇ ನಿಜವಾದ ರಾಷ್ಟ್ರಸಂಪತ್ತು ಎಂಬುದನ್ನು ರಾಮಾಯಣವೇ ಬಹಳ ಸೂಕ್ಷ್ಮವಾಗಿ ಬೋಧಿಸುತ್ತದೆ.



ಆರ್ಥಿಕ ದೃಷ್ಟಿಯಿಂದ ನೋಡಿದರೆ, 'ಉತ್ಪಾದಕ ಆಸ್ತಿ' ಎಂದರೆ ಸಮಾಜ ಮತ್ತು ಆರ್ಥಿಕತೆಗೆ ನಿರಂತರ ಮೌಲ್ಯ ಸೃಷ್ಟಿಸುವ ಸಂಪನ್ಮೂಲಗಳು. ಕೃಷಿಭೂಮಿ ಆಹಾರ ಉತ್ಪಾದಿಸುತ್ತದೆ; ಕಾರ್ಖಾನೆಗಳು ವಸ್ತುಗಳನ್ನು ನಿರ್ಮಿಸುತ್ತವೆ; ಯಂತ್ರೋಪಕರಣಗಳು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ; ಶಿಕ್ಷಣ ಮತ್ತು ಕೌಶಲ್ಯ ಮಾನವ ಸಂಪನ್ಮೂಲವನ್ನು ಬಲಪಡಿಸುತ್ತವೆ; ತಂತ್ರಜ್ಞಾನ ಮತ್ತು ಮೂಲಸೌಕರ್ಯ ದೇಶದ ಸ್ಪರ್ಧಾತ್ಮಕತೆಯನ್ನು ವೃದ್ಧಿಸುತ್ತವೆ. ಇವುಗಳೆಲ್ಲವೂ ಉದ್ಯೋಗ ಸೃಷ್ಟಿಸಿ, ಆದಾಯ ಹೆಚ್ಚಿಸಿ, ರಾಷ್ಟ್ರದ ಜಿಡಿಪಿಗೆ ಕೊಡುಗೆ ನೀಡುವ ಉತ್ಪಾದಕ ಆಸ್ತಿಗಳಾಗಿವೆ. ಆದರೆ ಚಿನ್ನವು ಬಹುಪಾಲು ಸಂದರ್ಭಗಳಲ್ಲಿ ಉತ್ಪಾದಕ ಆಸ್ತಿ ಅಲ್ಲ. ಅದು ಲಾಕರ್‌ಗಳಲ್ಲಿ, ಬ್ಯಾಂಕ್‌ಗಳ ವಾಲ್ಟ್‌ಗಳಲ್ಲಿ ಅಥವಾ ಮನೆಯ ಅಲಮಾರಿಗಳಲ್ಲಿ 'ನಿರ್ಜೀವ ಆಸ್ತಿ'ಯಾಗಿ ಉಳಿಯುತ್ತದೆ. ಅದರಿಂದ ಹೊಸ ಉತ್ಪಾದನೆ, ಉದ್ಯೋಗ ಅಥವಾ ಆರ್ಥಿಕ ಚಟುವಟಿಕೆ ಸೃಷ್ಟಿಯಾಗುವುದಿಲ್ಲ. ಆದರೆ ಅದೇ ಹಣ ಕೈಗಾರಿಕೆ, ಕೃಷಿ, ಮೂಲಸೌಕರ್ಯ, ಸ್ಟಾರ್ಟ್ ಅಪ್‌ಗಳು ಅಥವಾ ಸಂಶೋಧನಾ ವಲಯಗಳಿಗೆ ಹರಿದರೆ, ಅದು ದೇಶದ ಆರ್ಥಿಕ ಚಕ್ರವನ್ನು ಚುರುಕುಗೊಳಿಸುತ್ತದೆ.

ಹಾಗಾದರೆ ಈ 'ಚಿನ್ನದ ಗಣಿತ'ವೇನು? ಅಂಕಿ-ಅಂಶಗಳನ್ನು ನೋಡಿದರೆ ಪರಿಸ್ಥಿತಿಯ ತೀವ್ರತೆ ಸ್ಪಷ್ಟವಾಗುತ್ತದೆ. ಭಾರತವು 2025-26ರ ಆರ್ಥಿಕ ವರ್ಷದಲ್ಲಿ ಸುಮಾರು 72 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಂಡಿದೆ. ಕಳೆದ ಮೂರು ವರ್ಷಗಳಲ್ಲಿ ಈ ಪ್ರಮಾಣ ದ್ವಿಗುಣಕ್ಕಿಂತ ಹೆಚ್ಚಾಗಿದೆ. ಬೆಳ್ಳಿಯ ಆಮದು ಸೇರಿಸಿದರೆ ಸುಮಾರು 84 ಬಿಲಿಯನ್ ಡಾಲರ್ ವಿದೇಶಿ ವಿನಿಮಯ ನಿಧಿ ಅಮೂಲ್ಯ ಲೋಹಗಳ ಖರೀದಿಗಾಗಿ ಹೊರಹೋಗಿದೆ. ಇದೇ ವೇಳೆ ಭಾರತವು ತನ್ನ ಅಗತ್ಯದ ಸುಮಾರು 88.6% ಕಚ್ಚಾ ತೈಲವನ್ನು ವಿದೇಶಗಳಿಂದಲೇ ಆಮದು ಮಾಡಿಕೊಳ್ಳುತ್ತಿದೆ. ಒಂದು ಕಡೆ ತೈಲಕ್ಕಾಗಿ ಡಾಲರ್ ಹೊರಹೋಗುತ್ತಿದೆ; ಮತ್ತೊಂದು ಕಡೆ ಚಿನ್ನ ಮತ್ತು ಬೆಳ್ಳಿಗಾಗಿ ಡಾಲರ್ ಹೊರ ಹೋಗುತ್ತಿದೆ. ಪರಿಣಾಮವಾಗಿ ರೂಪಾಯಿ ಮೌಲ್ಯ ದುರ್ಬಲಗೊಳ್ಳುತ್ತದೆ; ವಿದೇಶಿ ವಿನಿಮಯ ಮೀಸಲು ನಿಧಿ ಕರಗುತ್ತದೆ; ದೇಶದ ಆರ್ಥಿಕ ಸ್ವಾವಲಂಬನೆ ಒತ್ತಡಕ್ಕೆ ಸಿಲುಕುತ್ತದೆ.

ಭಾರತದ ಮತ್ತೊಂದು ದೊಡ್ಡ ಸವಾಲು ಎಂದರೆ ಜಾಗತಿಕ ಇಂಧನ ಅಸ್ಥಿರತೆ. ಪಶ್ಚಿಮ ಏಷ್ಯಾದ ಯುದ್ಧ, ಸಮುದ್ರ ಮಾರ್ಗಗಳಲ್ಲಿನ ಉದ್ವಿಗ್ನತೆ ಮತ್ತು ಜಾಗತಿಕ ಸರಬರಾಜು ಸರಪಳಿಯ ವ್ಯತ್ಯಯಗಳಿಂದ ತೈಲ ಸಾಗಣೆ ವೆಚ್ಚಗಳು ಭಾರೀ ಪ್ರಮಾಣದಲ್ಲಿ ಏರಿಕೆ ಕಂಡಿವೆ. ಯುದ್ಧಪೂರ್ವ ಸ್ಥಿತಿಗಿಂತ ಸಾಗಣೆ ಮತ್ತು ವಿಮೆ ದರಗಳು ಹಲವು ಪಟ್ಟು ಹೆಚ್ಚಾಗಿವೆ. ಇದರ ನೇರ ಪರಿಣಾಮವಾಗಿ ಭಾರತಕ್ಕೆ ಬರುವ ಪ್ರತಿಯೊಂದು ಬ್ಯಾರೆಲ್ ತೈಲದ ವೆಚ್ಚ ಹೆಚ್ಚುತ್ತಿದೆ. ತೈಲ ಬೆಲೆ ಏರಿದಾಗ ದೇಶದ ವಿದೇಶಿ ವಿನಿಮಯ ಮೀಸಲು ನಿಧಿ ನಿಧಾನವಾಗಿ ಕರಗತೊಡಗುತ್ತದೆ. ಈಗಾಗಲೇ ಭಾರತದ ವಿದೇಶಿ ವಿನಿಮಯ ಮೀಸಲು ಸುಮಾರು 690 ಬಿಲಿಯನ್ ಡಾಲರ್ ಮಟ್ಟಕ್ಕೆ ಇಳಿದಿದೆ.

ಜಾಗತಿಕ ಮಟ್ಟದಲ್ಲಿ ಇಂಧನ ಬಿಕ್ಕಟ್ಟು ಉಲ್ಬಣಗೊಂಡಿರುವ ಈ ಸಂದರ್ಭದಲ್ಲಿ ಅನೇಕ ರಾಷ್ಟ್ರಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಐತಿಹಾಸಿಕ ಮಟ್ಟದಲ್ಲಿ ಏರಿಕೆ ಕಂಡಿವೆ. ಕೆಲವು ಯುರೋಪಿನ ರಾಷ್ಟ್ರಗಳಲ್ಲಿ ಇಂಧನ ದರಗಳು ಜನಜೀವನವನ್ನು ನೇರವಾಗಿ ಅಸ್ತವ್ಯಸ್ತಗೊಳಿಸುವಷ್ಟು ದುಬಾರಿಯಾಗಿವೆ. ಆದರೆ ಭಾರತದಲ್ಲಿ ಇನ್ನೂ ಒಂದು ರೀತಿಯ ಆರ್ಥಿಕ ಸ್ವಾಭಾವಿಕತೆ ಮತ್ತು ಸ್ಥಿರತೆ ಕಾಣಿಸುತ್ತಿದೆ. ಇದರ ಹಿಂದೆ ದೇಶದ ಆರ್ಥಿಕ ನಿರ್ವಹಣೆ, ಪರ್ಯಾಯ ಖರೀದಿ ವ್ಯವಸ್ಥೆಗಳು, ತಂತ್ರಾತ್ಮಕ ಸಮತೋಲನ ಮತ್ತು ಆಂತರಿಕ ಮಾರುಕಟ್ಟೆಯ ಸಾಮರ್ಥ್ಯ ಪ್ರಮುಖ ಕಾರಣಗಳಾಗಿವೆ. ಆದರೆ ಈ ಸ್ಥಿರತೆ ಶಾಶ್ವತ ಭದ್ರತೆಯ ಸಂಕೇತವಲ್ಲ. ಆಮದು ಅವಲಂಬಿತ ರಾಷ್ಟ್ರವಾದ ಭಾರತವು ದೀರ್ಘಕಾಲ ಸುರಕ್ಷಿತವಾಗಿರಬೇಕಾದರೆ, ಜವಾಬ್ದಾರಿಯುತ ಉಪಭೋಗ ಮತ್ತು ಮಿತವ್ಯಯದ ಸಂಸ್ಕೃತಿ ಬಲವಾಗಬೇಕು.

ರೂಪಾಯಿ ದುರ್ಬಲಗೊಂಡಾಗ ಅದರ ಹೊರೆ ಸಾಮಾನ್ಯ ಜನರ ಮೇಲೆ ಬೀಳುತ್ತದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ರಸಗೊಬ್ಬರ, ಔಷಧೀಯ ಕಚ್ಚಾ ವಸ್ತುಗಳು ಮತ್ತು ಎಲೆಕ್ಟ್ರಾನಿಕ್ಸ್ ಸೇರಿದಂತೆ ಎಲ್ಲ ಆಮದು ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಇದೇ ಸಮಯದಲ್ಲಿ ಕೈಗಾರಿಕೆಗಳ ಉತ್ಪಾದನೆ ನಿಧಾನಗೊಳ್ಳುತ್ತದೆ; ಉದ್ಯೋಗ ಸೃಷ್ಟಿ ಕುಂಠಿತಗೊಳ್ಳುತ್ತದೆ ಮತ್ತು ಆರ್ಥಿಕ ಬೆಳವಣಿಗೆ ಮಂದಗತಿಯಾಗುತ್ತದೆ. ಅಂದರೆ ಒಂದೆಡೆ ಬೆಲೆ ಏರಿಕೆ, ಮತ್ತೊಂದೆಡೆ ಆರ್ಥಿಕತೆ ಕುಂಟುವುದು – ಈ ಎರಡೂ ಒಂದೇ ಸಮಯದಲ್ಲಿ ಸಂಭವಿಸುವ ಸ್ಥಿತಿಯೇ 'ಸ್ಟಾಗ್ಫ್ಲೇಶನ್' (Stagflation). ಸ್ಟಾಗ್ಫ್ಲೇಶನ್ ಯಾವುದೇ ದೇಶಕ್ಕೆ ಅತ್ಯಂತ ಅಪಾಯಕಾರಿ ಸ್ಥಿತಿ. ಏಕೆಂದರೆ ಬೆಲೆ ಏರಿಕೆಯನ್ನು ನಿಯಂತ್ರಿಸಲು ಬಡ್ಡಿದರ ಹೆಚ್ಚಿಸಿದರೆ ಕೈಗಾರಿಕೆಗಳಿಗೆ ಹೊಡೆತ ಬೀಳುತ್ತದೆ; ಉದ್ಯೋಗ ಕಡಿಮೆಯಾಗುತ್ತದೆ. ಮತ್ತೆ ಆರ್ಥಿಕತೆಯನ್ನು ಉತ್ತೇಜಿಸಲು ಬಡ್ಡಿದರ ಕಡಿಮೆ ಮಾಡಿದರೆ ಬೆಲೆ ಏರಿಕೆ ಮತ್ತಷ್ಟು ಜಾಸ್ತಿಯಾಗುತ್ತದೆ. ಹೀಗಾಗಿ ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಎರಡೂ ಸಂಕಷ್ಟಕ್ಕೆ ಸಿಲುಕುತ್ತವೆ. ಮಧ್ಯಮ ವರ್ಗದ ಉಳಿತಾಯ ಕರಗತೊಡಗುತ್ತದೆ; ಸಣ್ಣ ಉದ್ಯಮಿಗಳು ಸಾಲದ ಬಲೆಗೆ ಸಿಲುಕುತ್ತಾರೆ; ರೈತರ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ; ಯುವಕರಿಗೆ ಉದ್ಯೋಗ ಸಿಗುವುದು ಕಷ್ಟವಾಗುತ್ತದೆ.

ಆದರೆ ಇಲ್ಲಿ ಒಂದು ದೊಡ್ಡ ಪ್ರಶ್ನೆ ಉದ್ಭವಿಸುತ್ತದೆ. ಇಷ್ಟು ಸಂಪನ್ಮೂಲಗಳಿರುವ ಭಾರತ ಏಕೆ ಇನ್ನೂ ಆಮದುಗಳ ಹಿಂದೆ ಓಡುತ್ತಿದೆ? ನಮ್ಮದು ಅತಿದೊಡ್ಡ ಯುವ ಜನಸಂಖ್ಯೆಯ ರಾಷ್ಟ್ರ, ವೇಗವಾಗಿ ಬೆಳೆಯುತ್ತಿರುವ ಡಿಜಿಟಲ್ ಆರ್ಥಿಕತೆ ಹೊಂದಿರುವ ರಾಷ್ಟ್ರ. ನಮ್ಮ ಪೂರ್ವಜರು ಕಡಿಮೆ ಸಂಪನ್ಮೂಲಗಳಲ್ಲಿಯೇ ಜಗತ್ತನ್ನು ಆಕರ್ಷಿಸುವಂಥ ಆರ್ಥಿಕ ವ್ಯವಸ್ಥೆ ನಿರ್ಮಿಸಿದ್ದರು. ಆದರೆ ಇಂದು ನಾವು ಉತ್ಪಾದನೆಗಿಂತ ಉಪಭೋಗದತ್ತ ಹೆಚ್ಚು ಓಡುತ್ತಿದ್ದೇವೆ. ವಿದೇಶಿ ವಸ್ತುಗಳತ್ತ ಆಕರ್ಷಿತರಾಗುತ್ತಿದ್ದೇವೆ. ಉಳಿತಾಯವನ್ನು ಉತ್ಪಾದಕ ಹೂಡಿಕೆಗೆ ಹರಿಸುವ ಬದಲು ನಿರ್ಜೀವ ಸಂಗ್ರಹಗಳತ್ತ ತಿರುಗಿಸುತ್ತಿದ್ದೇವೆ. ಇದೇ ಆತಂಕದ ಸಂಗತಿ. ಚಾಣಕ್ಯ ತನ್ನ 'ಅರ್ಥಶಾಸ್ತ್ರ'ದಲ್ಲಿ ''ಕೋಶಮೂಲೋ ಹಿ ರಾಜಾ'' ಎಂದು ಹೇಳಿದ್ದಾನೆ. ಅಂದರೆ ರಾಷ್ಟ್ರದ ಶಕ್ತಿ ಅದರ 'ಕೋಶ'ದಲ್ಲಿ ಅಡಗಿದೆ. ಇಲ್ಲಿ 'ಕೋಶ' ಎಂದರೆ ಕೇವಲ ಹಣದ ಖಜಾನೆ ಮಾತ್ರವಲ್ಲ; ಧಾನ್ಯ, ಚಿನ್ನ, ಸಂಪತ್ತು, ಪಶುಸಂಪತ್ತು, ಜಲಸಂಪತ್ತು ಮತ್ತು ಸಂಕಷ್ಟಕಾಲದಲ್ಲಿ ರಾಷ್ಟ್ರವನ್ನು ರಕ್ಷಿಸುವ ಎಲ್ಲಾ ರೀತಿಯ ಸಂಗ್ರಹಗಳ ಸಮಗ್ರ ಅರ್ಥ. ಪ್ರಾಚೀನ ಭಾರತೀಯ ಆರ್ಥಿಕ ಚಿಂತನೆಗಳಲ್ಲಿ 'ಸಂಗ್ರಹ' ಎಂಬುದು ವೈಯಕ್ತಿಕ ವೈಭವಕ್ಕಾಗಿ ಅಲ್ಲ; ಸಮಾಜ ಮತ್ತು ರಾಷ್ಟ್ರದ ರಕ್ಷಣೆಗೆ ಅಗತ್ಯವಾದ ಆರ್ಥಿಕ ಭದ್ರತಾ ವ್ಯವಸ್ಥೆಯಾಗಿತ್ತು. ಇದೇ ಕಾರಣಕ್ಕೆ ಭಾರತವನ್ನು ಒಂದು ಕಾಲದಲ್ಲಿ 'ಸೋನೆ ಕಿ ಚಿಡಿಯಾ' ಎಂದು ಕರೆಯಲಾಗುತ್ತಿತ್ತು. ಭಾರತದ ಶ್ರೀಮಂತಿಕೆ ಕೇವಲ ಚಿನ್ನದ ಪ್ರಮಾಣದಲ್ಲಲ್ಲ; ಅದರ ಹಿಂದೆ ಇದ್ದ ಆರ್ಥಿಕ ಶಿಸ್ತು, ಉತ್ಪಾದನಾ ಸಾಮರ್ಥ್ಯ, ಸಂಗ್ರಹ ಮನೋಭಾವ ಮತ್ತು ಸಮೂಹ ಹಿತದ ಚಿಂತನೆಯಲ್ಲಿತ್ತು.

ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳು ಕೇವಲ ಆರಾಧನಾ ಕೇಂದ್ರಗಳಲ್ಲ; ಅವು ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. ಜನರು ತಮ್ಮ ಸಂಪತ್ತಿನ ಒಂದು ಭಾಗವನ್ನು ದೇವರಿಗೆ ಸಮರ್ಪಿಸುತ್ತಿದ್ದರು. ಅದರ ಹಿಂದಿನ ಭಾವನೆ ಕೇವಲ ಭಕ್ತಿ ಮಾತ್ರವಲ್ಲ; ರಾಷ್ಟ್ರ ಅಥವಾ ಸಮಾಜಕ್ಕೆ ಆಪತ್ತು ಬಂದಾಗ ಆ ಸಂಪತ್ತು ಸಾರ್ವಜನಿಕ ಹಿತಕ್ಕಾಗಿ ಉಪಯೋಗವಾಗಬೇಕು ಎಂಬ ಆರ್ಥಿಕ ಚಿಂತನೆಯೂ ಅಡಗಿತ್ತು. ಯುದ್ಧ, ಕ್ಷಾಮ, ಪ್ರವಾಹ, ಬರ ಹಾಗೂ ಇತರೆ ವಿಪತ್ತುಗಳ ಸಂದರ್ಭಗಳಲ್ಲಿ ದೇವಾಲಯಗಳ ಸಂಗ್ರಹಗಳನ್ನು ಕೃಷಿ, ಅನ್ನಸತ್ರ, ಶಿಕ್ಷಣ ಮತ್ತು ರಾಜ್ಯರಕ್ಷಣೆಗೆ ಬಳಸಲಾಗುತ್ತಿತ್ತು.

ಇಂದು ನಾವು ಮತ್ತೆ ಆ ಚಿಂತನೆಯತ್ತ ಮರಳಬೇಕಾದ ಕಾಲ ಬಂದಿದೆ. ಅನಗತ್ಯ ಚಿನ್ನದ ಖರೀದಿ ಕಡಿಮೆಯಾಗಬೇಕು; ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ ಸಿಗಬೇಕು; ಸಮೂಹ ವಾಹನ ಬಳಕೆ, ಇಂಧನ ಮಿತವ್ಯಯ ಮತ್ತು ಜವಾಬ್ದಾರಿಯುತ ಉಪಭೋಗ ಜೀವನಶೈಲಿಯ ಭಾಗವಾಗಬೇಕು. ಭಾರತವು ಕೇವಲ 10% ಚಿನ್ನದ ಆಮದು ಕಡಿಮೆ ಮಾಡಿದರೂ ವರ್ಷಕ್ಕೆ ಸುಮಾರು 7 ರಿಂದ 8 ಬಿಲಿಯನ್ ಡಾಲರ್ ವಿದೇಶಿ ವಿನಿಮಯವನ್ನು ಉಳಿಸಬಹುದು. ಇಂಧನ ಬಳಕೆಯಲ್ಲಿ ಕೇವಲ 5% ಮಿತವ್ಯಯ ಸಾಧಿಸಿದರೂ ಸುಮಾರು 10 ರಿಂದ 12 ಬಿಲಿಯನ್ ಡಾಲರ್ ಮೌಲ್ಯದ ತೈಲ ಆಮದು ವೆಚ್ಚವನ್ನು ತಗ್ಗಿಸಬಹುದು. ಅಂದರೆ ಸಾಮಾನ್ಯ ನಾಗರಿಕರ ಸಣ್ಣ ಮಟ್ಟದ ಆತ್ಮನಿಗ್ರಹವೇ ರಾಷ್ಟ್ರದ ಮಟ್ಟದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಆರ್ಥಿಕ ಭದ್ರತೆಯಾಗಿ ಪರಿವರ್ತನೆಗೊಳ್ಳಬಹುದು. ನಿಜವಾದ ಶ್ರೀಮಂತಿಕೆ ದೇಹದ ಮೇಲೆ ಧರಿಸುವ ಬಂಗಾರದಲ್ಲಿಲ್ಲ; ಅದು ದೇಶದ ಶಿಕ್ಷಣ, ತಂತ್ರಜ್ಞಾನ, ಸಂಶೋಧನೆ, ಮಾನವ ಸಂಪನ್ಮೂಲ ಮತ್ತು ಆರ್ಥಿಕ ಸ್ಥಿರತೆಯಲ್ಲಿ ಅಡಗಿದೆ. ರಾಮಾಯಣದ ಮಾಯಾ ಜಿಂಕೆಯಂತೆ ಬಂಗಾರದ ಹೊಳಪು ಕ್ಷಣಿಕ ಆಕರ್ಷಣೆಯಾಗಿರಬಹುದು, ಆದರೆ ಅದರ ಬೆನ್ನತ್ತಿ ಹೋದರೆ ರಾಷ್ಟ್ರದ ಆರ್ಥಿಕ ಶಕ್ತಿಯೇ ಅಪಹರಣಕ್ಕೊಳಗಾಗುವ ಅಪಾಯವಿದೆ. ಆದ್ದರಿಂದ ಇಂದಿನ ಕಾಲಘಟ್ಟದಲ್ಲಿ 'ಆರ್ಥಿಕ ಆತ್ಮನಿಗ್ರಹ'ವೇ ದೇಶಭಕ್ತಿಯ ಹೊಸ ರೂಪವಾಗಿದೆ. ವೈಯಕ್ತಿಕ ವ್ಯಾಮೋಹಕ್ಕಿಂತ ರಾಷ್ಟ್ರೀಯ ಹಿತಾಸಕ್ತಿಯನ್ನು ಪರಮೋಚ್ಚ ಆಭರಣವನ್ನಾಗಿ ಧರಿಸಿದಾಗ ಮಾತ್ರ, ಭಾರತವು 2047ರ 'ವಿಕಸಿತ ಭಾರತ'ದ ಕನಸನ್ನು ನನಸಾಗಿಸಿ ನಿಜವಾದ ಅರ್ಥದಲ್ಲಿ 'ವಿಶ್ವಗುರು'ವಾಗಲು ಸಾಧ್ಯ.

ಸಣ್ಣ ಪರಿವರ್ತನೆಗಳೇ ದೇಶಕ್ಕೆ ನೀಡುವ ಕೊಡುಗೆ

ಪದಸಂಚಲನ
ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಇರಾನ್ ವಿರುದ್ಧದ ಅಮೇರಿಕಾ ಬೆಂಬಲಿತ ಯುದ್ಧದ ಪರಿಣಾಮ ಈಗ ಭಾರತಕ್ಕೂ ತಟ್ಟುತ್ತಿದೆ. ವಿಶ್ವದ ಎಲ್ಲೇ ಏನೇ ಆದರೂ ಜಾಗತೀಕರಣದ ಪರಿಣಾಮವಾಗಿ ನಮ್ಮ ದೈನಂದಿನ ಜೀವನದ ಮೇಲೂ ಅದು ಪರಿಣಾಮ ಬೀರುತ್ತದೆ. ಹೀಗಿರುವಾಗ ಕಳೆದ ಅನೇಕ ತಿಂಗಳಿನಿಂದ ಮುಂದುವರೆದಿರುವ ವಿಶ್ವಮಟ್ಟದ ಬಿಕ್ಕಟ್ಟು ನಮ್ಮನ್ನು ತಟ್ಟದಿರಲು ಹೇಗೆ ಸಾಧ್ಯ? ಆದರೂ ಇಲ್ಲಿಯವರೆಗೂ ಕೇಂದ್ರ ಸರ್ಕಾರ ಅವನ್ನೆಲ್ಲ ತುಂಬ ಚೆನ್ನಾಗಿಯೇ ನಿರ್ವಹಿಸುತ್ತಾ ಬಂದಿದೆ. ಈಗಾಗಲೇ ಅದೆಷ್ಟೋ ದೇಶಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತುಟ್ಟಿಯಾಗಿವೆ. ತಿಂಗಳುಗಳ ಹಿಂದೆಯೇ ಅನೇಕ ದೇಶಗಳು ಲಾಕ್ ಡೌನ್‌ನಂಥ ಸಂದರ್ಭವನ್ನು ಎದುರಿಸುತ್ತಿವೆ. ಆದರೆ ಇಂದಿನವರೆಗೂ ಭಾರತ ಮಾತ್ರ ಯಾವ ದಿಗ್ಬಂಧನವನ್ನೂ ಹಾಕದೆಯೇ ಜನರನ್ನು ಸ್ವತಂತ್ರವಾಗಿ ತಮ್ಮ ಜೀವನ ನಿರ್ವಹಣೆಯ ಆಯ್ಕೆಯೊಂದಿಗೆ ಬಿಟ್ಟುಬಿಟ್ಟಿದೆ. ಕೊರೋನಾ ಕಾಲದ ಸಂಕಟಗಳು ಮತ್ತೆ ಬರಬಹುದೆಂಬ ಊಹೆ ಇಡೀ ಪ್ರಪಂಚದಲ್ಲಿ ಹರಿದಾಡುತ್ತಿದೆ. ಯಾವಾಗ ಯುದ್ಧದ ಬಿಕ್ಕಟ್ಟು ಬಗೆಹರೀದೀತು ಎಂದು ಎಲ್ಲರೂ ಕಾಯುತ್ತಿದ್ದಾರೆ. ಆದರೆ ಅದು ಮುಗಿಯುತ್ತಲೇ ಇಲ್ಲ.

ಇಷ್ಟೆಲ್ಲ ನಡೆಯುತ್ತಿದ್ದರೂ ಭಾರತ ಮಾತ್ರ ಒಂದೇ ಒಂದು ರೂಪಾಯಿಯನ್ನೂ ಏರಿಸದೇ ಇಂಧನ ತೈಲದ ಪೂರೈಕೆಯನ್ನು ತೂಗಿಸಿಕೊಂಡು ಹೋಗುತ್ತಿದೆ. ಅನಿವಾರ್ಯವಾಗಿ ಏರಿಸಬೇಕಾಗಿ ಬಂದೊದಗಿದ್ದರೂ, ಕೇಂದ್ರ ಸರ್ಕಾರ ತನ್ನ ಪಾಲಿನ ಅಬಕಾರಿ ಸುಂಕ ಇಳಿಸುವ ಮೂಲಕ ತೈಲಬೆಲೆಯಲ್ಲಿ ಸ್ಥಿರತೆಯಿರುವಂತೆ ನೋಡಿಕೊಳ್ಳುತ್ತಿದೆ. ಆದರೂ ಹೊರ್ಮುಜ್ ಜಲಸಂಧಿಯ ಮೇಲಿನ ಇರಾನ್ ದೇಶದ ನಿಯಂತ್ರಣದಿಂದಾಗಿ ತೈಲಪೂರೈಕೆಯಲ್ಲಿ ವಿಪರೀತ ವ್ಯತ್ಯಯವುಂಟಾಗುತ್ತಿದೆ. ಇಂಧನ ತೈಲಗಳಿಗಾಗಿ ವಿದೇಶಗಳನ್ನೇ ಅವಲಂಬಿಸಬೇಕಾದ ಭಾರತವು ತನ್ನ ನೂರನಲವತ್ತು ಕೋಟಿ ಜನಸಂಖ್ಯೆಗೆ ಬೇಕಾದಷ್ಟು ಇಂಧನತೈಲವನ್ನು ತರುವುದಾದರೂ ಎಲ್ಲಿಂದ? ಎಷ್ಟೇದುಡ್ಡು ಕೊಟ್ಟರೂ ತೈಲವನ್ನು ತರುವ ಮಾರ್ಗವನ್ನೇ ಮುಚ್ಚಿದ ಮೇಲೆ ಇಂಧನತೈಲವನ್ನು ಪಡೆದುಕೊಳ್ಳುವ ಮಾರ್ಗ ಯಾರಿಗೂ ತಿಳಿದಿಲ್ಲ. ಹೀಗಿರುವಾಗ ಭಾರತಕ್ಕೆ ಇಂಧನತೈಲದ ಕೊರತೆ ಉಂಟಾಗುತ್ತಿರುವುದನ್ನು ತಪ್ಪಾಗಿ ಅರ್ಥೈಸುತ್ತಾ ಭಾರತದ ಆರ್ಥಿಕಸ್ಥಿತಿ ಹದಗೆಟ್ಟಿದೆ ಎಂದು ಅಪಪ್ರಚಾರ ಮಾಡುತ್ತ, ಭಾರತೀಯರನ್ನು ಮಾನಸಿಕವಾಗಿ ದುರ್ಬಲರನ್ನಾಗಿಸುವವರ ಉದ್ದೇಶ ಏನು ಎಂಬುದು ಯಾರಿಗೂ ತಿಳಿಯದ್ದೇನಲ್ಲ.

ಬದಲಾದ ಸನ್ನಿವೇಶದಲ್ಲಿ ದೇಶದ ಪ್ರಧಾನಿಗಳು ದೇಶದ ಜನತೆಗೆ ಸರಳ ಜೀವನವನ್ನು ನಡೆಸಲು ಕರೆ ಕೊಟ್ಟಿದ್ದಾರೆ. ವಿದೇಶೀ ವಿನಿಮಯದ ಮೇಲೆ ಪ್ರಭಾವ ಬೀರುವ ಚಿನ್ನದ ಖರೀದಿ, ವಿದೇಶ ಪ್ರವಾಸ ಮೊದಲಾದವುಗಳ ಮೇಲೆ ಸ್ವಯಂನಿಯಂತ್ರಣ ಹೇರಿಕೊಳ್ಳಲು ಅವರು ಸಲಹೆ ನೀಡಿದ್ದಾರೆ. ಆಹಾರತೈಲದ ಉಪಯೋಗವನ್ನು ಕಡಿತಗೊಳಿಸುವುದಕ್ಕೆ ತಿಳಿಸುತ್ತಾ, ಸಾರ್ವಜನಿಕ ಸಾರಿಗೆಗಳ ಬಳಕೆಯನ್ನು ಹೆಚ್ಚಿಸಲು ವಿನಂತಿಸಿಕೊಂಡಿದ್ದಾರೆ. ಒಬ್ಬ ಪ್ರಧಾನಿಯಾಗಿ, ಮುಂದಿನ ದಿನಗಳ ಆಪತ್ತನ್ನು ಎದುರಿಸಲು ತನ್ನ ದೇಶದ ಜನರಿಗೆ ಸ್ವಯಂ ನಿಯಂತ್ರಣ ಹೇರಿಕೊಳ್ಳಲು ಮನವಿ ಮಾಡಿಕೊಂಡಿರುವುದು ಎಲ್ಲ ದೇಶಭಕ್ತರೂ ಸ್ವಾಗತಿಸುವ ಅಂಶವೇ ಆಗಿದೆ. ಅವರೆಲ್ಲೂ ಯಾವುದನ್ನೂ ಮಾಡುವುದು ಬೇಡವೆಂದು ಆದೇಶವನ್ನು ನೀಡಿಲ್ಲ. ಆದರೆ ಕೊರೋನಾ ಸಂದರ್ಭದಲ್ಲಿ ಮಾಡಿದಂತೆ ಸರ್ಕಾರವೇ ಎಲ್ಲವನ್ನೂ ನಿಷೇಧಿಸಿ, ನಿಯಂತ್ರಣ ಹೇರುವ ಸಂದರ್ಭ ಬರದೇ ಇರಲಿ ಎಂಬ ಆಶಯ ಅವರ ಮಾತಿನಲ್ಲಿ ಧ್ವನಿಸುತ್ತದೆ. ಪ್ರಪಂಚದ ಎರಡನೆಯ ಅತಿ ಹೆಚ್ಚು ಜನಸಂಖ್ಯೆಯ ದೇಶದ ಜನರುಳ್ಳ ಭಾರತವು ಮನಸ್ಸು ಮಾಡಿದರೆ, ಸ್ವಯಂ ನಿಯಂತ್ರಣ ಹೇರಿಕೊಂಡರೆ ಮುಂದಿನ ಆಪತ್ತನ್ನು ಸುಲಭವಾಗಿ ಎದುರಿಸಬಹುದಾಗಿದೆ. ಯಾಕೆಂದರೆ, ಭಾರತವೀಗ ಎಲ್ಲ ರೀತಿಯ ಪರ್ಯಾಯ ವ್ಯವಸ್ಥೆಗೂ ಈ ಹಿಂದಿಗಿಂತ ಹೆಚ್ಚು ತೆರೆದುಕೊಂಡಿದೆ. ಅರ್ಥಾತ್, ಪರ್ಯಾಯ ಇಂಧನ ಮೂಲಗಳ ಬಳಕೆಯ ಮೂಲಕ ಇಂಧನ ತೈಲದ ಮೇಲಿನ ಅವಲಂಬನೆಯನ್ನು ಆದಷ್ಟು ಕಡಿಮೆ ಮಾಡುತ್ತಲೇ ಬಂದಿದೆ. ಈಗಾಗಲೇ ಪೆಟ್ರೋಲ್ ಹಾಗೂ ಡೀಸೆಲ್‌ನಲ್ಲಿ ಇಪ್ಪತ್ತು ಪ್ರತಿಶತ ಇಥೆನಾಲ್ ಮಿಶ್ರಣವನ್ನು ಭಾರತವು ಅನುಸರಿಸುತ್ತಿದೆ. ಆರಂಭದಲ್ಲಿ ಇದು ಪೂರ್ವಸಿದ್ಧತೆಯಿಲ್ಲದೇ ಕೈಗೊಂಡ ತಪ್ಪು ನಿರ್ಣಯವೆಂಬ ಅಭಿಪ್ರಾಯವನ್ನು ಮೂಡಿಸಲು ಯತ್ನಿಸಲಾಯಿತಾದರೂ, ಈಗಿನ ಸ್ಥಿತಿಯಲ್ಲಿ ಈ ನಿರ್ಣಯ ಅದೆಷ್ಟು ಮುಖ್ಯವಾದುದು ಎಂಬುದು ಈಗ ಅರಿವಿಗೆ ಬರುತ್ತಿದೆ.

ಇಥೆನಾಲ್ ಬಳಕೆಯಿಂದಾಗಿ ನಿತ್ಯವೂ ಇಪ್ಪತ್ತು ಪ್ರತಿಶತ ಇಂಧನತೈಲದ ನೈರ್ಭರ್ಯ ಕಡಿಮೆಯಾಗಿದೆ. ಇಥೆನಾಲ್ ಉತ್ಪಾದನೆ ಕೂಡ ಹೆಚ್ಚಿನ ಪ್ರಮಾಣದಲ್ಲಿ ಭಾರತದಲ್ಲಿಯೇ ಮುಂದಿನ ದಿನಗಳಲ್ಲಿ ಆಗಬಹುದು. ಈ ನಡುವೆ ಕೇಂದ್ರಸರ್ಕಾರ ಕಳೆದ ಒಂದು ದಶಕದಲ್ಲಿ ಸೋಲಾರ್ ವಿದ್ಯುತ್ತಿನ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚುವಂತೆ ಮಾಡಿದೆ. ಪೀ.ಎಲ್.ಐ ಯೋಜನೆಯ ಮೂಲಕ 24,000 ಕೋಟಿಗಳಷ್ಟು ಹೂಡಿಕೆಯ ದ್ವಾರಾ ಸೋಲಾರ್ ಪ್ಯಾನೆಲ್, ಸೆಲ್ ಮೊದಲಾದವುಗಳ ಉತ್ಪಾದನೆಗೆ ಒತ್ತು ನೀಡಿದೆ. ಸೋಲಾರ್ ವಿದ್ಯುತ್ತಿನ ಉತ್ಪಾದನೆಯ ಪ್ರಮಾಣ ಕೂಡ 2014ರಲ್ಲಿ ಇದ್ದ 2.3 ಗಿಗಾವ್ಯಾಟ್‌ನಿಂದ 2025ರಲ್ಲಿ 100 ಗಿಗಾವ್ಯಾಟ್‌ನಷ್ಟು ಹೆಚ್ಚಿದೆ. ಹೀಗೆ ಪರ್ಯಾಯ ಇಂಧನ ಮೂಲಗಳ ಬಳಕೆಯಲ್ಲಿನ ಹೆಚ್ಚಳವನ್ನು ಸಾಧಿಸುವ ಮೂಲಕ ಆತ್ಮನಿರ್ಭರವಾಗಲು ಭಾರತವು ಈ ಹಿಂದಿಗಿಂತ ಹೆಚ್ಚು ಶ್ರಮಿಸುತ್ತಿದೆ. ಒಂದು ವೇಳೆ ಭಾರತವು ಒಂದು ದಶಕದ ಹಿಂದೆ ಇದ್ದ ಸ್ಥಿತಿಯಲ್ಲೇ ಇದ್ದಿದ್ದರೆ ಇಂದು ಇಷ್ಟು ನಿರಾತಂಕವಾಗಿ ಇರಲು ಸಾಧ್ಯವಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ನಾಗರಿಕರಾಗಿ ನಮ್ಮದೂ ಕರ್ತವ್ಯವಿದೆ. ಸರ್ಕಾರದ ವೇಗಕ್ಕೆ ಪ್ರಜೆಗಳೂ ಕೂಡ ತಮ್ಮ ಬಳಕೆ ಮತ್ತು ವ್ಯಯಕ್ಕೆ ಕಡಿವಾಣ ಹಾಕಿಕೊಳ್ಳಬೇಕಾಗುತ್ತದೆ. ಎಲ್ಲರ ಅಗತ್ಯವನ್ನು ತೀರಿಸುವ ಸಾಮರ್ಥ್ಯವಷ್ಟೇ ಪ್ರಕೃತಿಗಿದೆಯೇ ಹೊರತೂ, ಎಲ್ಲರ ಬಯಕೆಗಳನ್ನು ಪೂರೈಸುವಷ್ಟಲ್ಲ ಎಂಬ ಮಾತನ್ನು ನಾವೆಲ್ಲರೂ ನೆನಪಿಸಿಕೊಳ್ಳುವ ಸಂದರ್ಭ ಮತ್ತೆ ಹುಟ್ಟಿಕೊಂಡಿದೆ.

ದೇಶವನ್ನು ಭೋಗಭೂಮಿ ಎಂದು ಬಗೆಯುವುದು ನಮ್ಮ ಸಂಸ್ಕೃತಿಯಲ್ಲ. ನಾವು ಪ್ರಕೃತಿಯ ಆರಾಧಕರು. **ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ** ಎಂಬ ಗೀತಾವಾಕ್ಯದಂತೆ, ಪ್ರಕೃತಿಯನ್ನು ಉಳಿಸಿಕೊಳ್ಳುತ್ತಾ ಅದನ್ನು ಬಳಸಿಕೊಳ್ಳುವ ದಾಯಿತ್ವ ನಮ್ಮ ಮೇಲಿದೆ. ಬಳಸುವವನಿಗೆ ಉಳಿಸುವ ದಾಯಿತ್ವವು ಕೂಡ ಜೊತೆಯಲ್ಲೇ ಬರುತ್ತದೆ. ಇದನ್ನೇ ನಾಗರಿಕಪ್ರಜ್ಞೆ ಎನ್ನಲಾಗುತ್ತದೆ. ಜಾಗತಿಕ ಬಿಕ್ಕಟ್ಟು ಒದಗಿದ್ದು ಕೂಡ ವಿಶ್ವದ ನಾಯಕರ ದುರಾಸೆ ಮತ್ತು ಪ್ರತಿಷ್ಠೆಯ ಕಾರಣಕ್ಕೆ ಎಂಬುದು ನಿಜವಾದರೂ, ಈ ಸ್ಥಿತಿಯನ್ನು ದಾಟಲು ಮಾತ್ರ ನಾವೆಲ್ಲರೂ ಬಹಳ ಕಷ್ಟಪಡಬೇಕಾಗುತ್ತದೆ. **ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಾಃ** ಎಂಬ ಮಾತಿನಂತೆ ಯಾವುದೋ ದೇಶಗಳು ಯಾವುದೋ ಲಾಭಕ್ಕಾಗಿ ಮಾಡುವ ಯುದ್ಧಗಳಿಂದಾಗಿ ಭಾರತದಂಥ ಸಾತ್ತ್ವಿಕ ದೇಶಕ್ಕೂ ಸಂಕಟ ಒದಗುತ್ತಿದೆ. ಇದರ ತೀವ್ರತೆಯನ್ನು ನಾಗರಿಕರೆಲ್ಲರೂ ಸ್ವನಿಯಂತ್ರಣವೆಂಬ ತಪಸ್ಸಿನ ಮೂಲಕ ಮಾತ್ರ ಹಾದುಬರಲು ಸಾಧ್ಯವಿದೆ. ಹಾಗೆಂದೇ ಪ್ರಧಾನಿಯವರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಒಂದು ವರ್ಷ ಚಿನ್ನವನ್ನು ಕೊಳ್ಳಲೇಬಾರದು ಎಂದಾಗಲೀ, ಸ್ವವಾಹನವನ್ನು ಬಳಸಲೇಬಾರದು ಎಂದಾಗಲೀ ಅವರು ಸುಗ್ರೀವಾಜ್ಞೆ ಹೊರಡಿಸಿಲ್ಲ. ಬದಲಿಗೆ ತಾನು, ತನ್ನ ಸಂಸಾರವೆಂಬ ವ್ಯಷ್ಟಿಸ್ತರದಿಂದ ದೇಶವೆಂಬ ಸಮಷ್ಟಿ ಸ್ತರಕ್ಕೆ ನಮ್ಮ ಆಲೋಚನೆಗಳನ್ನು ಮತ್ತು ಜೀವನಸ್ತರವನ್ನು ಎತ್ತರಿಸಿಕೊಳ್ಳಲು ಅವರು ಕರೆಕೊಟ್ಟಿದ್ದಾರೆ ಅಷ್ಟೇ. ದೇಶಪ್ರೇಮಿಗಳಿಗೆ ಇದೊಂದು ಅವಕಾಶವೂ ಹೌದು. ವಸ್ತುತಃ ಅವರು ಕರೆಕೊಟ್ಟಿದ್ದು ಕೂಡ ದೇಶಭಕ್ತರಿಗೆ ಮಾತ್ರ. ಈ ದೇಶ ನನ್ನದು, ಈ ದೇಶದ ಋಣ ನನಗಿದೆ ಎಂದು ಭಾವಿಸುವವರು ಈಗ ಸ್ವನಿಯಂತ್ರಣದ ಮೂಲಕ ದೇಶದ ಸ್ಥಿರತೆಗೆ ಕೊಡುಗೆಯನ್ನು ಸಲ್ಲಿಸಲು ಇದೊಂದು ಸುವರ್ಣಾವಕಾಶ. ಅದು ಬಿಟ್ಟು ಹೆಸರಿನಲ್ಲಿ ಮಾತ್ರ ಗಾಂಧಿಯನ್ನು ಜೋಡಿಸಿಕೊಂಡು, ಚಿಂತನೆ ಮತ್ತು ಜೀವನಶೈಲಿಯಲ್ಲಿ ಸ್ವಾರ್ಥಿಗಳಾದರೆ ಏನುಪಯೋಗ?

ಒಂದು ವರ್ಷ ವಿದೇಶ ಪ್ರವಾಸ ಮಾಡುವ ಬದಲು ಭಾರತದಲ್ಲಿಯೇ ಇರುವ ಐತಿಹಾಸಿಕ ಸ್ಥಳಗಳಿಗೆ ಭೇಟಿ ಕೊಡಬಹುದು. ಆ ಮೂಲಕ ಭಾರತವರ್ಷದ ಭವ್ಯ ಇತಿಹಾಸವನ್ನು ಅರಿತಂತೆಯೂ ಆಗುತ್ತದೆ.

ವಿದೇಶೀ ವಿನಿಮಯದ ಉಳಿಕೆಯೂ ಆಗುತ್ತದೆ. ಜೀವನಕ್ಕೊಂದು ಪ್ರೇರಣೆಯೂ ಸಿಗುತ್ತದೆ. ಅದೇ ರೀತಿ ಸಾರ್ವಜನಿಕ ಸಾರಿಗೆ ಬಳಸುವುದು, ತೈಲವನ್ನು ಕಡಿಮೆ ಉಪಯೋಗಿಸುವುದು ಮೊದಲಾದ ಸಣ್ಣ ಸಣ್ಣ ಪರಿವರ್ತನೆಯ ಮೂಲಕವೂ ದೇಶಕ್ಕೆ ನಾವು ಕೊಡುಗೆಯನ್ನು ಸಲ್ಲಿಸಬಹುದು. ಉಳಿದಂತೆ ರಾಜಕೀಯ ದೃಷ್ಟಿಯಿಂದ ಬೇಕಾದಷ್ಟು ಕುತರ್ಕಗಳನ್ನೂ, ಆಕ್ಷೇಪಗಳನ್ನೂ ಮಾಡುತ್ತಾ ಕಾಲಹರಣ ಮಾಡಬಹುದು. ಆ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಆದರೆ ದೇಶ ಸಂಕಟದಲ್ಲಿದ್ದಾಗ ನೀವು ಯಾವ ರೀತಿ ದೇಶಕ್ಕೆ ಪೂರಕವಾಗಿ ಬದುಕಿದ್ದಿರಿ ಎಂಬುದು ಇತಿಹಾಸದಲ್ಲಿ ದಾಖಲಾಗುತ್ತದೆ. ದೇಶಕ್ಕಾಗಿ ಸರ್ವಸ್ವವನ್ನೇ ಕೊಟ್ಟ, ಬಲಿದಾನವನ್ನೇ ಮಾಡಿದವರ ಹೆಸರನ್ನು ಕೇಳಿರುವ ನಮಗೀಗ ದೇಶಕ್ಕಾಗಿ ಸಣ್ಣ ಪರಿವರ್ತನೆಯನ್ನು ಮಾಡಿಕೊಳ್ಳಲು ಸಾಧ್ಯವಿಲ್ಲವೇ? ಖಂಡಿತ ಸಾಧ್ಯವಿದೆ. ಪ್ರಯತ್ನಿಸೋಣ.

ಉದಯನಿಧಿ ಹೇಳಿಕೆಗೆ ವ್ಯಾಪಕ ಆಕ್ರೋಶ

ಸನಾತನ ಧರ್ಮ ಬಗ್ಗೆ ಉದ್ಧಟತನದ ಮಾತು

ಚೆನ್ನೈ: 2023 ಸೆಪ್ಟೆಂಬರ್‌ನಲ್ಲಿ ಹಿಂದು ಧರ್ಮವನ್ನು ಮಲೇರಿಯಾ, ಡೆಂಗ್ಯೂಗೆ ಹೋಲಿಸಿ ಅಸಂಬದ್ಧವಾಗಿ ಅವಹೇಳನಮಾಡುವಮುಖೇನಉದ್ಧಟತನಮೆರೆದಿದ್ದ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್‌ಗೆ, ಈ ಬಾರಿ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಸೋತು ಸುಣ್ಣವಾದರೂ ಬುದ್ಧಿ ಬಂದಂತಿಲ್ಲ, ಸನಾತನ ಧರ್ಮವನ್ನು ರದ್ದುಗೊಳಿಸಬೇಕೆಂದು ಮಂಗಳವಾರ ಮತ್ತೆ ನಿಂದೆ ಮಾಡುವ ಮೂಲಕ ಮತ್ತೆ ತಮ್ಮ ಅಪ್ರಬುದ್ಧತೆ ಮೆರೆದಿದ್ದಾರೆ. ಸನಾತನ ಧರ್ಮವು ಜನರನ್ನು ಒಡೆಯುತ್ತದೆ. ಈ ಧರ್ಮವನ್ನು ರದ್ದುಗೊಳಿಸಬೇಕೆಂಬುದು ಈ ಡಿಎಂಕೆ ನಾಯಕನ ಈ ಬಾರಿಯ ಆಗ್ರಹವಾಗಿದೆ. ಇದು ಭರತಖಂಡದ ಮೂಲಾಧಾರ, ಮಾತೃಸದೃಶ ಸನಾತನ ಧರ್ಮದ ನೆರಳಲ್ಲೇ ಸಹಸ್ರಾರು ವರ್ಷಗಳಿಂದ ಜೀವಿಸುತ್ತಿರುವ ಸಮಸ್ತ ಹಿಂದು ಸಮಾಜವನ್ನು ಕೆಂಡಾಮಂಡಲಗೊಳಿಸಿದೆ. ಉದಯನಿಧಿಯ ಸನಾತನ ಧರ್ಮವಿರೋಧಿ ಗೀಳಿಗೆ – ಅನಾಗರೀಕ ಪ್ರವೃತ್ತಿಗೆ ಇಡೀ ಹಿಂದು ಸಮಾಜದಿಂದ ತುಂಬು ಆಕ್ರೋಶ, ವಿರೋಧ ವ್ಯಕ್ತವಾಗಿದೆ.

ಸುಪ್ರೀಂ ಎಚ್ಚರಿಕೆ ಮರೆತ ಉದಯನಿಧಿ: ಉದಯನಿಧಿಯ ಸನಾತನ ಧರ್ಮ ವಿರೋಧಿ ಉದ್ಧಟತನದಟೀಕೆಗಳಿಗೆಕಳೆದವರ್ಷಸುಪ್ರೀಂಕೋರ್ಟ್ ಛೀಮಾರಿ ಹಾಕಿತ್ತು ಮತ್ತು ಈ ರೀತಿ ದ್ವೇಷ ಭಾಷಣ ಕೂಡದೆಂದು ಎಚ್ಚರಿಸಿತ್ತು. ಆದರೆ ಈ ತಮಿಳು ನಾಯಕ ಸುಪ್ರೀಂಕೋರ್ಟ್ ಛೀಮಾರಿಯನ್ನು ಮರೆತಂತಿದೆ. ಕೇವಲ ವೋಟ್‌ಬ್ಯಾಂಕ್ ರಾಜನೀತಿಗಾಗಿ ಇಡೀ ಜಗತ್ತೇ ಗೌರವಿಸುತ್ತಿರುವ, ಭಾರತದ ಮೂಲಾಧಾರವಾಗಿರುವ ಸನಾತನ ಧರ್ಮವನ್ನು ಪದೇ ಪದೇ ನಿಂದಿಸುವ ಡಿಎಂಕೆ ನಾಯಕನ ತುಚ್ಛ ನಡೆಗೆ ತಮಿಳ್ನಾಡಷ್ಟೇ ಅಲ್ಲ, ದೇಶಾದ್ಯಂತದ ಹಿಂದು ಸಂಘಟನೆಗಳು, ಹಿಂದು ಸಮಾಜ ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

ಯಾವುದೇ ಹಕ್ಕಿಲ್ಲ: ತಮಿಳುನಾಡಿನ ಸಾಂಪ್ರದಾಯಿಕ ಗೀತೆ ತಮಿಳು ತಾಯಿ ವಾಳ್ತುವನ್ನು ಬದಿಗೊತ್ತುವ ಯಾವ ಪ್ರಯತ್ನಗಳಿಗೂ ನಾವು ಸಮ್ಮತಿಸುವುದಿಲ್ಲ ಎಂದು ತಮಿಳುನಾಡು ವಿಧಾನಸಭೆಯ ವಿಪಕ್ಷ ನಾಯಕ ಉದಯನಿಧಿ, ವಿಧಾನಸಭೆಯಲ್ಲಿ ತಮ್ಮ ಚೊಚ್ಚಲ ಭಾಷಣದಲ್ಲಿ ಹೇಳಿದ್ದಾರೆ. ತಮ್ಮ ರಾಜ್ಯದ ಸಂಪ್ರದಾಯಗಳನ್ನು ಎತ್ತಿಹಿಡಿವ ಈತನ ನಡೆ ಸರಿಯಾದ್ದೇ. ಆದರೆ ಇದೇ ವೇಳೆ ಭಾರತದ ಮೂಲಪರಂಪರೆಯೇ ಆಗಿರುವ, ಭಾರತದ ತಾಯಿ ಸಮಾನ ಸಹಸ್ರಾರು ವರ್ಷಗಳ ಹಿನ್ನೆಲೆಯ ಸನಾತನ ಧರ್ಮವನ್ನು ಅಪಮಾನಿಸುವ, ನಿಂದಿಸುವ ಯಾವುದೇ ಹಕ್ಕು ಉದಯನಿಧಿಗಿಲ್ಲ ಎಂದು ಸಮಸ್ತ ಹಿಂದು ಸಮಾಜ ಈತನನ್ನು ಕಟುವಾಗಿ ತರಾಟೆಗೆತ್ತಿಕೊಂಡಿದೆ.

ಸನಾತನ ಧರ್ಮ ನಿಂದಿಸಿದ ವಿಪಕ್ಷಗಳು ಸೋತು ಸುಣ್ಣ: ಡಿಎಂಕೆ ಮತ್ತಿತರ ವಿರೋಧಪಕ್ಷಗಳು ವೋಟ್‌ಬ್ಯಾಂಕ್ ರಾಜನೀತಿಗಾಗಿ ಸನಾತನ ಧರ್ಮ ವಿರುದ್ಧ ದ್ವೇಷ ಕಾರುತ್ತಿವೆ ಎಂದು, ಸನಾತನ ಧರ್ಮವನ್ನು ಮತ್ತೆ ಅನ್ಯಾಯವಾಗಿ ನಿಂದಿಸಿರುವ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್‌ರನ್ನು ಬಿಜೆಪಿ ಕಟುವಾಗಿ ತರಾಟೆಗೆತ್ತಿಕೊಂಡು ಛೀಮಾರಿ ಹಾಕಿದೆ. ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ದಯನೀಯವಾಗಿ ಪರಾಭವಗೊಂಡ ಹೊರತೂ ಪಕ್ಷ ನಾಯಕ ಉದಯನಿಧಿ ತನಗೆ ಸಾಧ್ಯವಿರುವ ಒಂದೇ ಒಂದು 'ಶ್ರೇಷ್ಠ ಕಾಯಕ'ವಾದ ಸನಾತನ ಧರ್ಮ ನಿಂದನೆಯಲ್ಲಿ ಮತ್ತೆ ತೊಡಗಿರುವುದು ತೀರಾ ನಾಚಿಕೆಗೇಡು. ಸನಾತನ ಧರ್ಮದ ಅಪಮಾನ, ಸನಾತನ ಧರ್ಮ ವಿರುದ್ಧ ದ್ವೇಷ ಹರಡುವುದು ಮಾತ್ರ ಉದಯನಿಧಿಗೆ ಗೊತ್ತು. ಕಳೆದ ಬಾರಿ ಸನಾತನ ಧರ್ಮ ವಿರೋಧಿನಿಂದೆಮಾಡಿದ್ದಕ್ಕೆ ಸರ್ವೋಚ್ಚ ನ್ಯಾಯಾಲಯ ಉದಯನಿಧಿಯನ್ನು ತರಾಟೆಗೆತ್ತಿಕೊಂಡು, ಈ ತೆರ ದ್ವೇಷ ಭಾಷಣ ಸಲ್ಲದೆಂದು ಎಚ್ಚರಿಸಿತ್ತು , ಈ ಎಚ್ಚರಿಕೆ ಉದಯನಿಧಿಗೆ ಬಹುಶ: ಮರೆತಿದೆ ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನವಲ್ಲಾ ಎಕ್ಸ್‌ಗೆ ಪೋಸ್ಟ್ ಮಾಡಿರುವ ವಿಡಿಯೋದಲ್ಲಿ ಟೀಕಿಸಿದ್ದಾರೆ.

ಮಗ ಈ ಹಿಂದೆ ಸನಾತನ ಧರ್ಮವನ್ನು ಅಪಮಾನಿಸುವ ದುರಹಂಕಾರ ಮೆರೆದಾಗಲು ತಂದೆ, ಮಾಜಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮಗನನ್ನು ತಿದ್ದಿ ಬುದ್ಧಿ ಹೇಳುವ ಕೆಲಸ ಮಾಡಿಲ್ಲ, ಬದಲಾಗಿ ಮಗನಿಗೆ ಉಪ ಮುಖ್ಯಮಂತ್ರಿ ಪಟ್ಟ ಕಟ್ಟಿದ್ದರು. ಕಾಂಗ್ರೆಸ್ ಕೂಡ ಉದಯನಿಧಿ ದುರ್ವರ್ತನೆಯನ್ನು ಖಂಡಿಸಿಲ್ಲ. ಡಿಎಂಕೆ ಚುನಾವಣೆಯಲ್ಲಿ ಸೋತು ನೆಲಕಚ್ಚಿದೆ. ಇವರ ಹಿಂದು ವಿರೋಧಿ, ಸನಾತನ ವಿರೋಧಿ ದೃಷ್ಟಿಕೋನವನ್ನು ಜನತೆ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಆದರೂ ಬುದ್ಧಿ ಕಲಿಯದ ಉದಯ ನಿಧಿ ಇದೀಗಲೂ ಸನಾತನ ಧರ್ಮ ನಿಂದೆಯಲ್ಲಿ ತೊಡಗಿರುವುದು ಖಂಡನಾರ್ಹ ಎಂದ ಪೂನವಲ್ಲಾ ವಿಡಿಯೋದಲ್ಲಿ ಟೀಕಿಸಿದ್ದಾರೆ.



ತ.ನಾಡಿನಲ್ಲಿ ಸನಾತನ ಧರ್ಮ ಬೆಳೆಯಲ್ಲ: ಕೈ ಮುಸ್ಲಿಂ ನಾಯಕ

ತನ್ನ ಹಳೆಯ ಮಿತ್ರ ಪಕ್ಷ ಡಿಎಂಕೆಗೆ ವಿಶ್ವಾಸದ್ರೋಹವೆಸಗಿ ತಮಿಳಗ ವೆಟ್ರಿ ಕಳಗಂ ಬೆಂಬಲಿಸಿದ ಕಾಂಗ್ರೆಸ್ ಪಕ್ಷದ ಮುಸ್ಲಿಂ ನಾಯಕನೊಬ್ಬ ಉದಯನಿಧಿ ಸ್ಟಾಲಿನ್ ನೀಡಿದ ಸನಾತನ ಧರ್ಮ ಅಳಿಸಬೇಕೆಂಬ ಹೇಳಿಕೆಗೆ ಬೆಂಬಲ ನೀಡಿ ಮಾತನಾಡಿದ್ದಾನೆ. ಚೆನ್ನೈನ ವೇಲಚೇರಿ ಕ್ಷೇತ್ರದ ಮಾಜಿ ಶಾಸಕ ಜೆಎಂಎಚ್ ಆಸ್ಸಾನ್ ಮೌಲಾನಾ, ಎಡಪ್ಪಾಡಿ ಹೊರಬಿದ್ದಿದ್ದಾರೆ, ಅಂದರೆ ನರೇಂದ್ರ ಮೋದಿ ಹೊರಬಿದ್ದಿದ್ದಾರೆ, ಅಂದರೆ ಸತಾನದ ಧರ್ಮ ಈಗಾಗಲೇ ತಮಿಳುನಾಡು ರಾಜ್ಯದಿಂದಲೇ ಹೊರಬಿದ್ದಿದೆ. ತಮಿಳುನಾಡಿನಲ್ಲಿ ಸನಾತನ ಧರ್ಮ ಬೆಳೆಯುವುದಿಲ್ಲ, ತಮಿಳುನಾಡು, ಇಂತಹ ವಿಚಾರಗಳನ್ನೆಲ್ಲಾ ಮೀರಿ ನಿಂತ ರಾಜ್ಯ ಎಂದು ಮೌಲಾನಾ ಹೇಳಿದ್ದಾನೆ. ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಸೋಲು ಮತ್ತು ಟಿವಿಕೆ ವಿಜಯ್ ಗೆಲುವನ್ನು ಮೌಲಾನಾ ಹೋಲಿಕೆ ಮಾಡಿದ್ದಾನೆ.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಿಂದೆ ರಾಜಸ್ಥಾನದಲ್ಲಿನ ಖಾಸಗಿ ಕೋಚಿಂಗ್ ಕೇಂದ್ರಗಳ ಕೈವಾಡ!

ನೀಟಾದ ಪ್ರೈವೇಟ್ ಮಾಫಿಯಾ ಜಾಲ

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು ದೇಶಾದ್ಯಂತ ಭಾರೀ ಸುದ್ದಿಯಾಗಿದೆ. 2026ರ ಮೇ 3ರಂದು ನಡೆದ ನೀಟ್ ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆಯು ರಾಜಸ್ಥಾನದಲ್ಲಿ, ಅದರಲ್ಲೂ ವಿಶೇಷವಾಗಿ ಸೀಕರ್‌ನಲ್ಲಿ ನಡೆಯುತ್ತಿರುವ ಖಾಸಗಿ ಕೋಚಿಂಗ್ ಕೇಂದ್ರಗಳ ಮಾಫಿಯಾ ಮತ್ತು ಕಪ್ಪು ಆರ್ಥಿಕತೆ ಮೇಲೆ ಬೆಳಕು ಚೆಲ್ಲುತ್ತದೆ. ಆರಂಭದಲ್ಲಿ ಗೆಸ್ ಪೇಪರ್ ಸೋರಿಕೆ ಆಗಿತ್ತೆಂದು ಅದನ್ನು ಪರಿಗಣಿಸಿರಲಿಲ್ಲ. ಆದರೆ 135ರಿಂದ 150 ಪ್ರಶ್ನೆಗಳನ್ನು ಸೋರಿಕೆ ಮಾಡಲಾಗಿದ್ದು, ಇವು 720 ಒಟ್ಟು ಅಂಕಗಳಲ್ಲಿ 600 ಅಂಕಗಳ ಪ್ರಶ್ನೆಗಳಾಗಿವೆ. ರಾಜಸ್ಥಾನ ವಿಶೇಷ ಕಾರ್ಯಾಚರಣೆ ಗುಂಪು (ಎಸ್‌ಒಜಿ) ನಡೆಸಿದ ತನಿಖೆಯಲ್ಲಿ ತಿಳಿದುಬಂದಿದೆ. 400 ಸದಸ್ಯರನ್ನು ಹೊಂದಿರುವ ಪ್ರೈವೇಟ್ ಮಾಫಿಯಾ ಹೆಸರಿನ ಎನ್‌ಕ್ರಿಪ್ಟೆಡ್ ಟೆಲಿಗ್ರಾಂ ಗುಂಪಿನಿಂದ ವಾಟ್ಸ್ಯಾಪ್ ಮೂಲಕವೂ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಪ್ರೈವೇಟ್ ಮಾಫಿಯಾ ಹೆಸರಿನಿಂದ ರಾಜಸ್ಥಾನದ ಕೋಟಾ ಮತ್ತು ಸೀಕರ್ ನಂತಹ ನಗರಗಳಲ್ಲಿ ವೈದ್ಯಕೀಯ ಕೋಚಿಂಗ್ ಉದ್ಯಮಗಳು ನಡೆಸುತ್ತಿರುವ ಖಾಸಗಿ ಮಾಫಿಯಾಗಳು ಬೆಳಕಿಗೆ ಬರುತ್ತವೆ. ಹಣಕ್ಕಾಗಿ ನೀಟ್ ಮತ್ತು ಕೋಚಿಂಗ್ ಉದ್ಯಮದಲ್ಲಿನ ಮಾಫಿಯಾ ಜಾಲದ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಕೋಚಿಂಗ್ ಕೇಂದ್ರಗಳ ಮಧ್ಯೆ ಸ್ಪರ್ಧೆ

ಟಾಪ್ ರ್‍ಯಾಂಕ್ ವಿದ್ಯಾರ್ಥಿಗಳನ್ನು ಸೃಷ್ಟಿಸಬೇಕೆಂಬ ಸ್ಪರ್ಧೆ ಎಲ್ಲಾ ಕೋಚಿಂಗ್ ಕೇಂದ್ರಗಳ ಮಧ್ಯೆ ಏರ್ಪಡುತ್ತವೆ. ಕೋಚಿಂಗ್ ಕೇಂದ್ರಗಳ ನಡುವಿನ ಈ ಸ್ಪರ್ಧೆ ಕಾನೂನುಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡುತ್ತದೆ. ತಮ್ಮ ಕೋಚಿಂಗ್ ಕೇಂದ್ರಗಳ ವಿದ್ಯಾರ್ಥಿಗಳು ಹೆಚ್ಚು ಸ್ಕೋರ್ ಮಾಡುವ ಮೂಲಕ ಕೋಚಿಂಗ್ ಉದ್ಯಮದಲ್ಲಿ ತಮ್ಮ ಸಂಸ್ಥೆಗೆ ಬೇಡಿಕೆ ಹೆಚ್ಚಾಗಬೇಕೆಂದು ಸಕ್ಸಸ್ ರೇಟ್ ಹೆಚ್ಚಿಸಲು ಸೋರಿಕೆಯಾದ ಪ್ರಶ್ನೆ ಪತ್ರಿಕೆಗಳನ್ನು ಖರೀದಿಸುತ್ತವೆ.

ಪ್ರಶ್ನೆ ಪತ್ರಿಕೆ ಸೋರಿಕೆ ಜಾಲಗಳು

ತನಿಖಾ ಸಂಸ್ಥೆಗಳ ಪ್ರಕಾರ, ಗೆಸ್ ಪೇಪರ್ ಪ್ರಶ್ನೆ ಪತ್ರಿಕೆ ಸೋರಿಕೆಯು ಹೆಚ್ಚಾಗಿ ಕೋಚಿಂಗ್ ಸಂಪರ್ಕದ ವಾಟ್ಸ್ಯಾಪ್ ಮತ್ತು ಟೆಲಿಗ್ರಾಂ ಗುಂಪುಗಳ ಮೂಲಕ ನಡೆಯುತ್ತವೆ.



ಮಧ್ಯವರ್ತಿಗಳು

ಕೋಚಿಂಗ್ ಕೇಂದ್ರಗಳಲ್ಲಿನ ಹಾಸ್ಟೆಲ್ ಮಾಲೀಕರು ಅಥವಾ ವೃತ್ತಿಜೀವನ ಸಲಹೆಗಾರರು ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಮಧ್ಯವರ್ತಿಗಳಾಗಿ ಇರುತ್ತಾರೆ. ಈ ಮಧ್ಯವರ್ತಿಗಳು ಸೋರಿಕೆಯಾದ ಪ್ರಶ್ನೆ ಪತ್ರಿಕೆಗಳನ್ನು 5 ಲಕ್ಷದಿಂದ 80 ಲಕ್ಷ ರೂ.ವರೆಗಿನ ಶುಲ್ಕದಲ್ಲಿ ಮಾರಾಟ ಮಾಡುತ್ತಾರೆ.

ರಾಜಸ್ಥಾನದಲ್ಲಿ ವೈದ್ಯಕೀಯ ಶಿಕ್ಷಣದ ಹುಚ್ಚು

ವೈದ್ಯಕೀಯ ಕ್ಷೇತ್ರದ ಹಿಂದೆ ಆಳವಾಗಿ ಬೇರೂರಿದ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳೇ ರಾಜಸ್ಥಾನದಲ್ಲಿ ವೈದ್ಯಕೀಯ ಶಿಕ್ಷಣದ ಹುಚ್ಚು ಹಿಡಿಸಿದೆ. ಇದರಿಂದ ಹಲವಾರು ದಂಧೆಕೋರು ಹುಟ್ಟಿಕೊಂಡಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಉದ್ಯೋಗ ಮಾಡುವುದರಿಂದ ಸಮಾಜ ಗೌರವಿಸುತ್ತದೆ. ಮುಖ್ಯವಾಗಿ ವೈದ್ಯಕೀಯ ಕ್ಷೇತ್ರ, ಅತಿ ಹೆಚ್ಚು ವೇತನ ಜೇಬಿಗಿಳಿಸುವ ಕ್ಷೇತ್ರಗಳಲ್ಲೊಂದು.

ಸಾಮಾಜಿಕ ಗೌರವ: ವೈದ್ಯಕೀಯ ಕ್ಷೇತ್ರವನ್ನು ರಾಜಸ್ಥಾನದಲ್ಲಿ ಅತ್ಯಂತ ಗೌರವಯುತ ಉದ್ಯೋಗವನ್ನಾಗಿ ಕಾಣುತ್ತಾರೆ. ಇದು ಸೇವಾ ಪ್ರಜ್ಞೆ ನೀಡುವುದಲ್ಲದೆ, ಸಮಾಜದಲ್ಲಿ ಅತ್ಯುನ್ನತ ಸ್ಥಾನಮಾನವನ್ನು ನೀಡುತ್ತದೆ.

ಉದ್ಯೋಗ ಸುರಕ್ಷತೆ: ವೈದ್ಯಕೀಯ ಉದ್ಯೋಗ ಅತ್ಯಂತ ಸುರಕ್ಷಿತ ವೃತ್ತಿಜೀವನವೆಂದು ಪರಿಗಣಿಸಲ್ಪಡುತ್ತದೆ. ಸರ್ಕಾರ ಮತ್ತು ಖಾಸಗಿ ವಲಯಗಳಲ್ಲಿ ಸಾಕಷ್ಟು ಉದ್ಯೋಗ ಅವಕಾಶಗಳಿದ್ದು, ಉದ್ಯೋಗ ಸುರಕ್ಷತೆಯ ಖಾತರಿ ಇರುತ್ತದೆ.

ಆರ್ಥಿಕ ಬೆಳವಣಿಗೆ: ಹಲವು ಬಡ ಕುಟುಂಬಗಳಿಗೆ ತಮ್ಮ ಮಕ್ಕಳಿಗೆ ಎಂಬಿಬಿಎಸ್ ಮಾಡಿಸಬೇಕು, ಆದರಿಂದ ತಮ್ಮ ಆರ್ಥಿಕ ಸಂಕಷ್ಟಗಳೆಲ್ಲವೂ ಹೋಗಿ, ತಾವೂ ಸಹ ಸಮಾಜದಲ್ಲಿ ಗೌರವದಿಂದ ಬದುಕಬಹುದು, ಐಷಾರಾಮಿ ಜೀವನ ನಡೆಸಬಹುದು ಎಂಬ ಆರ್ಥಿಕ ಬೆಳವಣಿಗೆ ದೃಷ್ಟಿಕೋನ ಹೊಂದಿರುತ್ತಾರೆ.

ಇತ್ತೀಚೆಗಿನ ಕೆಲವು ಹಗರಣಗಳು

ಡಮ್ಮಿ ಕ್ಯಾಂಡಿಡೇಟ್ ಅಥವಾ ಸಾಲ್ವರ್ ಗ್ಯಾಂಗ್: 2025ರ ಜೂನ್‌ನಲ್ಲಿ ಏಮ್ಸ್ ಜೋಧ್‌ಪುರ ವಿದ್ಯಾರ್ಥಿ ಕೆಲವು ವರ್ಷಗಳ ಹಿಂದೆ ತನ್ನದೇ ಪ್ರವೇಶ ಪರೀಕ್ಷೆ ಬರೆಯಲು ಡಮ್ಮಿ ಕ್ಯಾಂಡಿಡೇಟ್ ಬಳಸಿ ಸಿಕ್ಕಿಬಿದ್ದಿದ್ದಾನೆ. ಹಲವು ಬಡ ವಿದ್ಯಾರ್ಥಿಗಳು ಹಣಕ್ಕಾಗಿ ಶ್ರೀಮಂತ ವಿದ್ಯಾರ್ಥಿಗಳ ಬದಲಿಗೆ ಪರೀಕ್ಷೆ ಬರೆಯುತ್ತಾರೆ. ಇಂತಹ ಪ್ರಕರಣಗಳೂ ರಾಜಸ್ಥಾನದಲ್ಲಿ ಹೆಚ್ಚಾಗಿ ಬೆಳಕಿಗೆ ಬರುತ್ತವೆ. ಇವರು ನೀಟ್, ಎಸ್‌ಎಸ್‌ಸಿ ಪರೀಕ್ಷೆಗಳಲ್ಲಿ ಇತರರಿಗಾಗಿ ಹಣ ಪಡೆದು ಪರೀಕ್ಷೆ ಬರೆಯುತ್ತಾರೆ.

ಸ್ಕೋರ್ ಮ್ಯಾನಿಪುಲೇಶನ್: 2025ರಲ್ಲಿ ಸ್ಕೋರ್ ಮ್ಯಾನಿಪುಲೇಶನ್ ನಡೆಸಲು ಒಪ್ಪಿದ ಅಧಿಕಾರಿಗಳನ್ನು ಸಿಬಿಐ ಬಂಧಿಸಿತ್ತು. ಒಬ್ಬ ವಿದ್ಯಾರ್ಥಿಗೆ 90 ಲಕ್ಷ ರೂ. ಎಂಬಂತೆ ದರ ನಿಗದಿಪಡಿಸಿ ಫೇಲ್ ಅಂಕಗಳನ್ನು ಬದಲಾಯಿಸಲು ಅಧಿಕಾರಿಗಳು ಒಪ್ಪಿಕೊಂಡಿದ್ದ ಪ್ರಕರಣ ರಾಜಸ್ಥಾನದಲ್ಲಿ ನಡೆದಿತ್ತು.

ವೈದ್ಯಕೀಯ ಕಾಲೇಜು ಮೂಲಸೌಕರ್ಯ ಹಗರಣ: ಗುಣಮಟ್ಟ ಮಾನದಂಡಕ್ಕಿಂತ ಕಳಪೆ ಕಟ್ಟಡ ಮೂಲಸೌಕರ್ಯಗಳಿಗೆ ವೈದ್ಯಕೀಯ ಕಾಲೇಜು ಪರವಾನಗಿ ನೀಡಿದ ಹಗರಣವೊಂದು 2025ರ ಜುಲೈನಲ್ಲಿ ಬೆಳಕಿಗೆ ಬಂದಿತ್ತು. ಒಬ್ಬ ದೇವಮಾನವ ಮತ್ತು ಪ್ರಮುಖ ಅಧಿಕಾರಿಗಳು ಈ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದರು.

ನೀಟ್ ಮತ್ತು ಕೋಚಿಂಗ್ ಮಾಫಿಯಾ

ಎಂಬಿಬಿಎಸ್, ಬಿಡಿಎಸ್ ಇತರ ವೈದ್ಯಕೀಯ ಮತ್ತು ದಂತ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ನೀಟ್ ಕಡ್ಡಾಯವಾಗಿದೆ. ಇದನ್ನೇ ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸಿಕೊಳ್ಳುವ ಕೋಚಿಂಗ್ ಮಾಫಿಯಾ ಕ್ರಿಮಿನಲ್‌ಗಳು ಕೋಚಿಂಗ್ ನೀಡುವುದಾಗಿ ನೀಟ್ ಆಕಾಂಕ್ಷಿಗಳನ್ನು ಆಕರ್ಷಿಸುತ್ತಾರೆ. ಇವು ಭಾರೀ ಶುಲ್ಕ ಹೇರುವುದಲ್ಲದೆ, ಪ್ರಶ್ನೆ ಪತ್ರಿಕೆ ಸೋರಿಕೆ ಗ್ಯಾಂಗ್‌ಗಳೊಂದಿಗೆ ಸಂಪರ್ಕದಲ್ಲಿ ಇರುತ್ತಾರೆ.

ನೀಟ್ ಪರೀಕ್ಷೆ ಹೇಗೆ ನಡೆಯುತ್ತದೆ?

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಎಂಬಿಬಿಎಸ್, ಬಿಡಿಎಸ್ ಮತ್ತು ಇತರ ವೈದ್ಯಕೀಯ ಸಂಬಂಧಿತ ಶಿಕ್ಷಣಗಳಿಗೆ ಪ್ರವೇಶ ಪಡೆಯಲು ನೀಟ್ ಪರೀಕ್ಷೆಯನ್ನು ನಡೆಸುತ್ತದೆ. ಇದು ಭಾರತೀಯ ವೈದ್ಯಕೀಯ ಮಂಡಳಿ ಮತ್ತು ಭಾರತೀಯ ದಂತ ಮಂಡಳಿ ಮಾನ್ಯತೆ ಪಡೆದ ವೈದ್ಯಕೀಯ ಹಾಗೂ ದಂತ ಕಾಲೇಜುಗಳಲ್ಲಿನ ಪ್ರವೇಶಕ್ಕೆ ಅನ್ವಯಿಸುತ್ತದೆ. ಭಾರತದ ಮತ್ತು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ವರ್ಷಕ್ಕೊಮ್ಮೆ ನಡೆಯುವ ನೀಟ್ ಪರೀಕ್ಷೆ ಬರೆಯಬಹುದು. ಪರೀಕ್ಷೆಯಲ್ಲಿ 180 ಎಂಸಿಕ್ಯೂ (ಬಹು ಆಯ್ಕೆಯ) ಪ್ರಶ್ನೆಗಳು ಇರುತ್ತವೆ. ಉಳಿದಂತೆ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ (ಸಸ್ಯ ಮತ್ತು ಪ್ರಾಣಿಶಾಸ್ತ್ರ) ವಿಷಯಗಳು ಒಳಗೊಂಡಿರುತ್ತವೆ. ಇಂಗ್ಲಿಷ್, ಹಿಂದಿ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಯುತ್ತದೆ. ನೀಟ್ ಅಂಕಗಳು ಅತ್ಯಂತ ಮಹತ್ವದ್ದಾಗಿದೆ. ಅಂಕಗಳ ಆಧಾರದಲ್ಲೇ ಮೀಸಲಾತಿ, ವಿದ್ಯಾರ್ಥಿವೇತನ ಮತ್ತು ವಿದ್ಯಾರ್ಥಿಗಳ ಭವಿಷ್ಯ ಎಲ್ಲವೂ ಒಳಗೊಂಡಿರುತ್ತದೆ.

ಆಕಾಂಕ್ಷಿಗಳ ಆತ್ಮಹತ್ಯೆ

ರಾಜಸ್ಥಾನದ ಕೋಟಾದಲ್ಲಿ ನೀಟ್ ಆಕಾಂಕ್ಷಿಗಳ ಆತ್ಮಹತ್ಯೆ ಅತಿ ಹೆಚ್ಚು ನಡೆಯುತ್ತದೆ ಎಂದು ದಾಖಲೆಗಳು ಹೇಳುತ್ತವೆ. 2025ರಲ್ಲಿ ಕನಿಷ್ಠಪಕ್ಷ 14 ನೀಟ್ ಆಕಾಂಕ್ಷಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದಿನನಿತ್ಯ 18 ಗಂಟೆಗಳ ಕಾಲ ನೀಟ್ ಪರೀಕ್ಷೆಗಾಗಿ ವಿದ್ಯಾರ್ಥಿಗಳು ತಯಾರಿ ಮಾಡುತ್ತಾರೆ. ಇದಲ್ಲದೆ ನೀಟ್‌ನಲ್ಲಿ ಅತ್ಯುತ್ತಮ ಅಂಕ ಬರಬೇಕೆಂಬ ಹೆತ್ತವರ ಕನಸು ಸಾಕಾರಗೊಳಿಸುವ ಒತ್ತಡ, ಕುಟುಂಬದ ಹಣಕಾಸು ಸಮಸ್ಯೆ, ನೀಟ್ ಪರೀಕ್ಷೆ ತಯಾರಿಗೆಂದು ಹೆತ್ತವರಿಂದ ದೂರವಿದ್ದು, ಒಂಟಿತನದಲ್ಲಿ ಇರುವುದು ಇತ್ಯಾದಿ ಹಲವು ಕಾರಣಗಳಿಂದ ನಿರೀಕ್ಷಿತ ಅಂಕ ಬರದಿದ್ದಾಗ ಕೆಲವು ಆಕಾಂಕ್ಷಿಗಳು ಆತ್ಮಹತ್ಯೆಗೆ ಶರಣಾಗುತ್ತಾರೆ. ಇದೇ ಕಾರಣಕ್ಕಾಗಿ ಆತ್ಮಹತ್ಯೆ ನಿರೋಧಕ ಫ್ಯಾನ್‌ಗಳನ್ನು ಹಾಸ್ಟೆಲ್‌ಗಳಲ್ಲಿ ಅಳವಡಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ಮೆಂಟಲ್ ಹೆಲ್ತ್ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ಕಿರುಸುದ್ದಿ

ಸುವೇಂದು ಆಪ್ತನ ಹತ್ಯೆ: ಪ್ರಕರಣ ದಾಖಲಿಸಿದ ಸಿಬಿಐ

ಹೊಸದಿಲ್ಲಿ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿಯ ಆಪ್ತ ಸಹಾಯಕ ಚಂದ್ರನಾಥ್ ರಥ್ ಹತ್ಯೆ ಆರೋಪದ ಮೇಲೆ ಸಿಬಿಐ ಎಫ್‌ಐಆರ್ ದಾಖಲಿಸಿದ್ದು, ರಾಜ್ಯ ಪೊಲೀಸರಿಂದ ತನಿಖೆಯನ್ನು ವಹಿಸಿಕೊಂಡಿದೆ. ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಸಿಬಿಐ ಕ್ರಮ ಕೈಗೊಂಡಿದೆ. ಸಿಬಿಐ ವಿಶೇಷ ಅಪರಾಧದ ಡಿಐಜಿ ನೇತೃತ್ವದಲ್ಲಿ ಏಳು ಸದಸ್ಯರ ವಿಶೇಷ ತನಿಖಾ ತಂಡವನ್ನು ರಚಿಸಿದೆ. ಇದರಲ್ಲಿ ಸಿಬಿಐಯ ವಿವಿಧ ಘಟಕಗಳಿಂದ ಬಂದ ಕೆಲವು ಅತ್ಯುತ್ತಮ ತನಿಖಾಧಿಕಾರಿಗಳು ಸೇರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಂಡವು ಕೋಲ್ಕತ್ತಾದ ಜಂಟಿ ನಿರ್ದೇಶಕರಿಗೆ ವರದಿ ಮಾಡಲಿದೆ.

ಪಾಕ್ ಮಾರುಕಟ್ಟೆಯಲ್ಲಿ ಸ್ಫೋಟ: 10 ಮಂದಿ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದ ವಾಯುವ್ಯ ಪಾಕಿಸ್ತಾನದ ಜನಸಂದಣಿಯಿರುವ ಮಾರುಕಟ್ಟೆಯಲ್ಲಿ ಮಂಗಳವಾರ ಭಾರೀ ಸ್ಫೋಟ ಸಂಭವಿಸಿದ್ದು, 10 ಮಂದಿ ಮೃತಪಟ್ಟಿದ್ದು, 32ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಜನಸಂದಣಿ ನೌರಂಗ್ ಬಜಾರ್‌ನಲ್ಲಿ ಸಂಭವಿಸಿದ ಸ್ಫೋಟವು ಬೀದಿಗಳಲ್ಲಿ ಭೀತಿ ಸೃಷ್ಟಿ ಮಾಡಿದೆ. ಅಫ್ಘಾನಿಸ್ತಾನದ ಗಡಿಯ ಸಮೀಪವಿರುವ ಪಾಕಿಸ್ತಾನದ ಲಕ್ಕಿ ಮಾರ್ವತ್ ಜಿಲ್ಲೆಯ ಸರಾಯ್ ನೌರಂಗ್ ಪಟ್ಟಣದಲ್ಲಿ ಬಾಂಬ್ ತುಂಬಿದ ರಿಕ್ಷಾದಿಂದ ಮಂಗಳವಾರ ಸ್ಫೋಟ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರಲ್ಲಿ ಇಬ್ಬರು ಟ್ರಾಫಿಕ್ ಪೊಲೀಸರು ಮತ್ತು ಒಬ್ಬ ಮಹಿಳೆ ಸೇರಿದ್ದಾರೆ ಎಂದು ಸ್ಥಳೀಯ ಪೊಲೀಸ್ ಮುಖ್ಯಸ್ಥ ಅಜ್ಮತ್ ಉಲ್ಲಾ ತಿಳಿಸಿದ್ದಾರೆ.

ಪಂಜಾಬ್ ಬಿಜೆಪಿ ಕಚೇರಿ ಮೇಲೆ ದುಷ್ಕರ್ಮಿಗಳ ದಾಳಿ

ಚಂಡೀಗಢ: ಪಂಜಾಬ್‌ನ ತರಣ್ ತರನ್ ಜಿಲ್ಲೆಯ ಬಿಜೆಪಿ ಕಚೇರಿ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದು, ಸುಮಾರು 20 ಮಂದಿ ಯುವಕರು ಕಚೇರಿಗೆ ನುಗ್ಗಿ ಘೋಷಣೆ ಕೂಗಿ, ಕಚೇರಿಯ ಮೌಲ್ಯಯುತ ವಸ್ತುಗಳನ್ನು ಧ್ವಂಸ ಮಾಡಿದ್ದಾರೆ. ಅಲ್ಲದೆ ದುಷ್ಕರ್ಮಿಗಳು ಕಚೇರಿಯೊಳಗೆ ಮಸಿ ಎರಚಿದ್ದಾರೆ. ಈ ವೇಳೆ ವೇಳೆ ಕೆಲವು ಬಿಜೆಪಿ ನಾಯಕರು ಅಲ್ಲೇ ಇದ್ದರು ಎಂದು ವರದಿಯಾಗಿದೆ. ಸದ್ಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಸಿಸಿಟಿವಿ ದೃಶ್ಯಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ. ಈ ದಾಳಿ ಬಳಿಕ ರಾಜ್ಯದಲ್ಲಿ ರಾಜಕೀಯ ಉದ್ವಿಗ್ನತೆ ಹೆಚ್ಚಾಗಿದ್ದು, ಬಿಜೆಪಿ ನಾಯಕರು ರಾಜ್ಯದ ಕಾನೂನು–ಸುವ್ಯವಸ್ಥೆ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ. ಕೆಲವು ಬಿಜೆಪಿ ಕಾರ್ಯಕರ್ತರು ದಾಳಿಯಲ್ಲಿ ಆಪ್ ಕಾರ್ಯಕರ್ತರ ಕೈವಾಡ ಇದೆ ಎಂದು ಆರೋಪಿಸಿದ್ದಾರೆ.

ಇಂದು ಸಿಎಂ ವಿಜಯ್‌ಗೆ ವಿಶ್ವಾಸಮತದ ಅಗ್ನಿಪರೀಕ್ಷೆ

ಚೆನ್ನೈ: ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರ ವಿಧಾನಸಭೆಯಲ್ಲಿ ಬುಧವಾರ ವಿಶ್ವಾಸಮತ ಯಾಚನೆಯ ಅಗ್ನಿಪರೀಕ್ಷೆ ಎದುರಿಸಲಿದೆ.

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ 234ರಲ್ಲಿ 108 ಸ್ಥಾನಗಳನ್ನು ಗೆದ್ದು ಟಿವಿಕೆ ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಎರಡು ಕ್ಷೇತ್ರಗಳಲ್ಲಿ ಗೆದ್ದ ವಿಜಯ್, ಅಧಿಕಾರ ಸ್ವೀಕರಿಸುವಾಗ ಪೆರಂಬೂರ್ ಉಳಿಸಿಕೊಂಡು ತಿರುಚಿರಾಪ್ಪಳ್ಳಿ ಪೂರ್ವ ಕ್ಷೇತ್ರದಿಂದ ರಾಜೀನಾಮೆ ನೀಡಿದ್ದಾರೆ. ಈ ಕಾರಣದಿಂದ ಟಿವಿಕೆ 107 ಸ್ಥಾನಗಳಿಗೆ ಕುಸಿದಿತ್ತು. ಉಳಿದಂತೆ ಕಾಂಗ್ರೆಸ್, ವಿಸಿಕೆ, ಮುಸ್ಲಿಂ ಲೀಗ್ ಮತ್ತು ಎಡ ಪಕ್ಷಗಳೆಲ್ಲರ ಒಟ್ಟು 12 ಶಾಸಕರು ವಿಜಯ್ ಪರ ಇದ್ದಾರೆ. ಆದರೆ ತಿರುಪತ್ತೂರ್ ಕ್ಷೇತ್ರದಲ್ಲಿ ಡಿಎಂಕೆ ಅಭ್ಯರ್ಥಿ ಪೆರಿಯಕರುಪ್ಪನ್ ವಿರುದ್ಧ ಒಂದು ಮತದಿಂದ ಗೆದ್ದ ಟಿವಿಕೆ ಶಾಸಕ ಶ್ರೀನಿವಾಸ ಸೇತುಪತಿ ವಿಶ್ವಾಸಮತ ಪರೀಕ್ಷೆಯಲ್ಲಿ ಭಾಗವಹಿಸುವಂತಿಲ್ಲ ಎಂದು ಮದ್ರಾಸ್ ಹೈಕೋರ್ಟ್ ಮಂಗಳವಾರ ಆದೇಶ ಹೊರಡಿಸಿದೆ. ತನಿಖೆ ನಡೆಸಲು ಪೆರಿಯಕರುಪ್ಪನ್ ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದರಿಂದ ಟಿವಿಕೆ ಶಾಸಕರ ಸಂಖ್ಯೆ 106ಕ್ಕೆ ಕುಸಿದಿದೆ. ಎಐಎಡಿಎಂಕೆ ಶನ್ಮುಗಂ ಬಣದ 30 ಶಾಸಕರು ವಿಜಯ್ ಭೇಟಿಯಾಗಿ ಬೆಂಬಲ ಸೂಚಿಸಿದ್ದಾರೆ. ಎಎಂಎಂಕೆ ಶಾಸಕ ಎಸ್.ಕಾಮರಾಜ್ ಫೋರ್ಜರಿ ಆರೋಪ ಹಿಂಪಡೆದು ವಿಜಯ್‌ಗೆ ಬೆಂಬಲ ನೀಡಿದ್ದಾರೆ. ಟಿವಿಕೆ 120 ಶಾಸಕರ ಬೆಂಬಲವಿದೆ. ಬುಧವಾರವೇ ಸುಪ್ರೀಂ ಕೋರ್ಟ್‌ನಲ್ಲಿ ಟಿವಿಕೆ ಶಾಸಕನ ಪ್ರಕರಣದ ವಿಚಾರಣೆ ನಡೆಯಲಿದೆ.

ಕೈ ಸಿಎಂ ಆಯ್ಕೆ ಗೊಂದಲ ಮತದಾರರಿಗೆ ಅವಮಾನ

ಕೋಝಿಕ್ಕೋಡು: ಕೇರಳದಲ್ಲಿ ಯುಡಿಎಫ್ ಸ್ಪಷ್ಟ ಬಹುಮತ ಪಡೆದಿರುವ ಹೊರತಾಗಿಯೂ, ರಾಜ್ಯದ ಮುಂದಿನ ಮುಖ್ಯಮಂತ್ರಿ ಆಯ್ಕೆಯಲ್ಲಿ ಕಾಂಗ್ರೆಸ್ ನಾಯಕತ್ವ ಇನ್ನೂ ನಿರ್ಧಾರವೊಂದಕ್ಕೆ ಬರಲು ವಿಫಲವಾಗಿರುವುದನ್ನು ಸಂಸ್ಥಾ ಕೇರಳ ಜಮಿಯತ್ತುಲ್ ಉಲೇಮಾ(ಇಕೆ ಬಣ)ದ ಮುಖವಾಣಿ 'ಸುಪ್ರಭಾತಂ' ಟೀಕಿಸಿದೆ. ಇದು ತನಗೆ ಮತ ನೀಡಿದ ಮತದಾರರಿಗೆ ಕಾಂಗ್ರೆಸ್ ಮಾಡಿದ ಅವಮಾನ ಎಂದು ಅದು ಕಿಡಿಕಾರಿದೆ. ಈ ಗುಂಪು ಯುಡಿಎಫ್‌ನ ಪ್ರಮುಖ ಘಟಕಪಕ್ಷವಾಗಿರುವ ಮುಸ್ಲಿಂಲೀಗಿನೊಂದಿಗೆ ನಂಟು ಹೊಂದಿರುವ ಗುಂಪೆಂದು ಪರಿಗಣಿಸಲ್ಪಟ್ಟಿದ್ದು, ಲೀಗಿನ ಬಳಿಕ ಈ ಸಂಘಟನೆಯೂ ಕಾಂಗ್ರೆಸ್ ನಿಲುವಿನ ವಿರುದ್ಧ ತಿರುಗಿಬಿದ್ದಿದೆ. ಮುಖ್ಯಮಂತ್ರಿ ಹುದ್ದೆ ಕುರಿತಂತೆ ಅಂತ್ಯವಿಲ್ಲದ ಆಂತರಿಕ ಡ್ರಾಮಾಗಳ ಮೂಲಕ ಜನತೆಯನ್ನು ಅವಮಾನಿಸಲಾಗದು .ಇದು ಕಾಂಗ್ರೆಸ್ ನಾಯಕತ್ವದ ದೌರ್ಬಲ್ಯವನ್ನು ಬಯಲಿಗೆಳೆದಿದೆ ಎಂದು ಅದು ಟೀಕಿಸಿದೆ. ಕೇರಳದಲ್ಲಿ ಕಾಂಗ್ರೆಸ್ ಹೈಕಮಾಂಡ್ ಗಾಂಧಿ ಕುಟುಂಬದ ನಿಕಟವರ್ತಿ ಕೆ.ಸಿ.ವೇಣುಗೋಪಾಲ್ ಅವರನ್ನು ಬಹುಮತದ ಕಾಂಗ್ರೆಸ್ ಶಾಸಕರ ಬೆಂಬಲದೊಂದಿಗೆ ಮುಖ್ಯಮಂತ್ರಿಯಾಗಿಸಲು ಯತ್ನಿಸುತ್ತಿದ್ದರೆ, ಮುಸ್ಲಿಂಲೀಗ್ ವಿ.ಡಿ.ಸತೀಶನ್ ಅವರನ್ನು ಮುಖ್ಯಮಂತ್ರಿಯಾಗಿಸಬೇಕೆಂದು ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹೇರುತ್ತಿದೆ. ಇದೀಗ ಹಿರಿಯ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ಅವರು ಮುಖ್ಯಮಂತ್ರಿ ಹುದ್ದೆಯ ಸ್ಪರ್ಧೆಯಿಂದ ಹೊರಬಿದ್ದಿದ್ದರೂ, ಕೆ.ಸಿ.ವೇಣುಗೋಪಾಲ್ ಮತ್ತು ವಿ.ಡಿ.ಸತೀಶನ್ ನಡುವೆ ತೀವ್ರ ತಿಕ್ಕಾಟ ಮುಂದುವರಿದಿದೆ.ತನಗೆ ಮುಖ್ಯಮಂತ್ರಿ ಹುದ್ದೆಯ ಹೊರತಾಗಿ ಬೇರೇನೂ ಬೇಡ ಎಂದು ಸತೀಶನ್ ಪಟ್ಟುಹಿಡಿದಿರುವುದಾಗಿ ಹೇಳಲಾಗಿದೆ.

ಪ.ಬಂಗಾಳ: ರಸ್ತೆ ಬದಿಯ ನಮಾಜ್‌ಗೆ ಅವಕಾಶವಿಲ್ಲ

ಕೋಲ್ಕತ್ತಾ: ಅರಾಜಕತೆ ತುಂಬಿಕೊಂಡಿದ್ದ ಪಶ್ಚಿಮ ಬಂಗಾಳದಲ್ಲಿ ಬದಲಾವಣೆ ಪರ್ವ ಆರಂಭವಾಗಿದೆ. ಹೊಸದಾಗಿ ರೂಪುಗೊಂಡ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಶಾಂತಿ,ಸುವ್ಯವಸ್ಥೆಯನ್ನು ಮತ್ತೆ ತರಲು ಪ್ರಾರಂಭಿಸಿದೆ. ನಮ್ಮ ಆಡಳಿತದಲ್ಲಿ ರಸ್ತೆ ಬದಿಯ ನಮಾಜ್‌ಗೆ ಅನುಮತಿ ನೀಡಲಾಗುವುದಿಲ್ಲ. ಜಾನುವಾರು ಕಳ್ಳಸಾಗಣೆ ಮತ್ತು ಕಲ್ಲು ತೂರಾಟದ ಘಟನೆಗಳ ವಿರುದ್ಧವೂ ಕ್ರಮವನ್ನು ತೀವ್ರಗೊಳಿಸಲಾಗುವುದು ಪಕ್ಷದ ಶಾಸಕ ಅರ್ಜುನ್ ಸಿಂಗ್ ಅವರು ಸ್ಪಷ್ಟನೆ ನೀಡಿದ್ದಾರೆ.

ಸರ್ಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಕೈಗೊಂಡ ನಿರ್ಧಾರಗಳ ಬಗ್ಗೆ ಮಾಧ್ಯಮದ ಜತೆ ಮಾತನಾಡಿದ ಸಿಂಗ್, ಈಗಾಗಲೇ ಸಂಪುಟ ಮಟ್ಟದಲ್ಲಿ ಹಲವಾರು ನಿರ್ದೇಶನಗಳನ್ನು ಚರ್ಚಿಸಲಾಗಿದೆ ಎಂದು ಹೇಳಿದರು. ಸಚಿವ ಸಂಪುಟ ಸಭೆಯಲ್ಲಿ ಸಿಎಂ ಹಲವು ಆದೇಶಗಳನ್ನು ನೀಡಿದ್ದಾರೆ. ಬೀದಿಗಳಲ್ಲಿ ನಮಾಜ್ ಮಾಡಲು ಅವಕಾಶವಿರುವುದಿಲ್ಲ, ಅವರು ಮಸೀದಿಗಳಲ್ಲಿ ಪ್ರಾರ್ಥನೆ ಮಾಡಲಿ, ಆದರೆ ಬೀದಿಗಳಲ್ಲಿ ನಮಾಜ್ ಮಾಡಲು ಅವಕಾಶ ನೀಡಲಾಗುವುದಿಲ್ಲ ಎಂದು ಸಿಂಗ್ ತಿಳಿಸಿದರು. ಕೋಲ್ಕತ್ತಾದ ರೆಡ್ ರೋಡ್‌ನಲ್ಲಿ ನಡೆದ ಪ್ರಾರ್ಥನೆಗಳನ್ನು ಉಲ್ಲೇಖಿಸಿದ ಅವರು, ಬಿಜೆಪಿ ಆಡಳಿತದಲ್ಲಿ ಇಂತಹ ಕೂಟಗಳು ಮುಂದುವರಿಯುವುದಿಲ್ಲ ಎಂದು ಸೂಚಿಸಿದರು.

ರಾಜ್ಯದಲ್ಲಿ ಬಿಜೆಪಿಯ ಚುನಾವಣಾ ಪ್ರಚಾರದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿದ್ದ ಜಾನುವಾರು ಕಳ್ಳಸಾಗಣೆ ಜಾಲಗಳು ಮತ್ತು ಕಲ್ಲು ತೂರಾಟವನ್ನು ಒಳಗೊಂಡ ಘಟನೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ ಎಂದು ಸಿಂಗ್ ಹೇಳಿದರು.

ಪಾಕ್‌ಗೆ ಚೀನಾ ನೆರವು ತಿಳಿದಿತ್ತು ಎಂದ ಜೈಸ್ವಾಲ್

ಹೊಸದಿಲ್ಲಿ: ಕಳೆದ ವರ್ಷದ ಮೇಯಲ್ಲಿ ನಡೆದ ಆಪರೇಷನ್ ಸಿಂದೂರ್ ವೇಳೆ ಪಾಕಿಸ್ತಾನಕ್ಕೆ ತಳಮಟ್ಟದಲ್ಲಿ ನೆರವು ನೀಡಿದ್ದಾಗಿ ಚೀನಾ ಮೊದಲ ಬಾರಿಗೆ ಒಪ್ಪಿಕೊಂಡಿರುವ ಬಗ್ಗೆ ಪ್ರತಿಕ್ರಿಯಿಸಿರುವ ವಿದೇಶಾಂಗ ಸಚಿವಾಲಯವು, ಇದು ಭಾರತಕ್ಕೆ ಮೊದಲೇ ತಿಳಿದಿತ್ತು. ಆದರೆ ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯಗಳನ್ನು ರಕ್ಷಿಸುವ ತನ್ನ ಯತ್ನಗಳು ತನ್ನ ಗೌರವ ಮತ್ತು ಸ್ಥಾನಮಾನದ ಮೇಲೆ ಪರಿಣಾಮ ಬೀರುವಂಥದ್ದೇ ಎಂಬುದನ್ನು ಚೀನಾವೇ ಚಿಂತನೆ ನಡೆಸಬೇಕಷ್ಟೇ ಎಂದು ಮಂಗಳವಾರ ಮಾರ್ಮಿಕವಾಗಿ ಪ್ರತಿಕ್ರಿಯಿಸಿದೆ.

ಸಾಪ್ತಾಹಿಕ ಪತ್ರಿಕಾಗೋಷ್ಠಿಯಲ್ಲಿ ಆಪರೇಷನ್ ಸಿಂದೂರ್ ವೇಳೆ ,ಚೀನಾ ತಾನು ಪಾಕಿಸ್ತಾನಕ್ಕೆ ನೆರವು ನೀಡಿದ್ದನ್ನು ಮೊದಲ ಬಾರಿಗೆ ಒಪ್ಪಿಕೊಂಡ ಬಗ್ಗೆ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರನ್ನು ಪ್ರಶ್ನಿಸಲಾಗಿತ್ತು.ನಾವು ಮೊದಲೇ ಏನನ್ನು ತಿಳಿದಿದ್ದವೋ ಅಂತಹ ಅಂಶಗಳನ್ನು ದೃಢೀಕರಿಸುವ ವರದಿಗಳನ್ನು ನಾವು ನೋಡಿದ್ದೇವೆ.ಆದರೆ ಭಯೋತ್ಪಾದಕ ಮೂಲಸೌಕರ್ಯಗಳಿಗೆ ಬೆಂಬಲ ನೀಡುವ ತನ್ನ ಯತ್ನಗಳು ತಮ್ಮ ಗೌರವ, ಸ್ಥಾನಮಾನಕ್ಕೆ ತಕ್ಕುದೇ ಎಂಬುದಾಗಿ ಯೋಚಿಸಬೇಕಾದ್ದು ತಮ್ಮನ್ನು ತಾವೇ ಜವಾಬ್ದಾರಿಯುತ ರಾಷ್ಟ್ರ ಎಂದು ಗುರುತಿಸಿಕೊಳ್ಳುವ ದೇಶಗಳದೇ ಜವಾಬ್ದಾರಿ ಎಂದರು.

ತಮಿಳುನಾಡು ರಾಜಕೀಯದಲ್ಲಿ ಮತ್ತೊಂದು ಮಹತ್ತರ ಬದಲಾವಣೆ

ಟಿವಿಕೆಗೆ ಎಐಎಡಿಎಂಕೆ ಷಣ್ಮುಗಂ ಬಣ ಬೆಂಬಲ

ಚೆನ್ನೈ: ಎಐಎಡಿಎಂಕೆ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಪಕ್ಷದ ಬದ್ಧವಿರೋಧಿ ಡಿಎಂಕೆ ಜತೆ ಮೈತ್ರಿಗೆ ಮುಂದಾಗಿದ್ದಾರೆಂದು ಆರೋಪಿಸಿ ಬಂಡೆದ್ದಿರುವ ಶಾಸಕರ ಗುಂಪೊಂದು , ಬುಧವಾರ ವಿಧಾನಸಭೆಯಲ್ಲಿ ವಿಶ್ವಾಸ ಮತ ಯಾಚಿಸಲಿರುವ ಟಿವಿಕೆ ನಾಯಕ ವಿಜಯ್ ನೇತೃತ್ವದ ಸರಕಾರಕ್ಕೆ ಬೆಂಬಲ ಘೋಷಿಸಿದೆ. ತನ್ಮೂಲಕ ಮಾಜಿ ಮುಖ್ಯಮಂತ್ರಿ ದಿ.ಜಯಲಲಿತಾ ಬೆಳೆಸಿದ ಎಐಎ ಡಿಎಂಕೆ ಒಡೆದು ಇಬ್ಭಾಗವಾಗುವ ಸಾಧ್ಯತೆಗಳು ದಟ್ಟವಾಗಿವೆ.

ಎಡಿಎಂಕೆ ಹಿರಿಯ ನಾಯಕರಾದ ಎಸ್ .ಪಿ.ವೇಲುಮಣಿಮತ್ತು ಸಿ.ವೆ.ಷಣ್ಮುಗಂನೇತೃತ್ವದಲ್ಲಿ ಸುಮಾರು 30 ಶಾಸಕರ ಗುಂಪು ಬಂಡೆದಿದ್ದು, ಏ.23ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಹೀನಾಯವಾಗಿ ಸೋತ ಹೊರತೂ ನಾಯಕ ಸ್ಥಾನದಲ್ಲಿರುವುದು ಎಷ್ಟು ಸರಿ ಎಂದು ಎಡಪ್ಪಾಡಿ ಪಳನಿಸ್ವಾಮಿ ಅವರಿಗೆ ಸವಾಲೆಸೆದಿದೆ. ಈಚಿನ ವಿಧಾನಸಭಾ ಚುನಾವಣೆಯಲ್ಲಿ 164ಸ್ಥಾನಗಳಿಗೆ ಎಡಿಎಂಕೆ ಸ್ಪರ್ಧಿಸಿತ್ತಾದರೂ , ಬರೇ 47 ಸ್ಥಾನಗಳಲ್ಲಿ ಜಯಿಸಿತ್ತು. ನಾವು ಸಿ.ಜೋಸೆಫ್ ವಿಜಯ್‌ರನ್ನು ಭೇಟಿಯಾಗಿ, ಅವರ ಸರಕಾರಕ್ಕೆ ಬೆಂಬಲ ವ್ಯಕ್ತಪಡಿಸುವ ಪತ್ರ ಹಸ್ತಾಂತರಿಸುತ್ತೇವೆ. ಎಐಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಡಿಎಂಕೆ ಬೆಂಬಲದಲ್ಲಿ ಸರಕಾರ ರಚಿಸಲು ಬಯಸಿದ್ದಾರೆ. ವಾಸ್ತವದಲ್ಲಿ ಎಐಎಡಿಎಂಕೆ ಅಸ್ತಿತ್ವಕ್ಕೆ ಬಂದದ್ದೇ ಡಿಎಂಕೆಯನ್ನು ಕಿತ್ತೆಸೆಯಲು. ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಬೆಂಬಲದಲ್ಲಿ ಸರಕಾರ ರಚಿಸುವ ಪಳನಿಸ್ವಾಮಿ ಪ್ರಸ್ತಾವಕ್ಕೆ ಎಡಿಎಂಕೆಯ ಎಲ್ಲಾ ಸದಸ್ಯರ ವಿರೋಧವಿದೆ. ಇಂತಹ ಯಾವುದೇ ಪ್ರಸ್ತಾವವು ಎಐಎಡಿಎಂಕೆಯ ಮೂಲಭೂತ ಸಿದ್ಧಾಂತಗಳ ಉಲ್ಲಂಘನೆಯಾಗುವುದು ಎಂದು ಷಣ್ಮುಗಂ ಸುದ್ದಿಗಾರರಿಗೆ ತಿಳಿಸಿದ್ದಾರೆ.



ಮರಳಬೇಕಿದೆ ಅಮ್ಮನ ಆಳ್ವಿಕೆ: ಪಕ್ಷಕ್ಕೀಗ ಹೊಸ ಬದುಕೊಂದು ಅನಿವಾರ್ಯವಿದೆ ಮತ್ತು ಅಮ್ಮ(ಜಯಲಲಿತಾ)ನ ಆಳ್ವಿಕೆ ಮರಳಬೇಕಿದೆ. ಇದಕ್ಕಾಗಿ ನಾವು ಟಿವಿಕೆಗೆ ಬೆಂಬಲ ವ್ಯಕ್ತಪಡಿಸುತ್ತೇವೆ ಎಂದು ಷಣ್ಮುಗಂ ಹೇಳಿದ್ದಾರೆ. ಆದರೆ ಇದೆಲ್ಲವು ವದಂತಿ. ಭಿನ್ನಮತ ನಾಯಕರು ತಮ್ಮ ಜಿಲ್ಲೆಗಳಲ್ಲಿ ಚುನಾವಣೆ ಗೆಲ್ಲಲು ವಿಫಲರಾಗಿದ್ದಾರೆ. ಹಾಗಾಗಿ ಸುಳ್ಳಿನ ಕಂತೆಗಳನ್ನೇ ಹರಿಯಬಿಡುತ್ತಿದ್ದಾರೆಂದು ಎಐಎಡಿಎಂಕೆ ನಾಯಕತ್ವ ವಿಶದಪಡಿಸಿದೆ. ವೇಲುಮಣಿ, ಷಣ್ಮುಗಂ ಮತ್ತು ಸಿ.ವಿಜಯಭಾಸ್ಕರ್ ಟಿವಿಕೆ ಸರಕಾರದಲ್ಲಿ ಸಚಿವ ಸ್ಥಾನ ಪಡೆಯಲು ಹವಣಿಸುತ್ತಿದ್ದಾರೆ. ಇನ್ನು ಮೈತ್ರಿ ನಿರ್ಧಾರವನ್ನು ಬೆರಳೆಣಿಕೆಯ ಶಾಸಕರು ಕೈಗೊಳ್ಳುವಂತಿಲ್ಲ. ಪಕ್ಷದ ಪದಾಧಿಕಾರಿಗಳೆಲ್ಲರು ಪಳನಿಸ್ವಾಮಿ ನಾಯಕತ್ವಕ್ಕೆ ತುಂಬು ಬೆಂಬಲ ಮುಂದುವರೆಸಿದ್ದಾರೆ ಎಂದು ಎಐಎಡಿಎಂಕೆ ನಾಯಕತ್ವ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ವಿಶದಪಡಿಸಿದೆ.

ಪಾಕ್‌ನ ಇಬ್ಬಗೆ ನೀತಿ ಬಯಲು


ಹೊಸದಿಲ್ಲಿ: ಅಮೆರಿಕ-ಇರಾನ್ ನಡುವೆ ಶಾಂತಿ ಮಾತುಕತೆಯ ಮಧ್ಯವರ್ತಿ ಆಗುವುದರೊಂದಿಗೆ ಪಾಕಿಸ್ತಾನ ತನ್ನ ಬೇಳೆ ಬೇಯಿಸಿಕೊಳ್ಳುತ್ತಿದೆ. ಅಮೆರಿಕದ ದಾಳಿಯಿಂದ ತಪ್ಪಿಸಿಕೊಳ್ಳಲು ಇರಾನ್ ತನ್ನ ಅತ್ಯಾಧುನಿಕ ಎಫ್-35 ಸೇನಾ ವಿಮಾನವನ್ನು ಟೆಹ್ರಾನ್ ವಾಯುನೆಲೆಯಿಂದ ಪಾಕ್ ವಾಯುನೆಲೆಗೆ ಸ್ಥಳಾಂತರ ಮಾಡಿರುವುದು ಬಹಿರಂಗವಾಗಿದೆ. 1991ರಲ್ಲಿ ನಡೆದ ಮೊದಲ ಗಲ್ಫ್ ಯುದ್ಧ ಸಂದರ್ಭದಲ್ಲಿ ಸದ್ದಾಂ ಹುಸೇನ್ ಇದೇ ಯುದ್ಧತಂತ್ರ ಅನುಸರಿಸಿದ್ದರು. ಸದ್ದಾಂ ಹುಸೇನ್ ಯುದ್ಧತಂತ್ರವನ್ನೇ ಇರಾನ್ ಬಳಸಿಕೊಂಡಿದೆ. ಅಮೆರಿಕ-ಇಸ್ರೇಲ್ ಪಡೆಗಳು ಇರಾನ್ ಮೇಲೆ ವೈಮಾನಿಕ ದಾಳಿ ನಡೆಸುವ ಸಾಧ್ಯತೆ ಹಿನ್ನೆಲೆಯಿಂದ ಸೇನಾ ವಿಮಾನಕ್ಕೆ ಪಾಕ್ ಆಶ್ರಯ ನೀಡಿದೆ. ಮಧ್ಯವರ್ತಿಯಷ್ಟೇ ಅಲ್ಲದೆ, ಇರಾನ್ ಸೇನಾ ವಿಮಾನಕ್ಕೆ ಆಶ್ರಯದಾತನೂ ಆಗಿ ಕಾರ್ಯ ನಿರ್ವಹಿಸುತ್ತಿದೆ. ಇದು ಅಮೆರಿಕ ಸೆನೆಟರ್ ಲಿಂಡ್ಸೆ ಗ್ರಾಹಮ್ ಚಾಲಿತಾಣ ಪೋಸ್ಟ್‌ನಿಂದ ಬಯಲಾಗಿದೆ.

ಒಪ್ಪಿಕೊಂಡ ಪಾಕ್: ಇರಾನ್ ಸೇನಾ ವಿಮಾನಕ್ಕೆ ಆಶ್ರಯ ನೀಡಿರುವುದು ಸತ್ಯ. ಆದರೆ ಇರಾನ್ ಸೇನಾ ವಿಮಾನ ಇಸ್ಲಾಮಾಬಾದ್‌ನಲ್ಲಿ ನಿಲುಗಡೆ ಆಗಿರುವುದಕ್ಕೂ ಅಮೆರಿಕ ದಾಳಿ ತಪ್ಪಿಸುವುದಕ್ಕೂ ಸಂಬಂಧವಿಲ್ಲ ಎಂಬ ಸ್ಪಷ್ಟನೆಯನ್ನು ಪಾಕ್ ವಿದೇಶಾಂಗ ಸಚಿವಾಲಯ ನೀಡಿದೆ. ಏ.11 ಮತ್ತು 12ರಂದು ನಡೆದ ಶಾಂತಿ ಮಾತುಕತೆ ಹಿನ್ನೆಲೆ ಇರಾನ್ ಮತ್ತು ಅಮೆರಿಕ ರಾಷ್ಟ್ರಗಳು ವಿಮಾನಗಳು ನಿಲುಗಡೆ ಆಗಿದ್ದವು. ದ್ವಿತೀಯ ಸುತ್ತಿನ ಶಾಂತಿ ಸಭೆ ನಡೆಯುವ ಹಿನ್ನೆಲೆಯಿಂದ ಇರಾನ್ ಸೇನಾ ವಿಮಾನವೂ ಇನ್ನೂ ಪಾಕ್‌ನಲ್ಲಿ ಉಳಿದುಕೊಂಡಿದೆ ಎಂಬ ಸ್ಪಷ್ಟನೆಯನ್ನು ನೀಡಿದೆ.

ಸದ್ದಾಂ ಯುದ್ಧತಂತ್ರ?: 1991ರಲ್ಲಿ ಮೊದಲ ಗಲ್ಫ್ ಯುದ್ಧ ಸಂದರ್ಭದಲ್ಲಿ ಅಮೆರಿಕ ನೇತೃತ್ವದ 42 ರಾಷ್ಟ್ರಗಳ ಮೈತ್ರಿ ಇರಾಕ್ ವಿರುದ್ಧ ಆಪರೇಷನ್ ಡೆಸರ್ಟ್ ಸ್ಟಾರ್ಮ್ ಎಂಬ ದಾಳಿಯನ್ನು ನಡೆಸಿತ್ತು. ಇಂತಹ ಸಂದರ್ಭ ತಮ್ಮ ಸೇನಾ ಮೂಲಸೌಕರ್ಯ ಕಾಪಾಡಬೇಕೆಂಬ ಉದ್ದೇಶದಿಂದ ಸದ್ದಾಂ, ಬಗ್ದಾದ್‌ನಿಂದ 115 ಸೇನಾ ವಿಮಾನಗಳನ್ನು ಇರಾನ್‌ಗೆ ಸ್ಥಳಾಂತರಿಸಿದ್ದರು.

ಕಿರುಸುದ್ದಿ

ನಾಗರೇಖಾ, ಲಕ್ಷ್ಮೀಕಾಂತ ಮಿರಜಕರಗೆ ಪ್ರಶಸ್ತಿ




ಸವದತ್ತಿ: 2025 ನೇ ಸಾಲಿನಲ್ಲಿ ಪ್ರಕಟವಾದ ಅತ್ಯುತ್ತಮ ಕವನ ಸಂಕಲನಗಳಿಗೆ ತಾಲೂಕಿನ ಸಹೃದಯ ಸಾಹಿತ್ಯ ಪ್ರತಿಷ್ಠಾನ ಕೊಡಮಾಡುವ ರಾಜ್ಯಮಟ್ಟದ ಸಹೃದಯ ಕಾವ್ಯ ಪ್ರಶಸ್ತಿಗೆ ಎರಡು ಕೃತಿಗಳು ಆಯ್ಕೆಯಾಗಿವೆ ಎಂದು ಪ್ರತಿಷ್ಠಾನದ ಅಧ್ಯಕ್ಷ ನಾಗೇಶ್ ಜೆ. ನಾಯಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ದಾಂಡೇಲಿಯ ನಾಗರೇಖಾ ಗಾಂವಕರ ಅವರ ಪಾದಕ್ಕೊಂದು ಕಣ್ಣು ಕವನ ಸಂಕಲನ ಹಾಗೂ ಹಾವೇರಿಯ ಲಕ್ಷ್ಮೀಕಾಂತ ಮಿರಜಕರ ಅವರ ಖಾಲಿ ಜೋಳಿಗೆಯ ಫಕೀರ ಗಜಲ್ ಸಂಕಲನಗಳಿಗೆ ಪ್ರಶಸ್ತಿ ಲಭಿಸಿದೆ.ಪ್ರತಿಷ್ಠಾನದ ನಾಲ್ಕನೇ ವರ್ಷದ ಸಂಭ್ರಮದಲ್ಲಿ ಪ್ರಶಸ್ತಿಗಾಗಿ ಕೃತಿಗಳನ್ನು ಆಹ್ವಾನಿಸಲಾಗಿತ್ತು. 100 ಕ್ಕೂ ಹೆಚ್ಚು ಕೃತಿಗಳು ಸಲ್ಲಿಕೆಯಾಗಿದ್ದವು. ನಾಡಿನ ಹಿರಿಯ ಸಾಹಿತಿ, ಸಂಶೋಧಕ ಡಾ. ಪಿ. ಜಿ. ಕೆಂಪಣ್ಣವರ ತೀರ್ಪುಗಾರರಾಗಿದ್ದರು. ಬರುವ ಜೂನ್ ತಿಂಗಳಿನಲ್ಲಿ ಪಟ್ಟಣದಲ್ಲಿ ನಡೆಯುವ ಸಮಾರಂಭದಲ್ಲಿ ಇಬ್ಬರೂ ಕೃತಿಕಾರರಿಗೆ ತಲಾ 5 ಸಾವಿರ ರೂ ನಗದು, ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಗುತ್ತದೆ. ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಉಪಾಧ್ಯಕ್ಷ ಬಸವರಾಜ ಪಟ್ಟಣಶೆಟ್ಟಿ, ಕಾರ್ಯದರ್ಶಿ ರಮೇಶ್ ತಳವಾರ, ಸಂಚಾಲಕರಾದ ಎಸ್. ಬಿ. ಗರಗದ ಉಪಸ್ಥಿತರಿದ್ದರು.

ಬೆಳಗಾವಿ ಮಹಾನಗರ ಪಾಲಿಕೆಯ ಆರು ಅಧಿಕಾರಿಗಳ ವರ್ಗಾವಣೆ



ಬೆಳಗಾವಿ: 2026 27ನೇ ಸಾಲಿನ ಸಾರ್ವತ್ರಿಕ ವರ್ಗಾವಣೆಗಳು ಚಾಲ್ತಿಯಲ್ಲಿದ್ದು, ಬೆಳಗಾವಿ ಮಹಾನಗರ ಪಾಲಿಕೆಗಳಲ್ಲಿ ಅಧಿಕಾವಧಿಯಿಂದ, ಇತರೆ ಇಲಾಖೆಗಳಿಂದ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಆರು ಅಧಿಕಾರಿಗಳನ್ನು ಆಡಳಿತಾತ್ಮಕ ಹಾಗೂ ಸಾರ್ವಜನಿಕ ದೃಷ್ಟಿಯಿಂದ ಅವರನ್ನು ಮಾತ್ರ ಇಲಾಖೆಗೆ ವರ್ಗಾವಣೆಗೊಳಿಸಿ ನಗರಾಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಬೆಳಗಾವಿ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ, ಉದಯಕುಮಾರ ತಳವಾರ, (ಉಪ ಆಯುಕ್ತರು ಆಡಳಿತ) ಹಣಮಂತ ಕಲಾದಗಿ, (ಪರಿಸರ ಅಭಿಯಂತರರು) ಪ್ರಿಯಾಂಕಾ ವಿನಾಯಕ್ (ಪರಿಸರ ಅಭಿಯಂತರರು), ಪ್ರವೀಣ್ ಕುಮಾರ ಖಿಲಾರಿ, (ಪರಿಸರ ಅಭಿಯಂತರರು) ಆದಿಲಖಾನ ಪಠಾಣ, ಡಿ ಜಿ ಕೋರಿ, (ತಹಶೀಲ್ದಾರ ಗ್ರೇಡ್ 1) ಇವರನ್ನು ತಮ್ಮ ಮಾತೃ ಇಲಾಖೆಗೆ ಹಿಂದೂರಿಗಿಸಿಕೊಂಡು ಆದೇಶ ಮಾಡಲಾಗಿದೆ. ಸದರಿ ಅಧಿಕಾರಿಗಳು ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಬೆಳಗಾವಿ ಮಹಾನಗರ ಪಾಲಿಕೆಯಿಂದ ಕೂಡಲೇ ಬಿಡುಗಡೆಗೊಂಡು, ಮಾತೃ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಳ್ಳಬೇಕೆಂದು ಆದೇಶದಲ್ಲಿ ಸೂಚಿಸಿದೆ.

ನಿಧನ ಸುದ್ದಿ

ಮುದಕಪ್ಪಾ ಅಂಬಿ



ಹಲ್ಯಾಳ: ಗ್ರಾಮದಲ್ಲಿ ಅಂಬಿ ಬಂಧುಗಳ ಹಿರಿಯರಾದ ಮುದಕಪ್ಪಾ ಬಸನಿಂಗಪ್ಪ ಅಂಬಿ (62) ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರ, ಇಬ್ಬರು ಪುತ್ರಿಯರು ಮೊಮ್ಮಕ್ಕಳು, ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಸವಿತಾ ವಿ. ನಾಯಿಕ



ಸಂಕೇಶ್ವರ: ಸ್ಥಳೀಯ ಮಹಾದೇವ ನಗರದ ನಿವಾಸಿ ಸವಿತಾ ವಿ. ನಾಯಿಕ (77) ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಬಿಟ್ಟು ಅಗಲಿದ್ದಾರೆ.



ರಾಯಬಾಗ: ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಂಗಳವಾರ ಅಂತಾರಾಷ್ಟ್ರೀಯ ದಾದಿಯರ (ನರ್ಸ್) ದಿನ ನಿಮಿತ್ತ ಫ್ಲಾರೆನ್ಸ್ ನೈಟಿಂಗೇಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಶುಶ್ರೂಷಕರ ಸೇವೆ ಅಪಾರ: ಶ್ರೀಶೈಲ

ರಾಯಬಾಗ: ಎರಡನೇ ಮಹಾಯುದ್ಧದ ವೇಳೆ ಗಾಯಗೊಂಡ ಸೈನಿಕರ ಶುಶ್ರೂಷಾ ಸೇವೆಯಲ್ಲಿ ತೊಡಗಿದ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮ ದಿನವನ್ನು ಅಂತಾರಾಷ್ಟ್ರೀಯ ಶುಶ್ರೂಷಾಧಿಕಾರಿಗಳ (ದಾದಿಯರ) ದಿನವಾಗಿ ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ ಎಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶುಶ್ರೂಷಕ ಶ್ರೀಶೈಲ ಹೊಸೂರ ಹೇಳಿದರು.

ಮಂಗಳವಾರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಂತಾರಾಷ್ಟ್ರೀಯ ದಾದಿಯರ (ನರ್ಸ್) ದಿನ ನಿಮಿತ್ತ ಫ್ಲಾರೆನ್ಸ್ ನೈಟಿಂಗೇಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ದೇಶ, ಭಾಷೆ, ಗಡಿ, ಹೆಣ್ಣು, ಗಂಡು ಎಂಬ ತಾರತಮ್ಯ ಮಾಡದೇ, ಎಲ್ಲರನ್ನು ಸಮಾನವಾಗಿ ಕಂಡು, ಸಕಲರ ಆರೋಗ್ಯ ಸೇವೆಯಲ್ಲಿ ನಿರತರಾದವರು ಶುಶ್ರೂಷಕರು ಮಾತ್ರ ಎಂದರು. ಹಿರಿಯ ಶುಶ್ರೂಷಾಧಿಕಾರಿ ಶೋಭಾ ಸಂಕನ್ನವರ ಮಾತನಾಡಿದರು. ಸಾರ್ವಜನಿಕ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ.ವಿನೋದ ಘಸ್ತಿ ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ. ಶ್ರೀಹರಿ ಪೋಳ, ಡಾ. ಸತೀಶ ಕಲ್ಲಟ್ಟಿ, ಡಾ. ಸಿದ್ದಾರ್ಥ ಮಗದುಮ್ಮ, ಆಯುಷ್ ವಿಭಾಗದ ವೈದ್ಯಾಧಿಕಾರಿ ಡಾ. ಸದಾಶಿವ ಖಿನದಾಳೆ, ಶೀತಲ ಚೌಗಲಾ, ವೀರೂಪಾಕ್ಷಿ ಕರಣಿ, ನಂದಕುಮಾರ ಪಾಟೀಲ, ಕೃಷ್ಣಾ ಚವ್ಹಾಣ, ನಾಜೀಯಾ ಜಿನಾಬಡೆ, ವಿಜಯಲಕ್ಷ್ಮೀ ಎನ್, ವಿ.ವಿ.ಮುರನಾಳ, ರೇಣುಕಾ ಶಾಪೂರ, ಅನಿತಾ ರಾಠೋಡ, ಸತೀಶ ರೂಗಿ, ವಿಠಲ ಗೆನ್ನೂರ, ಆದಂ ಅಗಸನಾಳ, ಚಂದ್ರು ಗಾಯಕವಾಡ, ಸವಿತಾ ಕಟ್ಟಿಮನಿ ಹಾಗೂ ಇತರರು ಇದ್ದರು.



ಮೂಡಲಗಿ : ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ, ವಾಣಿಜ್ಯ ಹಾಗೂ ಬಿಸಿಎ ಮಹಾವಿದ್ಯಾಲಯದ ಯುವರೆಡ್ ಕ್ರಾಸ್ ಘಟಕದ ಆಶ್ರಯದಲ್ಲಿ ವಿಶ್ವ ರೆಡ್ ಕ್ರಾಸ್ ದಿನ ಆಚರಣೆ ಮಾಡಲಾಯಿತು. ಪ್ರಾಧ್ಯಾಪಕ ಪ್ರೊ. ಪ್ರಕಾಶ ಚೌಡಕಿ, ಕಾಲೇಜಿನ ಆಡಳಿತಾಧಿಕಾರಿ ಡಾ.ಎಸ್.ಎಲ್. ಚಿತ್ರಗಾರ, ಡಾ. ಪವನ ಕುಮಾರ್ ಕೆ., ವೇದಾದೇಶಪಾಂಡೆ, ಸವಿತಾಕೊತ್ತಲ, ಪ್ರೀತಿ ಬೆಳಗಲಿ, ಎಸ್ಎಸ್‌ಕುಲಿಗೋಡಎಸ್.ಎಸ್. ಹಿರೇಮಠ, ಭಾರತಿ ತಳವಾರ, ಎಸ್ ಪಿ ಕಾಂಬಳೆ ಎನ್ ಸಿ ಭರಮ್ಮನವರ ಪ್ರತಿಭಾ ಪಂಡ್ರೋಳಿ ವೆಂಕಟೇಶ ಪಾಟೀಲ, ಲೋಕೇಶ ಹಿಡಕಲ, ಸುನಂದಾ ಅಂಗಡಿ, ಎ.ಎಸ್. ಮಿಶಿನಾಯಕ ಇದ್ದರು.

ಹದಗೆಟ್ಟ ಹುಲಗಬಾಳ ರಸ್ತೆ



ದಿಗಂತ ವಿಶೇಷ

▸ ಆನಂದ ಬಿರಾದರ

ಹಲ್ಯಾಳ: ಹುಲಗಬಾಳ ಗ್ರಾಮದಿಂದ ಐನಾಪುರ ರಸ್ತೆ ಮತ್ತು ಸಂಗಮೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ಹದಗೆಟ್ಟಿದ್ದು, ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. 2 ಸಾವಿರಕ್ಕೂ ಅಧಿಕ ಜನಸಂಖ್ಯೆ ಇರುವ ಗ್ರಾಮಕ್ಕೆ ಸಮರ್ಪಕ ರಸ್ತೆ ಇಲ್ಲದಿರುವುದು ವಿಪರ್ಯಾಸ.

ಈ ರಸ್ತೆಯಲ್ಲೇ ಸಂಚರಿಸಿ ಅನೇಕರು ತಮ್ಮ ಪ್ರಾಣ, ಕೈ ಕಾಲುಗಳು ಕಳೆದುಕೊಂಡಿದ್ದಾರೆ. ಈ ಕುರಿತು ಸಾಕಷ್ಟು ಬಾರಿಗ್ರಾಮಪಂಚಾಯತ್ ಗೆಸಂಬಂಧಿಸಿದ ಅಧಿಕಾರಿಗಳಿಗೆ ಮತ್ತು ಕ್ಷೇತ್ರದ ಶಾಸಕರಾದ ಲಕ್ಷ್ಮಣ್ ಸವದಿಯವರಿಗೂ ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಪಯೋಜನವಾಗಿಲ್ಲ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

> ರಸ್ತೆ ಹದಗೆಟ್ಟಿರುವುದನ್ನು ಸಿಬ್ಬಂದಿ ಕಳುಹಿಸಿ ಪರಿಶೀಲನೆ ಮಾಡುತ್ತೇವೆ. ಸದ್ಯಕ್ಕೆ ಯಾವುದೇ ಅನುದಾನವಿಲ್ಲ.
>
> ■ ವ್ಹಿ. ಎ. ವಾಲಿ ,ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಅಥಣಿ

ಪ್ರತಿನಿತ್ಯ ಜೀವ ಕೈಯಲ್ಲಿ ಹಿಡಿದು ಈ ರಸ್ತೆಯಲ್ಲಿ ಸಂಚರಿಸುವಂತಾಗಿದೆ. ಗರ್ಭಿಣಿಯರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ, ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಸಾಧ್ಯವಾಗುತ್ತಿಲ್ಲ, ವಾಹನ ಸೌಲಭ್ಯ ಇಲ್ಲ, ಸಮರ್ಪಕ ರಸ್ತೆ ಹಾಗೂ ವಾಹನ ಸೌಲಭ್ಯವಿಲ್ಲದ ಕಾರಣ ಮಕ್ಕಳಿಗೆ ಹೆಣ್ಣು ಕೊಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ.

ಭರವಸೆ ಮರೆತ ಶಾಸಕರು

ಶಾಸಕ ಲಕ್ಷ್ಮಣ ಸವದಿಯವರು ಚುನಾವಣೆಯ ಪೂರ್ವದಲ್ಲಿ ಮತ ಪ್ರಚಾರಕ್ಕೆ ಬಂದ ಸಮಯದಲ್ಲಿ ಈ ಸಂಗಮೇಶ್ವರ ದೇವಸ್ಥಾನದಲ್ಲಿ ಕುಳಿತು ನಿಮ್ಮ ಸಮಸ್ಯೆ ನನಗೆ ಗೊತ್ತಿದೆ. ಈ ರಸ್ತೆ ಸಮಸ್ಯೆ ನಿವಾರಿಸುತ್ತೇನೆ ಎಂದು ಭರವಸೆ ನೀಡಿದ್ದರು. ಇದೀಗ ಆ ಭರವಸೆ ಮರೆತಿದ್ದಾರೆ ಎಂಬುವುದು ಗ್ರಾಮಸ್ಥರ ಆರೋಪ.

ಹೆಣ್ಣು ಕೊಡುತ್ತಿಲ್ಲ

ನಾವೇನ್ ಪಾಪ್ ಮಾಡೀವಿ ಸಂಗಮೇಶ್ವರ ದೇವಸ್ಥಾನದ ರಸ್ತೆ ಮಾಡದೇ ಇರೋಕೆ. ರಸ್ತೆ ಇಲ್ಲದೆ ಮಕ್ಕಳಿಗೆ ಹೆಣ್ಣು ಸಿಗುತ್ತಿಲ್ಲ ಗರ್ಭಿಣಿಯಾರನ್ನು ಆಸ್ಪತ್ರೆ ಗೆ ಒಯ್ಯಲು ವಾಹನಗಳು ಬರುತ್ತಿಲ್ಲ ನಾವಿರುವ ಸ್ಥಳದಲ್ಲಿ ನೀವು ಇದ್ದು ನೋಡಿ ನಮ್ಮ ನೋವು ಅರ್ಥ ಆಗುತ್ತೆ ಎಂದು ಗ್ರಾಮದ ದ್ರಾಕ್ಷಾಯಣಿ ಮಠಪತಿ ಅಳಲು ತೋಡಿಕೊಂಡಿದ್ದಾರೆ.

> ಸಂಗಮೇಶ್ವರ ದೇವಸ್ಥಾನಕ್ಕೆ ತೆರಳಲು ಮೊಹರಂ ರಸ್ತೆ ಇದೆ. ಡಾಂಬರೀಕರಣ ಮಾಡಲು ಮೇಲಾಧಿಕಾರಿಗಳಿಗೆ ಮನವಿ ಮಾಡುತ್ತೇವೆ.
>
> ■ ವೈ. ಕೋಲೂರ್ , ಪಿಡಿಒ

> ಸರಿಯಾದ ರಸ್ತೆ ಇಲ್ಲದೆ ಅನೇಕ ಅಪಘಾತಗಳು ಆಗುತ್ತಿವೆ. ಸಾಕಷ್ಟು ಬಾರಿ ನಾವೆಲ್ಲರೂ ಸೇರಿ ಪಂಚಾಯತಿಗೆ ಹೋಗಿ ಮನವಿ ಮಾಡಿದ್ದೇವೆ. ಶಾಸಕ ಸವದಿಯವರಿಗೂ ಸಮಸ್ಯೆ ನಿವಾರಿಸಲು ಒತ್ತಾಯಿಸಿದ್ದೇವೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ.
>
> ■ ಸದಾಶಿವ ಮಾಂಗ್, ಸ್ಥಳೀಯ ನಿವಾಸಿ

> ಶಾಸಕರು ಆಶ್ವಾಸನೆ ಕೊಡುವುದನ್ನು ನಿಲ್ಲಿಸಿ. ಶೀಘ್ರದಲ್ಲೇ ರಸ್ತೆ ಮಾಡಿಸಲಿ
>
> ■ ಮಾದೇವ ಮಡಿವಾಳ , ರೈತ ಸಂಘದ ತಾಲೂಕ ಅಧ್ಯಕ್ಷ ಅಥಣಿ

ಪುರಸಭೆ ಎದುರು ಜನರ ಆಕ್ರೋಶ ನೀರಿಗಾಗಿ ಖಾಲಿ ಕೊಡ ಹಿಡಿದು ಪ್ರತಿಭಟನೆ

ಹುಕ್ಕೇರಿ: ಕಳೆದು ಎರಡು ತಿಂಗಳಿನಿಂದ ಜನ ಜಾನುವಾರುಗಳಿಗೆ ಕುಡಿಯುವುದಕ್ಕೆ ನೀರಿಲ್ಲದೆ ಪರದಾಡಬೇಕಾಗಿದೆ. ಪುರಸಭೆ ಅಧಿಕಾರಿಗಳಿಗೆ ಹಲವಾರುಬಾರಿ ಮನವಿ ಮಾಡಿಕೊಂಡರು ಕೂಡ ಪ್ರಯೋಜವಾಗಿಲ್ಲ ಎಂದು ಸಮೀಪದ ರಾಜನಕೋಡಿ ರೈತರು ಖಾಲಿ ಕೊಡ ಹಿಡಿದುಕೊಂಡು ಪುರಸಭೆ ಎದರು ಪ್ರತಿಭಟಿಸಿದರು.

ಮುಖಂಡರಾದ ಬಸವರಾಜ ಮಲಕಾಯಿ ಶಾಮ ಬಡಿಗೇರ ಸೇರಿದಂತೆ ಮುಖಂಡರು ಮಾತನಾಡಿ, ರಾಜಕೋಡಿ ತೋಟಪಟ್ಟಿ ನಿವಾಸಿಗಳ ಸೇರಿದಂತೆ ವಿವಿಧಡೆ ನೀರಿನ ತೊಂದರೆ ಇರುವಡೆ ಶಾಸಕ ನಿಖಿಲ ಕತ್ತಿ

ಅವರು ನೀರಿನ ಸಮಸ್ಯೆ ಇರುವ ಕಡೆ ತುರ್ತಾಗಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಿ ಎಂದು ಕಳೆದ ವಾರವೇ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದರೂ ಪುರಸಭೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ. ರಾಜನಕೋಡಿಯಲ್ಲಿ ಎರಡು ತಿಂಗಳಿಂದ ನೀರಿನ ಹಾಹಾಕಾರವಾಜಜಿ ರಾಜನಕೋಡಿಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರು ಇಲ್ಲದಂತಾಗಿದೆ.

ಹನಿ ನೀರಿಗೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಪುರಸಭೆಗೆಹಲವುಬಾರಿ ಮನವಿ ಸಲ್ಲಿಸಿದರೂ ಸ್ಪಂದಿಸಿಲ್ಲ, ಶಾಸಕರ ಸೂಚನೆಗೂ ಬೆಲೆ ಕೊಡದ ಅಧಿಕಾರಿಗಳ ಧೋರಣೆ ಖಂಡನೀಯವಾಗಿದ್ದು ನೀರಿನ ವ್ಯವಸ್ಥೆ ಮಾಡುವರೆಗೂ

ನಾವು ಇಲ್ಲಿಂದ ಕದಲುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿ ಅಡಿಗೆ ಮಾಡಿಕೊಂಡು ಊಟ ಸವಿದು ಪ್ರತಿಭಟಿಸಿದರು.

ಪೂರೈಸದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ ನೀಡಿದರು ಪುರಸಭೆ ಮುಖ್ಯಾಧಿಕಾರಿ ಈಶ್ವರ ಸಿದ್ನಾಳ ಮನವಿ ಸ್ವೀಕರಿ ಮಾತನಾಡಿ ಸಂಭಂದಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ನೀರಿನ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿದರು. ರೈತ ಮುಖಂಡರು, ಮಹಿಳೆಯರು ಉಪಸ್ಥಿತರಿದ್ದರು.



ನೀರಿನ ಸಮಸ್ಯೆಯಾಗದಂತೆ ಕ್ರಮ

ಕಬ್ಬೂರು: ಬೇಸಿಗೆ ತೀವ್ರಗೊಂಡ ಹಿನ್ನೆಲೆಯಲ್ಲಿ ರಾಯಬಾಗ ಮತಕ್ಷೇತ್ರ ವ್ಯಾಪ್ತಿಯ ಚಿಕ್ಕೋಡಿ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ಅವರು ಕಬ್ಬೂರ ಪಟ್ಟಣದಲ್ಲಿ ಸ್ಮಶಾನ ಕಾಂಪೌಂಡ್ ಹಾಗೂ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಜನರಿಗೆ ಕುಡಿಯುವ ನೀರಿನ ತೊಂದರೆ ಆಗದಂತೆ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಅಗತ್ಯ ಸೂಚನೆಗಳನ್ನು ನೀಡಲಾಗಿದೆ. ನೀರಿನ ಸಮಸ್ಯೆ ಕಾಣಿಸಿಕೊಂಡ ಗ್ರಾಮಗಳಿಗೆ ತಕ್ಷಣ ಸ್ಪಂದಿಸಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು.

ಕಬ್ಬೂರ ಪಟ್ಟಣದಲ್ಲಿ ಕೈಗೆತ್ತಿಕೊಂಡಿರುವ ಸ್ಮಶಾನ ಕಾಂಪೌಂಡ್ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು 70 ಲಕ್ಷ ರೂ. ಅನುದಾನ ಮಂಜೂರಾಗಿದ್ದು, ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಹಿರಾ ಶುಗರ ನಿರ್ದೇಶಕ ಸುರೇಶ ಬೆಲ್ಲದ,ಅಣ್ಣಾಸಾಹೇಬ ಖೆಮಲಾಪುರೆ, ಮಹಾನಿಂಗ ಹಂಜಿ, ಮಹಾದೇವ ಜಿವಣೆ, ಬಾಳೇಶ ಕುಕನೂರ,ಮಂಜು ಪಾಟೀಲ,ಮಂಜು ಮುರಾಳೆ,ಕೃಷ್ಣಾಪ್ಪ ಕಾಂಬಳೆ,ಸದಾಶಿವ ದ'ಳ'ವಾ'ಯಿ , ವ'ು ಹ'ದ'ೇ ವ' ಬಾನಿ,ಅಪ್ಪಾಸಾಬ ಅಗಸಿಮನಿ,ಸುನಿಲ ಇನಾಮದಾರ,ಮುಖ್ಯಾಧಿಕಾರಿ ಇಂದು ಶಿಂಗೆ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಕಬ್ಬೂರ ಪಟ್ಟಣದಲ್ಲಿ ಸ್ಮಶಾನ ಕಾಂಪೌಂಡ್ ಹಾಗೂ ರಸ್ತೆ ಕಾಮಗಾರಿಗೆ ಶಾಸಕ ದುರ್ಯೋಧನ ಐಹೊಳೆ ಅವರು ಚಾಲನೆ ನೀಡಿದರು.

ಇಂಚಲ ಗ್ರಾಮದ ಶಿವಯೋಗಿಶ್ವರ ಭಜನಾ ತಂಡ ಪ್ರಥಮ

ಯಮಕನಮರಡಿ : ರಿಬಿಲ್ಡ್ ಇಂಡಿಯಾ ಸಂಸ್ಥೆಯ ಸಹಕಾರದೊಂದಿಗೆ ಮಹಿಳಾ ಕಲ್ಯಾಣ ಸಂಸ್ಥೆಯ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರದ ದಶಮಾನೋತ್ಸವದ ಅಂಗವಾಗಿ ಸಮೀಪದ ಯಲ್ಲಾಪೂರ-ಕರಗುಪ್ಪಿ ಗ್ರಾಮದ ರೇಡಿಯೋ ಕೇಂದ್ರದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಭಜನಾ ಸ್ಪರ್ಧೆಯಲ್ಲಿ ಸವದತ್ತಿ ತಾಲೂಕಿನ ಇಂಚಲ ಗ್ರಾಮದ

ಶ್ರೀ ಶಿವಯೋಗಿಶ್ವರ ಭಜನಾ ಮಂಡಳ ಪ್ರಥಮ ಸ್ಥಾನ ಪಡೆದು ಎಲ್ಲರ ಗಮನ ಸೆಳೆಯಿತು.

ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ವೈಜಯಂತಿ ಎಂ ಚೌಗಲಾ ಮಾತನಾಡಿದರು.

ಭಜನಾ ಸ್ಪರ್ಧೆಯಲ್ಲಿ ದ್ವಿತಿಯ ಸ್ಥಾನವನ್ನು ಬಾಳೇಶ್ವರ ಭಜನಾ ಮಂಡಳ,ತವಗ ಹಾಗೂ ತೃತೀಯ ಸ್ಥಾನವನ್ನು ದುರದುಂಡೇಶ್ವರ ಭಜನಾ ಮಂಡಳ ಮದಮಕ್ಕನಾಳ ಇವರು ಪಡೆದುಕೊಂಡರು.

ಭಜನಾ ಸ್ಪರ್ಧೆಯ ನಿರ್ಣಾಯಕರಾಗಿ ಸಂಗೀತಕಾರ ಅಕ್ಷಯ ಕುಲಕರ್ಣಿ ಹಾಗೂ ತಬಲಾ ವಾದಕರಾದ ಸುಪ್ರೀತ ಲೋಕಾಪೂರ ಆಗಮಿಸಿದ್ದರು. ಶಕ್ತಿ ಸದನದ ಸಂಯೋಜಕರಾದ ಸುರೇಖಾ ಪಾಟೀಲ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಕಿರಣ ಚೌಗಲಾ ಸಿಬ್ಬಂದಿಗಳಾದ ಶಂಕರ ಕತ್ತಿ ನಮ್ಮೂರ ಬಾನುಲಿ ಸಮುದಾಯ ರೇಡಿರೋ ಕೇಂದ್ರದ ನಿರೂಪಕರಾದ ಆರ ಜೆ ಚೇತನ ಕುಲಕರ್ಣಿ ಹಾಗೂ ಮಹಾಂತೇಶ ಜೋರ್ಲಿ ಉಪಸ್ಥಿತರಿದ್ದರು.

ಸರ್ಕಾರಿ ಜಾಗೆ ಅತಿಕ್ರಮಣ ಖಂಡಿಸಿ ಪ್ರತಿಭಟನೆ



ಬೆಳಗಾವಿ: ಸರ್ಕಾರಿ ಜಾಗೆ ಅತಿಕ್ರಮಣ ಖಂಡಿಸಿ ಅಲ್ಪಸಂಖ್ಯಾತ ಮೆಟ್ರಿಕ್ ನಂತರದ ಬಾಲಕರ ವಸತಿ ಶಾಲೆ ಮುಂಭಾಗದಲ್ಲಿ ಸ್ಥಳೀಯ ನಿವಾಸಿಗಳು ಹಾಗೂ ಮಹಾನಗರ ಪಾಲಿಕೆಯ ಉಪಮಹಾಪೌರ ಹಣಮಂತ ಕೊಂಗಾಲಿ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಮಂಗಳವಾರ ಅಲ್ಪಸಂಖ್ಯಾತ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ಮುಂಭಾಗದಲ್ಲಿರುವ ಸರ್ಕಾರಿ ಜಾಗೆಯನ್ನು ಅತಿಕ್ರಮಣ ಮಾಡಲಾಗಿದೆ ಎಂದು ಆರೋಪಿಸಿದ ರಾಮತೀರ್ಥ ನಗರದ ನಿವಾಸಿಗಳು ಹಾಗೂ ವಿವಿಧ ಸಂಘಟನೆಗಳು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಕೂಡಲೇ ಅತಿಕ್ರಮಣ ಮಾಡಿಕೊಂಡಿರುವ ಜಾಗೆಯಲ್ಲಿ ನಿರ್ಮಿಸಲಾದ ಗೊಡೆಯನ್ನು ಜೆಸಿಬಿ ಮೂಲಕ ತೆರವುಗೊಳಿಸಿದರು.

ಅತಿಕ್ರಮಣ ನಡೆದಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಕೂಡಲೇ ಶಿಸ್ತು ಕ್ರಮ ಜರುಗಿಸಿ, ಸಂಬಂಧಪಟ್ಟ ಅಧಿಕಾರಿಗಳನ್ನು ವಜಾಗೊಳಿಸಬೇಕೆಂದು ಪ್ರತಿಭಟನೆಯಲ್ಲಿ ಒತ್ತಾಯಿಸಿದರು.

ಪ್ರತಿಭಟನೆ ವೇಳೆ ಸ್ಥಳಕ್ಕೆ ಆಗಮಿಸಿದ ಬುಡಾ ಅಧಿಕಾರಿಗಳನ್ನು ನಿವಾಸಿಗಳು ತರಾಟೆಗೆ ತೆಗೆದುಕೊಂಡರು.

ಈ ವೇಳೆ ಬಿಜೆಪಿ ಮಾಹಾನಗ ಜಿಲ್ಲಾ ಉಪಾಧ್ಯಕ್ಷ ಮಹಾಂತೇಶ ಒಕ್ಕುದ, ಪಾಲಿಕೆಯ ಉಪಮಾಹಾಪೌರ ಹಣಮಂತ ಕೊಂಗಾಲಿ, ಬಿಜೆಪಿ ಮುಖಂಡ ಮುರುಗೇಂದ್ರಗೌಡ ಪಾಟೀಲ. ವಿವಿಧ ಸಂಘಟನೆಯಗಳ ಕಾರ್ಯಕರ್ತರು, ಹಾಗೂ ಸ್ಥಳೀಯರು ಸೇರಿದಂತೆ ಇತರರು ಇದ್ದರು..



ಬೆಳಗಾವಿ : ಜಿಲ್ಲೆಯ ರಾಮದುರ್ಗ ತಾಲೂಕಿನ ಗೊಣ್ಣಾಗರ್ ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಮೇ 5ರಿಂದ 15ರ ವರೆಗೆ ನಡೆಯುತ್ತಿರುವ ಈ ಜಾತ್ರೆಯಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಂಡು ದೇವಿಯ ಆಶೀರ್ವಾದ ಪಡೆಯುತ್ತಿದ್ದಾರೆ. ಜಾತ್ರೆಯ ಸಂಭ್ರಮ ಕಂಡು ಖುಷಿಯಾದ ಚನ್ನರಾಜ ಹಟ್ಟಿಹೊಳಿ, ಜಾತ್ರೆ ಅತ್ಯಂತ ಶಾಂತಿಯುತವಾಗಿ ನಡೆಯಲಿ, ದೇವಿಯು ಭಕ್ತರಿಗೆ ಖುಷಿ, ಸಮೃದ್ಧಿ, ನೆಮ್ಮದಿ ನೀಡಲಿ ಎಂದು ಪ್ರಾರ್ಥಿಸಿದರು. ಈ ವೇಳೆ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಪ್ರಜಾಪ್ರಭುತ್ವದ ತತ್ವ ರಕ್ಷಿಸುವುದು ನಾಗರಿಕರ ಆದ್ಯ ಕರ್ತವ್ಯ



ಬೆಳಗಾವಿ: ಪ್ರಜಾಪ್ರಭುತ್ವದಲ್ಲಿರುವ ತತ್ವಗಳನ್ನು ರಕ್ಷಿಸುವಲ್ಲಿ ದೇಶದ ನಾಗರಿಕರ ಪಾತ್ರ ಬಹಳ ಮುಖ್ಯವಾಗಿದೆ ಎಂದು ವಿಶ್ರಾಂತ ನ್ಯಾಯಮೂರ್ತಿ ಎ. ಎಸ್. ಪಾಶ್ಚಾಪುರೆ ಹೇಳಿದರು.

ಕೆಎಲ್ಎಸ್ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದಲ್ಲಿ ಭಾರತದ ಸಂವಿಧಾನ : 75 ವರ್ಷಗಳು, ನಾವು ಪಾಲಿಸಬೇಕಾದ ಸಂವಿಧಾನದ ಪರಂಪರೆ ಎಂಬ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಭಾರತದ ಸಂವಿಧಾನ ಜಗತ್ತಿನಲ್ಲಿಯೇ ಅತ್ಯಂತ ದೊಡ್ಡದು. ಅತ್ಯಂತ ಶ್ರೇಷ್ಠ ವಿಚಾರಗಳಿಂದ ಅದು ಅತ್ಯಂತ ಯಶಸ್ಸು ಪಡೆದುಕೊಂಡಿದೆ ಎಂದು ಹೇಳಿದರು.

ಕರ್ನಾಟಕ ಕಾನೂನು ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷ ಮತ್ತು ನ್ಯಾಯವಾದಿ ಎ.ಕೆ.ಟಗಾರೆ ಮಾತನಾಡಿ, ಸಂವಿಧಾನ ಕೇವಲ ಕಾನೂನು ದಾಖಲೆಯಲ್ಲ, ಆದರೆ ಪ್ರತಿಯೊಬ್ಬ ನಾಗರಿಕರಿಗೂ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಖಾತರಿಪಡಿಸುವ ಜೀವಂತ ಚೌಕಟ್ಟು ಎಂದು ಹೇಳಿದರು.

ಕರ್ನಾಟಕ ಕಾನೂನು ಸಂಸ್ಥೆಯ ಅಧ್ಯಕ್ಷಮತ್ತು ನ್ಯಾಯವಾದಿ ಪಿ.ಎಸ್. ಸಾವುಕಾರ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ.ಎ.ಎಚ್. ಹವಾಲ್ದಾರ ಉಪಸ್ಥಿತರಿದ್ದರು. 28 ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಾಯಿತು. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಮತ್ತು ನ್ಯಾಯವಾದಿ ಆರ್.ಎಸ್. ಮುತಾಲಿಕ್ ಸ್ವಾಗತಿಸಿದರು. ಪ್ರೊ. ಶಿಲ್ಪಾ ರಾಯ್ಕರ್ ಕಾರ್ಯಕ್ರಮದ ಬಗ್ಗೆ ವಿವರಿಸಿದರು.

ಈ ವೇಳೆ ಕೆಎಲ್ಎಸ್ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದ ಆಡಳ ಮಂಡಳಿ, ಪ್ರಾಂಶುಪಾಲರು, ಕಾನೂನು ವಿಭಾಗದ ಶಿಕ್ಷರು ವಿದ್ಯಾರ್ಥಿಗಳು ಸೇರಿದಂತೆ ಇತರರು ಇದ್ದರು.

ಮೂರು ಕಾಲುವೆಗಳಿಗೆ ನೀರು ಹರಿಸಲು ಸಚಿವರಿಗೆ ಮನವಿ



ಗೋಕಾಕ: ಸಾರ್ವಜನಿಕರಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಹಿಡ್ಕಲ್ ಜಲಾಶಯದಿಂದ ಮೂರು ಕಾಲುವೆಗಳಿಗೆ ನೀರು ಹರಿಸಲು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರಿಗೆ ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಮನವಿ ಮಾಡಿಕೊಂಡರು.

ಇಲ್ಲಿನ ಎನ್ಎಸ್ಎಫ್ ಕಾರ್ಯಾಲಯದಲ್ಲಿ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೇಸಿಗೆಯ ಆಹಾಕಾರ ತಪ್ಪಿಸಲು ಕಾಲುವೆಗಳಿಗೆ ನೀರು ಹರಿಸುವುದು ಅವಶ್ಯವಾಗಿದೆ ಎಂದವರು ತಿಳಿಸಿದರು.

ಘಟಪ್ರಭಾ ಎಡದಂಡೆ, ಘಟಪ್ರಭಾ ಬಲದಂಡೆ ಮತ್ತು ಸಿಬಿಸಿ ಕಾಲುವೆಗಳಿಗೆ ನೀರು ಹರಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಪ್ರಸಕ್ತ ಸನ್ನಿವೇಶದಲ್ಲಿ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಚಿವ ಸತೀಶ್ ಜಾರಕಿಹೊಳಿಯವರು ಜನರ ಹಿತದೃಷ್ಟಿಯಿಂದ ನೀರು ಹರಿಸುವ ವಿಶ್ವಾಸ ನನಗಿದೆ. ಇನ್ನೆರಡು ದಿನಗಳಲ್ಲಿ ರೈತರಿಗೆ ಶುಭ ಸುದ್ದಿ ಸಿಗಲಿದೆ ಎಂದು ತಿಳಿಸಿದರು.

ಕಾಲುವೆಗಳಿಗೆ ನೀರು ತಲುಪಿಸಲು ಅಧಿಕಾರಿಗಳು ಮುಂದೆ ಬರಬೇಕು. ನದಿ ತೀರದ ಗ್ರಾಮಗಳಿಗೂ ಸಹ ನೀರು ಹರಿಯಬೇಕು. ಸಾರ್ವಜನಿಕರು ಮತ್ತು ಅಧಿಕಾರಿಗಳ ಮಧ್ಯ ಸಮನ್ವಯ ಸಾಧಿಸಲು ನಮ್ಮ ಟೀಂ ಎನ್ಎಸ್ಎಫ್ ಸಿದ್ಧವಿದೆ. ರೈತರಿಗೆ ನೀರು ಸಿಗಬೇಕೆನ್ನುವ ಮಹತ್ವಾಕಾಂಕ್ಷೆ ನಮ್ಮದು ಎಂದರು. ನೀರಾವರಿ ನಿಗಮದ ಅಧಿಕಾರಿಗಳು ಉಪಸ್ಥಿತರಿದ್ದರು.

CHANGE OF NAME

I, **BHARATI** (Old Name) Resident of Ward No 03, H No 1 156, Near Anganwadi Kendra, Yalagi, Dist: Yadgir - 585216, Karnataka, India, have changed my name as **BHARATI ALUR** (New Name) henceforth I will be called and recognized by new name for all future purposes, dated: 12/05/2026.

CHANGE OF NAME

I, **CHETHAN** (Old Name) Resident of House, HUDCO Colony, Sankeshwar, Belagavi - 591313, have changed my name as **CHETHAN SHETTY** (New Name) henceforth I will be called and recognized by new name for all future purposes, dated: 12/05/2026.

CHANGE OF NAME

I, **YASMIN BANU SAVANUR** (Old Name) Resident At Plot Area At Post - Tilavalli, Taluq- Hangal - 581120 in the Distret of Haveri in Karataka state, have changed my name as **YASMEEN SAVANUR** (New Name) for all purposes affidavit Dtd.: 12-05-2026 sworn before notary **M. B. Sukad**.

CHANGE OF NAME

I, **PRIYANKA PRATAP RAO** (Old Name) Resident of H No 201 3rd Floor Casa Rotson Behind Karnataka Bank Bhavani Nagar Keshwapur Hubli 580023 (address), have changed my name as **PRIYANKA ABHIJIT BELAMKAR** (New Name) henceforth I will be called and recognized by new name for all future purposes, dated: 12/05/2026.

CHANGE OF NAME

I, **SOURABH DHARANEPPANAVAR** (Old Name) Resident of Plot No 113, Vinayak Nagar Opposite Tatwadarsha Hospital, Vidya Nagar, Hubli, Dharwad, Karnataka, Pin Code: 580021, have changed my name as **SOURABH VIJAY DHARANEPPANAVAR** (New Name) henceforth I will be called and recognized by new name for all future purposes, dated: 12/05/2026.

CHANGE OF NAME

I, **SAMEETHA HADAPAD** (Old Name) Resident of Sannammanavar Oni Sattur, Hubli Dharwad Karnataka 580009, have changed my name as **SAMEETHA RAGHAVENDRA HADAPAD** (New Name) henceforth I will be called and recognized by new name for all future purposes, dated: 12/05/2026.

CHANGE OF NAME

I, **SAVITRI** (Old Name) Resident of H No: 856 Sajjan Galli, Tq: Athani, Belagavi, 3 6 2 9 4 9 State: Karnataka, Pin Code: 591304, have changed my name as **SAVITRI NITIN AWATI** (New Name) henceforth I will be called and recognized by new name for all future purposes, dated: 12/05/2026.

CHANGE OF NAME

I, **MUHAMMAD SHAHID DESHNOOR** (Old Name) Resident of CTS NO 4171, Chandu Galli, Belagavi, Karnataka - 590001, have changed my name as **MOHD SHAHID DESHNOOR** (New Name) henceforth I will be called and recognized by new name for all future purposes, dated: 12/05/2026.

CHANGE OF NAME

I, **MEHAR SULTANA HASAN KOCHEBAPU (Old Name)** R/o #20A, Aman Prakash Colony, Gadag Road, Hubli-580020 have changed my name to **MEHAR SULTANA KOCHEBAPU (New Name)** Vide Affidavit Sworn Before Notary S.F. Huilgol on 11-05-2026.

CHANGE OF NAME

I, **SHANKEY PRAKASH JAIN** (Old Name) Resident of #223/12 Heera Matching Centre Banga Bellary, Karataka 583101, have changed my name as **SHANKEY JAIN** (New Name) henceforth I will be called and recognized by new name for all future purposes, dated: 12/05/2026.

ಕ್ರಿಮಿನಲ್ ಮಿಸಲೇನಿಯಸ್ ನಂ: 115/2026
ಮೇ॥ ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ಮುಂಡರಗಿ ಇವರಲ್ಲಿ

ಅರ್ಜಿದಾರ : ಶ್ರೀ ಕನಕಪ್ಪ ತಂದೆ ಪಕ್ಕೀರಪ್ಪ ಡೋಣ್ಣಿ ವಯಾ: 58 ವರ್ಷ ಉದ್ಯೋಗ: ಶೇತ್ಕಿ ಸಾ॥ 6ನೇ ವಾರ್ಡ ಮುಂಡರಗಿ ತಾ: ಮುಂಡರಗಿ ಜಿ: ಗದಗ

-ವಿರುದ್ಧ-

ಎದುರುದಾರ : ಮೇ॥ ತಹಶೀಲ್ದಾರರು ಜನನ ಮತ್ತು ಮರಣ ನೋಂದಣಿ ವಿಭಾಗ ಮುಂಡರಗಿ ತಾ: ಮುಂಡರಗಿ ಜಿ: ಗದಗ

ಸಾರ್ವಜನಿಕ ಪತ್ರಿಕಾ ಪ್ರಕಟಣೆಗಾಗಿ

ಮೇಲ್ಕಾಣಿಸಿದ ಅರ್ಜಿಯಲ್ಲಿ ಅರ್ಜಿದಾರರ ತಾಯಿ ಪೋತಿ ಶ್ರೀಮತಿ ದಿ॥ ಗಂಗಮ್ಮ ಕೋಂ. ಫಕ್ಕೀರಪ್ಪ ಡೋಣ್ಣಿ ಇವರು ದಿನಾಂಕ: 01-06-1965 ರಂದು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಮುಂಡರಗಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಮಾನ್ಯ ಮೇ॥ ತಹಶೀಲ್ದಾರ ಕಾರ್ಯಾಲಯ ಜನನ-ಮರಣ ದಾಖಲೆ ವಿಭಾಗ ಮುಂಡರಗಿ ಇವರ ವಿರುದ್ಧ ಜನನ-ಮರಣ ದಾಖಲೆಯಲ್ಲಿ ಅರ್ಜಿದಾರನ ಪೋತಿ ತಾಯಿಯವರ ಹೆಸರನ್ನು ಮರಣ ದಾಖಲೆಯಲ್ಲಿ ದಾಖಲು ಮಾಡಲು ಪ್ರಕರಣ ದಾಖಲಿಸಿದ್ದು, ಅದು ದಿನಾಂಕ: 20-06-2026 ರಂದು ಮುದ್ದತ್ತು ನಿಗದಿಪಡಿಸಿದ್ದು ಇರುತ್ತದೆ. ಆ ದಿವಸ ಯಾರಾದರೂ ತಕರಾರು ಸಲ್ಲಿಸುವವರು ಇದ್ದಲ್ಲಿ ತಾವಾಗಲಿ ಅಥವಾ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ಸಲ್ಲಿಸಬೇಕು ಇಲ್ಲವಾದಲ್ಲಿ ಯಾರದೂ ತಕರಾರು ಇಲ್ಲ ಅಂತಾ ಪರಿಗಣಿಸಿ ಪ್ರಕರಣ ನಿಕಾಲಿ ಮಾಡಲಾಗುವುದು.

ಈ ದಿವಸ ದಿನಾಂಕ: 8-05-2026 ರಂದು ನಮ್ಮ ಸಹಿ, ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಸ್ಥಳ: ಮುಂಡರಗಿ
ದಿನಾಂಕ: 08-05-2026

ಸಹಿ/- ಶಿರಸ್ತೆದಾರರು
ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ
ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ಆರ್.ವ್ಹಿ. ದೊಡ್ಡಮನಿ, ವಕೀಲರು
ಸಾ: ಮುಂಡರಗಿ ತಾ: ಮುಂಡರಗಿ ಜಿ: ಗದಗ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1228/2026

ಅರ್ಜಿದಾರರು : ಶ್ರೀ ಕೊಟ್ರೇಶ ಬಡಿಗೇರ ತಂದೆ ವಿರುಪಾಕ್ಷಪ್ಪ ಬಡಿಗೇರ, ವಯಸ್ಸು 54 ವರ್ಷ, ವಾಸ॥ ಹಿರೇಮಲ್ಲನಕೆರೆ ಗ್ರಾಮ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ಸ್ಪೆಕ್ಟರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ದೊಡ್ಡಪ್ಪನ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ದೊಡ್ಡಪ್ಪನಾದ ಬಡಿಗೇರ ದ್ಯಾಮಪ್ಪ ತಂದೆ ವೀರಪ್ಪ ಇವರು ದಿನಾಂಕ: 04-06-1983 ರಂದು ಹಿರೇಮಲ್ಲನಕೆರೆ ಗ್ರಾಮದ ನಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 27/5/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 23/4/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಪತ್ರಿಬಸಪ್ಪ ಎಸ್.ಬಿ.
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1230/2026

ಅರ್ಜಿದಾರರು : ಶ್ರೀ ಮ್ಯಾಗೇರಿ ಅಂಜಿನಪ್ಪ ತಂದೆ ಲೇ॥ ದೊಡ್ಡಭೀಮಪ್ಪ, ವಯಸ್ಸು 28 ವರ್ಷ, ಸಾ॥ ಹಿರೇಮಲ್ಲನಕೆರೆ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ಸ್ಪೆಕ್ಟರು, ಹೂವಿನಹಡಗಲಿ,

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಅಜ್ಜಿಯ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.

ಅರ್ಜಿದಾರರ ಅಜ್ಜಿಯಾದ ಹರಿಜನ ಮ್ಯಾಗೇರಿ ಹನುಮವ್ವ ತಾಯಿ ನಿಂಗವ್ವ ಇವರು ದಿನಾಂಕ: 08-06-1965 ರಂದು ಹಿರೇಮಲ್ಲನಕೆರೆ ಗ್ರಾಮದ ನಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 27/5/2026 ರಂದು ಸಮಯ ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷಿಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 23/4/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಶಿರಸ್ತೇದಾರರು
ಸಿ.ಜೆ. & ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಪತ್ರಿಬಸಪ್ಪ ಎಸ್.ಬಿ.
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕ್ರಿಮಿನಲ್ ಮೀಸಿಯಸ್ ನಂ. 108/2026
ಮಾನ್ಯ ದಿವಾಣಿ ನ್ಯಾಯಾಧೀಶರು ನ್ಯಾಯಾಲಯ ಜೆ.ಎಮ್.ಎಫ್.ಸಿ ಮುಂಡರಗಿ

ಅರ್ಜಿದಾರರು : 1) ಶ್ರೀ ಕಾಳಪ್ಪ ತಂದೆ ಈರಪ್ಪ ಪತ್ತಾರ ವಯಾ: 39 ವರ್ಷ ಉದ್ಯೋಗ : ಕೂಲಿ ಸಾ॥ ಪೇಠಾಲೂರ ತಾ॥ ಮುಂಡರಗಿ ಜಿ॥ ಗದಗ 2) ಶ್ರೀಮತಿ ಪ್ರಭಾವತಿ ಕೋಂ ಮಾನಪ್ಪ ಬಡಿಗೇರ ವಯಾ: 42 ವರ್ಷ ಉದ್ಯೋಗ : ಮನೆಗೆಲಸ ಸಾ॥ ಗಂಗಾವತಿ ತಾ॥ ಗಂಗಾವತಿ ಜಿ॥ ಕೊಪ್ಪಳ

-ವಿರುದ್ಧ-

ಎದುರುದಾರ : ಮಾನ್ಯ ಉಪ ತಹಶೀಲ್ದಾರರು, ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು ಡಂಬಳ ತಾ: ಮುಂಡರಗಿ ಜಿ: ಗದಗ

ಸಾರ್ವಜನಿಕ ಪತ್ರಿಕಾ ಪ್ರಕಟಣೆಗಾಗಿ

ಈ ಮೇಲ್ಕಾಣಿಸಿದ ಅರ್ಜಿಯಲ್ಲಿ ಅರ್ಜಿದಾರ ನಂ. 1 ಮತ್ತು 2 ನೇದವರ ಪೋತಿ ಅಜ್ಜ ಶ್ರೀ ಕಾಳಪ್ಪ ತಂದೆ ದೇವೆಂದ್ರಪ್ಪ ಬಡಿಗೇರ ದಿನಾಂಕ: 05-01-1973 ರಂದು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಮೇವುಂಡಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಮಾನ್ಯ ಮೇ॥ ತಹಶೀಲ್ದಾರ ಕಾರ್ಯಾಲಯ ಜನನ-ಮರಣ ದಾಖಲೆ ವಿಭಾಗ ಡಂಬಳ ಇವರ ವಿರುದ್ಧ ಜನನ-ಮರಣ ದಾಖಲೆಯಲ್ಲಿ ಅರ್ಜಿದಾರರ ಪೋತಿ ತಂದೆಯವರ ಹೆಸರನ್ನು ಮರಣ ದಾಖಲೆಯಲ್ಲಿ ದಾಖಲು ಮಾಡಲು ಪ್ರಕರಣ ದಾಖಲಿಸಿದ್ದು, ಅದು ದಿನಾಂಕ: 6-06-2026 ರಂದು ಮುದ್ದತ್ತು ನಿಗದಿಪಡಿಸಿದ್ದು ಇರುತ್ತದೆ. ಆ ದಿವಸ ಯಾರಾದರೂ ತಕರಾರು ಸಲ್ಲಿಸುವವರು ಇದ್ದಲ್ಲಿ ತಾವಾಗಲಿ ಅಥವಾ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ಸಲ್ಲಿಸಬೇಕು ಇಲ್ಲವಾದಲ್ಲಿ ಯಾರದೂ ತಕರಾರು ಇಲ್ಲ ಅಂತಾ ಪರಿಗಣಿಸಿ ಪ್ರಕರಣ ನಿಕಾಲಿ ಮಾಡಲಾಗುವುದು.

ಈ ದಿವಸ ದಿನಾಂಕ: 7-05-2026 ರಂದು ನಮ್ಮ ಸಹಿ, ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಸ್ಥಳ: ಮುಂಡರಗಿ
ದಿನಾಂಕ: 7-05-2026

ಸಹಿ/- ಶಿರಸ್ತೆದಾರರು
ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ
ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ಆರ್.ವ್ಹಿ. ದೊಡ್ಡಮನಿ, ವಕೀಲರು
ಸಾ: ಮುಂಡರಗಿ ತಾ: ಮುಂಡರಗಿ ಜಿ: ಗದಗ

ಕರ್ನಾಟಕ ಸರ್ಕಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವಕ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು - 560001.
ದೂರವಾಣಿ: (080) 22213009, 22211246 ಫ್ಯಾಕ್ಸ್: 080-22215602

ಸಂ: ಡಿವೈಇಎಸ್/ತಾಂಶಾ/ಕ್ರೀಯೋ/280/2025-26 ದಿನಾಂಕ:12.05.2026

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ವಿಷಯ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560 001 ಕರ್ನಾಟಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ವಿವಿಧ ಕಾಮಗಾರಿಗಳಿಗಾಗಿ ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗೆ ಇಟ್ಟ ಮೊತ್ತ	ಇ.ಎಂ.ಡಿ ಮೊತ್ತ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದ ಮೇಲ್ಛಾವಣಿ ದುರಸ್ತಿ ಮತ್ತು ಟವರ್ ದೀಪಗಳ ಸ್ಟ್ಯಾಂಡ್ ದುರಸ್ತಿ ಕಾಮಗಾರಿ (Call-2)	ರೂ.236.69 ಲಕ್ಷಗಳು	ರೂ.3,55,044	27-05-2026 ಸಮಯ 16:00 ಗಂಟೆ	29-05-2026 ಸಮಯ 11:30 ಗಂಟೆ
2	ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ನಗರಸಭೆ ವ್ಯಾಪ್ತಿ-ಯಲ್ಲಿರುವ ಶ್ರೀ ಚನ್ನಭೈರೇಗೌಡ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿ	ರೂ.234.86 ಲಕ್ಷಗಳು	ರೂ.3,52,295	11-06-2026 ಸಮಯ 16:00 ಗಂಟೆ	12-06-2026 ಸಮಯ 16:30 ಗಂಟೆ
3	ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಜಿಲ್ಲಾ ಕ್ರೀಡಾಂಗಣದಲ್ಲಿರುವ 400 ಮೀ ಸಿಂಥೇಟಿಕ್ ಅಥ್ಲೆಟಿಕ್ ಟ್ರ್ಯಾಕ್ ದುರಸ್ತಿ (Call-3)	ರೂ.249.48 ಲಕ್ಷಗಳು	ರೂ.3,74,220	26-05-2026 ಸಮಯ 16:00 ಗಂಟೆ	27-05-2026 ಸಮಯ 11:30 ಗಂಟೆ

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-
ಸಹಾಯಕ ಕಾರ್ಯಪಾಲಕ ಅಭಿಯಂತರರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

ಡಿಐಪಿಆರ್/ಸಿಪಿ/604/ಸಿಸಿಎಲ್/2026-27

ಕ್ರಿಮಿನಲ್ ಮಿಸಲೇನಿಯಸ್ ನಂ: 116/2026
ಮೇ॥ ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ಮುಂಡರಗಿ ಇವರಲ್ಲಿ

ಅರ್ಜಿದಾರ : ಶ್ರೀ ಕನಕಪ್ಪ ತಂದೆ ಪಕ್ಕೀರಪ್ಪ ಡೋಣ್ಣಿ ವಯಾ: 58 ವರ್ಷ ಉದ್ಯೋಗ: ಶೇತ್ಕಿ ಸಾ॥ 6ನೇ ವಾರ್ಡ ಮುಂಡರಗಿ ತಾ: ಮುಂಡರಗಿ ಜಿ: ಗದಗ

-ವಿರುದ್ಧ-

ಎದುರುದಾರ : ಮೇ॥ ತಹಶೀಲ್ದಾರರು ಜನನ ಮತ್ತು ಮರಣ ನೋಂದಣಿ ವಿಭಾಗ ಮುಂಡರಗಿ ತಾ: ಮುಂಡರಗಿ ಜಿ: ಗದಗ ಹಾಗೂ ಇತರರು

ಸಾರ್ವಜನಿಕ ಪತ್ರಿಕಾ ಪ್ರಕಟಣೆಗಾಗಿ

ಮೇಲ್ಕಾಣಿಸಿದ ಅರ್ಜಿಯಲ್ಲಿ ಅರ್ಜಿದಾರರ ಅಜ್ಜಿ ಮತ್ತು ಎದುರುದಾರ ನಂ. 2ರಿಂದ 6 ನೇದವರ ಪೋತಿ ಅಜ್ಜಿ ಶ್ರೀಮತಿ ದಿ॥ ಬಸಮ್ಮ ಕೋಂ. ಶಿದ್ದಪ್ಪ ಡೋಣ್ಣಿ ಇವರು ದಿನಾಂಕ: 01-07-1971 ರಂದು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಮುಂಡರಗಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಮಾನ್ಯ ಮೇ॥ ತಹಶೀಲ್ದಾರ ಕಾರ್ಯಾಲಯ ಜನನ-ಮರಣ ದಾಖಲೆ ವಿಭಾಗ ಮುಂಡರಗಿ ಇವರ ವಿರುದ್ಧ ಜನನ-ಮರಣ ದಾಖಲೆಯಲ್ಲಿ ಅರ್ಜಿದಾರನ ಪೋತಿ ಅಜ್ಜಿಯವರ ಹೆಸರನ್ನು ಮರಣ ದಾಖಲೆಯಲ್ಲಿ ದಾಖಲು ಮಾಡಲು ಪ್ರಕರಣ ದಾಖಲಿಸಿದ್ದು ಅದು ದಿನಾಂಕ: 25-06-2026 ರಂದು ಮುದ್ದತ್ತು ನಿಗದಿಪಡಿಸಿದ್ದು ಇರುತ್ತದೆ. ಆ ದಿವಸ ಯಾರಾದರೂ ತಕರಾರು ಸಲ್ಲಿಸುವವರು ಇದ್ದಲ್ಲಿ ತಾವಾಗಲಿ ಅಥವಾ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ಸಲ್ಲಿಸಬೇಕು ಇಲ್ಲವಾದಲ್ಲಿ ಯಾರದೂ ತಕರಾರು ಇಲ್ಲ ಅಂತಾ ಪರಿಗಣಿಸಿ ಪ್ರಕರಣ ನಿಕಾಲಿ ಮಾಡಲಾಗುವುದು.

ಈ ದಿವಸ ದಿನಾಂಕ: 12-05-2026 ರಂದು ನಮ್ಮ ಸಹಿ, ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಸ್ಥಳ: ಮುಂಡರಗಿ
ದಿನಾಂಕ: 12-05-2026

ಸಹಿ/- ಶಿರಸ್ತೆದಾರರು
ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ
ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ಆರ್.ವ್ಹಿ. ದೊಡ್ಡಮನಿ, ವಕೀಲರು
ಸಾ: ಮುಂಡರಗಿ ತಾ: ಮುಂಡರಗಿ ಜಿ: ಗದಗ

IN THE COURT OF CIVIL JUDGE & JMFC AT SIRUGUPPA

Criminal. Misc. Case No: 433/2026

Between :
Nandeppa S/o. Late. Arnappa, Aged about 57 years, R/o. Bagewadi village, Sirugupppa (T) Ballari.(D) .....Petitioner

And

To,
The Tahasildar - Cum- Birth and Deaths Registrar Taluk Office Siruguppa & others .....Respondents

TO WHOM SO EVER IT MAY CONCERN
NOTICE

Whereas above named petitioner here in have instituted above petition under section 13(3) of birth and death Acts 1969 against the respondents for purpose of seeking death certificate of petitioners Father by name PYATE ARNAPPA S/o. PYATE MALLAYYA Who was expired on 10-03-1995 at the residence of the petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 23-06-2026 at 11.00 am before this court.

In default of your appearance on the date/day of above petition will be heard and determined as "Ex-parte"

Given under my hand & seal of the court this 8th day of May-2026.

By Order of the court,
Sd/- Chief ministrial officer,
Civil judge & JMFC Court Siruguppa.
Sd/- G. Vijaykumar
Advocates Siruguppa.

CHANGE OF NAME

I, **BAGBAN INAYATULLA DADASAHEB BAGBAN** (Old Name) Resident of Mulla Galli, Nerli, Belagavi, Karnataka, Pin Code: 591340, have changed my name as **INAYATULLA DADASAHEB BAGBAN** (New Name) henceforth I will be called and recognized by new name for all future purposes, dated: 12/05/2026.

PUBLIC NOTICE

This public notice is given under the authority and Information given by my client Smt Jyoti W/o Mallikarjuna Mulgund of Ward no 2 in Ilkal town mobile NO 9448818447. The public notice given as below

It is to notify the general public regarding the loss of original sale deed dated 28-10-2009, which has been executed by Parasappa Kambappa Dhannur in fevour of Smt Jayashree W/o Doddabasayya Salimath for Rs 16,29,000/- related to the property bearing plot no 50 in NA RS no 174/4B/1 measuring 215sqmts situated at Ilkal town in Ilkal taluka and district Bagalkot Karanataka state. The said property bounded with East: Road, West: Plot no 40 and 41, North: Plot no 49, South: Plot no 51 and the said sale deed was duly registered before sub register office at Ilkal on 28-10-2009 with document no 1453/09-10. As the said registered sale deed was of previous owner and it was lost by my client's husband Mallikarjuna Bheemappa Mulgund near Kanti Circle at Ilkal town during transit. All the efforts to trace the said document has proved abortive. If the said document is found kindly contact the nearest police station or me as my client's husband Mallikarjuna Bheemappa Mulgund has registered a petition in this regard before Ilkal police station on 3-05-2026 through online with petition no 2184507/2026 to that effect Lost Report form has been issued by the Police Unit Bagalkote. Further my client has purchased the above said property from subsequent purchaser, now my client Smt Jyoti W/o Mallikarjuna Mulgund want to avail financial assistance (loan) from Bank or NBFC. If any body has claim any rights towards the above said property, should file objection before me within 7 days from the date of this publication. Any objections received after this will not be considered and it will be assumed that there are no objections and my client will proceed to obtain loan on the said property.

hungund
11-05-2026

E M KAMMAR ADVOCATE
HUNGUND-587118
PH no 8861046007

ಕ್ರಿಮಿನಲ್ ಮೀಸಿಯಸ್ ನಂ. 107/2026
ಮಾನ್ಯ ದಿವಾಣಿ ನ್ಯಾಯಾಧೀಶರು ನ್ಯಾಯಾಲಯ ಜೆ.ಎಮ್.ಎಫ್.ಸಿ ಮುಂಡರಗಿ

ಅರ್ಜಿದಾರರು : 1) ಶ್ರೀಮತಿ ದೇವಕ್ಕ ಕೋಂ ಪುತ್ರಪ್ಪ ಕಮ್ಮಾರ ವಯಾ: 68 ವರ್ಷ ಉದ್ಯೋಗ : ಮನೆಗೆಲಸ ಸಾ॥ ಬರದೂರ ತಾ॥ ಮುಂಡರಗಿ ಜಿ॥ ಗದಗ, 2) ಶ್ರೀ ಈರಣ್ಣ ತಂದೆ ಶಾಂಬಪ್ಪ ಬಡಿಗೇರ ವಯಾ: 50 ವರ್ಷ ಉದ್ಯೋಗ : ಕೂಲಿ ಸಾ॥ ಮೇವುಂಡಿ ತಾ॥ ಮುಂಡರಗಿ ಜಿ॥ ಗದಗ

ವಿರುದ್ಧ

ಎದುರುದಾರ : ಮಾನ್ಯ ಉಪ ತಹಶೀಲ್ದಾರರು, ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು ಡಂಬಳ ತಾ: ಮುಂಡರಗಿ ಜಿ: ಗದಗ

ಸಾರ್ವಜನಿಕ ಪತ್ರಿಕಾ ಪ್ರಕಟಣೆಗಾಗಿ

ಈ ಮೇಲ್ಕಾಣಿಸಿದ ಅರ್ಜಿಯಲ್ಲಿ ಅರ್ಜಿದಾರ ನಂ. 1 ಮತ್ತು 2 ನೇದವರ ತಂದೆ ಶ್ರೀ ಶಾಂಬಪ್ಪ ತಂದೆ ಶಂಕ್ರಪ್ಪ ಬಡಿಗೇರ ದಿನಾಂಕ: 06-04-1977 ರಂದು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಬರದೂರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಮಾನ್ಯ ಮೇ॥ ತಹಶೀಲ್ದಾರ ಕಾರ್ಯಾಲಯ ಜನನ-ಮರಣ ದಾಖಲೆ ವಿಭಾಗ ಡಂಬಳ ಇವರ ವಿರುದ್ಧ ಜನನ-ಮರಣ ದಾಖಲೆಯಲ್ಲಿ ಅರ್ಜಿದಾರರ ಪೋತಿ ತಂದೆಯವರ ಹೆಸರನ್ನು ಮರಣ ದಾಖಲೆಯಲ್ಲಿ ದಾಖಲು ಮಾಡಲು ಪ್ರಕರಣ ದಾಖಲಿಸಿದ್ದು, ಅದು ದಿನಾಂಕ: 6-06-2026 ರಂದು ಮುದ್ದತ್ತು ನಿಗದಿಪಡಿಸಿದ್ದು ಇರುತ್ತದೆ. ಆ ದಿವಸ ಯಾರಾದರೂ ತಕರಾರು ಸಲ್ಲಿಸುವವರು ಇದ್ದಲ್ಲಿ ತಾವಾಗಲಿ ಅಥವಾ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ಸಲ್ಲಿಸಬೇಕು ಇಲ್ಲವಾದಲ್ಲಿ ಯಾರದೂ ತಕರಾರು ಇಲ್ಲ ಅಂತಾ ಪರಿಗಣಿಸಿ ಪ್ರಕರಣ ನಿಕಾಲಿ ಮಾಡಲಾಗುವುದು.

ಈ ದಿವಸ ದಿನಾಂಕ: 7-05-2026 ರಂದು ನಮ್ಮ ಸಹಿ, ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಸ್ಥಳ: ಮುಂಡರಗಿ
ದಿನಾಂಕ: 7-05-2026

ಸಹಿ/- ಶಿರಸ್ತೆದಾರರು
ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ
ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ಆರ್.ವ್ಹಿ. ದೊಡ್ಡಮನಿ, ವಕೀಲರು
ಸಾ: ಮುಂಡರಗಿ ತಾ: ಮುಂಡರಗಿ ಜಿ: ಗದಗ

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(36ಇ):2026-27:ಜೆಇ-1 ದಿನಾಂಕ: 11.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) /3ನೇ ಕರೆ

ಲೆಕ್ಕಶೀರ್ಷಿಕೆ: 5054-04-337-0-01-154 ಜಿಲ್ಲಾ ರಸ್ತೆಗಳು ಸುಧಾರಣೆಯಡಿ ಇಂಡೆಂಟ್ ನಂ: 30116 ಈ ಕಾಮಗಾರಿಗೆ **3ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು**, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 26.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ.400.00 ಲಕ್ಷ ಆಗಿರುತ್ತದೆ ಮೇಲಿನ ಕಾಮಗಾರಿಗಳಿಗೆ ಕೆ.ಡಬ್ಲ್ಯೂ-4 ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ, ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಭಾಗೀಯ ಕಛೇರಿ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/193/26-27 dt.12.05.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರರವರ ಕಛೇರಿ, ಕ.ನೀ.ನಿ.ನಿ. ಮ.ಬ.ದಂ.ಕಾ.ನಿ. ವಿಭಾಗ ನಂ-5, ರೋಣ-582209
Ph & Fax No. 08381-267247 E-mail id : knnldiv5@gmail.com

ಸಂ : ಕನೀನಿನಿ/ಮಬದ-5/ಪಿ.ಬಿ/ಟೆಂಡರ/2026-27/115 ದಿನಾಂಕ : 12.05.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ (ಕೆ.ಪಿ.ಪಿ.ಪಿ ವೇದಿಕೆ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿ ಬೋರ್ಡ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ ಮಬದಕಾನಿ ವಿಭಾಗ ನಂ.05 ರೋಣ ಇವರ ಕಛೇರಿ ಮೂಲಕ ರೋಣ ವಿಭಾಗದ ಕಾರ್ಯವ್ಯಾಪ್ತಿಯಡಿ ಇರುವ 4701 ಲೆಕ್ಕ ಶೀರ್ಷಿಕೆಯ ಕಾಲುವೆ ಆಧುನೀಕರಣ ಕಾಮಗಾರಿಗಳಿಗೆ ಮರು ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಳನ್ನು ದ್ವಿ-ಲಕೋಟೆ ಪದ್ಧತಿ ಮೂಲಕ ಕರೆಯಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

Sl No	Name of Work	Approximate amount put to tender (In Rs.) (Exluding GST)	EMD Amount (In Rs.)	Stipulated period for Completion	Class of Contractors
1)	Earthwork and lining for remodeling of Distributary-56B of Malaprabha Right Bank Canal ch:5.00-9.00 km including structures. (KNNL/2025-26/CN/WORK_INDENT4235/CALL-2)	**3,49,56,634.75**	**5,25,000.00**	9 Months (Including monsoon)	KPWD Class-II & Above
2)	Earthwork and lining for remodeling of Itagi Distributary of Malaprabha Right Bank Canal ch:12.00-15.00 km including structures. (KNNL/2025-26/CN/WORK_INDENT4241/CALL-2)	**3,07,95,078.23**	**4,62,000.00**	9 Months (Including monsoon)	KPWD Class-II & Above
3)	Earthwork and lining for remodeling of Itagi Distributary of Malaprabha Right Bank Canal ch:15.00-17.00 km including structures. (KNNL/2025-26/CN/WORK_INDENT4242/CALL-2)	**2,13,96,707.54**	**3,21,000.00**	6 Months (Including monsoon)	KPWD Class-II & Above

ಬಿಡ್‌ಗಳನ್ನು ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕೆ.ಪಿ.ಪಿ.ಪಿ ವೇದಿಕೆ ಮೂಲಕ ಮಾತ್ರ ಸಲ್ಲಿಸಬೇಕು. ಹೆಚ್ಚಿನ ವಿವರಗಳ ಕುರಿತಾದ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ ಮಬದಕಾನಿ ವಿಭಾಗ ನಂ. 05 ರೋಣ ಇವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಪಡೆಯುವುದು. ಟೆಂಡರ್ ದಾಖಲಾತಿಗಳನ್ನು KPPP.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ : **13.05.2026** ರ ಬೆಳಿಗ್ಗೆ 11.00 ಘಂಟೆಗೆ ಪಡೆಯಬಹುದಾಗಿರುತ್ತದೆ. ಪ್ರೀ ಬಿಡ್ ಸಭೆಯ ದಿನಾಂಕ : **18.05.2026** ಬೆಳಿಗ್ಗೆ 11.00 ಘಂಟೆಗೆ ಸ್ಥಳ: ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ ಮಬದಕಾನಿ ವಿಭಾಗ ಸಂ. 05 ರೋಣ ಕಛೇರಿ ತಾ॥ ರೋಣ ಜಿ॥ ಗದಗ. ಟೆಂಡರ್ ವಿಚಾರಣೆಗಾಗಿ ಕೊನೆಯ ದಿನಾಂಕ : **21.05.2026** ರ ಸಾಯಂಕಾಲ 05:30 ಘಂಟೆವರೆಗೆ, ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **01.06.2026** ರ ಸಾಯಂಕಾಲ 04:30 ರವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **02.06.2026** ರ ಸಾಯಂಕಾಲ 5.30 ಘಂಟೆಗೆ. ಮತ್ತು ಆರ್ಥಿಕ ಬಿಡ್‌ಗಳನ್ನು ದಿನಾಂಕ : **10.06.2026** ರಂದು ಬೆಳಿಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ ಹಾಜರಾಗಲು ಇಚ್ಛಿಸುವ ಗುತ್ತಿಗೆದಾರರ ಸಮ್ಮುಖದಲ್ಲಿ ಕಾರ್ಯನಿರ್ವಾಹಕ ಇಂಜನೀಯರರು ಕನೀನಿನಿ ಮಬದಕಾನಿ ವಿಭಾಗ ನಂ: 05, ರೋಣ ಕಛೇರಿಯಲ್ಲಿ ತೆರೆಯಲಾಗುವುದು. ಪೂರ್ಣವಿಲ್ಲದ ಟೆಂಡರ್‌ಗಳನ್ನು ಹಾಗೂ ಷರತ್ತುಬದ್ಧವಾಗಿ ಸಲ್ಲಿಸಿದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಸಹ ಹೊಂದಿರುತ್ತಾರೆ.

ಟೆಂಡರ್‌ಗಳ ಹೆಚ್ಚಿನ ಮಾಹಿತಿಯನ್ನು KPPP.karnataka.gov.in ಹಾಗೂ ಈ ಕಛೇರಿಯ ಮುಖಾಂತರ ಪಡೆಯಲು ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು
ಕನೀನಿನಿ ಮಬದಕಾನಿ ವಿಭಾಗ ನಂ. 5, ರೋಣ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/61/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ, ಕಾರ್ಯಾಲಯ, ಅಥಣಿ - 591304, ತಾ॥ ಅಥಣಿ ಜಿ॥ ಬೆಳಗಾವಿ.

ಸಂಖ್ಯೆ : ಕ.ನೀ.ನಿ.ನಿ./ಪು.ಪು.ವಿ./ಟೆಂಡರ್/ಅಥಣಿ/ಬಿ.ಎಲ್.ಆಯ್.ಎಸ್/ ಎಫ್.ಆಯ್.ಸಿ/2026-27/190 ದಿನಾಂಕ : 08-05-2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕ.ನೀ.ನಿ.ನಿ. ಆರ್&ಆರ್ ವಿಭಾಗ ಅಥಣಿ, ಇವರು ಕೆ.ಪಿ.ಪಿ ಪೋರ್ಟಲ್ ಮುಖಾಂತರ ನೊಂದಾಯಿತ ಎರಡನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಇವರಿಂದ **1) KPP I.NO - 4390, 2) KPP I.NO - 4391, 3) KPP I.NO - 4392, 4) KPP I.NO - 4393, 5) KPP I.NO - 4394, 6) KPP I.NO - 546 Call-2,** ಕಾಮಗಾರಿಗಳಿಗೆ ಕೆ.ಡಬ್ಲ್ಯೂ-4 ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ.

ಗುತ್ತಿಗೆದಾರರು 02 - ಕವರ್ ಬಿಡ್ ಸಲ್ಲಿಕೆ ವಿಧಾನವನ್ನು ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ : **https://kppp.karnataka.gov.in** ಮೂಲಕ ಪಡೆದುಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸುವುದು.

ಟೆಂಡರಿಗಿಟ್ಟ ಮೊತ್ತ (ಜಿ.ಎಸ್.ಟಿ. ರಹಿತ) 1) ರೂ. **415.93** ಲಕ್ಷಗಳು, 2) ರೂ. **328.87** ಲಕ್ಷಗಳು, 3) ರೂ. **391.98** ಲಕ್ಷಗಳು, 4) ರೂ. **211.55** ಲಕ್ಷಗಳು, 5) ರೂ. **279.85** ಲಕ್ಷಗಳು, 6) ರೂ. **403.09** ಲಕ್ಷಗಳು ಇರುತ್ತವೆ. ಟೆಂಡರ್ ಅವಧಿ ಮಳೆಗಾಲ ಸಹಿತ ಕ್ರ.ಸಂ. 01 ರಿಂದ 06 (06) ತಿಂಗಳು.

1) ಇ-ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : **13-05-2026 10.30** ರಿಂದ ದಿನಾಂಕ : **20-05-2026** ರ ಸಂಜೆ **4.00** ರವರೆಗೆ, 2) ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ : **18-05-2026** ರ ಸಂಜೆ **4.00** ಘಂಟೆಯವರೆಗೆ, 3) ಬಿಡ್ ಪೂರ್ವ ಸಭೆಯು ಕಾ.ಇಂ. ಕ.ನೀ.ನಿ.ನಿ. ಪುವ & ಪುನಿ ವಿಭಾಗ, ಅಥಣಿ ಕಛೇರಿಯಲ್ಲಿ ಜರುಗಲಿದೆ. ದಿನಾಂಕ : **16-05-2026** ರ ಬೆಳಿಗ್ಗೆ **11.00** ಘಂಟೆಗೆ, 4) ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **13-05-2026 10.30** ರಿಂದ ದಿನಾಂಕ : **20-05-2026** ರ ಸಂಜೆ **4.00** ರವರೆಗೆ, 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **22-05-2026** ರ ಬೆಳಿಗ್ಗೆ **11.00** ಘಂಟೆಗೆ, 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : **25-05-2026** ರ ಬೆಳಿಗ್ಗೆ **11.00** ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೊದನೆ ನಂತರ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ದೂರವಾಣಿ ಸಂಖ್ಯೆ : **08289-285031** ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪುವ ಮತ್ತು ಪುನಿ ವಿಭಾಗ, ಅಥಣಿ.

ಡಿಐಪಿಆರ್/ಬೆಳಗಾವಿ/233/ಜಾಹೀರಾತು/2026-27

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು - 560 009

ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಎಸ್‌ಟಿಎಲ್/ಟೆಂಡರ್/2026-27 ದಿನಾಂಕ: 08.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕದಾದ್ಯಂತ ಕೆಆರ್‌ಐಡಿಎಲ್ ಉಪ ವಿಭಾಗಗಳಿಗೆ ಐಎಸ್ 1786 ಎಫ್‌ಇ 550 ರಂತೆ ಟಿಎಂಟಿ ಸ್ಟೀಲ್ ಬಾರ್‌ಗಳನ್ನು ಪೂರೈಸಲು ಕಳೆದ 3 ಹಣಕಾಸು ವರ್ಷಗಳಲ್ಲಿ ಕೆಳಗಿನ ಕೋಷ್ಟಕದಲ್ಲಿ ನಿಗದಿಪಡಿಸಿದ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರು/ಪ್ರಾಥಮಿಕ ತಯಾರಕರು/ಏಜೆಂಟರು/ಡೀಲರ್‌ಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಸ್ಥೆಯು ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಸರ್ಕಾರಿ ಇಲಾಖೆಗಳು/ಅರೆ ಸರ್ಕಾರಿ ಇಲಾಖೆಗಳು/ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳು/ಕಂಪನಿಗಳಿಗೆ 1000 ಮೆಟ್ರಿಕ್ ಟನ್‌ರಷ್ಟು ಇದೇ ರೀತಿಯ ಪೂರೈಕೆಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ಅರ್ಜಿಗಳನ್ನು ಇ-ಆಡಳಿತ ಸಚಿವಾಲಯದ ಮೂಲಕ ಮಾತ್ರ ಸಲ್ಲಿಸುವುದು. ನೂತನ ವೆಬ್‌ಸೈಟ್: **www.kppp.karnataka.gov.in** ಸಂಪರ್ಕ ಸಂಖ್ಯೆ: **+91 9240214000 / +91 9240214001.**

ಕ್ರ ಸಂ	ಟೆಂಡರ್‌ನ ವಿವರ	ಪ್ರಮಾಣ (ಮೆ.ಟ.ಗಳಲ್ಲಿ)	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)	ಅಗತ್ಯವಿರುವ ಸಂಸ್ಥೆಯ ವಾರ್ಷಿಕ ವಹಿವಾಟು (ರೂ. ಲಕ್ಷಗಳಲ್ಲಿ)
1	ಟೆಂಡರ್ ಭಾಗ-I ಬೆಂಗಳೂರು ಮತ್ತು ಬಿಬಿಎಂಪಿ ವಲಯ	501	299.09	4.49	957.00
2	ಟೆಂಡರ್ ಭಾಗ-II, ಮೈಸೂರು ವಲಯ	619	363.97	5.46	1165.00
3	ಟೆಂಡರ್ ಭಾಗ-III, ಕೇಂದ್ರ (ಚಿತ್ರದುರ್ಗ) ವಲಯ	780	462.54	6.94	1480.00
4	ಟೆಂಡರ್ ಭಾಗ-IV, ಬೆಳಗಾವಿ ವಲಯ	715	425.06	6.38	1360.00
5	ಟೆಂಡರ್ ಭಾಗ-V, ಕಲಬುರಗಿ ವಲಯ	385	228.88	3.43	732.00

ಪೂರೈಕೆಯ ಅವಧಿ: ಪೂರೈಕೆ ಆದೇಶದ ದಿನಾಂಕದಿಂದ ಮೂರು ತಿಂಗಳು

• ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ: **26.05.2026, ಮಧ್ಯಾಹ್ನ 2.00 ಗಂಟೆವರೆಗೆ.** • ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **26.05.2026, ಮಧ್ಯಾಹ್ನ 3.00 ಗಂಟೆವರೆಗೆ.** • ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **29.05.2026, ಮಧ್ಯಾಹ್ನ 3.00 ಗಂಟೆಗೆ.** • ಹಣಕಾಸು ಬಿಡ್ ತೆರೆಯುವ ದಿನಾಂಕ: **30.05.2026, ಮಧ್ಯಾಹ್ನ 3.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ಅಭಿಯಂತರರು (ಉತ್ತರ)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು-09.
ದೂರವಾಣಿ: 080-28015605, ಇ-ಮೇಲ್: ddworkskridl@gmail.com / tenderworks@kridl.net

ಸಹಿ/- ಮುಖ್ಯ ಅಭಿಯಂತರರು (ಉತ್ತರ)

ಕರ್ನಾಟಕ ಸರಕಾರ
(ಜಲ ಸಂಪನ್ಮೂಲ ಇಲಾಖೆ)

ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ) ಬೇಲೂರು ಕೈಗಾರಿಕಾ ವಸಾಹತು, ಧಾರವಾಡ-580011

ಟೆಂಡರ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ)

ಮಾನ್ಯ ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬೇಲೂರು ಕೈಗಾರಿಕಾ ವಸಾಹತು, ಧಾರವಾಡ-580011 ಕಚೇರಿ ಅಡಿಯಲ್ಲಿ ಕೆಳಗಿನ ಅರ್ಹ **Nationalized Public sector banks and Private scheduled commercial banks** ರವರಿಂದ **competitive interest rates on fixed deposit** ಪ್ರತಿಶತ ದರದ ಟೆಂಡರನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಲಾಗಿದೆ.

Sl. No.	Name of Work	Amt. Rs. In Lakhs	Category	EMD Rs.	Period	Category / Class of Contractors
1	e-Tender invited from Private Scheduled Commercial Banks for providing competitive interest rates on Fixed deposit. No. WALMI/2026-27/SE0015	**75.20**	Fixed Deposit	**10000.00**	365 days	Private scheduled commercial banks
2	e-Tender invited from Nationalized Public Sector Banks for providing competitive interest rates on Fixed deposit.No.WALMI/2026-27/SE0014	**112.80**	Fixed Deposit	**10000.00**	365 days	Nationalized Public Sector Banks

ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ನಿಗದಿತ ಇ.ಎಮ್.ಡಿ ಶುಲ್ಕದೊಂದಿಗೆ **https://kppp.karnataka.gov.in** ಪೋರ್ಟಲ್‌ನಲ್ಲಿ, ಅರ್ಜಿಯನ್ನು ದಿನಾಂಕ : **12.05.2026** ರಿಂದ **27.05.2026** ರವರೆಗೆ ಡೌನಲೋಡ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **27.05.2026** ರಂದು ಸಂಜೆ 4.00 ಗಂಟೆಯ ವರೆಗೆ. ಬಿಡ್ ತೆರೆಯುವ ದಿನಾಂಕ : **29.05.2026** ರ ಬೆಳಿಗ್ಗೆ 11:00 ಗಂಟೆಯ ನಂತರ. ಇ.ಎಂ.ಡಿ. ವಿವರ, ಪೂರ್ವಾರ್ಹತೆ ಷರತ್ತುಗಳು, ಟೆಂಡರ ಷರತ್ತುಗಳು ಹಾಗೂ ಇತರೆ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ **(https://kppp.karnataka.gov.in)** ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 0836-2486680 ಸಂಪರ್ಕಿಸುವದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/- ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ,
ಬೇಲೂರು ಕೈಗಾರಿಕಾ ವಸಾಹತು, ಧಾರವಾಡ- 580011

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/163/2026-27

ಪ್ರಧಾನಿ ಮೋದಿ ಮನವಿ
ಏಕೈಕವೂ ಅಲ್ಲ, ಅತಿಯಾದದ್ದೂ ಅಲ್ಲ

ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ, ಸರ್ಕಾರಗಳು ನಿಯಮಿತವಾಗಿ ನಾಗರಿಕರಿಗೆ ಬಳಕೆಯನ್ನು ಕಡಿತಗೊಳಿಸಲು, ಪ್ರಯಾಣವನ್ನು ಕಡಿಮೆ ಮಾಡಲು ಮತ್ತು ಇಂಧನವನ್ನು ಉಳಿಸಲು ಒತ್ತಾಯಿಸುತ್ತವೆ. ಸಂಯಮಕ್ಕಾಗಿ ಪ್ರಧಾನಮಂತ್ರಿ ಮೋದಿ ಅವರ ಮನವಿಯು ಈ ವಿಶ್ವಾದ್ಯಂತದ ಮಾದರಿಯ ಒಂದು ಭಾಗವಾಗಿದೆ. 2026ರ ತೈಲ ಬಿಕ್ಕಟ್ಟನ್ನು ಎದುರಿಸಲು ಅನೇಕ ರಾಷ್ಟ್ರಗಳು ಕೇವಲ ಮನವಿಗಳಿಗಿಂತಲೂ ಮೀರಿ ಇಂಧನ ಪಡಿತರ, ಕಡ್ಡಾಯವಾಗಿ ಮನೆಯಿಂದ ಕೆಲಸ (ವರ್ಕ್ ಫ್ರಮ್ ಹೋಮ್), ಇಂಧನ ಮಿತಿಗಳು, ಕಡಿಮೆ ವೇಗದ ಮಿತಿಗಳು ಮತ್ತು ಪ್ರಯಾಣದ ನಿರ್ಬಂಧಗಳಂತಹ ಕಡ್ಡಾಯ ಆದೇಶಗಳನ್ನು ಜಾರಿಗೊಳಿಸಿವೆ.

ಜಾಗತಿಕ ಸಂದರ್ಭ: ಚಲನಶೀಲತೆ ಮತ್ತು ಇಂಧನ ಸಂಯಮದ ಕುರಿತ ಕ್ರಮ ಯಾಕೆ ಅನಿವಾರ್ಯ?

- 3 ದೇಶಗಳಲ್ಲಿ ಅಡುಗೆ ಎಣ್ಣೆ/ಅನಿಲ ಬಳಕೆ ಕಡಿಮೆ
- 13 ದೇಶಗಳಲ್ಲಿ ವರ್ಕ್ ಫ್ರಮ್ ಹೋಮ್!
- 35 ದೇಶಗಳಲ್ಲಿ ಸಾರ್ವಜನಿಕ ಸಾರಿಗೆ ಬಳಕೆಗೆ ಪ್ರೋತ್ಸಾಹ
- ಇವಿಗಳ ಪ್ರಚಾರ ಹೆಚ್ಚಳ
- ಸಾರ್ವಜನಿಕ ಕಟ್ಟಡಗಳಲ್ಲಿ ತಾಪಮಾನದ ಸೆಟ್ ಪಾಯಿಂಟ್‌ಗಳ ಮಿತಿ




ಮನೆಯಿಂದ ಕೆಲಸ / ಹೊಂದಾಣಿಕೆ ವ್ಯವಸ್ಥೆ

ಪ್ರಯಾಣವನ್ನು ಕಡಿತಗೊಳಿಸಲು ಅನೇಕ ದೇಶಗಳು ನಾಗರಿಕ ಉದ್ಯೋಗಿಗಳಿಗೆ ದೂರಸ್ಥ ಕೆಲಸವನ್ನು ಪ್ರೋತ್ಸಾಹಿಸುತ್ತವೆ ಅಥವಾ ಕಡ್ಡಾಯಗೊಳಿಸುತ್ತವೆ ಮತ್ತು ಖಾಸಗಿ ವಲಯದಲ್ಲಿಯೂ ಇದನ್ನು ಉತ್ತೇಜಿಸುತ್ತವೆ.

ಉದಾಹರಣೆಗಳು:

★ಪಾಕಿಸ್ತಾನ (ವಾರಕ್ಕೆ 4 ದಿನ ಕೆಲಸ + 50% ದೂರಸ್ಥ ಕೆಲಸ)
★ಇಂಡೋನೇಷ್ಯಾ (ಶುಕ್ರವಾರಗಳಂದು ಮನೆಯಿಂದ ಕೆಲಸ)
★ಶ್ರೀಲಂಕಾ (ಬುಧವಾರಗಳಂದು ಕಚೇರಿಗಳಿಗೆ ಬೀಗ)
★ಕೊರಿಯಾ (ಹೊಂದಿಕೊಳ್ಳುವ ವ್ಯವಸ್ಥೆಗಳು)
★ಕಾಂಬೋಡಿಯಾ
★ಲಾವೋ ಪಿಡಿಆರ್
★ಮಲೇಷ್ಯಾ
★ಫಿಲಿಪೈನ್ಸ್
★ಥೈಲ್ಯಾಂಡ್
★ವಿಯೆಟ್ನಾಂ, ಪೆರು, ಈಜಿಪ್ಟ್.



(ಈ ದೇಶಗಳಲ್ಲೂ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ.)

ತಂಪುಗೊಳಿಸುವಿಕೆ/ ಎಸಿ ಮಿತಿ

ವಿದ್ಯುತ್ ಉಳಿಸಲು ಕಚೇರಿಗಳು ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ತಾಪಮಾನದ ಸೆಟ್‌ಪಾಯಿಂಟ್‌ಗಳನ್ನು ನಿಗದಿಪಡಿಸುವುದು.

ಉದಾಹರಣೆ:

- ಬಾಂಗ್ಲಾದೇಶ (25 ಕೆಸಿ)
- ಸಿಂಗಾಪುರ (25 ಕೆಸಿ, ಫ್ಯಾನ್‌ಗಳಿಗೆ ಆದ್ಯತೆ ನೀಡಿ)
- ಕಾಂಬೋಡಿಯಾ (2425ಕೆಸಿ)
- ಮಲೇಷ್ಯಾ (24ಕೆಸಿ)
- ಶ್ರೀಲಂಕಾ (26ಕೆಸಿ)
- ಥೈಲ್ಯಾಂಡ್ (26ಕೆಸಿ)
- ಜೋರ್ಡಾನ್ (ಸಾರ್ವಜನಿಕ ಕಚೇರಿಗಳಲ್ಲಿ ಎಸಿ ನಿಷೇಧ).

ವಿಮಾನ ಪ್ರಯಾಣ ನಿರ್ಬಂಧ



ಅಂತಾರಾಷ್ಟ್ರೀಯ ಪ್ರವಾಸಗಳ ಮೇಲೆ ಮಿತಿ.

ಉದಾಹರಣೆ



- **ಜೋರ್ಡಾನ್ (ತಾತ್ಕಾಲಿಕ ನಿಷೇಧ)**
- **ಪಾಕಿಸ್ತಾನ (ವಿದೇಶಿ ಪ್ರಯಾಣದ ಮೇಲೆ ನಿಷೇಧ)**
- **ಈಜಿಪ್ಟ್, ಇಂಡೋನೇಷ್ಯಾ, ಮಲೇಷ್ಯಾ, ಕೊರಿಯಾ (ಸಾರ್ವಜನಿಕ ವಲಯಕ್ಕೆ ಬೆಸ-ಸಮ ನಿಯಮ)**
- **ಪನಾಮ, ಟಾಂಜಾನಿಯಾ (ಸಾರ್ವಜನಿಕ ಬಸ್ ಪ್ರಯಾಣ).**

ಸಾರಿಗೆ ಮತ್ತು ಇಂಧನ ಕ್ರಮಗಳು



ಪಡಿತರ, ಬೆಸ-ಸಮ ನಿಯಮ, ವೇಗದ ಮಿತಿ, ಸಾರ್ವಜನಿಕ ಸಾರಿಗೆ/ಇವಿಗಳ ಪ್ರಚಾರ, ಜೈವಿಕ ಇಂಧನ ಮಿಶ್ರಣ.

ಉದಾಹರಣೆಗಳು:

- ಕೊರಿಯಾ (ಬೆಸ-ಸಮ ವಾಹನ ಚಾಲನೆ ಮಾಡದ ದಿನಗಳು)
- ಶ್ರೀಲಂಕಾ (ಕ್ಯುಆರ್ ಕೋಡ್ ಪಡಿತರ), ಮ್ಯಾನ್ಮಾರ್ (ಪರ್ಯಾಯ ದಿನಗಳು + ಇವಿ ಟ್ರೇಡ್-ಇನ್)
- ಬಾಂಗ್ಲಾದೇಶ (ಇಂಧನ ಮಿತಿ)
- ಪಾಕಿಸ್ತಾನ (ಉಚಿತ ಸಾರ್ವಜನಿಕ ಸಾರಿಗೆ, ವೇಗದ ಮಿತಿಗಳು)
- ಇಂಡೋನೇಷ್ಯಾ (ಬಯೋಡೀಸೆಲ್ + ಇವಿ ಉತ್ತೇಜನ).

ಗಮನಾರ್ಹ ವಿಶಾಲ ಕ್ರಮ

ದಕ್ಷತೆ ಮತ್ತು ವಿದ್ಯುದ್ದೀಕರಣದ ಉತ್ತೇಜನ



ಸೌರ ಅಳವಡಿಕೆಗಳು, ಎಲ್‌ಇಡಿ ಮರುಹೊಂದಿಸುವಿಕೆಗಳು, ಹೀಟ್ ಪಂಪ್ ಅನುದಾನಗಳು (ಉದಾಹರಣೆಗೆ: ಯುಕೆ, ನೆದರ್ಲ್ಯಾಂಡ್ಸ್, ಸ್ಪೇನ್), ಇವಿ ಅಳವಡಿಕೆ (ಫ್ರಾನ್ಸ್, ಯುಕೆ, ಚಿಲಿ, ಕಾಂಬೋಡಿಯಾ, ಲಾವೋ ಪಿಡಿಆರ್, ಮ್ಯಾನ್ಮಾರ್, ಥೈಲ್ಯಾಂಡ್).

ತುರ್ತು ಘೋಷಣೆ

ಮಡಗಾಸ್ಕರ್ (15 ದಿನಗಳು), ಮಾರ್ಷಲ್ ದ್ವೀಪಗಳು (90 ದಿನಗಳು), ಟುವಾಲು (ಒಂದು ದ್ವೀಪದಲ್ಲಿ 2 ವಾರಗಳು), ಫಿಲಿಪೈನ್ಸ್/ಶ್ರೀಲಂಕಾ: ರಾಷ್ಟ್ರೀಯ ಇಂಧನ ತುರ್ತುಸ್ಥಿತಿ.

ಉದ್ದೇಶಿತ ನಿರ್ಬಂಧಗಳು



ಎಲ್‌ಪಿಜಿ (ಅನಿಲ) ಸಿಲಿಂಡರ್ ಅರ್ಧ-ತುಂಬಿಸುವಿಕೆ (ಮಾಲ್ಡೀವ್ಸ್, ನೇಪಾಳ), ಮಾರುಕಟ್ಟೆ ಮುಚ್ಚುಗಡೆಗಳು (ಪಾಕಿಸ್ತಾನ), ಜಾಹೀರಾತು ಫಲಕಗಳ ದೀಪಗಳನ್ನು ಆರಿಸುವುದು (ಈಜಿಪ್ಟ್, ಶ್ರೀಲಂಕಾ).

40ಕ್ಕೂ ಹೆಚ್ಚು ದೇಶಗಳಿಂದ ಕ್ರಮ

ಜಾಗತಿಕ ಇಂಧನ ಬಿಕ್ಕಟ್ಟುಗಳಿಗೆ ಪ್ರತಿಕ್ರಿಯೆಯಾಗಿ, ಐಜಿಸಿ (ಐಇಎ) ಟ್ರ್ಯಾಕರ್ ಸುಮಾರು 40 ದೇಶಗಳು (ಜೊತೆಗೆ ಯುರೋಪಿಯನ್ ಕಮಿಷನ್) ಕೈಗೊಂಡ ತುರ್ತು ಇಂಧನ ಸಂರಕ್ಷಣಾ ಕ್ರಮಗಳನ್ನು ದಾಖಲಿಸಿದೆ. 40ಕ್ಕೂ ಹೆಚ್ಚು ದೇಶಗಳು ಇಂಧನ ಮತ್ತು ಚಲನಶೀಲತೆಯ ಮೇಲೆ ಕ್ರಮ ಕೈಗೊಂಡಿವೆ.

ಹೊಸ ಪರಿಹಾರ ಪರಿಚಯ: ಮುಂದುವರಿದ ಆರ್ಥಿಕತೆಗಳು, ಅಬಕಾರಿ ಸುಂಕ ಕಡಿತ, ರಾಜ್ಯ ನೆರವು ಚೌಕಟ್ಟು, ಅಕ್ರಮ ಬೆಲೆ ಏರಿಕೆ ವಿರುದ್ಧ ಎಚ್ಚರಿಕೆ ಮತ್ತು ಸಾರಿಗೆ, ಕೃಷಿ ಹಾಗೂ ಹೆಚ್ಚಿನ ಮೈಲೇಜ್ ಬಳಸುವವರಿಗಾಗಿ ವಲಯ-ನಿರ್ದಿಷ್ಟ ಪರಿಹಾರಗಳನ್ನು ಪರಿಚಯಿಸಿವೆ.

ಏನೇನು ಪರಿಹಾರ?

3 ದೇಶಗಳು ಅಡುಗೆ ಎಣ್ಣೆ/ ಅನಿಲ ಬಳಕೆಯನ್ನು ಕಡಿಮೆ ಮಾಡಲು ನೇರ ಕ್ರಮಗಳನ್ನು ಜಾರಿಗೆ ತಂದಿವೆ (ಪಡಿತರ, ಸಿಲಿಂಡರ್‌ಗಳನ್ನು ಅರ್ಧದಷ್ಟು ತುಂಬಿಸುವುದು ಅಥವಾ ಎಲೆಕ್ಟ್ರಿಕ್ /ಪಿಎನ್‌ಜಿ ಪರ್ಯಾಯಗಳಿಗೆ ಬದಲಾಯಿಸುವುದು).

18 ದೇಶಗಳು ಮೋಬೈಲಿಟಿ ಕಡಿತ ತಂತ್ರಗಳನ್ನು ಅಳವಡಿಸಿಕೊಂಡಿವೆ. (ಇಂಧನ ಪಡಿತರ/ ಮಿತಿಗಳು, ಪರ್ಯಾಯ ದಿನಗಳ ಚಾಲನೆ, ಸಾರ್ವಜನಿಕ ಸಾರಿಗೆ/ಕಾರ್‌ಪೂಲಿಂಗ್ ಪ್ರೋತ್ಸಾಹ, ಖಾಸಗಿ/ಸರ್ಕಾರಿ ವಾಹನಗಳ ಮೇಲೆ ಮಿತಿ ಮತ್ತು ಇವಿಗೆ ಪ್ರೋತ್ಸಾಹ).

13 ದೇಶಗಳು, ವಿಶೇಷವಾಗಿ ಸಾರ್ವಜನಿಕ ವಲಯದಲ್ಲಿ ಮನೆಯಿಂದ ಕೆಲಸ (ವರ್ಕ್ ಫ್ರಾಮ್ ಹೋಮ್) ಮತ್ತು ದೂರಸ್ಥ-ಕೆಲಸದ ವ್ಯವಸ್ಥೆಗಳನ್ನು ಉತ್ತೇಜಿಸಿವೆ.

ಬಹುತೇಕ ದೇಶಗಳು (35ಕ್ಕೂ ಹೆಚ್ಚು) ಸಾರ್ವಜನಿಕ ಅಭಿಯಾನಗಳು, ತಂಪುಗೊಳಿಸುವಿಕೆ/ಬೆಳಕಿನ ಮಿತಿಗಳು, ಸರ್ಕಾರಿ ಪ್ರಯಾಣದ ನಿರ್ಬಂಧಗಳು ಮತ್ತು ಸಾಮಾನ್ಯ ದಕ್ಷತಾ ಅಭಿಯಾನಗಳ ಮೂಲಕ ವ್ಯಾಪಕ ಇಂಧನ ಬಳಕೆ ಕಡಿತದ ಉಪಕ್ರಮಗಳನ್ನು ಪ್ರಾರಂಭಿಸಿವೆ.

ಶಾಲೆ, ವಿಶ್ವವಿದ್ಯಾಲಯ ಮೇಲೆ ನಿರ್ಬಂಧ



ಕ್ಲಾಸ್‌ಗಳನ್ನು ಕಡಿಮೆ ಮಾಡುವುದು ಅಥವಾ ಆನ್‌ಲೈನ್ ತರಗತಿಗಳಿಗೆ ಮನ್ನಣೆ.

ಉದಾಹರಣೆಗಳು

- ಬಾಂಗ್ಲಾದೇಶ (ವಿಶ್ವವಿದ್ಯಾಲಯಗಳ ಮುಚ್ಚುಗಡೆ)
- ಶ್ರೀಲಂಕಾ (ಬುಧವಾರಗಳಂದು ರಜೆ)
- ಲಾವೋ ಪಿಡಿಆರ್ (3 ದಿನಗಳಿಗೆ ಕಡಿತಗೊಳಿಸುವುದು)
- ಪಾಕಿಸ್ತಾನ (100% ಆನ್‌ಲೈನ್)

ಸಾರ್ವಜನಿಕ ಅಭಿಯಾನ ಮತ್ತು ಆದೇಶ

ಇಂಧನ ಅಥವಾ ವಿದ್ಯುತ್ ಉಳಿಸಲು (ಬೆಳಕು, ಸಾಧನಗಳು ಇತ್ಯಾದಿ) ಗ್ರಾಹಕರು, ವ್ಯವಹಾರಗಳು ಮತ್ತು ಕಚೇರಿಗಳನ್ನು ಒತ್ತಾಯಿಸುವುದು. ಪಟ್ಟಿಯಲ್ಲಿರುವ ಬಹುತೇಕ ಎಲ್ಲಾ ದೇಶಗಳಲ್ಲಿ ಇದು ವ್ಯಾಪಕವಾಗಿದೆ.

ಉದಾಹರಣೆ

- **ಆಸ್ಟ್ರೇಲಿಯಾ:** ಪ್ರತಿಯೊಂದು ಸಣ್ಣ ಉಳಿತಾಯದಿಂದ ನೆರವು.
- **ಕಾಂಬೋಡಿಯಾ:** ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಲು ಸಾರ್ವಜನಿಕರಿಗೆ ಒತ್ತಾಯಿಸುತ್ತಿರುವ ಸರ್ಕಾರಿ ಸ್ವಾಮ್ಯದ ವಿದ್ಯುತ್ ಕಂಪನಿ.
- **ಕೊರಿಯಾ:** ಪ್ರಾಯೋಗಿಕ ಉಳಿತಾಯ ಕ್ರಮಗಳ ಕುರಿತು ಸಾರ್ವಜನಿಕ ಅಭಿಯಾನವನ್ನು ನಡೆಸುವುದು.
- **ಸಿಂಗಾಪುರ:** ಇಂಧನ ಸಂರಕ್ಷಿಸಲು ಮತ್ತು ದಕ್ಷ ಸಾಧನಗಳನ್ನು ಬಳಸಲು ಸಾರ್ವಜನಿಕರಿಗೆ ಒತ್ತಾಯಿಸುವುದು. ಉದ್ಯಮ ದಕ್ಷತಾ ಅನುದಾನವನ್ನು ಎಲ್ಲಾ ವಲಯಗಳಿಗೆ ವಿಸ್ತರಿಸುವುದು. ಲೆಟ್ಸ್ ಸೇವ್ ಎನರ್ಜಿ ಟುಗೆದರ್ ಅಭಿಯಾನವನ್ನು ಪ್ರಾರಂಭಿಸುವುದು ಹಾಗೂ ಕ್ಲೈಮೇಟ್ ವೋಚರ್ ಯೋಜನೆಯನ್ನು ಬಳಸಿಕೊಳ್ಳಲು ಪ್ರೋತ್ಸಾಹಿಸುವುದು.
- **ನೆದರ್ಲ್ಯಾಂಡ್ಸ್:** ರಾಷ್ಟ್ರೀಯ ತೈಲ ಬಿಕ್ಕಟ್ಟಿನ ಯೋಜನೆಯ ಹಂತ 1 ಅನ್ನು ಪ್ರಾರಂಭಿಸುವುದು. ಸೌರ ಪಿವಿ ಅಳವಡಿಕೆ, ಗ್ಯಾಸ್ ಬಾಯ್ಲರ್‌ಗಳ ಬದಲಿಗೆ ಹೀಟ್ ಪಂಪ್‌ಗಳ ಬಳಕೆ ಮತ್ತು ಮನೆಗಳ ಮರುಹೊಂದಿಸುವಿಕೆ ಸೇರಿದಂತೆ ಕುಟುಂಬಗಳು ಮತ್ತು ವ್ಯವಹಾರಗಳಿಗಾಗಿ ಉದ್ದೇಶಿತ ದಕ್ಷತೆಯ ಪ್ಯಾಕೇಜ್ ಅನ್ನು ಪರಿಚಯಿಸುವುದು.
- **ಪಾಕಿಸ್ತಾನ:** ಇಂಧನ ಉಳಿಸಲು ಸ್ಥಳೀಯ ಸರ್ಕಾರಗಳಿಗೆ ಸೂಚಿಸುವುದು. ಯಾವುದೇ ಅಧಿಕೃತ ಔತಣಕೂಟಗಳಿಲ್ಲ, ಯಾವುದೇ ಭೌತಿಕ ಸಭೆಗಳಿಲ್ಲ, ಮಾರುಕಟ್ಟೆಗಳು ಮತ್ತು ವಾಣಿಜ್ಯ ಕೇಂದ್ರಗಳನ್ನು ರಾತ್ರಿ 8 ರಿಂದ ಮತ್ತು ಆಹಾರ ಹಾಗೂ ಕಾರ್ಯಕ್ರಮಗಳ ಸಂಸ್ಥೆಗಳನ್ನು ರಾತ್ರಿ 10 ರಿಂದ ಮುಚ್ಚುವುದು.
- **ಮಡಗಾಸ್ಕರ್:** 15 ದಿನಗಳವರೆಗೆ ರಾಷ್ಟ್ರವ್ಯಾಪಿ ಇಂಧನ ತುರ್ತುಸ್ಥಿತಿಯನ್ನು ಘೋಷಿಸುವುದು.
- **ಸ್ಪೇನ್:** ನವೀಕರಣಗಳು, ಸೌರ ಇಂಧನ ಅಳವಡಿಕೆ ಮತ್ತು ವಿದ್ಯುದ್ದೀಕರಣ ಕ್ರಮಗಳಿಗಾಗಿ ವೈಯಕ್ತಿಕ ಆದಾಯ ತೆರಿಗೆಯನ್ನು ಕಡಿತಗೊಳಿಸುವುದು.
- **ಥೈಲ್ಯಾಂಡ್:** ಬೇಡಿಕೆಯನ್ನು ಸೀಮಿತಗೊಳಿಸಲು ಕಚೇರಿ ಉದ್ಯೋಗಿಗಳನ್ನು ಕೇಳುವುದು (ಮೆಟ್ಟಿಲುಗಳನ್ನು ಬಳಸುವುದು, ಸಾಧನಗಳನ್ನು ಸ್ಥಗಿತಗೊಳಿಸುವುದು ಸೇರಿದಂತೆ). ಗ್ರಾಮೀಣ ಬೀದಿ ದೀಪಗಳನ್ನು ಕಡಿಮೆ ಮಾಡುವುದು.
- **ಯುನೈಟೆಡ್ ಕಿಂಗ್‌ಡಮ್:** ಕುಟುಂಬಗಳು ಅನಿಲ ಅಥವಾ ತೈಲ ಆಧಾರಿತ ತಾಪನದಿಂದ ಹೀಟ್ ಪಂಪ್‌ಗಳಿಗೆ ಮತ್ತು ಇತರ ಮನೆ ಮರುಹೊಂದಿಸುವಿಕೆ ಕ್ರಮಗಳಿಗೆ ಬದಲಾಯಿಸಲು ಅನುದಾನವನ್ನು ಹೆಚ್ಚಿಸುವುದು.
- **ವಿಯೆಟ್ನಾಂ:** ಇಂಧನ ಉಳಿಸಲು ಸಹಾಯ ಮಾಡಲು ಸ್ಥಳೀಯ ಸರ್ಕಾರಗಳಿಗೆ ಕೇಳುವುದು.

ಇಂದು ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಬೆಂಗಳೂರು ಪೈಪೋಟಿ
ಗೆದ್ದರೆ ಪ್ಲೇಆಫ್‌ಗೆ ಆರ್‌ಸಿಬಿ!

ರಾಯ್ಪುರ: ನಂಬರ್ ಒನ್ ಸ್ಥಾನದಲ್ಲಿರುವ ಆರ್‌ಸಿಬಿ ಪ್ಲೇಆಫ್ ಖಾತ್ರಿಗಾಗಿ ಕೆಕೆಆರ್‌ನೊಂದಿಗೆ ಬುಧವಾರದಂದು ಸೆಣಸಾಡಲಿದೆ. ಮೊದಲನೇ ಸ್ಥಾನದಲ್ಲಿರುವ ಆರ್‌ಸಿಬಿ ಅರ್ಹತೆ ಪಡೆಯುವ ಪ್ರಮುಖ ತಂಡವಾಗಿದ್ದರೂ ಪ್ಲೇಆಫ್ ಇನ್ನೂ ಕಟ್ಟಿಟ್ಟ ಬುತ್ತಿಯಾಗಿಲ್ಲ. ಟಾಪ್‌ಎರಡರಲ್ಲೇ ಉಳಿಯಬೇಕಾದರೆ ಈ ಪಂದ್ಯ ಪ್ರಮುಖ ಪಾತ್ರ ವಹಿಸಲಿದೆ. ಇತ್ತ ಕೆಕೆಆರ್ ಗೆದ್ದರೆ ಮಾತ್ರ ತಾಂತ್ರಿಕವಾಗಿ ಪಂದ್ಯಾವಳಿಯಲ್ಲಿ ಉಳಿದರೂ ಪ್ಲೇಆಫ್‌ಗೇರಬೇಕಾದರೆ ಮಿರ್ಯಾಕಲ್ ಒಂದು ನಡೆಯಲೇಬೇಕಿದೆ.

ರಾಯ್ಪುರದ ಬೌಲಿಂಗ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೆಂಗಳೂರಿಗಿದು ಎರಡನೇ ತವರಾಗಿದ್ದು, ಈ ಹಿಂದೆ ಮುಂಬೈ ವಿರುದ್ಧ ಥ್ರಿಲ್ಲಿಂಗ್ ಪಂದ್ಯದಲ್ಲಿ ಗೆದ್ದಿದೆ. ಸಮತೋಲಿತ ತಂಡವಾಗಿದ್ದರೂ ಆರ್‌ಸಿಬಿಗೆ ಬ್ಯಾಟಿಂಗ್ ಕುಸಿತ ಹಿನ್ನಡೆ ತಂದಿದೆ. ಅತ್ತ ಕೆಕೆಆರ್ ಪರ ಫಿನ್ ಆಲೆನ್ ಅಬ್ಬರದ ಶತಕ ಬಾರಿಸಿದ ನಂತರ ಭರವಸೆಯೊಂದಿಗೆ ಮೈದಾನಕ್ಕಿಳಿಯಲಿದೆ. ಅಂಕಪಟ್ಟಿ ಹೊಡೆದಾಟ ದೃಷ್ಟಿಯಲ್ಲಿ ಇದು ಮಹತ್ವದ ಪಂದ್ಯವಾಗಿದ್ದು, ಕುತೂಹಲ ಮೂಡಿಸಿದೆ.

ಆರ್‌ಸಿಬಿಗೆ ಭುವಿ ಭರವಸೆ: ಈ ಆವೃತ್ತಿಯಲ್ಲಿ ಆರ್‌ಸಿಬಿಗೆ ಗೆಲುವಿನ ಹಿಂದಿರುವ ಪ್ರಮುಖ ಶಕ್ತಿಯಾಗಿ ಭುವನೇಶ್ವರ್ ಕುಮಾರ್ ಪಾತ್ರವಹಿಸಿದ್ದಾರೆ. ಪ್ರತಿ ಪಂದ್ಯದಲ್ಲಿ ಬೌಲಿಂಗ್ ಮೂಲಕ ಎದುರಾಳಿಗೆ ಕಾಡುವ ಅವರು, ಗೆಲುವಿನಲ್ಲಿ ಮಿಂಚುತ್ತಿದ್ದಾರೆ. ದೊಡ್ಡ ದೊಡ್ಡ ಬ್ಯಾಟರ್‌ಗಳನ್ನು ಆರಂಭದಲ್ಲೇ ಕಟ್ಟಿಹಾಕಿರುವ ಅವರು, ಆಡಿರುವ ಪಂದ್ಯಗಳಲ್ಲಿ ಬರೋಬ್ಬರಿ 21 ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪಡೆದವರಾಗಿದ್ದಾರೆ. ಇತ್ತ ಅವರಿಗೆ ಜೋಶ್ ಹ್ಯಾಜೆಲ್ವುಡ್ ಜೋಶ್ ತುಂಬುತ್ತಿರುವುದೇ ದೊಡ್ಡ ಬಲ. ಕಳೆದ ಪಂದ್ಯದಲ್ಲಿ ಬ್ಯಾಟಿಂಗ್ ಮಾಡಬೇಕಾದ ಸಮಯ ಬಂದಾಗಲೂ ಭುವಿ ಸೈ ಅಂದಿದ್ದು, ತಂಡಕ್ಕೆ ವಿಶ್ವಾಸ ದ್ವಿಗುಣಗೊಳಿಸಿದೆ. ಬ್ಯಾಟಿಂಗ್ ವಿಚಾರದಲ್ಲೇ ಆರ್‌ಸಿಗೆ ತಲೆನೋವಾಗಿದೆ. ಸಾಲ್ಟ್ ಬದಲಿ ಆಟಗಾರರಾಗಿ ಕಣಕ್ಕಿಳಿದಿರುವ ಜೇಕಬ್ ಬೆಥಲ್ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ. ಸ್ಫೋಟಕ ಬ್ಯಾಟಿಂಗ್ ಮೂಲಕ ಆರೆಂಜ್ ಕ್ಯಾಪ್ ಪೈಪೋಟಿಯಲ್ಲಿ ಪ್ರಬಲ ಸ್ಪರ್ಧಿಯಾಗಿರುವ ವಿರಾಟ್ ಕೊಹ್ಲಿ ಎರಡು ಪಂದ್ಯಗಳಲ್ಲಿ ಶೂನ್ಯ ಸುತ್ತಿರುವುದು ತಂಡಕ್ಕೆ ಹಿನ್ನಡೆ ತಂದಿದೆ. ಇತ್ತ ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಪಡಿಕ್ಕಲ್ ಪ್ರಭಾವ ಮೂಡಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ನಾಯಕ ಪಾಟಿದಾರ್ ತಮ್ಮ ಲಯದಲ್ಲಿದ್ದು, ಭರ್ಜರಿ ಪ್ರದರ್ಶನದೊಂದಿಗೆ ಮಿಂಚಿದ್ದಾರೆ. ಆದರೆ ಕೆಳಕ್ರಮಾಂಕದಲ್ಲಿ ರನ್ ಬರುತ್ತಿಲ್ಲ, ಡೇವಿಡ್ ಮಿಂಚಿದರೂ, ಜಿತೇಶ್ ಶರ್ಮ ಪರದಾಡುತ್ತಿದ್ದಾರೆ. ರೋಮಾರಿಯೋ ಶೆಫರ್ಡ್ ಬ್ಯಾಟ್‌ನಿಂದ ರನ್ ಬರುತ್ತಿಲ್ಲ, ಆದಾಗ್ಯೂ ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಹೆಚ್ಚುವರಿ ಬ್ಯಾಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ತಂಡಕ್ಕೆ ಆನೆ ಬಲ ತಂದಿದೆ.

ಗೆಲುವಿನ ಹಂಬಲದಲ್ಲಿ ಕೆಕೆಆರ್: ಗೆಲುವಿಗೂ ಮುನ್ನವೇ ಅರ್ಧದಷ್ಟು ಪಂದ್ಯಗಳಲ್ಲಿ ಸೋತಿರುವ ಕೆಕೆಆರ್ ದ್ವಿತಿಯಾರ್ಧದಲ್ಲಿ ಭರ್ಜರಿ ಪ್ರದರ್ಶನ ನೀಡಿದೆ. ಕೊನೆ ಕಳೆದ ಪಂದ್ಯದಲ್ಲಿ ಫಿನ್ ಆಲೆನ್ ಅಬ್ಬರದ ಶತಕ ಬಾರಿಸಿರುವುದು ತಂಡಕ್ಕೆ ಸಿಕ್ಕ ದೊಡ್ಡ ಬಲವಾಗಿದೆ. ಹಿಂದಿನ ಪಂದ್ಯಗಳಲ್ಲಿ ಸ್ಪಿನ್ನರ್‌ಗಳಾದ ಸುನಿಲ್ ನರೈನ್ ಹಾಗೂ ವರುಣ್ ಚಕ್ರವರ್ತಿ ಮಿಂಚಿದ್ದಾರೆ. ಅತ್ತ ಅನುಕುಲ್ ರಾಯ್ ಉತ್ತಮ ಇಂಪ್ಯಾಕ್ಟ್ ಮಾಡಿದ್ದಾರೆ. ಅಜಿಂಕ್ಯಾ ರಹಾನೆ, ರಘುವಂಶಿ ಲಯಕ್ಕೆ ಮರಳಬೇಕಿದೆ. ತಂಡದಲ್ಲಿ ಸ್ಥಾನ ಪಡೆದರೂ ಮನೀಶ್ ಪಾಂಡೆ ಅವಕಾಶಗಳನ್ನು ಪಡೆದಿಲ್ಲ, ರಿಂಕು ಸಿಂಗ್ ಕೂಡ ಲಯಕ್ಕೆ ಮರಳಿದಂತಿದೆ. ಬೌಲಿಂಗ್ ವಿಭಾಗಕ್ಕೆ ಬಂದರೆ ವೇಗಿಗಳ ಕಮ್ಮಿ ತಂಡಕ್ಕೆ ಕಾಡುತ್ತಿದೆ. ವೈಭವ್ ಆರೋರಾ ಹಿನ್ನಡೆ ಅನುಭವಿಸಿದ್ದಾದರೂ ಕಾರ್ತಿಕ್ ತ್ಯಾಗಿ ಗಮನಾರ್ಹ ಪ್ರದರ್ಶನ ನೀಡುತ್ತಿದ್ದಾರೆ. ವೇಗದ ಜತೆಗೆ ಬ್ಯಾಟಿಂಗ್ ಬಲ ಹೆಚ್ಚಿಸಿಕೊಂಡರೆ, ತಂಡ ವಿಶ್ವಾಸದಲ್ಲಿ ಕಾಣಿಸಿಕೊಳ್ಳಬಹುದಾಗಿದೆ.


ಪಂದ್ಯದ ವಿವರ

ಯಾವಾಗ: ಬುಧವಾರ, ಎಲ್ಲಿ: ರಾಯ್ಪುರ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ರಾಯ್ಪುರ ಪಿಚ್ ಸವಾಲು

ರಾಯ್ಪುರದ ಪಿಚ್ ಬ್ಯಾಟಿಗರಿಗೆ ಕಾಟ ನೀಡಿದ್ದಂತೂ ಸುಳ್ಳಲ್ಲ. ಕಳೆದ ಪಂದ್ಯದಲ್ಲಿ ಅದು ಸ್ಪಷ್ಟವಾಗಿ ಗೋಚರಿಸಿದೆ. ಹೆಚ್ಚಿನ ಕ್ರ್ಯಾಕ್‌ಗಳಿರುವುದು ಬೌಲರ್‌ಗಳಿಗೆ ಬಲ ತಂದಿದೆ. ಸ್ಪಿನ್ನರ್‌ಗಳಿಗೆ ಲಾಭವಿಲ್ಲವಾದರೂ ಭುವನೇಶ್ವರ್, ಕಾರ್ತಿಕ್ ತ್ಯಾಗಿ ಅಂಥ ಬೌಲರ್‌ಗಳಿಗೆ ಬಲ ಹೆಚ್ಚಿಸಿದೆ. ಇದುವರೆಗೂ 7 ಐಪಿಎಲ್ ಪಂದ್ಯಗಳು ಅಲ್ಲಿ ನಡೆದಿದ್ದು, ಆರ್‌ಸಿಬಿ ಪೇರಿಸಿರುವ 167 ಸ್ಕೋರೇ ದೊಡ್ಡದಾಗಿದೆ. ಆವರೇಜ್ ಸ್ಕೋರ್ 149 ರನ್ ಇದೆ. ಫಿನ್ ಆಲೆನ್ ಅಂಥ ಸ್ಫೋಟಕ ಬ್ಯಾಟಿಗರಿಗೆ ದೊಡ್ಡ ಸವಾಲಾಗಿದೆ.

ಪಂಜಾಬ್‌ಗೆ ಸಂಕಷ್ಟ



ಧರ್ಮಶಾಲಾ: ಮೊದಲಾರ್ಧದಲ್ಲಿ ಜಯದ ಓಕುಳಿಯಲ್ಲಿ ತೊಯ್ದಿದ್ದ ಪಂಜಾಬ್ ಕಿಂಗ್ಸ್ ದ್ವಿತಿಯಾರ್ಧ ಶುರುವಾದಾಗಿನಿಂದ ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿದೆ. ಗೆಲ್ಲಲೇಬೇಕಾದ ಪಂದ್ಯದಲ್ಲಿ ದಿಲ್ಲಿ ವಿರುದ್ಧ 3 ವಿಕೆಟ್‌ನಿಂದ ಸೋತ ಶ್ರೇಯಸ್ ಅಯ್ಯರ್ ಪಡೆ ಅಗ್ರಸ್ಥಾನದಿಂದ ಇಳಿದ ನಂತರ ಪ್ಲೇಆಫ್‌ಗಾಗೇ ಪರದಾಟ ನಡೆಸುವ ಸ್ಥಿತಿಗೆ ಬಂದಿದೆ.

- ದಿಲ್ಲಿ ವಿರುದ್ಧ ಪರಾಭವ
- ಸತತ ನಾಲ್ಕನೇ ಸೋಲು ಕಂಡ ಅಯ್ಯರ್ ಪಡೆ

ಸಂಕ್ಷಿಪ್ತ ಸ್ಕೋರ್

ಪಂಜಾಬ್ 20 ಓವರ್‌ಗಳಲ್ಲಿ 210/5: ಶ್ರೇಯಸ್ 59, ಪ್ರಿಯಾಂಶ್ 56; ಮಾಧವ್ 40/2
ದಿಲ್ಲಿ 19 ಓವರ್‌ಗಳಲ್ಲಿ 216/7: ಅಕ್ಷರ್ 56, ಡೇವಿಡ್ 51; ಅರ್ಷದೀಪ್ 21/2

210 ರನ್ ಗುರಿ ಬೆನ್ನತ್ತುವಾಗ ದಿಲ್ಲಿ 33ಕ್ಕೆ 3, 74ರನ್‌ಗೆ ನಾಲ್ಕನೇ ವಿಕೆಟ್ ಕಳೆದುಕೊಂಡಿತು. ಪ್ರಮುಖ ವಿಕೆಟ್ ಕಳೆದುಕೊಂಡ ಹಂತದಲ್ಲಿ ದಿಲ್ಲಿ ಅನುಭವವಿಲ್ಲದ ಆಟಗಾರರನ್ನು ತಂಡದಲ್ಲಿಟ್ಟುಕೊಂಡಿತ್ತು. ಪಂದ್ಯದಲ್ಲಿ ಪಂಜಾಬ್ ಪಂದ್ಯದಲ್ಲಿ ಪ್ರಭಾವಶಾಲಿ ಯಾಯಿತು ಅನ್ನುವಷ್ಟರಲ್ಲಿ ಡೇವಿಡ್ ಮಿಲ್ಲರ್-ಅಕ್ಷರ್ ಜೊತೆಯಾಟವಾಡಿದರು. ಹೋಪ್ ಉಳಿಸಿಕೊಂಡ ದಿಲ್ಲಿ ಮೂವರು ಅನುಭವ ಇಲ್ಲದ ಬ್ಯಾಟಿಗರ ಬಲದಿಂದ 19 ಓವರ್ ಮಾತ್ರದಲ್ಲಿ 216 ರನ್ ಗಳಿಸಿತು. 7 ವಿಕೆಟ್ ಪಡೆದುಕೊಂಡ ಪಂಜಾಬ್ ಡೆತ್ ಓವರ್‌ನಲ್ಲಿ ಒತ್ತಡ ನಿವಾರಿಸಲಿಲ್ಲ. ಟಾಸ್ ಗೆದ್ದ ದಿಲ್ಲಿ ಬ್ಯಾಟಿಂಗ್ ಆಹ್ವಾನ ಕೊಟ್ಟಿತು. ಪಂಜಾಬ್ ಪರ ಪ್ರಿಯಾಂಶ್ ಆರ್ಯ(56) ಭರ್ಜರಿ ಬ್ಯಾಟಿಂಗ್ ಮಾಡಿದರು. ಅರ್ಧಶತಕದ ನಂತರ ಶ್ರೇಯಸ್ ಅಯ್ಯರ್ (59) ಅರ್ಧಶತಕದೊಂದಿಗೆ ಮಿಂಚಿದರು. ಮಧ್ಯಮ ಕ್ರಮಾಂಕದಲ್ಲಿ ಕೂಪರ್(38) ಮಿಂಚಿದ ನಂತರ ಅಂತಿಮ ಓವರ್‌ಗಳಲ್ಲಿ ಸೂರ್ಯಾಂಶ್ ಮಿಂಚಿದರು. ಪಂಜಾಬ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿತು. ಗುರಿ ಬೆನ್ನತ್ತಿದ ದಿಲ್ಲಿ ಕ್ಯಾಪಿಟಲ್ಸ್‌ಗೆ ಆರಂಭಿಕ ಆಘಾತವಾದರೂ ಡೇವಿಡ್ ಮಿಲ್ಲರ್(51), ಅಕ್ಷರ್ ಪಟೇಲ್(56) ಆಸರೆ ಪಡೆಯಿತು. ಇಂಪ್ಯಾಕ್ಟ್ ಆಟಗಾರರಾಗಿ ಬಂದ ಅಷುತೋಶ್ (24) ರನ್ ಬಾರಿಸಿದರೆ, ಮಾಧವ್(18★) ರನ್ ಗಳಿಸಿ ಪಂದ್ಯ ಗೆಲ್ಲಿಸಿದರು. ದಿಲ್ಲಿ 19 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 216 ರನ್ ಗಳಿಸಿತು.

ಜಿಟಿ ಪ್ಲೇಆಫ್ ಖಚಿತ

ಅಹಮದಾಬಾದ್: ವೇಗಿಗಳ ದಾಳಿಗೆ ತತ್ತರಿಸಿದ ಹೈದರಾಬಾದ್ ತಂಡವು ಕೇವಲ 86 ರನ್‌ಗಳಿಗೆ ಆಲೌಟ್ ಆಗಿದ್ದು, ಗುಜರಾತ್ ವಿರುದ್ಧದ ಪಂದ್ಯದಲ್ಲಿ 82 ರನ್‌ಗಳ ಹೀನಾಯ ಸೋಲು ಕಂಡಿದೆ. ಮಹತ್ವ ಪಂದ್ಯದಲ್ಲಿ ಸುದರ್ಶನ್ ಮತ್ತು ಸುಂದರ್ ಆಟದೊಂದಿಗೆ ಬ್ಯಾಟಿಂಗ್‌ನಲ್ಲಿ ಮಿಂಚಿದ ಗುಜರಾತ್ ವೇಗಿಗಳ ಬಲದೊಂದಿಗೆ ಹೈದರಾಬಾದ್ ತಂಡದ ಬೆವರಿಳಿಸಿತು. ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 168 ರನ್ ಗಳಿಸಿತು. ಗುರಿ ಬೆನ್ನತ್ತಿದ ಹೈದರಾಬಾದ್ 86 ರನ್‌ಗಳಿಗೆ ಪತನಗೊಂಡಿತು. ಈ ಗೆಲುವಿನೊಂದಿಗೆ ಗುಜರಾತ್ ಬಹುತೇಕ ಪ್ಲೇಆಫ್ ಗೇರಿದ್ದಲ್ಲದೆ, ಹೈದರಾಬಾದ್ ತಂಡವನ್ನು ಕೆಳನೂಕಿ ಅಗ್ರಸ್ಥಾನಕ್ಕೇರಿದೆ.

ಸುದರ್ಶನ್ ಆಸರೆ: ಟಾಸ್ ಸೋತ ಗುಜರಾತ್ ಟೈಟಾನ್ಸ್ ಬ್ಯಾಟಿಂಗ್ ಗಿಳಿಯಿತು. ಗಿಲ್ ಬೇಗನೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಜಾಸ್ ಬಟ್ಲರ್ 11 ಬಾಲ್‌ಗಳಲ್ಲಿ 7 ರನ್ ಗಳಿಸಿ ಇನ್ನೇನು ಸ್ಫೋಟಕ ಬ್ಯಾಟಿಂಗ್ ಶುರು ಮಾಡಬೇಕು ಅನ್ನುವಷ್ಟರಲ್ಲಿ ಪ್ರಫುಲ್ ಹಿಂಗೆ ವಿಕೆಟ್ ಕಿತ್ತರು. 26 ರನ್ ಮಾತ್ರಕ್ಕೆ ವಿಕೆಟ್ ಬಿದ್ದರೂ ಸುದರ್ಶನ್ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ನಿಶಾಂತ್ ಸಿಂಧು ಮಧ್ಯಮ ಕ್ರಮಾಂಕದಲ್ಲಿ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 14 ಬಾಲ್ ಎದುರಿಸಿದ ಸಿಂಧು 22 ರನ್‌ಗೆ ಕ್ಯಾಚಿತ್ತರು. ವಾಷಿಂಗ್ಟನ್ ಸುಂದರ್ ಸುದರ್ಶನ್‌ಗೆ ಸಾಥ್ ಕೊಟ್ಟರು. ಸುದರ್ಶನ್ ಅರ್ಧಶತಕ ಬಾರಿಸಿದರು. 61 ರನ್ ಗಳಿಸಿದ ಸುದರ್ಶನ್ 2 ಸಿಕ್ಸ್, 5 ಬೌಂಡರಿ ಬಾರಿಸಿ ವಿಕೆಟ್ ಒಪ್ಪಿಸಿದರು.

ವಾಷಿ ಅಬ್ಬರ: ಕೊನೆಯಲ್ಲಿ ವಾಷಿಂಗ್ಟನ್ ಸುಂದರ್ ಅಬ್ಬರಿಸಿದರು. ಡೆತ್ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 7 ಬೌಂಡರಿ 1 ಸಿಕ್ಸರ್ ಬಾರಿಸಿದ ಅವರು 33 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು.

ಹೈದರಾಬಾದ್ ತತ್ತರ: ಗುರಿ ಬೆನ್ನತ್ತಿದ ಹೈದರಾಬಾದ್ ತತ್ತರಿಸಿತು. ವೇಗಿಗಳಾದ ಜೇಸನ್ ಹೋಲ್ಡರ್ ಮತ್ತು ಕಾಗಿಸೋ ರಬಾಡ ಬೌಲಿಂಗ್ ದಾಳಿಗೆ ಬಸವಳಿದ ಹೈದರಾಬಾದ್ ಬ್ಯಾಟಿಗರು, ಒಂದೊಂದು ರನ್‌ಗೂ ಪರದಾಡಿದರು. ಸಲೀಲ್ ಆರೋರಾ 16 ರನ್ ಗಳಿಸಿದ್ದೇ ತಂಡದಲ್ಲಿ ಬ್ಯಾಟರ್ ಗಳಿಸಿದ್ದ ಅತಿ ಹೆಚ್ಚು ರನ್ ಆಗಿತ್ತು. ಪ್ರತಿಯೊಬ್ಬ ಬ್ಯಾಟರ್ ಒಂದೊಂದು ರನ್‌ಗೆ ಪರದಾಡಿದರು. ಗುಜರಾತ್ ಪರ ರಬಾಡ 3, ಹೋಲ್ಡರ್ 3, ಕೃಷ್ಣ 2, ಸಿರಾಜ್ ಮತ್ತು ರಶೀದ್ ಖಾನ್ ತಲಾ ಒಂದು ವಿಕೆಟ್ ಪಡೆದರು.

ಸಾತ್ವಿಕ್-ಚಿರಾಗ್ ಶುಭಾರಂಭ

ಹೊಸದಿಲ್ಲಿ: ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಭಾರತದ ಪಾರುಪತ್ಯ ಥೈಲ್ಯಾಂಡ್ ಓಪನ್ ವರೆಗೂ ವಿಸ್ತರಿಸಿದೆ. ಭಾರತದ ಭರವಸೆಯ ಮತ್ತು ಅಗ್ರ ಜೋಡಿ ಸಾತ್ವಿಕ್-ಚಿರಾಗ್ ಇಂಡೋನೇಷ್ಯಾದ ಮುಹ್ ಪುತ್ರಾ ಮತ್ತು ಬಗಾಸ್ ಮೌಲಾನಾ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಲಗ್ಗೆ ಹಾಕಿದರು. ಹಿಂದೆ ನಡೆದ ಪಂದ್ಯಾವಳಿಯಿಂದ ದೂರ ಉಳಿದಿದ್ದ ಈ ಜೋಡಿ ಗೆಲುವಿನೊಂದಿಗೆ ಬ್ಯಾಡ್ಮಿಂಟನ್ ಮೈದಾನಕ್ಕೆ ಕಾಲಿಟ್ಟಿದೆ.


ಸಾತ್ವಿಕ್‌ಗೆ ಆದ ಗಾಯದಿಂದಾಗಿ ಥಾಮಸ್ ಕಪ್‌ನಿಂದ ದೂರ ಉಳಿದಿದ್ದ ಈ ಜೋಡಿ ಆರಂಭಿಕ ಪಂದ್ಯದಲ್ಲಿ 3-0ರಿಂದ ಪ್ರಭಾವಶಾಲಿ ಗೆಲುವು ಸಾಧಿಸಿದ್ದು, ಸ್ಪಷ್ಟ ಸಂದೇಶ ನೀಡಿತು. ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲಿನಿಂದಲೂ ಆಕ್ರಮಣಕಾರಿಯಾಗಿ ಆಡಿ ಗೆದ್ದಿತು. ಸಾತ್ವಿಕ್ ನೆಟ್ ಪಾಯಿಂಟ್‌ನತ್ತ ಗಮನ ಹರಿಸಿದರೆ, ತಾಂತ್ರಿಕ ಆಟದೊಂದಿಗೆ ಮಿಂಚಿದ ಚಿರಾಗ್ ಸ್ಮ್ಯಾಷ್‌ಗಳೊಂದಿಗೆ ಗಮನ ಸೆಳೆದರು. ಬ್ರೇಕ್ ಪಾಯಿಂಟ್, ಟೈಮ್ ಮತ್ತು ಗ್ಯಾಪ್‌ಗಳೊಂದಿಗೆ ಈ ಜೋಡಿ ಕೊನೆವರೆಗೂ ಒತ್ತಡ ಹೇರಿತು. ಕೊನೆಯಲ್ಲಿ ಸಾತ್ವಿಕ್-ಚಿರಾಗ್ ಜೋಡಿ 21-19, 21-23, 21-10 ರಿಂದ ಗೆದ್ದರು. ಮುಂದಿನ ಸುತ್ತಿನಲ್ಲಿ ಈ ಇಬ್ಬರು ಮಲೇಷ್ಯಾದ ಬ್ರ್ಯಾನ್-ಹೈಕಲ್ ಜೋಡಿ ಎದುರು ಆಡಲಿದ್ದಾರೆ.

ವೇಟ್‌ಲಿಫ್ಟಿಂಗ್‌ಗೆ ವಿಶೇಷ ಒತ್ತು: ಸಾಯ್

ಹೊಸದಿಲ್ಲಿ: ಈ ವರ್ಷದ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಏಷ್ಯನ್ ಕ್ರೀಡಾಕೂಟಕ್ಕೆ ಸಜ್ಜಾಗುತ್ತಿರುವ ವೇಟ್‌ಲಿಫ್ಟರ್‌ಗಳಿಗೆ ಅಂತಾರಾಷ್ಟ್ರೀಯ ಮಾನ್ಯತೆ ಮತ್ತು ದೀರ್ಘಾವಧಿಯ ರಾಷ್ಟ್ರೀಯ ತರಬೇತಿ ಶಿಬಿರಗಳಿಗೆ ಸುಮಾರು 1.95 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ಭಾರತೀಯ ಕ್ರೀಡಾ ಪ್ರಾಧಿಕಾರ ತಿಳಿಸಿದೆ. ಸೋಮವಾರದಿಂದ ಪ್ರಾರಂಭವಾಗಿ ಮೇ 17 ರವರೆಗೆ ನಡೆಯಲಿರುವ ಗಾಂಧಿನಗರದಲ್ಲಿ ನಡೆಯಲಿರುವ ಏಷ್ಯನ್ ಸೀನಿಯರ್ ವೇಟ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಭಾಗವಹಿಸುವಿಕೆಗಾಗಿ ಸರ್ಕಾರ ಸುಮಾರು 70.45 ಲಕ್ಷ ರೂ.ಗಳನ್ನು ಮಂಜೂರು ಮಾಡಿತ್ತು. ಆರಂಭಿಕ ತಂಡವು 22 ಕ್ರೀಡಾಪಟುಗಳು, ಆರು ತರಬೇತುದಾರರು, ಐದು ಸಹಾಯಕ ಸಿಬ್ಬಂದಿ ಮತ್ತು ಮೂವರು ರೆಫರಿಗಳನ್ನು ಒಳಗೊಂಡಿದೆ. ಭಾರತೀಯ ಕ್ರೀಡಾ ಪ್ರಾಧಿಕಾರ ಅಂತಾರಾಷ್ಟ್ರೀಯ ಸ್ಪರ್ಧಾತ್ಮಕ ಮಾನ್ಯತೆ ಮತ್ತು ದೀರ್ಘಾವಧಿಯ ರಾಷ್ಟ್ರೀಯ ತರಬೇತಿ ಶಿಬಿರಗಳಿಗಾಗಿ ಸುಮಾರು 1.95 ಕೋಟಿ ರೂ.ಗಳ ಸಂಯೋಜಿತ ಹೂಡಿಕೆಯೊಂದಿಗೆ ಭಾರತೀಯ ವೇಟ್‌ಲಿಫ್ಟಿಂಗ್‌ಗೆ ತನ್ನ ಬೆಂಬಲವನ್ನು ತೀವ್ರಗೊಳಿಸಿದೆ ಎಂದು ಸಾಯ್ ಹೇಳಿಕೆಯಲ್ಲಿ ತಿಳಿಸಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5982

ಎಡದಿಂದ ಬಲಕ್ಕೆ

1. ಮಾಧ್ಯಮಗಳಲ್ಲಿ ಹಣ ನೀಡಿ ಕೊಡುವ ಪ್ರಕಟಣೆಗಳು (4)
2. ದರ ಕಡೆಯಲ್ಲಿರುವ ಕಿಟಕಿ (4)
4. ಅಧಿಕವಾದ ಹಿರಿಮೆ ತಿರುಗಿದೆ (4)
6. ಮೊಗದ ನಡುವೆ ಪ್ರಥಮ ಸ್ಥಾನದಲ್ಲಿರುವವನಿದ್ದಾನೆ (4)
7. ನೊಗ ಹೊತ್ತು ಬಂದ ವೀಕ್ಷಕ (3)
8. ಇಪ್ಪತ್ತೇಳು ನಕ್ಷತ್ರಗಳಲ್ಲಿ ಐದನೆಯದು (4)
9. ಪರಾಕ್ರಮಿಗಳು ನಿಲ್ಲುವ ಸ್ಥಳ- ರಣರಂಗ (4)
11. ಇದು ರೂಢಿಯಿಂದ ಬಂದದ್ದು (3)
12. ನೀಲಾಗಸ (3)
13. ತುಂಬ ಸೂಕ್ಷ್ಮತೆಯಿಂದ ಕೂಡಿದ್ದು (3)
15. ಈತ ಅಪಹಾಸ್ಯಕ್ಕೊಳಗಾದವನು (4)
16. ಭಯೋತ್ಪಾದಕ ವ್ಯಕ್ತಿ ತಿರುಗಿದ್ದಾನೆ (4)

ಮೇಲಿನಿಂದ ಕೆಳಕ್ಕೆ

1. ಅರಿವು-ಎಚ್ಚರದಿಂದ ಇರುವ ಸ್ಥಿತಿ (3)
3. ಸಣ್ಣ ಗೆಜ್ಜೆಗಳ ಕಾಲಿನ ನಗ ತಲೆಕೆಳಗಾಗಿದೆ (3)
5. ಈಕೆ ಮನಕ್ಕಾನಂದ ನೀಡುವವಳು (4)
6. ಮೊರದ ನಡುವೆ ಇರುವ ಮೀನುಗಾರ (4)
8. ಜಿಂಕೆಯನ್ನು ಸವಾರಿ ಮಾಡುವವನು-ವಾಯು (5)
10. ನೋವು ಮುಂತಾದವು ಶಾಂತವಾಗುವಿಕೆ ತಲೆಕೆಳಗಾಗಿದೆ (5)
13. ರಕ್ತ ಹರಿಯುವ ಮಿಡಿತ (2)
14. ಶಾಖದಿಂದ ಉಕ್ಕುವಿಕೆ-ಮನಸ್ಸಿನಲ್ಲಿ ನೋಯು (2)

5981 ಉತ್ತರ

ಎಡದಿಂದ ಬಲಕ್ಕೆ:
1.ದಿವ್ಯವಾಣಿ 3.ದಿನಚರಿ
5.ದಿನಕರ 8.ದಾರುಕರ್ಮ
10.ಸಂಕೇತ 12.ಆಲಸಿ
14.ದೂಳಿತ 16.ವರನಟ
17.ಕಾಯಗಟ್ಟು

ಮೇಲಿನಿಂದ ಕೆಳಕ್ಕೆ :
2.ವಾರ್ಧಕ 4.ನಜರು
6.ನರಕುಲ 7.ರಸಂ
8.ದಾತ 9.ಕರಾವಳಿ
11.ಕೇವಲಮಿತ್ರ
12.ಆದ್ರಭಾವ
13.ಸಿರಿತನ
14.ದೂರಾನ್ವಯ
15.ತಲೆಕಟ್ಟು

ಕಿರುಸುದ್ದಿ

ಗುಣ ಗಳಿಸುವ ಶಿಕ್ಷಣ ಅಗತ್ಯ

ನರಗುಂದ: ಹಣ ಗಳಿಸುವ ಬದಲು ಗುಣ ಗಳಿಸುವ ಶಿಕ್ಷಣವೇ ಎಲ್ಲದಕ್ಕೂ ಭದ್ರ ಬುನಾದಿಯಾಗಿದೆ. ಆಧುನಿಕತೆಯಲ್ಲಿ ಮೌಲ್ಯಯುತ ಶಿಕ್ಷಣ ಅಗತ್ಯವಿದೆ. ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಬೇಕಾಗಿದೆ. ಆದರೆ ಪ್ರಸ್ತುತ ದಿನಗಳಲ್ಲಿ ಸುಶಿಕ್ಷಿತರು ಕುಟುಂಬದ ಬಗ್ಗೆ ಚಿಂತನೆ ಮಾಡದ ಕಾರಣ ಇಂದು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಜೈಲಿನಲ್ಲಿ ಕೊಳೆಯುತ್ತಿದ್ದಾರೆ ಎಂದು ರಾಜ್ಯ ಇಸ್ಲಾಮಿಕ್ ಸೊಸೈಟಿ ಕಾರ್ಯದರ್ಶಿ ರಿಯಾಝ್ ಅಹ್ಮದ ರೋಣ ಹೇಳಿದರು.

ಪಟ್ಟಣದ ಕಾರ್ಮಿಕ ಭವನದಲ್ಲಿ ನಡೆದ ಮಿಸಬಾ ಪಬ್ಲಿಕ್ ಶಾಲೆ ಆಶ್ರಯದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಹುಬ್ಬಳ್ಳಿ ಸನಾ ಎಜುಕೇಶನ್ ಸಂಸ್ಥೆ ಹಾಗೂ ಮಿಸಬಾ ಪಬ್ಲಿಕ್ ಶಾಲೆ ವಿಲೀನ ಸಮಾರಂಭದಲ್ಲಿ ಮಾತನಾಡಿದರು.

ಇಂದು ಆಧುನಿಕ ಶಿಕ್ಷಣ ಮೌಲ್ಯಗಳಿಂದ ದೂರವಾಗುತ್ತಿರುವುದು ವಿಷಾದಕರ. ನಾವು ಪಡೆದ ಒಳ್ಳೆಯ ಶಿಕ್ಷಣದಿಂದ ಮತ್ತೊಬ್ಬರಿಗೆ ಕೊಡುವಂತವರಾಗಬೇಕು. ಆಗ ಜಗತ್ತು ಅದನ್ನು ನೆನಪಿನಲ್ಲಿಡುತ್ತದೆ ಎಂದರು.

ಹುಬ್ಬಳ್ಳಿ ಸನಾ ಎಜುಕೇಶನ್ ಟ್ರಸ್ಟಿ ಅಶ್ರಫ್ ಅಲಿ ಬಸೀರ್ ಅಹ್ಮದ ಮಾತನಾಡಿ, ಸನಾ ಶಿಕ್ಷಣ ಸಂಸ್ಥೆ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಮೂಡಿಸಿದೆ. ಹೊಸ ಹೊಸ ಉದ್ಯೋಗ ನೀಡುವ ತರಬೇತಿ ಶಿಕ್ಷಣ ನೀಡುವ ಕೇಂದ್ರ ಆರಂಭಿಸಿವೆ ಎಂದರು. ಟ್ರಸ್ಟಿ ಅಬ್ದುಲ್ ರೆಹಮಾನ್ ಮುಲ್ಲಾ ಹಾಗೂ ನಿವೃತ್ತ ಉಪನ್ಯಾಸಕ ಎಂ.ಎಸ್. ಯಾವಗಲ್ಲ ಮಾತನಾಡಿದರು. ವಿವಿಧ ಮಾಧ್ಯಮಗಳಲ್ಲಿ ಎಸ್ ಎಸ್ ಎಲ್ ಸಿಯಲ್ಲಿ ತಾಲೂಕಿಗೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮಿತ ಬಳಕೆ ಅವಶ್ಯ

ನರಗುಂದ: ಯೂರಿಯಾ ಗೊಬ್ಬರವನ್ನು ಅಗತ್ಯಕ್ಕಿಂತ ಹೆಚ್ಚು ಅಥವಾ ತಪ್ಪು ವಿಧಾನದಲ್ಲಿ ಬಳಸಿದರೆ ಮಣ್ಣು, ಬೆಳೆ, ಪರಿಸರ ಮತ್ತು ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ವಿಜ್ಞಾನಿಗಳ ಪ್ರಕಾರ ಯೂರಿಯಾದಲ್ಲಿರುವ ನೈಟ್ರೋಜನ್‌ನ ಬಹುಭಾಗವನ್ನು ಸರಿಯಾಗಿ ಬಳಸದೇ ಹೋದರೆ ವಾಯು, ನೀರು ಮತ್ತು ಮಣ್ಣಿಗೆ ಹಾನಿ ಉಂಟುಮಾಡುತ್ತದೆ ಎಂದು ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್. ಕುಲಕರ್ಣಿ ಹೇಳಿದರು.

ಅತಿಯಾದ ಯೂರಿಯಾ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಕಡಿಮೆ, ಮಣ್ಣಿನ ಪಿಹೆಚ್ ಕಡಿಮೆಯಾಗಿ ಮಣ್ಣು ಅಮ್ಲೀಯವಾಗುತ್ತದೆ. ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳು ಮತ್ತು ಹುಳುಗಳು ಕಡಿಮೆಯಾಗುತ್ತವೆ. ಮಣ್ಣಿನ ಜೈವಿಕ ಕಾರ್ಬನ್ ಪ್ರಮಾಣ ಕುಸಿಯುತ್ತದೆ. ಮಣ್ಣು ಗಟ್ಟಿಯಾಗುತ್ತದೆ ಮತ್ತು ನೀರು ಹಿಡಿಯುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಬೆಳೆಗಳಲ್ಲಿ ಮೃದುವಾದ ಬೆಳವಣಿಗೆ ಆಗುತ್ತದೆ. ಹೀಗಾಗಿ ಕೀಟ ಹಾಗೂ ರೋಗಗಳ ದಾಳಿ ಹೆಚ್ಚಾಗುತ್ತದೆ. ಪರಿಣಾಮವಾಗಿ ರೈತರು ಹೆಚ್ಚು ಕೀಟನಾಶಕ ಬಳಸಬೇಕಾಗುತ್ತದೆ. ಬೀಜದ ಹತ್ತಿರ ಹೆಚ್ಚು ಯೂರಿಯಾ ಹಾಕಿದರೆ ಅಮೋನಿಯಾ ಅನಿಲ ಉತ್ಪತ್ತಿಯಾಗಿ ಮೊಳಕೆಗೆ ಹಾನಿಯಾಗುತ್ತದೆ. ಸಸಿ ಸುಡುವುದು ಮತ್ತು ಬೇರು ಹಾನಿಯಾಗುವುದು ಸಂಭವಿಸುತ್ತದೆ. ಹೆಚ್ಚುವರಿ ರಾಸಾಯನಿಕ ಅವಶೇಷಗಳು ಆಹಾರದಲ್ಲಿ ಉಳಿಯಬಹುದು. ಕೆಲವು ಅಧ್ಯಯನಗಳ ಪ್ರಕಾರ ದೀರ್ಘಕಾಲದ ಬಳಕೆಯಿಂದ ಆರೋಗ್ಯ ಸಮಸ್ಯೆಗಳ ಸಾಧ್ಯತೆ ಇದೆ. ಹಸಿರು ಮೇವುಗಳಲ್ಲಿ ಹೆಚ್ಚು ಯೂರಿಯಾ ಬಳಕೆಯಿಂದ ಪಶು ಆರೋಗ್ಯಕ್ಕೂ ಹಾನಿ ಉಂಟಾಗಬಹುದು. ಸಮತೋಲನ ಗೊಬ್ಬರ ಬಳಕೆ ಮತ್ತು ಮಣ್ಣಿನ ಪರೀಕ್ಷೆ ಆಧರಿಸಿ ಗೊಬ್ಬರ ಬಳಸಬೇಕು. ಯೂರಿಯಾ ಜೊತೆಗೆ ಸಾವಯವ ಗೊಬ್ಬರ, ಕಂಪೋಸ್ಟ್, ಹಸಿರು ಗೊಬ್ಬರ ಬಳಸಬೇಕು ಎಂದರು.

ಮೇ 16ಕ್ಕೆ ಪೂರ್ವಭಾವಿ ಸಭೆ

ಮುಂಡರಗಿ: ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ತಾಲೂಕು ಮಹಿಳಾ ಸಾಹಿತ್ಯ ಸಮಾವೇಶ ಕಾರ್ಯಕ್ರಮ ಆಯೋಜನೆಯ ಕುರಿತು ಚರ್ಚಿಸಲು ಮೇ 16 ರಂದು ಬೆಳಗ್ಗೆ 10ಕ್ಕೆ ಶ್ರೀ ಜಗದ್ಗುರು ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ತಾಲೂಕು ಕಸಾಪದ ಆಜೀವ ಸದಸ್ಯರ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಗೌರವ ಕಾರ್ಯದರ್ಶಿ ಮಂಜುನಾಥ ಮುಧೋಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	7221-6708
ಅಲಸಂದಿ	4889-4420
ಸಜ್ಜೆ	1724-1724
ಕಡಲೆ	5896-5688
ಹೆಸರು	8211-4634
ಜೋಳ	4421-3202
ಗೋವಿನಜೋಳ	1959-1838
ಕುಸಬಿ	3109-5460
ಸೂರ್ಯಕಾಂತಿ	6569-6569
ತೊಗರಿ	3814-3814
ಗೋಧಿ	1912-2627
ಅಜವಾನ	8925-8925
ಮಡಕಿ	6340-6340



ನರಗುಂದ: ಪಟ್ಟಣದ ಕಾರ್ಮಿಕ ಭವನದಲ್ಲಿ ಮಿಸಬಾ ಪಬ್ಲಿಕ್ ಶಾಲೆ ಆಶ್ರಯದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಹುಬ್ಬಳ್ಳಿ ಸನಾ ಎಜುಕೇಶನ್ ಸಂಸ್ಥೆ ಹಾಗೂ ಮಿಸಬಾ ಪಬ್ಲಿಕ್ ಶಾಲೆ ವಿಲೀನ ಸಮಾರಂಭ ನಡೆಯಿತು. ಹುಬ್ಬಳ್ಳಿಯ ರಿಯಾಝುಲ್ಲಾ ಉಲೂಮ ಅಲಜೇದ್, ಅರೇಬಿಕ್ ಕಾಲೇಜು ಚೇರಮನ್ ಮೌಲಾನಾ ಅಹ್ಮದ್ ಸಿರಾಜ ಉಮ್ರಿ ಖುಸ್ಮಿ, ಸನಾ ಎಜುಕೇಶನ್ ಗ್ರುಪ್ ಚೇರ್ಮನ್ ಎಂ.ಎಚ್.ಮುಳಗಿ, ಪುರಸಭೆ ಮಾಜಿ ಅಧ್ಯಕ್ಷ ಸಿಕಂದರ್ ಪಠಾಣ, ಡಾ.ಎಫ್.ಕೆ.ಸವದತ್ತಿ, ಮೋಹನ ಮಂಗನಹಳ್ಳಿ, ಡಾ.ಅಮೀನ್ ಹುಯಿಲಗೋಳ, ಮಿಸಬಾ ಚೇರಮನ್ ಎಚ್.ಎಂ.ಪಾಣಿಗಟ್ಟಿ, ಕಾರ್ಯದರ್ಶಿ ಐ.ಎ.ಚೌದ್ರಿ, ಖಜಾಂಚಿ ಡಿ.ಎಂ.ನಾಯ್ಕರ, ಇತರರಿದ್ದರು.

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

ಲಕ್ಷ್ಮೇಶ್ವರ: ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಜನಿವಾರ ಬಲವಂತವಾಗಿ ತೆಗೆಸುವುದು, ವಿವಾಹಿತ ಹಿಂದೂ ಮಹಿಳೆಯರ ಮಂಗಳಸೂತ್ರ, ಕಾಲುಂಗುರ, ಮೂಗುತಿ, ಕಿವಿಯೋಲೆ, ಕೈದಾರ ಮುಂತಾದವುಗಳನ್ನು ತೆಗೆಯಲು ಒತ್ತಾಯಿಸುವ ಕ್ರಮಗಳನ್ನು ತಕ್ಷಣ ನಿಲ್ಲಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪಟ್ಟಣದಲ್ಲಿ ತಹಶೀಲ್ದಾರ್ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕರಿಗೆ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಮನವಿ ಅರ್ಪಿಸಲಾಯಿತು. ರಾಜ್ಯವ್ಯಾಪಿ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಹಿಂದೂ ವಿದ್ಯಾರ್ಥಿಗಳ ಸಂವಿಧಾನದತ್ತವಾದ ಧರ್ಮಾಚರಣೆಯ ಮೇಲಿನ ಘಟನೆಯು ಸಮಸ್ತ ಹಿಂದೂ ಸಮಾಜವನ್ನು ತೀವ್ರವಾಗಿ ನೋವುಗೊಳಿಸಿದೆ. ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳಿಂದ ತಪಾಸಣೆ ನೆಪದಲ್ಲಿ ತಡೆದು ಅವರು ಧರಿಸಿದ್ದ ಜನಿವಾರ ಬಲವಂತವಾಗಿ ತೆಗೆಸಲಾಗಿದೆ. ಜನಿವಾರ ತೆಗೆದಿಲ್ಲದಿದ್ದರೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶವಿಲ್ಲ ಎಂದು ಬೆದರಿಕೆ ಹಾಕಲಾಗಿದೆ. ಪೋಷಕರು ಅನಿವಾರ್ಯವಾಗಿ ಜನಿವಾರ ತೆಗೆಸಿ ಮಕ್ಕಳನ್ನು ಪರೀಕ್ಷಾ ಕೊಠಡಿಗೆ ಕಳುಹಿಸಿರುವುದು, ಕೇವಲ ಒಂದು ವಿದ್ಯಾರ್ಥಿಯ ಅವಮಾನವಲ್ಲ; ಇದು ಸಂಪೂರ್ಣ ಹಿಂದೂ ಧಾರ್ಮಿಕ ಸಂಪ್ರದಾಯದ ಮೇಲೆ ನಡೆದ ಗಂಭೀರ ದಾಳಿ ಆಗಿದೆ ಎಂದು ಆರೋಪಿಸಲಾಗಿದೆ. ಗ್ರೇಡ್-2 ತಹಶೀಲ್ದಾರ್ ಮಂಜುನಾಥ ಅಮಾಸಿ ಮನವಿ ಸ್ವೀಕರಿಸಿದರು. ಹಿಂದೂ ಜನಜಾಗೃತಿ ಸಮಿತಿಯ ಶಂಕರ ಬ್ಯಾಡಗಿ, ಮಹಾದೇವಪ್ಪ ಕೊತ್ತಲ್, ಪ್ರಕಾಶ ಗುತ್ತಲ, ಅನಸೂಯಾ ಸಜ್ಜನರ, ಗೀತಾ ಬಡಿಗೇರ, ಮಹೇಶ ಗೋಡಿ, ಮಂಜುನಾಥ ಸುಣ್ಣದಮನಿ, ಮಲ್ಲಿಕಾರ್ಜುನ ದೊಡ್ಡೂರ ಮುಂತಾದವರಿದ್ದರು.



ಲಕ್ಷ್ಮೇಶ್ವರ: ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಜನಿವಾರ ಬಲವಂತವಾಗಿ ತೆಗೆಸುವುದು, ವಿವಾಹಿತ ಹಿಂದೂ ಮಹಿಳೆಯರ ಮಂಗಳಸೂತ್ರ, ಕಾಲುಂಗುರ, ಮೂಗುತಿ, ಕಿವಿಯೋಲೆ, ಕೈದಾರ ಮುಂತಾದವುಗಳನ್ನು ತೆಗೆಯಲು ಒತ್ತಾಯಿಸುವ ಕ್ರಮಗಳನ್ನು ತಕ್ಷಣ ನಿಲ್ಲಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪಟ್ಟಣದಲ್ಲಿ ತಹಶೀಲ್ದಾರ್ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕರಿಗೆ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಮನವಿ ಅರ್ಪಿಸಲಾಯಿತು.

ಪ್ರತಿ ಗ್ರಾಮಗಳಿಗೆ ಎರಡು ಬಾರಿ ಭೇಟಿ ನೀಡಿ ಪರಿಶೀಲಿಸಲು ಸೂಚನೆ

ಕುಡಿಯುವ ನೀರಿನ ಸಮಸ್ಯೆ ತಡೆಗಟ್ಟಿ

ಗದಗ: ರಾಜ್ಯದಲ್ಲಿ ತೀವ್ರ ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಹಿನ್ನೆಲೆ ರೋಣ ತಾಲೂಕಿನ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಣಿಸಿಕೊಳ್ಳುತ್ತಿರುವುದರಿಂದ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಂತೆ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ ಅಧಿಕಾರಿಗಳಿಗೆ ಸೂಚಿಸಿದರು.

ರೋಣ ಪಟ್ಟಣದಲ್ಲಿ ತಾಲೂಕು ಪಂಚಾಯತಿ ಸಭಾಭವನದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಸಹಾಯಕ ಲೆಕ್ಕಾಧಿಕಾರಿಗಳು, ತಾಲೂಕು ಪಂಚಾಯತ್ ರೋಣ ಇವರ ಉಪಸ್ಥಿತಿಯಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ವಾಟರ್ ಮೆನ್‌ಗಳು, ನರೇಗಾ ಸಿಬ್ಬಂದಿ ಹಾಗೂ ತಾಲೂಕು ಪಂಚಾಯತಿ ಸಿಬ್ಬಂದಿಯೊಂದಿಗೆ ವಿವಿಧ ವಿಷಯಗಳ ಕುರಿತು ಸಮಗ್ರ ಚರ್ಚೆ ನಡೆಸಲಾಯಿತು. ಬೇಸಿಗೆ ಸಂದರ್ಭದಲ್ಲಿ ನಮ್ಮ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆ ಇರುವುದರಿಂದ ಪ್ರತಿಯೊಬ್ಬ ಅಧಿಕಾರಿಯೂ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದರು.

- ನರೇಗಾ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾಮಗಾರಿಗಳು, ಉದ್ಯೋಗ ಸೃಷ್ಟಿ, ಕೆರೆ ಅಭಿವೃದ್ಧಿ, ನೀರು ಸಂರಕ್ಷಣೆ ಸೇರಿದಂತೆ ವಿವಿಧ ಯೋಜನೆಗಳ ಅನುಷ್ಠಾನದ ಕುರಿತು ಸಭೆಯಲ್ಲಿ ಚರ್ಚೆ
- ಗ್ರಾಮ ಪಂಚಾಯತಿಗಳಲ್ಲಿ ಬಾಕಿ ಉಳಿದಿರುವ ಅಭಿವೃದ್ಧಿ ಕಾರ್ಯಗಳನ್ನು ಗಡುವಿನೊಳಗೆ ಪೂರ್ಣಗೊಳಿಸಲು ಸೂಚನೆ
- ನೀರು ಸರಬರಾಜಿನಲ್ಲಿ ನಿರ್ಲಕ್ಷ್ಯ ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ



> ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗದಂತೆ ಎಲ್ಲಾ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಸಾರ್ವಜನಿಕರ ಸಮಸ್ಯೆಗೆ ತ್ವರಿತ ಸ್ಪಂದಿಸಿ.
> ■ ಚಂದ್ರಶೇಖರ ಕಂದಕೂರ, ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ

ಶೀಘ್ರ ಪೂರ್ಣಗೊಳಿಸಿ

ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಿ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಕಾರ್ಯಕ್ಕೆ ವೇಗ ನೀಡಬೇಕು. ಕಾಮಗಾರಿಗಳ ಗುಣಮಟ್ಟ ಕಾಪಾಡಿಕೊಳ್ಳುವ ಜೊತೆಗೆ ಯೋಜನೆಯ ಲಾಭ ಪ್ರತಿಯೊಂದು ಮನೆಗೂ ತಲುಪುವಂತೆ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ನಿಗಾ ವಹಿಸಿ

ಡಿಬಿಒಟಿ ನೀರು ಪೂರೈಕೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗದಂತೆ ಪಿಡಿಒಗಳು ನಿರಂತರ ನಿಗಾ ವಹಿಸಬೇಕು. ಪ್ರತಿದಿನ ಮುಂಜಾನೆ ಹಾಗೂ ಸಂಜೆ ಗ್ರಾಮಗಳಿಗೆ ಭೇಟಿ ನೀಡಿ ನೀರಿನ ಸರಬರಾಜು ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಬೇಕು. ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಂಡುಬಂದ ತಕ್ಷಣ ಪರ್ಯಾಯ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಸಮಸ್ಯೆ ಬಗೆಹರಿಸಿ

ಕೆಲವು ಗ್ರಾಮಗಳಲ್ಲಿ ಬೋರ್‌ವೆಲ್‌ಗಳ ನೀರಿನ ಮಟ್ಟ ಕುಸಿತ, ಮೋಟಾರ್ ದೋಷ, ವಿದ್ಯುತ್ ಸಮಸ್ಯೆ ಹಾಗೂ ಪೈಪ್‌ಲೈನ್ ದುರಸ್ತಿ ಸಮಸ್ಯೆಗಳಿಂದ ಕುಡಿಯುವ ನೀರಿನ ವ್ಯತ್ಯಯ ಉಂಟಾಗುತ್ತಿರುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಅಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ತ್ವರಿತ ಕ್ರಮ ಕೈಗೊಂಡು ಸಮಸ್ಯೆ ಬಗೆಹರಿಸಬೇಕು ಎಂದು ಸೂಚಿಸಲಾಯಿತು.

ಶಿಕ್ಷಣ ಸುಧಾರಣೆಗೆ ಹೆಚ್ಚಿನ ಶಿಕ್ಷಕರ ನೇಮಿಸಿ

ಗದಗ: ಶಿಕ್ಷಣದಲ್ಲಿ ಸುಧಾರಣೆಯಾಗಬೇಕೆಂದರೆ ಹೆಚ್ಚಿನ ಶಿಕ್ಷಕರನ್ನು ನೇಮಕ ಮಾಡಬೇಕು. ಕರ್ನಾಟಕಕ್ಕೆ ಶಿಕ್ಷಣಕ್ಕೆ ಒಳ್ಳೆಯ ಹೆಸರಿದೆ. ರಾಜ್ಯ ಸರ್ಕಾರ ಹೆಚ್ಚಿನ ಅಂಕ ಕೊಟ್ಟು ತಾನೇ ಹೆಮ್ಮೆಪಡುತ್ತಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಹಾತಲಗೇರಿ ನಾಕಾ ಹತ್ತಿರದ ಜೆ.ಟಿ ಮಹಾವಿದ್ಯಾಲಯದಲ್ಲಿ ರಾಜ್ಯ ಪದವಿ ಪೂರ್ವ ಮಹಾವಿದ್ಯಾಲಯಗಳ ನೌಕರರ ಸಂಘ ಧಾರವಾಡ, ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘ, ಕಾಲೇಜು ಉಪನ್ಯಾಸಕರ ಸಂಘ, ಮಾಧ್ಯಮಿಕ ಶಾಲಾ ನೌಕರರ ಸಂಘ, ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ, ಹಾಗೂ ಪ್ರೊ.ಎಸ್.ವಿ. ಸಂಕನೂರ ಅಭಿಮಾನಿ ಬಳಗ ಸಂಯುಕ್ತ ಆಶ್ರಯದಲ್ಲಿ ಹೆಚ್ಚು ಅಂಕ ಪಡೆದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಮೂರು ಸಾರಿ ಪರೀಕ್ಷೆ ಬರೆಸುವುದರಲ್ಲಿ ಏನಿದೆ. ಎಲ್ಲರೂ ಪಾಸಾದರೆ ಹೇಗೆ, ಕಷ್ಟಪಟ್ಟು ಓದಿದ ಹುಡುಗರಿಗೆ ಇದರಿಂದ ಡಿಸ್ಕರೇಜ್ ಮಾಡಿದಂಗೆ ಆಗುತ್ತದೆ. ಪಾಸ್ ಆಗಲು ಮೂವತ್ತು ಮಾರ್ಕ್ ಮಾಡಿದ್ದಾರೆ. ಅದರಲ್ಲಿಯೇ 10 ಪರ್ಸೆಂಟ್ ಇಂಟರ್‌ನಲ್ ಮಾರ್ಕ್ ಕೊಡುತ್ತಾರೆ. ಎಲ್ಲರೂ ಪಾಸ್ ಆದರೆ ಅವರ ಭವಿಷ್ಯ ಏನು? ಇದರಿಂದ ಶಿಕ್ಷಣದ ಗುಣಮಟ್ಟ ಹಾಳಾಗುತ್ತದೆ. ಶಿಕ್ಷಣ ದಲ್ಲಿ ಸುಧಾರಣೆ ಆಗಬೇಕೆಂದರೆ ಕಲಿಕೆ ಯಲ್ಲಿ ಸುಧಾರಣೆಯಾಗಬೇಕು, ಶಿಕ್ಷಣದ ಗುಣಮಟ್ಟ ಹೆಚ್ಚಳ ಮಾಡಲು ಶಿಕ್ಷರನ್ನು ಹೆಚ್ಚಳ ಮಾಡಬೇಕಿತ್ತು. ಅದನ್ನು ಮಾಡಲಿಲ್ಲ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು ಶೈಕ್ಷಣಿಕವಾಗಿ, ಆರ್ಥಿಕವಾಗಿ ದೇಶ ಸಮೃದ್ಧವಾಗಿರಬೇಕು ಎಂದು ವಿಕಸಿತ ಭಾರತದ ಕನಸು ಕಂಡಿದ್ದಾರೆ. ಮುಂದಿನ ಜನಾಂಗಕ್ಕಾಗಿ ವಿಕಸಿತ ಭಾರತದ ಕನಸು ಕಾಣುತ್ತಿದ್ದೇವೆ. ಹಿಂದಿನ ನಮ್ಮ ಹಿರಿಯರು ಉಳಿಸಿ ಹೋಗಿದ್ದಕ್ಕೆ ನಾವು ಈಗ ಅನುಭವಿಸುತ್ತಿದ್ದೇವೆ. ಇಂದು ನಿಸರ್ಗದ ಮೇಲೆ ಆಗುತ್ತಿರುವ ಹಲ್ಲೆಯನ್ನು ನೋಡಿದರೆ ಭವಿಷ್ಯದಿಂದ ಕಳ್ಳತನ ಮಾಡಿದಂತೆ ಮಹಾತ್ಮ ಗಾಂಧಿ ನಿಸರ್ಗ ನಮಗೆ ಏನು ಅಗತ್ಯ ಇದೆ ಅದನ್ನು ಕೊಡುತ್ತದೆ ಎಂದು ಹೇಳಿದ್ದಾರೆ. ಆದರೆ ಎಲ್ಲವೂ ನನಗೆ ಬೇಕು ಎನ್ನುವ ಕಲ್ಪನೆ ಭವಿಷ್ಯದಲ್ಲಿ ನಾವು ಮಕ್ಕಳಿಂದ ಕಸಿದುಕೊಂಡಂತೆ ಎಂದರು.

ವಿಪ ಸದಸ್ಯ ಎಸ್.ವಿ.ಸಂಕನೂರ, ಶಾಸಕ ಡಾ.ಚಂದ್ರು ಲಮಾಣಿ, ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರಡಗಿ, ಯುವ ಮುಖಂಡ ಉಮೇಶಗೌಡ ಪಾಟೀಲ, ಪ್ರಾಚಾರ್ಯ ಪಿ.ಜಿ. ಪಾಟೀಲ, ಆರ್.ಎಸ್. ಬುರಡಿ, ಎಂ.ಕೆ.ಲಮಾಣಿ, ಮುಸನಾಯಕ, ಎ.ಎಸ್.ಪಾಟೀಲ, ಬಿ.ಎಫ್.ಪೂಜಾರ, ವೈ.ಸಿ.ಪಾಟೀಲ ಇದ್ದರು.



ಸಮಾಜದ ಅಭ್ಯುದಯಕ್ಕಾಗಿ ಸರ್ವರೂ ಶ್ರಮಿಸಲಿ

ನರಗುಂದ: ವೈಯಕ್ತಿಕಭಿನ್ನಾಭಿಪ್ರಾಯಗಳನ್ನು ಮರೆತು ಸಮಾಜ ಸಂಘಟನೆಗೆ ಮುಂದಾಗಬೇಕಿದೆ. ನಮ್ಮಲ್ಲಿನ ಒಡಕುಗಳು ಸಮಾಜದ ಅಭಿವೃದ್ಧಿಗೆ ಮಾರಕವಾಗಬಾರದು. ಕಳೆದ 46 ವರ್ಷಗಳಿಂದ ನನ್ನನ್ನು ರಾಜಕೀಯದ ಮೂಲಕ ಪರಿಚಯವಾಗಲು ಸಮಾಜದ ಕೊಡುಗೆ ಹೆಚ್ಚಿದೆ. ನಮ್ಮಲ್ಲಿನ ಗೊಂದಲಗಳು, ಜಗಳಗಳನ್ನು ವೈಯಕ್ತಿಕ ಪ್ರತಿಷ್ಠೆಗೆ ತೆಗೆದುಕೊಳ್ಳಲಾರದೇ ಸಮಾಜದ ಅಭ್ಯುದಯಕ್ಕಾಗಿ ಶ್ರಮಿಸಬೇಕು. ಹೇಮರಡ್ಡಿ ಮಲ್ಲಮ್ಮನ ತತ್ವಾದರ್ಶಗಳನ್ನು ಪಾಲಿಸುವಂತೆ ಮಾಜಿ ಶಾಸಕ ಬಿ.ಆರ್. ಯಾವಗಲ್ಲ ಹೇಳಿದರು.

ಪಟ್ಟಣದ ನೀರಾವರಿ ಕಾಲೋನಿಯ ಗಣೇಶ ಮಂದಿರದಲ್ಲಿ ತಾಲೂಕು ರಡ್ಡಿ ಸಮಾಜ ಭಾಂದವರು ಹಮ್ಮಿಕೊಂಡಿದ್ದ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮರ 604ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದ ಅಸ್ತಿತ್ವ ಉಳಿಸಲು ನಾವು ಬದಲಾಗಬೇಕು. ಸಮಾಜದಲ್ಲಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲು ಸರ್ವರೊಂದಿಗೂ ಹೊಂದಿಕೊಂಡು ಹೋಗಬೇಕು ಎಂದರು.

ಉಪನ್ಯಾಸಕಿ ಡಾ.ವಿಜಯಲಕ್ಷ್ಮೀ ದಾನರಡ್ಡಿ ಮಾತನಾಡಿ, ಜೀವನ ಮೌಲ್ಯಗಳನ್ನು ಮರೆಯದೇ ಜೀವನ ಸಾಗಿಸಬೇಕು. ಇಂದು ಭಾರತೀಯ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ಮುಂದಿನ ಪೀಳಿಗೆಗಾಗಿ ಸಂಸ್ಕೃತಿಯನ್ನು ಉಳಿಸಲು ಜಯಂತಿಗಳು ನಮ್ಮನ್ನು ಜಾಗೃತಿಗೊಳಿಸಬೇಕು. ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಜೀವನ ಮಾಡಬೇಕು ಎಂದರು.

ಮಾಜಿ ಸಚಿವ ಎಸ್.ಆರ್. ಪಾಟೀಲ ಮಾತನಾಡಿ, ಕೃಷಿ ಹಾಗೂ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ಮಲ್ಲಮ್ಮಳ ಆದರ್ಶವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ. ಕೃಷಿಯಲ್ಲಿ ತೊಡಗಿಕೊಂಡವರಿಗೆ ಮುಂಬರುವ ದಿನಗಳಲ್ಲಿ ಪ್ರಾಧಾನ್ಯತೆ ಸಿಗಲಿದೆ. ರೈತರನ್ನು ಹುಡುಕಿಕೊಂಡು ಬಂದು ಕನ್ಯೆ ಕೊಡುವ ದಿನಮಾನ ಶೀಘ್ರ ಬರಲಿದೆ ಎಂದರು.ಪಂಚಗೃಹ ಗುಡ್ಡದ ಹಿರೇಮಠದ ಸಿದ್ಧಲಿಂಗ ಸ್ವಾಮೀಜಿ, ಪತ್ರೀವನ ಮಠದ ಗುರು ಸಿದ್ಧವೀರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು. 2025-26ನೇ ಸಾಲಿನ ಎಸ್‌ಎಸ್‌ಎಲ್ಸಿಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕ ಪಡೆದ 10 ವಿದ್ಯಾರ್ಥಿಗಳು ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ 16 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ತಾಲೂಕಿನಲ್ಲಿನ ನಿವೃತ್ತ ಸರ್ಕಾರಿ ನೌಕರರಿಗೆ ಸನ್ಮಾನಿಸಲಾಯಿತು. ಬಾಪುಗೌಡ ತಿಮ್ಮನಗೌಡ್ರ, ವಿವೇಕ ಯಾವಗಲ್ಲ, ಡಿ.ಎಚ್. ಅಜ್ಜೆ, ಡಾ.ವೀರನಗೌಡ್ರ, ಎಸ್.ವೈ. ಪಾಟೀಲ, ವಾಸುರಡ್ಡಿ ವೆಂಕರಡ್ಡಿಯವರ, ಎನ್.ವಿ. ಮೇಟಿ, ಶಾಂತನಗೌಡ ಮಲ್ಲನಗೌಡ್ರ, ವೆಂಕರಡ್ಡಿ ಹುಚ್ಚರಡ್ಡಿಯವರ, ಶ್ರೀನಿವಾಸ ರಾಯರಡ್ಡಿ, ಕೃಷ್ಣ ಚೌಡರಡ್ಡಿ, ಶ್ರೀನಿವಾಸರಡ್ಡಿ ವೆಂಕರಡ್ಡಿಯವರ, ಹನುಮರಡ್ಡಿ ರಾಯರಡ್ಡಿ, ಶಿವರಡ್ಡಿ ಪೆಟ್ಲೂರ ಇತರರಿದ್ದರು.



ಮಲ್ಲಮ್ಮ ಸ್ತ್ರೀಕುಲದ ಅನರ್ಘ್ಯ ರತ್ನ



ಶಿರಹಟ್ಟಿ: ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಜೀವನ ಚರಿತ್ರೆ ಹಾಗೂ ಪವಾಡಗಳು ಇಂದಿಗೂ ಅಜರಾಮರವಾಗಿವೆ. ಕುಟುಂಬದ ಕಷ್ಟಗಳನ್ನು ದಿಟ್ಟತನದಿಂದ ಎದುರಿಸಿ ಭಕ್ತಿಯ ಮೂಲಕ ಶಿವನನ್ನು ಒಲಿಸಿಕೊಂಡ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಎಂದು ಮಾಧ್ಯಮಿಕ ಶಾಲಾ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಂ.ಕೆ. ಲಮಾಣಿ ಹೇಳಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಪ್ರಯುಕ್ತ ಹೇಮರೆಡ್ಡಿ ಮಲ್ಲಮ್ಮನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಪತಿ ಭಕ್ತಿಗೆ ಮಲ್ಲಮ್ಮಗೆ ಮಲ್ಲಮ್ಮನೇ ಸರಿಸಾಟಿ. ಸಂಸಾರದ ನೋವು ನಲಿವುಗಳನ್ನು ಅನುಭವಿಸಿದ ಮಲ್ಲಮ್ಮ ಇತರರಿಗಿಂತ ಭಿನ್ನವಾಗಿ ನಿಂತು ಸಮಾಜಕ್ಕೆ ಭಕ್ತಿಯ ಜತೆ ಮೋಕ್ಷದ ಮಾರ್ಗ ತೋರಿಸಿಕೊಟ್ಟಿದ್ದಾಳೆ. ಕುಟುಂಬದ ಸಮಸ್ಯೆಗಳನ್ನು ಮೆಟ್ಟಿನಿಂತು, ಆದರ್ಶ ಗೃಹಿಣಿಯಾಗಿ, ಮಾನವೀಯ ಮೌಲ್ಯಗಳನ್ನು ಬೆಳೆಸುತ್ತಾ, ದಾನ, ಧರ್ಮ, ಅನ್ನದಾಸೋಹ ಮಾಡುವುದರ ಮೂಲಕ ಮಹಿಳೆಯರು ಸಮಾಜದಲ್ಲಿ ಉತ್ತಮ ಸಾಧನೆ ಮಾಡಬಹುದು ಎಂದು ತೋರಿಸಿಕೊಟ್ಟ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಸ್ತ್ರೀಕುಲಕ್ಕೆ ಅನರ್ಘ್ಯ ರತ್ನವಾಗಿದ್ದಾಳೆ. ಅವರಲ್ಲಿರುವ ಪರೋಪಕಾರ, ತ್ಯಾಗ, ಸಂಸ್ಕಾರ, ಗುರು-ಹಿರಿಯರ ಬಗ್ಗೆ ಅಪಾರವಾದ ಗೌರವ, ಭಕ್ತಿ, ಸಮಾಜ ಸೇವೆಯಂತಹ ಮೌಲ್ಯಯುಳ್ಳ ಆದರ್ಶಗಳನ್ನು ಮಹಿಳೆಯರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸಮಾಜದ ಮುಖಂಡ ಎನ್.ಎನ್. ಗೋಕಾವಿ ಮಾತನಾಡಿ, ಜೀವನದಲ್ಲಿ ಹೇಳಿಕೊಳ್ಳಲು ಆಗದಷ್ಟು ಕಷ್ಟಗಳನ್ನು ಅನುಭವಿಸಿದರೂ ಅವುಗಳನ್ನು ಸಂತೋಷದಿಂದ ಸ್ವೀಕರಿಸಿ, ಸಹನೆ, ಶಾಂತಿ, ತಾಳ್ಮೆ ಸ್ತ್ರೀ ಕುಲದ ತಾಯಿ ಸ್ವರೂಪಗಳು ಎಂದು ಸಮಾಜಕ್ಕೆ ತಿಳಿಸಿದ ಮಹಾಸಾಧ್ವಿ, ಇಂತಹ ಮಹನೀಯರ ಸಂದೇಶಗಳನ್ನು ಪಾಲಿಸುವ ಮೂಲಕ ಸನ್ಮಾರ್ಗದಲ್ಲಿ ನಡೆಯೋಣ ಎಂದು ಹೇಳಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿ.ಟಿ. ಮುಂಡವಾಡ, ಶಿವನಗೌಡ ಪಾಟೀಲ್, ಅಪ್ಪಣ ಶರಣಪ್ಪ ಪವಾರ, ಬಾಬಾಜಾನ ಕೋಳಿವಾಡ, ವಿನೋದ ಪಾಟೀಲ್, ರಮೇಶ ಕಲ್ಲಪ್ಪನವರ ಹಾಗೂ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಇದ್ದರು.

ಅನ್ನಭಾಗ್ಯ ಅಕ್ಕಿ ಸಾಗಾಟ ತಡೆಯಿರಿ

ಮುಂಡರಗಿ: ತಾಲೂಕಿನಲ್ಲಿ ಸರ್ಕಾರವು ಬಡವರಿಗೆ ನೀಡುತ್ತಿರುವ ಅಕ್ರಮ ಅನ್ನಭಾಗ್ಯ ಅಕ್ಕಿಯನ್ನು ರಾಜಾರೋಷವಾಗಿ ಕಳ್ಳ ಸಾಗಾಣಿಕೆ ವ್ಯಾಪಾರ ನಡೆಯುತ್ತಿರುವುದನ್ನು ಖಂಡಿಸಿ ವಿಶ್ವ ಕನ್ನಡ ರಕ್ಷಣಾ ವೇದಿಕೆ ಸಂಘಟನೆಯ ಮುಂಡರಗಿ ತಾಲೂಕು ಮಹಿಳಾ ಅಧ್ಯಕ್ಷೆ ಮಧುಮತಿ ಮಡಿವಾಳರ ಅವರ ನೇತೃತ್ವದಲ್ಲಿ ತಾಲೂಕು ದಂಡಾಧಿಕಾರಿಗಳ ಕಾರ್ಯಾಲಯದ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ಧರಣಿ ಸತ್ಯಾಗ್ರ ಸ್ಥಳಕ್ಕೆ ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಆಗಮಿಸಿ ಮನವಿ ಸ್ವೀಕರಿಸಿ ನಾಲ್ಕು ದಿನದೊಳಗೆ ಎಲ್ಲಾ ಪಡಿತರ ವಿಸ್ತರಣೆ ಮಾಡುವ ಅಂಗಡಿಯವರನ್ನು, ಅನ್ನಭಾಗ್ಯ ವಿಸ್ತರಣೆ ಮಾಡುವ ಎಲ್ಲರನ್ನೂ ಕರೆಸಿ ಸಂಘಟನೆಯ ಪದಾಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ ಅಂಥವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಗದಗ ಜಿಲ್ಲಾ ಅಧ್ಯಕ್ಷ ಎಂ.ಕೆ. ತಳಗಡೆ ಮಾತನಾಡಿ, ಅಕ್ರಮ ದಂಧೆಯನ್ನು ರಾಜಾರೋಷವಾಗಿ ನಡೆಯುತ್ತಿರುವುದನ್ನು ತಡೆಗಟ್ಟುವಲ್ಲಿ ಅಧಿಕಾರಿಗಳು ವಿಫಲಗೊಂಡಿದ್ದಾರೆ. ಆದರೂ ತಾಲೂಕು ದಂಡಾಧಿಕಾರಿಗಳು ನೀಡಿದ ಭರವಸೆಗೆ ಗೌರವ ಕೊಟ್ಟು ಧರಣಿ ಸತ್ಯಾಗ್ರಹವನ್ನು ಕೈಬಿಡುತ್ತೇವೆ. ಆದರೆ ಇದೇ ವಿಷಯದಿಂದ ಮತ್ತೊಮ್ಮೆ ಧರಣಿ ನಡೆಸುವಂತಾಗದಿರಲಿ ಎಂದರು.

ಈ ಸಂದರ್ಭದಲ್ಲಿ ಮುಂಡರಗಿ ತಾಲೂಕು ಅಧ್ಯಕ್ಷ ಈಶಪ್ಪ ಸಜ್ಜನ, ಬಾಶುಸಾಬ್ ಡಂಬಳ, ಯಾಸಿನ ಬಾಗಲಿ, ಈಶಪ್ಪ ಕುಂಬಾರ, ರಫೀಕ್ ಖಾದರ್‌ನವರ, ರಾಜಭಕ್ಷಿ ದಂಡಿನ, ಅಬ್ದುಲ್ ರೆಹಮಾನ್ ಕಂದಗಲ್, ಮಂಜು ರಾಟಿ, ಶರಣಪ್ಪ ಮಕ್ತಂಪುರ, ರಿಯಾಜ ಹೊಸಮನಿ, ಫರೀದಾ ಅಬ್ಬಿಗೇರಿ, ರಾಜೇಶ್ವರಿ ಪಾಟೀಲ, ಪೂಜಾ ಇಟಗಿಮಠ, ಶಾಬಾನ ಲಕ್ಷ್ಮೇಶ್ವರ, ಮಾಬುಬಿ ಮೂರಪಡಿ, ಶಬಾನ ಲಕ್ಷ್ಮೇಶ್ವರ, ಶಾಂತ ಬಂಡಿವಡ್ಡರ, ಪ್ರಕಾಶ ಗೌಡ್ರು, ರಮೇಶ್ ರಾಮನಹಳ್ಳಿ, ನಾಗಪ್ಪ ಅಣ್ಣಿಗೇರಿ, ಭೀಮಸಿ ಚಲವಾದಿ ಮುಂತಾದವರಿದ್ದರು.



ಜನರ ಪಾಲಿಗೆ ದಾದಿಯರು ದೇವರಿದ್ದಂತೆ: ಡಾ. ಶ್ರೀಕಾಂತ ಕಾಟೇವಾಲ

ಲಕ್ಷ್ಮೇಶ್ವರ: ಸಮಾಜದಲ್ಲಿ ದಾದಿಯರು ಆರೋಗ್ಯ ವ್ಯವಸ್ಥೆಯ ಬೆನ್ನೆಲುಬಾಗಿದ್ದು, ಅವರ ನಿಸ್ವಾರ್ಥ ಸೇವೆಗೆ ವಿಶ್ವದಾದಿಯರ ದಿನಾಚರಣೆಯ ಮೂಲಕ ಧನ್ಯವಾದ ಸಮರ್ಪಣೆ ಮಾಡುವ ದಿವಸವಾಗಿದೆ. ಅವರ ಸೇವೆ ಅಪಾರವಾಗಿದೆ ಎಂದು ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಶ್ರೀಕಾಂತ ಕಾಟೇವಾಲ ಹೇಳಿದರು.

ಅವರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ವಿಶ್ವದಾದಿಯರ ದಿನಾಚರಣೆ ಕಾರ್ಯಕ್ರಮ ಆಚರಣೆ ನಿಮಿತ್ತ ಆಸ್ಪತ್ರೆಯ ದಾದಿಯರನ್ನು ಗೌರವಿಸಿ ಮಾತನಾಡಿದರು.

ಜನರ ಉಪಚಾರ, ಆರೈಕೆ ಯೋಗಕ್ಷೇಮ ಕಾಪಾಡಲು ನರ್ಸ್‌ಗಳ ಪಾತ್ರ ಅಪಾರ. ವೈದ್ಯರು ಮಾತ್ರವಲ್ಲ ದಾದಿಯರು ಕೂಡ ಜನರ ಪಾಲಿಗೆ ದೇವರಿದ್ದಂತೆ. ವೈದ್ಯರಂತೆ ನರ್ಸ್‌ಗಳು ಕೂಡಾ ಅತ್ಯಂತ ಪ್ರಾಮಾಣಿಕವಾಗಿ ಜೀವ ರಕ್ಷಣೆ ಮಾಡುವ ಕೆಲಸ ಹಾಗೂ ರೋಗಿಗಳನ್ನು ಹಗಲಿರುಳೆನ್ನದೆ ಆರೈಕೆ ಮಾಡುವ, ಉಪಚಾರ ಮಾಡುವ ಸೇವೆಯನ್ನು ಮಾಡುತ್ತಿದ್ದಾರೆ ಎಂದರು.

ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಅಶೋಕ ಸೊರಟೂರ ಮಾತನಾಡಿ, ವೈದ್ಯರಿಗಿಂತ ಮೊದಲು ರೋಗಿಗಳನ್ನು ಉಪಚರಿಸುವವರು ದಾದಿಯರೇ. ಅದರಲ್ಲೂ ಕೊರೋನಾ ಸಂದರ್ಭದಲ್ಲಿ ತಮ್ಮ ಜೀವದ ಹಂಗನ್ನೇ ತೊರೆದು ಜನರ ಸೇವೆಯನ್ನು ಮಾಡಿದ್ದಾರೆ. ಒಟ್ಟಾರೆಯಾಗಿ ದಾದಿಯರು ಆರೋಗ್ಯ ವ್ಯವಸ್ಥೆಯ ಬೆನ್ನೆಲುಬು ಎಂದರು.

ಈ ವೇಳೆ ಡಾ.ಪ್ರವೀಣ ಸಜ್ಜನ, ಡಾ.ಬಿಸ್ಮಿಲ್ಲಾ, ಸುನೀಲ ಚವ್ಹಾಣ, ವಿಜಯಕುಮಾರ ಮಾಂಡ್ರೆ, ಸುನೀತಾ ನಂದೆಣ್ಣವರ, ಲಕ್ಷ್ಮೀ ಜನಿವಾರದ, ಶ್ರೀಶೈಲ ಫಕೀರಶೆಟ್ಟಿ, ಲಕ್ಷ್ಮೀ ಡೊಳ್ಳಿನ , ಸುವರ್ಣ ಹವಾಲ್ದಾರ, ಆಶಾ ಭಂಡಾರಿಮಠ, ರತ್ನಾ ದಂಡಿನ, ಶಕೀಲಾಬಾನು ಎಂ., ಬಸವರಾಜ ಕರ್ಕಿಕಟ್ಟಿ, ಸಹಾಯಕಿ ಪಾರ್ವತಿ ಲಮಾಣಿ, ಪತ್ರಕರ್ತರಾದ ದಿಗಂಬರ ಪೂಜಾರ, ನಾಗರಾಜ ಹಣಗಿ, ಶಿವಲಿಂಗಯ್ಯ ಹೊತಗಿಮಠ ಸೇರಿದಂತೆ ಅನೇಕರಿದ್ದರು.



ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿ

ಸಶ್ರೇಷ್ಠ ದಾದಿಯರ ಹೆಸರಿನಲ್ಲಿ ನೀಡಲಾಗುವ ಪ್ಲಾರೆನ್ಸ್ ನೈಟಿಂಗೆಲ್ ಪ್ರಶಸ್ತಿ ಒಂದು ಬಾರಿ ಪಟ್ಟಣದಲ್ಲಿ ದಾದಿಯಾಗಿ ಸೇವೆ ಸಲ್ಲಿಸುತ್ತಿದ್ದ ಶಕುಂತಲಾ ಅವರಿಗೆ ಪ್ರಾಪ್ತವಾಗಿತ್ತು. ಅಂತಹ ಪ್ರಶಸ್ತಿಗಳು ಇನ್ನೂ ಹೆಚ್ಚು ಪಡೆಯುವಂತೆ ಪ್ರಾಮಾಣಿಕತೆ, ನಿಷ್ಠೆಯಿಂದ ಕಾರ್ಯನಿರ್ವಹಿಸುವಂತೆ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಶ್ರೀಕಾಂತ ಕಾಟೇವಾಲ ಹೇಳಿದರು.

ಮಕ್ಕಳಿಗಾಗಿ ಒತ್ತಡಮುಕ್ತ ಪರಿಸರ ನಿರ್ಮಿಸಿ: ಎಸ್.ಎಸ್. ಪಾಟೀಲ

ಗದಗ: ಮಕ್ಕಳ ಬಾಲ್ಯ ಸುಂದರಗೊಳಿಸುವ ಕಾರ್ಯ ಮನೆಯಿಂದಲೇ ಪ್ರಾರಂಭಗೊಳ್ಳಬೇಕು. ಅವಿಭಕ್ತ ಕುಟುಂಬ ಮಕ್ಕಳ ಪ್ರೀತಿ, ವಾತ್ಸಲ್ಯ, ಸಹಬಾಳ್ವೆ, ಸಹಸ್ಪಂದನೆಯನ್ನು ಸ್ವಾಭಾವಿಕವಾಗಿ ಕಲಿಸುತ್ತಿತ್ತು ಎಂದು ಮಾಜಿ ಸಚಿವ ಎಸ್.ಎಸ್.ಪಾಟೀಲ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಎಂ.ಎಸ್. ಹುಲ್ಲೂರ ಹೈಟೆಕ್ ಕೋಚಿಂಗ್ ಸೆಂಟರ್ ಸಹಯೋಗದಲ್ಲಿ ವಿಜಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಜರುಗಿದ ಎರಡು ದಿನಗಳ ಮಕ್ಕಳ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಮಕ್ಕಳ ಕ್ರಿಯಾಶೀಲತೆಗೆ ಅವಕಾಶ ಕಲ್ಪಿಸಿ ಅವರ ಪ್ರತಿಭೆಯನ್ನು ಅನಾವರಣಗೊಳಿಸುವಲ್ಲಿ ಸಮ್ಮೇಳನ ಯಶಸ್ವಿಯಾಗಿದೆ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಮನೆ ಮಕ್ಕಳಿಗೆ ಅನಾಥ ಪ್ರಜ್ಞೆಯನ್ನು ಹುಟ್ಟಿಸುತ್ತಿದೆ. ಅಂಕ ಗಳಿಕೆಗೆ ಮಕ್ಕಳನ್ನು ಸಜ್ಜುಗೊಳಿಸದೇ ಬಾಲ್ಯವನ್ನು ಆನಂದದಿಂದ ಕಳೆಯಲು ಒತ್ತಡಮುಕ್ತ ಪರಿಸರವನ್ನು ನಿರ್ಮಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು.



ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಮೂಲತ: ಸೃಜನಶೀಲರಾಗಿರುವ ಮಕ್ಕಳು ಅವಕಾಶ, ಸಂದರ್ಭಗಳಿಂದ ವಂಚಿತರಾಗಿದ್ದಾರೆ. ಮಾನವೀಯ ಗುಣಗಳು ನೆಲೆಗೊಳ್ಳಲು ವ್ಯಕ್ತಿಗೆ ಸಾಹಿತ್ಯ, ಕಲೆ, ಸಂಗೀತದೊಲವು ಮುಖ್ಯ. ಈ ಹಿನ್ನೆಲೆಯಲ್ಲಿ ಸಮ್ಮೇಳನವನ್ನು ಪ್ರಾಯೋಗಿಕವಾಗಿ ಸಂಘಟಿಸುವ ಮೂಲಕ ಮಕ್ಕಳ ಪ್ರತಿಭೆಗೆ ಅವಕಾಶ ಕಲ್ಪಿಸಲಾಗಿತ್ತು ಎಂದರು.

ಕಸಾಪ ಮಾಜಿ ಅಧ್ಯಕ್ಷ ಡಾ.ಶಿವಪ್ಪ ಕುರಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಮಕ್ಕಳಿಗಾಗಿ ಹಮ್ಮಿಕೊಂಡ ಈ ಸಮ್ಮೇಳನ ಮಾದರಿಯಾದುದು. ಮಕ್ಕಳಿಗೆ ಬಾಲ್ಯದಲ್ಲಿಯೇ ವಿವಿಧ ವಿಷಯಗಳ ಬಗ್ಗೆ ಆಸಕ್ತಿ, ಅಭಿರುಚಿಯನ್ನು ಬೆಳೆಸಲು ಇಂತಹ ಸಮ್ಮೇಳನಗಳ ಅಗತ್ಯವಿದೆ ಎಂದರು.

ಸಮ್ಮೇಳನಾಧ್ಯಕ್ಷ ತಯಬಅಲಿ ಹೊಂಬಳ ಮಾತನಾಡಿ, ಸರ್ಕಾರ ಮಕ್ಕಳ ಸಾಹಿತ್ಯದ ಕೃತಿಗಳನ್ನು ಖರೀದಿಸುವ ಪ್ರಕ್ರಿಯೆಯನ್ನು ನಿರಂತರವಾಗಿ ನಡೆಸಬೇಕು. ಹಿರಿಯ ಮಕ್ಕಳ ಸಾಹಿತಿಗಳನ್ನು ಜಿಲ್ಲಾ ಹಂತದಲ್ಲಿ ಗುರುತಿಸಿ ಗೌರವಿಸಬೇಕು ಎಂದರು.

ತಯಬಅಲಿ ಹೊಂಬಳ ದಂಪತಿಯನ್ನು ಪರಿಷತ್ತಿನ ಪರವಾಗಿ ಸನ್ಮಾನಿಸಲಾಯಿತು. ಸಮ್ಮೇಳನದ ವಿವಿಧ ವಿಭಾಗಗಳಲ್ಲಿ ಮಕ್ಕಳು ರಚಿಸಿದ ಕತೆ ಮತ್ತು ಕವಿತೆಗಳ ಕರಡು ಸಂಕಲನವನ್ನು ಬಿಡುಗಡೆಗೊಳಿಸಲಾಯಿತು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಪ್ರವೀಣಕುಮಾರ ಸೊಬಗಿನ, ರಾಧಿಕಾ ತೊಂಡಿಹಾಳ, ತನುಶ್ರೀ ಬದಿ, ಪ್ರಣತಿ ಗಡಾದ, ಬ.ಭೀ. ನಾಗನೂರ ಸನ್ಮಾನಿಸಲಾಯಿತು. ಎಂ.ಎಸ್.ಹುಲ್ಲೂರ, ಡಾ. ಶರಣಬಸವೇಶ ಆಲೂರ, ರತ್ನಕ್ಕ ಪಾಟೀಲ, ಸಂಜಯ ಬಾಗಮಾರ, ರಮಾಕಾಂತ ಕಮತಗಿ ಮೊದಲಾದವರು ಉಪಸ್ಥಿತರಿದ್ದರು. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಬಸವರಾಜ ನೆಲಜೇರಿ ಸ್ವಾಗತಿಸಿದರು. ರಾಹುಲ ಗಿಡ್ನಂದಿ ವಂದಿಸಿದರು.

57 ಗ್ರಾಮಕ್ಕೆ 70 ಖಾಸಗಿ ಬೋರ್‌ವೆಲ್‌ನಿಂದ ನೀರು ಪೂರೈಕೆ

286 ಹಳ್ಳಿಗಳಿಗೆ ನೀರಿನ ಸಮಸ್ಯೆ

▸ ಕಿರಣ ಮಾಸಣಗಿ



◆ **ಹಾವೇರಿ:** ಜಿಲ್ಲೆಯಲ್ಲಿ ಬಿರು ಬೇಸಿಗೆ ಮುಂದುವರಿದಿದ್ದು, ನದಿಗಳ ಒಡಲು ಬರಿದಾಗಿ ಕುಡಿಯುವ ನೀರಿಗೆ ತತ್ವಾರ ಎದುರಾಗಿದೆ.

ಹಾವೇರಿ ತಾಲೂಕಿನ ಕರಜಗಿ ಮತ್ತು ರಾಣೇಬೆನ್ನೂರ ತಾಲೂಕಿನ ಕೆಲವು ನದಿ ತೀರದ ಗ್ರಾಮಗಳಲ್ಲಿ ಜನರು ವರ್ತಿ ನೀರಿಗೆ ಮೊರೆ ಹೋಗಿದ್ದಾರೆ. ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವ 286 ಗ್ರಾಮಗಳನ್ನು ಗುರುತಿಸಿದ್ದು, ಈಗಾಗಲೇ 57ಗ್ರಾಮಗಳ 70ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಪಡೆದು ನೀರು ಪೂರೈಸಲಾಗುತ್ತಿದೆ.

ದಿಗಂತ ವಿಶೇಷ

ಜಿಲ್ಲೆಯಲ್ಲಿ ತುಂಗಭದ್ರಾ, ವರದಾ, ಧರ್ಮಾ ಹಾಗೂ ಕುಮುಧ್ವತಿ ನದಿ ಹರಿದಿದ್ದು, ಮಾರ್ಚ್-ಏಪ್ರಿಲ್‌ನಲ್ಲಿ ಬಿಸಿಲು ಹೆಚ್ಚುತ್ತಿದ್ದಂತೆ ನದಿಪಾತ್ರದ ಪ್ರದೇಶಗಳಲ್ಲಿ ನೀರಿನ ಬವಣೆ ಹೆಚ್ಚುತ್ತದೆ. ಇದರ ಜತೆಗೆ ಕೆಲವು ಕೆರೆಗಳು ಒಣಗಿದ್ದು, ಮತ್ತೆ ಕೆಲವು ಒಣಗುವ ಹಂತದಲ್ಲಿವೆ. ಅಲ್ಲಲ್ಲಿ ಕೆಲ ಕೊಳವೆಬಾವಿಗಳು ನೀರಿಲ್ಲದೇ ಬಣಗುಡುತ್ತಿವೆ. ಹೀಗಾಗಿ ನಗರಗಳು ಸೇರಿ ಗ್ರಾಮೀಣ ಭಾಗದಲ್ಲಿ ನೀರಿಗೆ ಹಾಹಾಕಾರ ಎದುರಾಗಿದೆ.

ಜಿಲ್ಲೆಯಲ್ಲಿ 6 ಜನವಸತಿ ಇಲ್ಲದ ಗ್ರಾಮಗಳೂ 223 ಗ್ರಾಪಂ ವ್ಯಾಪ್ತಿಯಲ್ಲಿ 701 ಗ್ರಾಮಗಳು 2 ಸಾವಿರಕ್ಕೂ ಅಧಿಕ ಕೆರೆಗಳಿದ್ದು, ಬಹುತೇಕ ಕೆರೆಗಳು ನೀರಿಲ್ಲದೇ ಖಾಲಿಯಾಗುತ್ತಿವೆ. ತುಂಗಭದ್ರಾ ನದಿಯಿಂದ ಹಾವೇರಿ, ರಾಣೇಬೆನ್ನೂರ, ಬ್ಯಾಡಗಿ, ಹಿರೇಕೆರೂರ ಸೇರಿದಂತೆ ನೂರಾರು ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಜಾರಿಯಲ್ಲಿವೆ. ಆದರೆ, ನದಿಯಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿರುವುದರಿಂದ ಆ ಗ್ರಾಮಗಳಿಗೂ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ.

286 ಗ್ರಾಮಗಳಲ್ಲಿ ನೀರಿನ ಸಮಸ್ಯೆ: ಮೇ 11ರ ವರಗೂ 286 ಗ್ರಾಮಗಳಿಗೆ ನೀರಿನ ಸಮಸ್ಯೆ ಉದ್ಭವಿಸಬಹುದು. ನಗರ ಪ್ರದೇಶದಲ್ಲಿ ಒಟ್ಟು 238 ವಾರ್ಡ್‌ಗಳ ಪೈಕಿ 60ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಉಲ್ಬಣಗೊಳ್ಳುವ ಸಾಧ್ಯತೆ ಇದೆ ಎಂದು ಜಿಲ್ಲಾಡಳಿತ ಪಟ್ಟಿ ಸಿದ್ಧಪಡಿಸಿದೆ.

57 ಗ್ರಾಮಗಳಿಗೆ ಖಾಸಗಿ ಬೋರ್‌ವೆಲ್ ನೀರು: ಜಿಲ್ಲೆಯ 8 ತಾಲೂಕುಗಳಲ್ಲಿ ಒಟ್ಟು 57ಗ್ರಾಮಗಳ 70 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆದು ತಾತ್ಕಾಲಿಕವಾಗಿ ನೀರು ಪೂರೈಸಲಾಗುತ್ತಿದೆ. ಬ್ಯಾಡಗಿ ತಾಲೂಕಿನ ರಾಮಗೊಂಡನಹಳ್ಳಿ, ಗುಂಡೆನಹಳ್ಳಿ, ಶಿವಪುರ, ಅರಬಗೊಂಡ, ಹಾನಗಲ್ಲ ತಾಲೂಕಿನ ಹುಲುಗಿನಕೊಪ್ಪ, ಶಂಕ್ರಿಕೊಪ್ಪ, ಗಿರಿಸಿನಕೊಪ್ಪ, ಗುರುರಾಯಪಟ್ಟಣ, ಗೊಂದಿ, ಹಿರೇಕೌಂಸಿ, ನರೇಗಲ್, ಹೊಸಳ್ಳಿ, ಹೊಂಕಣ, ಬೊಮ್ಮನಹಳ್ಳಿ, ಹಾವೇರಿ ತಾಲೂಕಿನ ಕುಳೇನೂರು, ಶಿಗ್ಗಾವಿ ತಾಲೂಕಿನ ಗುಡ್ಡದಚನ್ನಾಪೂರ, ಕಾಮನಹಳ್ಳಿ, ಎನ್.ಎಂ.ತಡಸ, ಹಿರೇಮಲ್ಲೂರ ಪ್ಲಾಟ್, ಹೊಟ್ಟೂರ, ಸವಣೂರು ತಾಲೂಕಿನ ಮಂತ್ರೋಡಿ, ಹೊಸನೀರಲಗಿ, ಹಿರೇಕೆರೂರ ತಾಲೂಕಿನ ಡಮ್ಮಳ್ಳಿ, ಮಡ್ಲೂರ, ಚಿಕ್ಕೇರೂರ, ಜಾವಳ್ಳಿ, ಶ್ರೀರಾಮನಕೊಪ್ಪ, ರಟ್ಟೀಹಳ್ಳಿ ತಾಲೂಕಿನ ಕಡೂರ, ರಾಮತೀರ್ಥ, ಹಿರೇಮೊರಬ, ಇಂಗಳಗೊಂದಿ, ಹೊಸಳ್ಳಿ, ನಾಗವಂದ, ತಿಮಲಾಪೂರ ಗ್ರಾಮದಲ್ಲಿ ಖಾಸಗಿ ಕೊಳವೆ ಬಾವಿ ಮೂಲಕ ನೀರು ಪೂರೈಸಲಾಗುತ್ತಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಶೇ.56.44ರಷ್ಟು ಮಳೆ ಕೊರತೆ


ಜಿಲ್ಲೆಯಲ್ಲಿ ಪ್ರಸಕ್ತ ಮೇ 1ರಿಂದ 11ರವರೆಗೆ 20.20 ಮೀ.ಮೀ ವಾಡಿಕೆ ಮಳೆ ಪೈಕಿ ಕೇವಲ 8.80ಮೀ.ಮೀ ಮಳೆ ಸುರಿದು ಶೇ.56.44ರಷ್ಟು ಮಳೆ ಕೊರತೆಯಾಗಿದೆ. ಜಿಲ್ಲೆಯ ಶಿಗ್ಗಾವಿ 11.80ಮೀಮೀ ವಾಡಿಕೆ ಪೈಕಿ 0.94ಮೀ.ಮೀ, ಹಾನಗಲ್ಲ 10.30ಮೀಮೀ ಪೈಕಿ 5.65ಮೀ.ಮೀ, ಹಾವೇರಿ 11.20ಮೀ.ಮೀ ಪೈಕಿ 9.33ಮೀ.ಮೀ, ಹಿರೇಕೆರೂರ 10.40ಮೀಮೀ ಪೈಕಿ 5.84ಮೀಮೀ, ಸವಣೂರು 10.90ಮೀಮೀ ಪೈಕಿ 6.91ಮೀಮೀ, ರಟ್ಟೀಹಳ್ಳಿ ತಾಲೂಕಿನಲ್ಲಿ 10.50ಮೀಮೀ ಪೈಕಿ 9.97ಮೀಮೀ ಮಳೆಯಾಗಿದೆ. ಬ್ಯಾಡಗಿ ತಾಲೂಕಿನಲ್ಲಿ ಮಾತ್ರ ವಾಡಿಕೆ ಮಳೆಗಿಂತ ಅಧಿಕ ಪ್ರಮಾಣದಲ್ಲಿ ಮಳೆ ಸುರಿದಿದೆ.

> ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಉದ್ಭವಿಸಬಹುದಾದ 286 ಗ್ರಾಮ ಗುರುತಿಸಿದ್ದು, ಪ್ರಸ್ತುತ 57 ಗ್ರಾಮಗಳಿಗೆ 70 ಖಾಸಗಿ ಬೋರ್‌ವೆಲ್‌ನಿಂದ ನೀರು ಪೂರೈಸಲಾಗುತ್ತಿದೆ. ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ಆವಶ್ಯಕತೆ ಎದುರಾಗಿಲ್ಲ. ಅಗತ್ಯ ಕಂಡು ಬಂದರೆ ತಕ್ಷಣ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
>
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ

ನದಿಗಳ ನೀರು ಬಳಕೆ ಗೊಂದಲ ಪರಿಹಾರಕ್ಕೆ ಕ್ರಮ

ಮಹಾರಾಷ್ಟ್ರಕ್ಕೆ ಶೀಘ್ರ ನಿಯೋಗ: ಶಾಸಕ ಪಾಟೀಲ

◆ **ವಿಜಯಪುರ:** ಭೀಮಾ ಹಾಗೂ ಕೃಷ್ಣಾ ನದಿಗಳ ನೀರು ಬಳಕೆಯ ಗೊಂದಲವನ್ನು ಪರಿಹರಿಸಿಕೊಂಡು ಸೌಹಾರ್ದತೆಯ ಮೂಲಕ ಶಾಶ್ವತ ಪರಿಹಾರ ಕಂಡುಕೊಳ್ಳಲು ವಿಜಯಪುರ, ಬೆಳಗಾವಿ, ಕಲಬುರ್ಗಿ ಜಿಲ್ಲೆಯ ಶಾಸಕರು ಸೇರಿದಂತೆ ಉನ್ನತ ಮಟ್ಟದ ನಿಯೋಗವನ್ನು ಮಹಾರಾಷ್ಟ್ರ ಸರ್ಕಾರವನ್ನು ಭೇಟಿ ಮಾಡುವ ಮಹತ್ವದ ಕಾರ್ಯ ಕೈಗೊಳ್ಳಲಾಗುವುದು ಎಂದು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾನವೀಯತೆ ಹಾಗೂ ಸಹೋದರತೆಯ ಭಾವದೊಂದಿಗೆ ಈ ಬಾರಿ ಮಹಾರಾಷ್ಟ್ರ ಸರ್ಕಾರ 16 ಸಾವಿರ ಕ್ಯೂಸೆಕ್ ನೀರನ್ನು ಉಜನಿ ಜಲಾಶಯದಿಂದ ಹರಿಸಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಬಾರಿಯೂ ಈ ನೀರು ಬಿಡಿಸುವ ಕಾರ್ಯದಿಂದ ಅವಲಂಬಿತವಾಗದೇ ಕೃಷ್ಣಾ ಹಾಗೂ ಭೀಮಾ ನದಿಗಳಿಗೆ ಸಂಬಂಧಿಸಿದಂತೆ ಕುಡಿಯುವ ನೀರಿನ ಯೋಜನೆಗಳು ಅನುಷ್ಠಾನಗೊಂಡರೆ ಮಾತ್ರ ಶಾಶ್ವತ ಪರಿಹಾರ ಎಂದರು.

ಈಗ ಮಹಾರಾಷ್ಟ್ರ ಸರ್ಕಾರ ಉಜನಿ ಡ್ಯಾಂ ಮೂಲಕ ಸೊಲ್ಲಾಪೂರಕ್ಕಾಗಿ ಕುಡಿಯುವ ನೀರಿನ ಪೂರೈಕೆ ಮಾಡುವುದರಿಂದ ಆ ನೀರಿನ ಮೂಲದ ಕೊರತೆಯೂ ಅಧಿಕವಾಗಿತ್ತು. ಆದರೆ, ಸಹೋದರ ಭಾವನೆಯಿಂದ ಮಹಾರಾಷ್ಟ್ರ ಸರ್ಕಾರ ಭೀಮಾ ನದಿಗೆ ನೀರು ಹರಿಸಿದೆ ಎಂದರು.

ವಿದ್ಯುತ್ ಪೂರೈಕೆಯನ್ನು ಸರಾಗವಾಗಿಸಲು ಅನೇಕ 330 ಕೆವಿ ಸ್ಟೇಷನ್‌ಗಳನ್ನು ಸ್ಥಾಪಿಸಿ ಸರಾಗ ವಿದ್ಯುತ್ ಪೂರೈಕೆಗೂ ಆದ್ಯತೆ ನೀಡಲಾಗಿದೆ. ಹಡಲಸಂಗದಲ್ಲಿ ಪಿಯು ಕಾಲೇಜ್ ಮಂಜೂರು, ಶಿರಶ್ಯಾಡದಲ್ಲಿ ಪಿಯು ಕಾಲೇಜ್ ಹಾಗೂ ಬಸನಾಳದಲ್ಲಿಯೂ ಪಿಯು ಕಾಲೇಜ್ ಆರಂಭಿಸಲಾಗಿದೆ ಎಂದರು.

ಶೇ.80ರಷ್ಟು ನೀರಾವರಿಯಾದರೆ ನಮ್ಮ ತಾಲೂಕು ಸಮೃದ್ಧಿಯಾಗಲಿದೆ. ಆಲಮಟ್ಟಿ ಅಣೆಕಟ್ಟಿನ ಎತ್ತರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಅಂತಿಮ ಅಧಿಸೂಚನೆ ಹೊರಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮುತವರ್ಜಿ ವಹಿಸಬೇಕಿದೆ ಎಂದರು.

ರಸ್ತೆಗಳ ಅವ್ಯವಸ್ಥೆಯ ಬಗ್ಗೆ ಅನೇಕ ರೀತಿಯಲ್ಲಿ ಚರ್ಚೆಯಾಗುತ್ತಿವೆ. ಆರು ತಿಂಗಳಲ್ಲಿ ರಸ್ತೆಗಳ ಅಭಿವೃದ್ಧಿ ಮಾಡಲಾಗುವುದು. ಆದರೆ, ರಸ್ತೆಯ ಸಮಸ್ಯೆಯ ನೈಜತೆಯನ್ನು ಸಹ ಅರ್ಥೈಸಿಕೊಳ್ಳಬೇಕು, ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆ ಸುರಿದಿದ್ದರಿಂದ ರಸ್ತೆ ಹಾಳಾಗಿದೆ. ಅಲ್ಲದೆ ಈ ಭಾಗದಲ್ಲಿ ಅನೇಕ ಸಂಖ್ಯೆಯಲ್ಲಿ ಸಕ್ಕರೆ ಕಾರ್ಖಾನೆಗಳು ಇದ್ದು, ನೂರಾರು ಟನ್ ಕಬ್ಬು ಹೇರಿಕೊಂಡು ಟ್ರ್ಯಾಕ್ಟರ್ ಸಂಚರಿಸುವುದಕ್ಕೆ ರಸ್ತೆಗಳು ಹಾಳಾಗುತ್ತಿರುವುದನ್ನು ಅರಿಯಬೇಕು ಎಂದರು.

ಇಂಡಿ ಜಿಲ್ಲೆಯಾಗುವ ನಿಟ್ಟಿನಲ್ಲಿ ಎಲ್ಲ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿರುವೆ. ವಿಜಯಪುರ ನಗರದಲ್ಲಿ ರಾಜ್ಯಮಟ್ಟದ ಮಂಡಳಿಯ ಕೇಂದ್ರ ಕಚೇರಿ ಇಲ್ಲ, ಇಂಡಿಯಲ್ಲಿದೆ. ನಗರಸಭೆಯಾಗಿ ಮೇಲ್ದರ್ಜೆಗೇರಿದೆ. ಇಂಡಿ ಜಿಲ್ಲೆಯಾಗಿಸುವ ಸಸಿ ನೆಟ್ಟಿರುವೆ. ಅದು ಯಾವಾಗ ಹೆಮ್ಮರವಾಗಿ ಬೆಳೆಯುತ್ತದೆಯೋ ಬೆಳೆಯಲಿ ಎಂದರು.

ಸಂವಿಧಾನದ 370ಜೆ ಅಡಿಯಲ್ಲಿ ವಿಜಯಪುರ ಜಿಲ್ಲೆ ಸೇರ್ಪಡೆ ಮಾಡುವ ಹೋರಾಟದ ದನಿ ವಿಳಂಬವಾಗಿ ಮೊಳಗಿದೆ. ಈ ಬಗ್ಗೆ ದಿ.ಎಂ.ಎಂ.ಸಜ್ಜನ ಅವರು ಧ್ವನಿ ಎತ್ತಿದಾಗ ಅವರ ಹೋರಾಟಕ್ಕೆ ನಾವು ಆಗಲೇ ಬಲ ನೀಡಬೇಕಾಗಿತ್ತು. ಆದರೆ, ಆ ವಿಷಯದಲ್ಲಿ ನಾವು ವಿಫಲವಾಗಿದ್ದೇವೆ. ಈ ಕೂಗು ಈಗ ಎದ್ದಿದೆ ಎಂದರು.

ಕಿರುಸುದ್ದಿ

ಸದ್ವಿಚಾರಗೋಷ್ಠಿ ಇಂದು

◆ **ಹುಬ್ಬಳ್ಳಿ:** ಗೋ ಸೇವಾ ಗತಿವಿಧಿ ಕರ್ನಾಟಕ ಉತ್ತರ ಪ್ರಾಂತ ವತಿಯಿಂದ ಗೋಕುಲ ರಸ್ತೆಯಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಾಲಯ ಕೇಶವ ಕುಂಜದಲ್ಲಿ ಮೇ 13ರಂದು ಸಂಜೆ 6 ಗಂಟೆಗೆ ಗೋ ಆಧಾರಿತ ಸದ್ವಿಚಾರಗೋಷ್ಠಿ ಆಯೋಜಿಸಲಾಗಿದೆ. ಗೋ ಸೇವಾ ಗತಿವಿಧಿಯ ಅಖಿಲ ಭಾರತೀಯ ಪ್ರಶಿಕ್ಷಣ ಪ್ರಮುಖ ರಾಘವನ್ ಅವರ ಗೋಷ್ಠಿ ನಡೆಸಿಕೊಡಲಿದ್ದಾರೆ. ಅಮ್ಮಿನಭಾವಿ ಪಂಚಗ್ರಹ ಹಿರೇಮಠದ ಶಾಂತಲಿಂಗ ಸ್ವಾಮೀಜಿ ಸಾನ್ನಿಧ್ಯ, ಉದ್ಯಮಿ ಹಾಗೂ ಗೋ ಸೇವಾ ಗತಿವಿಧಿಯ ಮಹಾ ಪೋಷಕ ವಿ.ಎಸ್.ವಿ ಪ್ರಸಾದ ಅವರು ಭಾವಹಿಸುವರು ಎಂದು ಗೋ ಸೇವಾ ಗತಿವಿಧಿ ಕರ್ನಾಟಕ ಉತ್ತರ ಪ್ರಾಂತ ಸಂಯೋಜಕ ದತ್ತಾತ್ರೇಯ ಭಟ್ಟ ತಿಳಿಸಿದ್ದಾರೆ.

ದಾಂಡೇಲಿಯಿಂದ ಮೊಟ್ಟಮೊದಲ ಪೈಲೆಟ್ ರೋಹನ್ ಕಾಮತ್

◆ **ದಾಂಡೇಲಿ:** ದಾಂಡೇಲಿ ತಾಲೂಕಿನಿಂದ ಮೊಟ್ಟಮೊದಲ ಪೈಲೆಟ್ ಆಗಿ ಹಳೆ ದಾಂಡೇಲಿಯ ರೋಹನ್ ಸಚಿನ್ ಕಾಮತ್ ಅವರು ಆಯ್ಕೆಯಾಗಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಯಾಗಿ ಗಮನ ಸೆಳೆದಿದ್ದ ರೋಹನ್ ಸಚಿನ್ ಕಾಮತ್ ಅವರು ದಾಂಡೇಲಿಯ ಮೊಟ್ಟಮೊದಲ ಚಾರ್ಟೆಡ್ ಅಕೌಂಟೆಂಟ್ ಆಗಿರುವ ಸಚಿನ್ ಕಾಮತ್ ಹಾಗೂ ಗಾಯಕಿ ಸಹನಾ ಕಾಮತ್ ದಂಪತಿಗಳ ಸುಪುತ್ರರಾಗಿದ್ದಾರೆ. ಇಂಡಿಗೋ ವಿಮಾನಯಾನ ಸಂಸ್ಥೆಯಲ್ಲಿ ಪೈಲೆಟ್ ಆಗಿ ಸೇವೆ ಸಲ್ಲಿಸಲು ರೋಹನ್ ಸಚಿನ್ ಕಾಮತ್ ಅವರನ್ನು ಆಯ್ಕೆ ಮಾಡಲಾಗಿದೆ. ರೋಹನ್ ಸಚಿನ್ ಕಾಮತ್ ಅವರ ಈ ಸಾಧನೆಗೆ ತಾಲೂಕಿನ ಗಣ್ಯರನೇಕರು ಹರ್ಷ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ.



ಭಾರೀ ಗಾಳಿಗೆ ನೆಲಕ್ಕೆ ಉರುಳಿದ ಮರಗಳು

ಅಂಕೋಲಾದಲ್ಲಿ ಬಿರುಗಾಳಿ ಸಹಿತ ಮಳೆ



◆ **ಅಂಕೋಲಾ:** ತಾಲೂಕಿನ ಹಲವೆಡೆ ಮಂಗಳವಾರ ಸಂಜೆ ಬಿರುಗಾಳಿ ಸಹಿತ ಮಳೆ ಸುರಿದಿದ್ದು ಬಿಸಿಲ ಬೇಗೆಯಿಂದ ಬಂದಿದ್ದ ಧರೆಯನ್ನು ಸ್ವಲ್ಪ ತಣ್ಣಗಾಗಿಸಿದೆ. ಗಾಳಿಯ ಅಬ್ಬರಕ್ಕೆ ಪಟ್ಟಣದಲ್ಲಿ ಕಸ ಕಡ್ಡಿಗಳೆಲ್ಲ ಹಾರಿ ಸಂಪೂರ್ಣ ಧೂಳಿನ ವಾತಾವರಣ ನಿರ್ಮಾಣವಾಯಿತು. ಹಲವಾರು ಅಂಗಡಿಗಳ ಎದುರು ನಿಲ್ಲಿಸಲಾದ ಫಲಕಗಳು ಗಾಳಿಯಿಂದ ಹಾರಿ ಹೋಗಿವೆ. ತಾಲೂಕಿನಲ್ಲಿ ಹಲವು ದಿನಗಳಿಂದ ಏರುತ್ತಿರುವ ತಾಪಮಾನ ಸೆಖೆಯಿಂದಾಗಿ ಜನರು ಮನೆಗಳಿಂದ ಹೊರಬರುವುದೇ ಕಷ್ಟಕರವಾಗಿ ಮಳೆಯಾದರೂ ಸುರಿದು ತಂಪು ನೀಡಲಿ ಎಂದು ಪ್ರಾರ್ಥಿಸುವಂತಾಗಿತ್ತು. ಎರಡು ದಿನಗಳ ಹಿಂದೆ 10 ನಿಮಿಷಗಳ ಕಾಲ ತುಂತುರು ಮಳೆ ಸುರಿದಿತ್ತಾದರೂ ಸಣ್ಣ ಮಳೆಗೆ ರಾತ್ರಿಯಿಡಿ ವಿದ್ಯುತ್ ಸಂಪರ್ಕ ಹಲವು ಬಾರಿ ಕಡಿತವಾಗಿ ಜನತೆ ಸೆಖೆಯಿಂದ ಬಳಲುವಂತಾಗಿತ್ತು. ಮಂಗಳವಾರ ಸುರಿದ ಮಳೆಯಿಂದ ಪಟ್ಟಣದ ಜನತೆಗೆ ಮೊದಲ ಬಾರಿ ತಂಪು ಅನುಭವಾಗಿದೆಯಾದರೂ ಮಳೆ ಕೇವಲ ಇಪ್ಪತ್ತೇ ನಿಮಿಷಕ್ಕೆ ಸೀಮಿತವಾಗಿದ್ದು ಇನ್ನಷ್ಟು ಉಷ್ಣಾಂಶ ಹೆಚ್ಚದಿರಲಿ ಎಂದು ಜನತೆ ಪ್ರಾರ್ಥಿಸುತ್ತಿದ್ದಾರೆ.

◆ **ಬಾಗಲಕೋಟೆ:** ಜಿಲ್ಲೆಯ ಬಾದಾಮಿ ತಾಲೂಕಿನ ಹಲಕುರ್ಕಿ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳತ್ತ ಭಾರೀ ಬಿರುಗಾಳಿ ಸಹಿತ ಮಳೆಯಾಗಿದ್ದರಿಂದ ಹತ್ತಾರು ಗಿಡಗಳು ನೆಲಕ್ಕೆ ಉರುಳಿದ ಘಟನೆ ನಡೆದಿದೆ.



ಬಾದಾಮಿಯಿಂದ ಸುಮಾರು ಐದಾರು ಕಿ.ಮೀ. ಅಂತರದಲ್ಲಿ ಇರುವ ಹಲಕುರ್ಕಿ, ಚಿಕ್ಕಮುಚ್ಚಳಗುಡ್ಡ ಗ್ರಾಮದ ಸುತ್ತಮುತ್ತ ಮಂಗಳವಾರ ಭಾರೀ ಬಿರುಗಾಳಿ ಬೀಸಿದೆ. ಗಾಳಿ ಬೀಸಿದ್ದರಿಂದ ಹಲಕುರ್ಕಿ ಗ್ರಾಮದಲ್ಲಿ ಮನೆಯ ಮುಂದೆ ಎಮ್ಮೆಗಳಿಗೆ ಹಾಕಿದ್ದ ಶೆಡ್‌ನ ತಗಡಗಳು ಗಾಳಿಗೆ ಹಾರಿ ಬಿದ್ದಿವೆ. ತಗಡು ಸುಮಾರು ಅರ್ಧ ಕಿ.ಮೀ. ಅಂತರದ ದೂರದವರೆಗೆ ಹೋಗಿ ತಡಗಳು ಜಮೀನುಗಳಲ್ಲಿ ಬಿದ್ದಿವೆ.

ಇನ್ನೂ ಹಲಕುರ್ಕಿ ಗ್ರಾಮದಿಂದ ಕಟಗೇರಿ ಹೋಗುವ ಮಾರ್ಗದ ಅಕ್ಕಪಕ್ಕದಲ್ಲಿ ಇರುವ ಮರಗಳು ನೆಲಕ್ಕೆ ಉರುಳಿ ಬಿದ್ದಿವೆ. ಸುಮಾರು 50ಕ್ಕೂ ಹೆಚ್ಚು ಮರಗಳು ಗಾಳಿಗೆ ನೆಲಕ್ಕೆ ಅಪ್ಪಳಿಸಿದ್ದು ಇನ್ನೂ ಕೆಲವು ಮರಗಳು ರಸ್ತೆ ಮಧ್ಯದಲ್ಲಿಯೇ ಬಿದ್ದಿದ್ದರಿಂದ ಜನಸಂಚಾರಕ್ಕೆ ತೊಂದರೆ ಉಂಟಾಗಿತ್ತು ಸುಮಾರ ಅರ್ಧ ಗಂಟೆ ಕಾಲ ರಸ್ತೆ ಸಂಚಾರಕ್ಕೆ ಅಡ್ಡಿಯಾಗಿದ್ದು ಕಂಡುಬಂದಿದೆ.

ಸುಮಾರು ಮರಗಳು ನೆಲಕ್ಕೆ ಬಿದ್ದು ರಸ್ತೆಯ ಮೇಲೆ ಬಿದ್ದಿದ್ದರಿಂದ ಸುದ್ದಿ ತಿಳಿಯುತ್ತಿದ್ದಂತೆ ಅರಣ್ಣಯ ಇಲಾಖೆಯ ಅಽಕಾರಿ ಯಲಿಗಾರ ನೇತೃತ್ವದಲ್ಲಿ ಸಿಬ್ಬಂದಿ ಬಂದು ರಸ್ತೆಯ ಮೇಲೆ ಬಿದ್ದಿದ್ದ ಮರಗಳನ್ನು ಪಕ್ಕಕ್ಕೆ ಸರಿಸಿ ರಸ್ತೆ ಸಂಚಾರಕ್ಕೆ ಸುಗಮ ಮಾಡಿದರು.

ಸುಮಾರು ಅರ್ಧ ಗಂಟೆ ಕಾಲ ಭಾರೀ ಗಾಳಿ ಬೀಸಿದೆ. ಇದರಿಂದ ಜನರು ಮನೆಯಿಂದ ಹೊರಗಡೆ ಬರದಷ್ಟು ಭಯಂಕರ ಗಾಳಿ ಬೀಸಿದೆ. ಗಾಳಿಗೆ ತಗಡುಗಳು ಹಾರಿ ಹೋಗಿದ್ದನ್ನು ನೋಡಿದರೆ ರಸ್ತೆಯ ಮೇಲೆ ಹೋಗುವ ಬೈಕ್ ಸವಾರರಿಗೆ, ವಾಹನಗಳಿಗೆ ಯಾವುದೇ ಅನಾಹುತವಾಗಿಲ್ಲ, ಜಮೀನುಗಳಲ್ಲಿ ಹೋಗಿ ಬಿದ್ದಿದ್ದರಿಂದ ಯಾವುದೇ ಅಪಾಯಕಾರಿ ಘಟನೆ ನಡೆದಿದೆ.

ಇನ್ನೂ ಹಲಕುರ್ಕಿ ಸುತ್ತಮುತ್ತ ಅರ್ಧ ಗಂಟೆ ಕಾಲ ಭಾರೀ ಮಳೆ ಕೂಡ ಆಗಿದ್ದು ಜಮೀನಿನಲ್ಲಿ ನೀರು ನಿಂತಿದ್ದುದೃಶ್ಯ ಕಂಡುಬಂದಿತು. ಬಾದಾಮಿ ಸಮೀಪ ಕೂಡ ಗಾಳಿಗೆ ಅಲ್ಲಲ್ಲಿ ಮರಗಳು ಬಿದ್ದಿದ್ದು ಸಾರ್ವಜನಿಕರು ಅವುಗನ್ನು ರಸ್ತೆಯಿಂದ ಪಕ್ಕಕ್ಕೆ ಸರಿಸುತ್ತಿದ್ದ ದೃಶ್ಯ ಕೂಡ ಕಂಡುಬಂದಿತು.

ಅಳ್ನಾವರದಲ್ಲಿ ಭಾರೀ ಮಳೆ

◆ **ಅಳ್ನಾವರ:** ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಮಂಗಳವಾರ ಸಂಜೆ ಸುರಿದ ಗುಡುಗು ಮಿಂಚಿನಿಂದ ಕೂಡಿದ ಭಾರೀ ಮಳೆ ಗಾಳಿಗೆ ಅನೇಕ ಮರಗಳು ಬಿದ್ದು ಸಂಚಾರಕ್ಕೆ ಅಡ್ಡಿಯಾದ ಪ್ರಸಂಗ ಕಂಡು ಬಂದಿತು. ಪಟ್ಟಣದಲ್ಲಿ ಮನೆಯ ಮೇಲೆ ಹಾಕಲಾಗಿದ್ದ ತಗಡಿನ ಮೇಲ್ಛಾವಣಿಯೊಂದು ಬಹು ದೂರದವರೆಗೆ ಹಾರಿ ಹೋಗಿ ಮತ್ತೊಬ್ಬರ ಮನೆಯ ಮೇಲೆ ಬಿದ್ದಿರುವ ಘಟನೆ ನಡೆದಿದ್ದು, ಆ ಸಮಯದಲ್ಲಿ ಯಾರು ಇಲ್ಲದಿರುವುದು ಸಂಭವಿಸಬಹುದಾಗಿದ್ದ ಹೆಚ್ಚಿನ ಅನಾಹುತ ತಪ್ಪಿದೆ. ತಗಡು ಹಾರಿ ಬಂದು ಬಿದ್ದ ರಭಸಕ್ಕೆ ಬಸವರಾಜ ಹಾನಗಲ್ ಎನ್ನುವರ ಮನೆ ಮೇಲ್ಛಾವಣಿಗೆ ಹಾನಿಯಾದ ಬಗ್ಗೆ ತಿಳಿದು ಬಂದಿದೆ. ನೀರಿಲ್ಲದೆ ಒಣಗುತ್ತಿದ್ದ ಕಬ್ಬಿನ ಬೆಳೆಗೆ ಅನುಕೂಲವಾಗಿದ್ದು ಬಿಸಿಲಿನ ಝಳಕ್ಕೆ ತಂಪೆರೆದಿದೆ. ಅಳ್ನಾವರ ಲೋಂಡಾ ಮಧ್ಯದಲ್ಲಿ ರೈಲು ಹಳಿಗಳ ಮೇಲೆ ಮರಗಳು ಬಿದ್ದಿದ್ದ ಪರಿಣಾಮ ಅನೇಕ ರೈಲುಗಳು ವಿಳಂಬವಾಗಿ ಸಂಚರಿಸಿದ ವರದಿಯಾಗಿದೆ. ಅಳ್ನಾವರ ಸುತ್ತಮುತ್ತಲಿನ ಅನೇಕ ಕಡೆಗಳಲ್ಲಿ ಮಳೆಯ ಜೊತೆಗೆ ಭಾರೀ ಗಾಳಿ ಬೀಸಿದ್ದರಿಂದ ಜನತೆಯಲ್ಲಿ ಭಯದ ವಾತಾವರಣ ನಿರ್ಮಾಣವಾಗಿದ್ದು ಕಂಡು ಬಂದಿತು.



ಪತ್ನಿ ಮದುವೆ ನಿಲ್ಲಿಸಲು ಬೇಡಿಕೊಂಡ ಪತಿ!

◆ **ಬೆಳಗಾವಿ:** ಪರಿಚಯವಿದ್ದ ಯುವತಿಯ ಜೊತೆ 2022ರಲ್ಲಿ ಮದುವೆ ಆಗಿದ್ದರೂ ಆಕೆಯ ತವರು ಮನೆಯವರು ಬಲವಂತವಾಗಿ ಬೇರೆ ವ್ಯಕ್ತಿಗೆ ಮದುವೆ ಮಾಡಿಕೊಡುತ್ತಿದ್ದಾರೆ. ಈ ಮದುವೆ ನಿಲ್ಲಿಸುವಂತೆ ವ್ಯಕ್ತಿಯೊಬ್ಬ ಬೇಡಿಕೊಂಡ ಘಟನೆ ಬೆಳಗಾವಿ ನಗರದಲ್ಲಿ ಬೆಳಕಿಗೆ ಬಂದಿದೆ.



ಬೆಳಗಾವಿ ಮೂಲದ ವ್ಯಕ್ತಿ ವೆಂಕಟೇಶ ರಾಥೋಡ್ ಎಂಬಾತ ಕಳೆದ ಮೂರು ವರ್ಷಗಳ ಹಿಂದೆ ಬೆಳಗಾವಿ ತಾಲೂಕಿನ ಯುವತಿಯನ್ನು ಮದುವೆಯಾಗಿದ್ದ. ಜೊತೆಗೆ ಈಕೆಗೆ ಹಣ ನೀಡಿದ್ದಲ್ಲದೆ ಮನೆಯನ್ನು ಖರೀದಿ ಮಾಡಿ ಕೊಟ್ಟಿದ್ದಾನೆ. ಆದರೆ, ಈಗ ಅದೇ ಪತ್ನಿ ಬೇರೊಬ್ಬನ ಜೊತೆ ಮದುವೆ ಮಾಡಿಕೊಳ್ಳುವುದಕ್ಕೆ ಸಿದ್ಧವಾಗಿದ್ದಾಳೆ ಎಂದು ಪತಿರಾಯ ತನ್ನ ಅಳಲು ತೊಡಿಕೊಂಡಿದ್ದಾನೆ.

ಪತ್ನಿಯ ಮನೆಯವರು ಬಲವಂತವಾಗಿ ನಾನು ಇರುವಾಗಲೇ ಬೇರೆಯೊಬ್ಬರ ಜೊತೆ ಮತ್ತೊಂದು ಮದುವೆ ಮಾಡಿಸುವುದಕ್ಕೆ ಹೊರಟ್ಟಿದ್ದಾರೆ ಎಂದು ಪತ್ನಿ ಕುಟುಂಬಸ್ಥರ ವಿರುದ್ಧ ಅಸಮಾಧಾನ ಹೊರ ಹಾಕಿ ಇದೇ ವಿಚಾರದ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ ಸಂತ್ರಸ್ತ ವ್ಯಕ್ತಿ ವೆಂಕಟೇಶ ರಾಥೋಡ್, ನಾನು ಹಾಗೂ ನನ್ನ ಪತ್ನಿ ಪರಸ್ಪರ ಒಪ್ಪಿಗೆಯಿಂದ ಮದುವೆಯಾಗಿದ್ದೇವೆ. ಆದರೆ, ಈಗ ಆಕೆಯನ್ನು ಮತ್ತೊಬ್ಬರಿಗೆ ಮದುವೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಈ ಮದುವೆಯನ್ನು ಕೂಡಲೇ ನಿಲ್ಲಿಸಬೇಕೆಂದು ಆಗ್ರಹಿಸಿದರು.

ಪತ್ನಿಯ ಮನೆಯವರು, ನನ್ನ ವಿರುದ್ಧ ಇಲ್ಲಸಲ್ಲದ ಪ್ರಕರಣಗಳನ್ನು ದಾಖಲಿಸಿ ಷಡ್ಯಂತ್ರ ರೂಪಿಸಿ ಜೈಲಿಗೂ ಕಳುಹಿಸಿದರು. ಪತ್ನಿಯ ಮನೆಯವರಿಗೆ ಮನೆ ನಿರ್ಮಾಣಕ್ಕಾಗಿ ಲಕ್ಷಾಂತರ ರೂಪಾಯಿ ಹಣ ಸಹ ನೀಡಿದ್ದೇನೆ. ನನ್ನಿಂದ ಎಲ್ಲ ರೀತಿಯ ಸೌಲಭ್ಯ ಪಡೆದುಕೊಂಡು ನನ್ನಗೆ ಗೊತ್ತಿಲ್ಲದ ಹಾಗೆ ನನ್ನ ಪತ್ನಿಗೆ ಮತ್ತೊಂದು ಮದುವೆ ಮಾಡುವುದಕ್ಕೆ ಮುಂದಾಗಿದ್ದಾರೆ ಎಂದು ಗಂಭೀರವಾಗಿ ಆರೋಪಿಸಿದರು.

ಕೆಲ ದಿನಗಳ ಹಿಂದೆ ಹಿರೇಬಾಗೇವಾಡಿಯಲ್ಲಿ ತಮ್ಮ ಮೇಲೆ ಹಲ್ಲೆ ನಡೆಸಿ, ಬಂಗಾರ ಹಾಗೂ ಹಣ ಸುಲಿಗೆ ಮಾಡಲಾಗಿದೆ ಎಂದು ವೆಂಕಟೇಶ್ವರ ರಾಥೋಡ್ ಆರೋಪಿಸಿದರು. ಈ ಎಲ್ಲ ವಿಚಾರಗಳ ಬಗ್ಗೆ ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ನಾನು ದೂರು ಕೊಟ್ಟಿದ್ದೇನೆ. ನನಗೆ ನ್ಯಾಯ ಬೇಕು ನನ್ನ ಪತ್ನಿಯ ಮತ್ತೊಂದು ಮದುವೆಯನ್ನು ನಿಲ್ಲಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

ಈಜಲು ಹೋದ ಮೂವರ ಸಾವು





◆ **ಹಾನಗಲ್ಲ:** ತಾಲೂಕಿನ ಕಂಚಿನೆಗಳೂರ ಮತ್ತು ಶೃಂಗೇರಿ ಗ್ರಾಮದ ಧರ್ಮಾ ಕಾಲುವೆಯಲ್ಲಿ ಈಜಲು ಹೋಗಿ ಓರ್ವ ಯುವಕ ಸೇರಿದಂತೆ ಎರಡು ಬಾಲಕರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ನಡೆದಿದೆ. ಉತ್ತರ ಪ್ರದೇಶ ಮೂಲದ ಫೈಜಾನ್ (21) ಮೃತ ದುರ್ದೈವಿ ಯುವಕನಾಗಿದ್ದಾನೆ. ಸಮ್ಮಸಗಿ ಗ್ರಾಮದ ತನ್ನ ಸಂಬಂಧಿಕರ ಸಲ್ಯೂನ್ ಶಾಪ್‌ನಲ್ಲಿ ಕೆಲಸ ಮಾಡಲು ಆಗಮಿಸಿದ್ದ ಎಂದು ಮೂಲಗಳಿಂದ ತಿಳಿದು ಬಂದಿದೆ. ಇನ್ನೂ ಕಂಚಿನೆಗಳೂರ ಗ್ರಾಮದ ಧರ್ಮಾ ಕಾಲುವೆಯಲ್ಲಿ ಇನಾಮ್ ನೀರಲಗಿ ಗ್ರಾಮದ ಸೃಜನ ಮಾರುತಿ ಬ್ಯಾತನಾಳ, ಸಚಿನ್ ಮಾರುತಿ ಬ್ಯಾತನಾಳ ಎಂಬ 11ವರ್ಷದ ಬಾಲ ಸಹೋದರರು ಈಜಲು ಹೋಗಿ ಮೃತಪಟ್ಟಿದ್ದಾರೆ. ಈ ಎರಡು ಜನ ಬಾಲಕರು ಕಂಚಿನೆಗಳೂರ್ ಗ್ರಾಮಕ್ಕೆ ಸಂಭಂದಿಕರ ಮನೆಗೆ ಆಗಮಿಸಿದ್ದರು ಎಂದು ತಿಳಿದು ಬಂದಿದೆ. ಹಾನಗಲ್ ಮತ್ತು ಆಡೂರ ಪೊಲೀಸ್‌ರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಹೃದಯಾಘಾತಕ್ಕೆ ಪಪಂ ಸದಸ್ಯ ಸಾವು



◆ **ಕೊಲ್ಹಾರ:** ಪಟ್ಟಣದಲ್ಲಿ ಮಂಗಳವಾರ ಕ್ರಿಕೆಟ್ ಆಟದಲ್ಲಿ ಗೆಲುವಿಗೆ ಸಂಭ್ರಮಿಸುತ್ತಿದ್ದ ವೇಳೆ ಹೃದಯಾಘಾತವಾಗಿ ಪಟ್ಟಣ ಪಂಚಾಯತ ಸದಸ್ಯ ಮೃತಪಟ್ಟ ಘಟನೆ ಪಟ್ಟಣದಲ್ಲಿ ನಡೆದಿದೆ. ಪಪಂ ಸದಸ್ಯ ತೌಸಿಫ್ ಶರಫುದ್ದೀನ್ ಗಿರಗಾಂವಿ (36) ಮೃತಪಟ್ಟ ದುರ್ದೈವಿ. ಕಳೆದ ಕೆಲವು ದಿನಗಳಿಂದ ಸರ್ಕಾರಿ ಕನ್ನಡ ಮಾದರಿ ಗಂಡು ಮಕ್ಕಳ ಶಾಲೆಯ ಕ್ರೀಡಾಂಗಣದಲ್ಲಿ ಕೊಲ್ಹಾರ ಪ್ರೀಮಿಯರ್ ಲೀಗ್ ಕ್ರಿಕೆಟ್(ಕೆಪಿಎಲ್) ಪಂದ್ಯದ್ಯಾವಳಿಯ ಫೈನಲ್ ಪಂದ್ಯದಲ್ಲಿ ಭಾಗವಹಿಸಿ ಫೈನಲ್ ಪಂದ್ಯದಲ್ಲಿ ತಂಡವು ಜಯ ಗಳಿಸಿದ ಖುಷಿಯಲ್ಲಿ ಡಿಜೆ ಸೌಂಡ್ ಸಿಸ್ಟಮ್ ಮುಂದೆ ಸಂಭ್ರಮಿಸಿದ ಕೆಲವೇ ಕ್ಷಣದಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಬೆಂಗಳೂರು-ಬೀದರ್ ರೈಲ್ವೆ ಸೇವೆಗೆ ಶಾಶ್ವತ ಸ್ಪರ್ಶ

ಕಲ್ಯಾಣ ಜನರ ಬೇಡಿಕೆಗೆ ಸ್ಪಂದನೆ

◆ **ಕಲಬುರಗಿ:** ಉತ್ತರ ಕರ್ನಾಟಕದ ಜನರ ಬಹುಕಾಲದ ನಿರೀಕ್ಷೆಗೆ ಕೊನೆಗೂ ಭಾರತೀಯ ರೈಲ್ವೆ ಸ್ಪಂದಿಸಿದೆ. ಎಸ್‌ಎಂವಿಟಿ ಬೆಂಗಳೂರು-ಬೀದರ್ ದ್ವೈವಾರಿಕ ವಿಶೇಷ ರೈಲು ಸೇವೆಯನ್ನು ಇದೀಗ ಶಾಶ್ವತ ರೈಲು ಸೇವೆಯಾಗಿ ನಿಯಮಿತಗೊಳಿಸಲಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಇದು ಮಹತ್ವದ ಉಡುಗೊರೆಯಾಗಿದೆ.



ಪ್ರಯಾಣಿಕರ ಉತ್ತಮ ಸ್ಪಂದನೆ ಮತ್ತು ಹೆಚ್ಚುತ್ತಿರುವ ಬೇಡಿಕೆಯನ್ನು ಪರಿಗಣಿಸಿ ರೈಲ್ವೆ ಇಲಾಖೆ ಈ ನಿರ್ಧಾರ ಕೈಗೊಂಡಿದೆ. ಇಲ್ಲಿಯವರೆಗೆ ವಿಶೇಷ ರೈಲು ರೂಪದಲ್ಲಿ ಸಂಚರಿಸುತ್ತಿದ್ದ ಈ ಸೇವೆ, ಇನ್ನು ಮುಂದೆ ನಿಯಮಿತ ರೈಲು ಸಂಖ್ಯೆಗಳೊಂದಿಗೆ ವರ್ಷಪೂರ್ತಿ ನಿರಂತರವಾಗಿ ಸಂಚರಿಸಲಿದೆ.

ಇದರಿಂದ ವಿದ್ಯಾರ್ಥಿಗಳು, ಉದ್ಯೋಗಿಗಳು, ವ್ಯಾಪಾರಸ್ಥರು, ಯಾತ್ರಾರ್ಥಿಗಳು ಮತ್ತು ಕುಟುಂಬ ಸಮೇತರಾಗಿ ಪ್ರಯಾಣಿಸುವ ಜನರಿಗೆ ಹೆಚ್ಚು ಅನುಕೂಲವಾಗಲಿದೆ.

ಉತ್ತರ ಕರ್ನಾಟಕ-ಬೆಂಗಳೂರು ಸಂಪರ್ಕಕ್ಕೆ ಹೊಸಬಲ: ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು ಭಾಗದ ಸಾವಿರಾರು ಜನರು ಶಿಕ್ಷಣ, ಉದ್ಯೋಗ, ಆರೋಗ್ಯ ಮತ್ತು ವ್ಯಾಪಾರ ಕಾರಣಗಳಿಂದ ಬೆಂಗಳೂರಿಗೆ ಅವಲಂಬಿತರಾಗಿದ್ದಾರೆ. ವಿಶೇಷವಾಗಿ ವಾರಾಂತ್ಯಗಳಲ್ಲಿ ಹಾಗೂ ಹಬ್ಬದ ಸಮಯದಲ್ಲಿ ಈ ಮಾರ್ಗದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗುತ್ತಿತ್ತು. ವಿಶೇಷ ರೈಲುಗಳ ಅನಿಶ್ಚಿತತೆಯಿಂದ ಪ್ರಯಾಣ ಯೋಜನೆಗೆ ತೊಂದರೆ ಉಂಟಾಗುತ್ತಿತ್ತು. ಇದೀಗ ರೈಲು ಶಾಶ್ವತ ಸೇವೆಯಾದ ಹಿನ್ನೆಲೆ ಪ್ರಯಾಣಿಕರಿಗೆ ಖಚಿತ ಸೇವೆ ಲಭ್ಯವಾಗಲಿದೆ.

ಪ್ರಯಾಣಿಕರಿಗೆ ಸಿಗುವ ಸೌಲಭ್ಯಗಳು

ಈ ರೈಲುಗಳಲ್ಲಿ ಎಸಿ, ಸ್ಲೀಪರ್ ಹಾಗೂ ಸಾಮಾನ್ಯ ಬೋಗಿಗಳ ವ್ಯವಸ್ಥೆ ಮಾಡಲಾಗಿದೆ. ಒಟ್ಟು 20 ಬೋಗಿಗಳಲ್ಲಿ 1 ಎಸಿ-2 ಟೆಯರ್, 2 ಎಸಿ-3 ಟೆಯರ್, 11 ಸ್ಲೀಪರ್, 4 ಜನರಲ್ ಕೋಚ್ ಹಾಗೂ 2 ಲಗೇಜ್ ಕಮ್ ಬ್ರೇಕ್ ವ್ಯಾನ್‌ಗಳು ಇರಲಿವೆ. ಇದರಿಂದ ವಿವಿಧ ವರ್ಗದ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಈ ರೈಲು ಸೇವೆ ಕೇವಲ ಪ್ರಯಾಣ ಸೌಲಭ್ಯ ಮಾತ್ರವಲ್ಲ, ಕಲ್ಯಾಣ ಕರ್ನಾಟಕ ಭಾಗದ ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ನೀಡುವ ಸಾಧ್ಯತೆ ಇದೆ.

> ರೈಲು ಮಾರ್ಗವು ಕಲಬುರಗಿ, ಶಹಾಬಾದ್, ವಾಡಿ, ರಾಯಚೂರು, ಗುಂತಕಲ್, ಧರ್ಮವರಂ ಮುಂತಾದ ಪ್ರಮುಖ ಜಂಕ್ಷನ್‌ಗಳ ಮೂಲಕ ಸಾಗುವುದರಿಂದ ಉತ್ತರ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಅನೇಕ ನಗರಗಳಿಗೆ ಸಂಪರ್ಕ ಮತ್ತಷ್ಟು ಬಲಪಡಿಸಲಿದೆ. ಬೆಂಗಳೂರು-ಹೈದರಾಬಾದ್- ಉತ್ತರ ಕರ್ನಾಟಕ ಸಂಪರ್ಕ ವಲಯದಲ್ಲಿ ಉದ್ಯೋಗ, ಶಿಕ್ಷಣ ಮತ್ತು ವ್ಯಾಪಾರ ಅವಕಾಶಗಳು ಹೆಚ್ಚುತ್ತಿರುವ ಹಿನ್ನೆಲೆ, ಇಂತಹ ಶಾಶ್ವತ ರೈಲು ಸೇವೆಗಳು ಅಭಿವೃದ್ಧಿಗೆ ಪೂರಕವಾಗಲಿವೆ.
>
> ■ ಎಸ್.ವಿಕ್ರಂ ಎ.ಕೆ., ಹಿರಿಯ ಪ್ರಚಾರ ನಿರೀಕ್ಷಕ, ಸೋಲಾಪುರ ವಿಭಾಗ

ಯಾವ ದಿನ ಸಂಚಾರ

ರೈಲು ಸಂಖ್ಯೆ 16559 ಎಸ್‌ಎಂವಿಟಿ ಬೆಂಗಳೂರು-ಬೀದರ್ ದ್ವೈವಾರಿಕ ರೈಲು ಪ್ರತಿ ಶುಕ್ರವಾರ ಮತ್ತು ಭಾನುವಾರ ರಾತ್ರಿ 9:15ಕ್ಕೆ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಹೊರಟು ಮುಂದಿನ ದಿನ ಮಧ್ಯಾಹ್ನ 12:15ಕ್ಕೆ ಬೀದರ್ ತಲುಪಲಿದೆ. ಇನ್ನೊಂದು ದಿಕ್ಕಿನಲ್ಲಿ ರೈಲು ಸಂಖ್ಯೆ 16560 ಬೀದರ್-ಎಸ್‌ಎಂವಿಟಿ ಬೆಂಗಳೂರು ದ್ವೈವಾರಿಕ ರೈಲು ಪ್ರತಿ ಶನಿವಾರ ಮತ್ತು ಸೋಮವಾರ ಮಧ್ಯಾಹ್ನ 2 ಗಂಟೆಗೆ ಬೀದರ್‌ನಿಂದ ಹೊರಟು ಮುಂದಿನ ದಿನ ಬೆಳಗ್ಗೆ 4 ಗಂಟೆಗೆ ಬೆಂಗಳೂರಿಗೆ ಆಗಮಿಸಲಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಕ್ರಿಕೆಟ್ : ರಂಜನ್ ಚಾಲೆಂಜರ್ಸ್ ತಂಡ ವಿಜೇತ

◆ **ಭಟ್ಕಳ** : ಇಲ್ಲಿನ ಗುರು ಸುಧೀಂದ್ರ ಕಾಲೇಜಿನ ಮೈದಾನದಲ್ಲಿ ಹಿಂದೂ ಕೊಂಕಣಿ ಗೆಳೆಯರ ಬಳಗದ ವತಿಯಿಂದ ಏರ್ಪಡಿಸಲಾದ ಹಿಂದೂ ಕೊಂಕಣಿ ಪ್ರಿಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಪಂದ್ಯವನ್ನು ಶಾಂತರಾಮ ಭಟ್ಕಳ ಮತ್ತು ಕಿರಣ ಚಂದಾವರ ಮಾಲಿಕತ್ವದ ರಂಜನ್ ಚಾಲೆಂಜರ್ಸ ತಂಡ ಗೆದ್ದು ಟ್ರೋಪಿ ಹಾಗೂ 21 ಸಾವಿರ ಬಹುಮಾನ ತನ್ನದಾಗಿಸಿಕೊಂಡಿತು.ಅಂತಿಮ ಪಂದ್ಯ ರಂಜನ್ ಚಾಲೆಂಜರ್ಸ ಮತ್ತು ಓಷಿಯನ್ ಚಾಲೆಂಜರ್ಸ ಮಧ್ಯೆ ನಡೆಯಿತು.ಮೊದಲು ಬ್ಯಾಟ್ ಮಾಡಿದ ರಂಜನ್ ಚಾಲೆಂಜರ್ಸ ತಂಡ 86 ಮೊತ್ತವನ್ನು ಕಲೆ ಹಾಕಿತು. ನಂತರ ಚೇಸ್ ಮಾಡಲು ಬಂದ ಓಷಿಯನ್ ಚಾಲೆಂಜರ್ಸ್ ಮೊದಲ ಬಾಲಿಗೆ ಅತ್ಯುತ್ತಮ ಆಟಗಾರರನ್ನು ಕಳೆದು ಕೊಂಡರು.ಅಂತಿಮ ಕ್ಷಣದವರೆಗೆ ಕಾದಾಟ ನಡೆಸಿ 65 ಮೊತ್ತವನ್ನು ಕಲೆ ಹಾಕಿ ರನ್ನರ್ಸ ಅಫ್‌ಗಿ ಹೊರಹೊಮ್ಮಿತು. ಹಾಂಗ್ಯೋ ಐಸ್‌ಕ್ರೀಮ್ ಮೊದಲ ಬಹುಮಾನ ಹಾಗೂ ಟ್ರೋಫಿ, ಕಾಮಾಕ್ಷಿ ಜ್ಯುವೆಲರ್ಸ್ ರನ್ನರ್ಸ ಅಫ್ ಬಹುಮಾನದ ಪ್ರಾಯೋಜಕತ್ವ ನೀಡಿದ್ದರು. ಪಂದ್ಯಾವಳಿಯ ಬೆಸ್ಟ್ ಬ್ಯಾಟಮನ್ ಆಗಿ ಓಷಿಯನ್ ಚಾಲೆಂಜರ್ಸ್ ತಂಡದ ನರೇಂದ್ರ ಖಾರ್ವಿ ಆದೆ ತಂಡದ ಬೆಸ್ಟ್ ಬೌಲರ್ ಹಾಗೂ ಸರಣಿ ಶ್ರೇಷ್ಟ ಆಟಗಾರನಾಗಿ ಮನೋಜ್ ಖಾರ್ವಿ, ಪೈನಲ್ ಪಂದ್ಯದ ಪಂದ್ಯ ಪುರುಷನಾಗಿ ವಿನಾಯಕ ಶೇಟ್ ಪ್ರಶಸ್ತಿ ಪಡೆದುಕೊಂಡರು. ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಹಾಂಗ್ಯೋ ಐಸ್ ಕ್ರೀಂ ಅಧ್ಯಕ್ಷ ದೀನೇಶ ಪೈ ಮಾತನಾಡಿ, ಇಂತಹ ಪಂದ್ಯಾವಳಿಯಂದ ಪ್ರತಿಭಾನ್ವಿತ ಆಟಗಾರರನ್ನು ಗುರುತಿಸಲು ಅನುಕೂಲವಾಗಲಿದೆ ಎಂದರು. ಉಪಸ್ಥಿತರಿದ್ದ ಭಟ್ಕಳ ಎಜ್ಯುಕೇಶನ್ ಟ್ರಸ್ಟಿನ ಟ್ರಸ್ಟಿ ಮೆನಜರ್ ರಾಜೇಶ ನಾಯಕ, ಜಿಎಸ್‌ಬಿ ಸಮಾಜದ ಅಧ್ಯಕ್ಷ ನಾಗೇಶ ಕಾಮತ, ಶೇರುಗಾರ ಸಮಾಜದ ರಾಮದಾಸ್ ಎಮ್ ನಾಯ್ಕ, ವೈಶ್ಯವಾಣಿ ಸಮಾಜದ ಗುರುದತ್ತ ಶೇಟ್ ಮಾತನಾಡಿದರು. ವಿವಿಧ ಸಮಾಜದ ಪ್ರಮುಖರಾದ ತಿಮ್ಮಪ್ಪ ಖಾರ್ವಿ, ಸುಧಾಕರ ಶೇಟ್, ಮಾರುತಿ ಪಾವಸ್ಕರ, ರಾಜೇಶ ಮಹಾಲೆ, ವಿನಾಯಕ ಎಸ್ ಮಡಿವಾಳ, ಬಾಲಕೃಷ್ಣ ಶೇಟ್ ಇದ್ದರು. ರಾಮಚಂದ್ರ ಕಿಣಿ ಸ್ವಾಗತಿಸಿ ಪ್ರಾಸ್ತವಿಕ ಮಾತನಾಡಿದರು, ದೀಪಕ ನಾಯ್ಕ ಕಾರ್ಯಕ್ರಮ ನಿರೂಪಿಸಿದರು. ನಿತೇಶ ಮಹಾಲೆ ವಂದಿಸಿದರು.



ಶಿರಸಿ: ಇಲ್ಲಿನ ನಾರಾಯಣಗುರು ನಗರದ ಅಭಯ ವಿನಾಯಕ ದೇವಸ್ಥಾನದ 19ನೇ ವಾರ್ಷಿಕೋತ್ಸವ ಮಂಗಳವಾರ ಭಕ್ತಿಭಾವ ಹಾಗೂ ಧಾರ್ಮಿಕ ಸಂಭ್ರಮದ ನಡುವೆ ವಿಜೃಂಭಣೆಯಿಂದ ನಡೆಯಿತು. ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಜರುಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	63899	69699
ಬಿಳಿಗೋಟು	25109	37900
ಕೆಂಪುಗೋಟು	28499	41089
ಬೆಟ್ಟೆ	41899	51200
ರಾಶಿ	51600	54010
ಚಾಲಿ	44099	48689

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	60419	60419
ರಾಶಿ	50199	57869
ಬೆಟ್ಟೆ	37899	50400
ಕೆಂಪುಗೋಟು	22119	38306
ಬಿಳಿಗೋಟು	20000	38068
ಚಾಲಿ	38399	48555
ಕೋಕಾ	16000	34899
ಕಾಳುಮೆಣಸು	57815	67000



ಭಟ್ಕಳ : ಇಲ್ಲಿನ ಗುರು ಸುಧೀಂದ್ರ ಕಾಲೇಜಿನ ಮೈದಾನದಲ್ಲಿ ಹಿಂದೂ ಕೊಂಕಣಿ ಗೆಳೆಯರ ಬಳಗದ ವತಿಯಿಂದ ಏರ್ಪಡಿಸಲಾದ ಹಿಂದೂ ಕೊಂಕಣಿ ಪ್ರಿಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಪಂದ್ಯವನ್ನು ಶಾಂತರಾಮ ಭಟ್ಕಳ ಮತ್ತು ಕಿರಣ ಚಂದಾವರ ಮಾಲಿಕತ್ವದ ರಂಜನ್ ಚಾಲೆಂಜರ್ಸ ತಂಡ ಗೆದ್ದು ಟ್ರೋಪಿ ಹಾಗೂ 21 ಸಾವಿರ ಬಹುಮಾನ ತನ್ನದಾಗಿಸಿಕೊಂಡಿತು.

ಕಲೆ, ಸೇವಾ ಮನೋಭಾವದಿಂದ ಬದಲಾವಣೆ ಸಾಧ್ಯ

◆ **ಶಿರಸಿ:** ಕಲೆ ಮತ್ತು ಸೇವಾ ಮನೋಭಾವ ಒಂದಾದಾಗ ಸಮಾಜದಲ್ಲಿ ಹೊಸ ಬದಲಾವಣೆ ಸಾಧ್ಯ ಎಂಬುದನ್ನು ಇಲ್ಲಿನ ಇಕೋ ಕೇರ್ ಹಾಗೂ ಜನ ಹಿತ ಸೇವಾ ಫೌಂಡೇಶನ್ ಸಾಬೀತುಪಡಿಸಿವೆ. ಅಂಕೋಲಾ ತಾಲೂಕಿನ ಹೆಬ್ಬಾರ್ ಗುಡ್ಡೆಯ ಬಡ ಕುಟುಂಬವೊಂದಕ್ಕೆ ಆಸರೆಯಾಗುವ ನಿಟ್ಟಿನಲ್ಲಿ ನಗರದ ಪೊಲೀಸ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಸಹಾಯಾರ್ಥ ಯಕ್ಷಗಾನ ಪ್ರದರ್ಶನ ಯಶಸ್ವಿಯಾಗಿ ಜರುಗಿತು.ಇಕೋ ಕೇರ್ ಶಿರಸಿ ಮತ್ತು ಜನ ಹಿತ ಸೇವಾ ಫೌಂಡೇಶನ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಪ್ರಸಿದ್ಧ ಪೆರ್ಡೂರು ಮೇಳದ ಕಲಾವಿದರಿಂದ 'ಕೃಷ್ಣ ಕುಚೇಲ-ಮಾಯಾಮೃಗಾವತಿ' ಯಕ್ಷಗಾನ ಪ್ರಸಂಗ ಪ್ರದರ್ಶನಗೊಂಡಿತು. ಕಾರ್ಯಕ್ರಮದ ವಿಶೇಷ ಅಂಗವಾಗಿ ಪ್ರಸಿದ್ಧ ಮದ್ದಳೆ ವಾದಕ ಶಂಕರ್ ಭಾಗವತ್ ಅವರಿಗೆ ಗಣ್ಯರ ಹಾಗೂ ಪ್ರೇಕ್ಷಕರ ಸಮ್ಮುಖದಲ್ಲಿ 'ನಾಗನಂದನ ನಿಗೆ' ಅಭಿನಂದನೆ ಸಲ್ಲಿಸಿ ಭವ್ಯವಾಗಿ ಸನ್ಮಾನಿಸಲಾಯಿತು.ಮನುವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್, ಮಾರಿಕಾಂಬಾ ದೇವಸ್ಥಾನದ ಧರ್ಮದರ್ಶಿ ವತ್ಸಲ ಹೆಗಡೆ, ರಾಜರಾಜೇಶ್ವರಿ ವಿದ್ಯಾ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕ ನರಸಿಂಹ ಭಟ್, ಸಾಮಾಜಿಕ ಕಾರ್ಯಕರ್ತ ಎಸ್.ಕೆ. ಭಾಗವತ್, ಜನ ಹಿತ ಸೇವಾ ಫೌಂಡೇಶನ್‌ನ ಲೋಕೇಶ್ ಹೆಗಡೆ, ಇಕೋ ಕೇರ್ ಅಧ್ಯಕ್ಷ ಸುನಿಲ್ ಬೋವಿ ಉಪಸ್ಥಿತರಿದ್ದರು. ಅಲ್ಲದೆ, ಕರ್ನಾಟಕ ರಾಜ್ಯ ಫಾರ್ಮಸಿ ಅಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಮಹೇಶ್ ಡಿ. ನಾಯ್ಕ್, ಇಕೋ ಕೇರ್ ಸಂಸ್ಥೆಯ ಪುಂಡಲಿಕ್ ಶಿರಸಿಕರ್, ರಮೇಶ್, ಜಗದೀಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಗಿರಿಧರ್ ಕಬ್ನಳ್ಳಿ ಅವರು ಕಾರ್ಯಕ್ರಮ ನಿರ್ವಹಿಸಿದರು.



ಶಿರಸಿ: ನಗರದ ಪೊಲೀಸ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಸಹಾಯಾರ್ಥ ಯಕ್ಷಗಾನ ಪ್ರದರ್ಶನದಲ್ಲಿ ಪ್ರಸಿದ್ಧ ಮದ್ದಳೆ ವಾದಕ ಶಂಕರ್ ಭಾಗವತ್ ಅವರಿಗೆ ಗಣ್ಯರ ಹಾಗೂ ಪ್ರೇಕ್ಷಕರ ಸಮ್ಮುಖದಲ್ಲಿ 'ನಾಗನಂದನ ನಿಗೆ' ಅಭಿನಂದನೆ ಸಲ್ಲಿಸಿ ಭವ್ಯವಾಗಿ ಸನ್ಮಾನಿಸಲಾಯಿತು.

ಪುರಾತತ್ವ ಸರ್ವೇಕ್ಷಣ ಇಲಾಖೆ ವಿರುದ್ಧ ನೂತನ ತಾಲೂಕು ರಚನೆ ಹೋರಾಟ ಸಮಿತಿ ಆಕ್ರೋಶ

ದೇವಸ್ಥಾನ ಸೋರುವಿಕೆ ತಡೆಗಟ್ಟಲು ವಿಫಲ

◆ **ಬನವಾಸಿ:** ದಶಕಗಳಿಂದ ಸೋರುತ್ತಿರುವ ಶ್ರೀ ಕ್ಷೇತ್ರ ಬನವಾಸಿ ಮಧುಕೇಶ್ವರ ದೇವಸ್ಥಾನ ದುರಸ್ತಿ ಕಾರ್ಯ ಮಾಡಿ ಸೋರುವಿಕೆ ತಡೆಗಟ್ಟುವಲ್ಲಿ ವಿಫಲಗೊಂಡ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಮತ್ತೊಮ್ಮೆ ಸುಳ್ಳನ್ನೇ ಸಾಬೀತು ಮಾಡಿದೆ ಎಂದು ಬನವಾಸಿ ನೂತನ ತಾಲೂಕು ರಚನೆ ಹೋರಾಟ ಸಮಿತಿ ಆಕ್ರೋಶ ಹೊರಹಾಕಿದೆ.

ಈ ಕುರಿತು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್ .ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದು, ಪ್ರತಿ ಬಾರಿ ಹೋರಾಟಕ್ಕೆ ನಾವು ತಯಾರಿ ನಡೆಸಿದಾಗ ಏನಾದರೂ ಒಂದು ಸಬೂಬು ಹೇಳಿ ಹೋರಾಟಗಾರರನ್ನು ನಂಬಿಸಿ ವಂಚನೆ ಇಲಾಖೆ ಅಧಿಕಾರಿಗಳು ಮಾಡುತ್ತಿದ್ದು, ಕೇವಲ ಸುಳ್ಳು ಹೇಳುವುದನ್ನು ಮಾತ್ರ ರೂಢಿ ಮಾಡಿಕೊಂಡಿದ್ದಾರೆ ಎಂದು ಘರ್ಜಿಸಿದ್ದಾರೆ.

ಈ ಬಗ್ಗೆ ವಿವರಣೆ ನೀಡಿದ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಬನವಾಸಿ ಜಾತ್ರೆಯ ದಿನವೇ ರಾಜ್ಯದ ಮೂಲೆ ಮೂಲೆಗಳಿಂದ ಸೇರಿದಂತೆ ಭಕ್ತ ಸಮೂಹ ಸೇರಿಸಿ ದೇವಸ್ಥಾನ ಎದುರುಗಡೆ ಹೋರಾಟ ಮಾಡಲು ತಯಾರಿದ್ದ ನಮ್ಮನ್ನ ಇಲಾಖೆ ಅಧಿಕಾರಿ ಖುದ್ದಾಗಿ ಬಂದು ಆದೇಶ ಪತ್ರ ತೋರಿಸಿ ಒಂದು ವಾರದಲ್ಲಿ ಕಾರ್ಯ ಆರಂಭ ಮಾಡುವ ಮೌಖಿಕ ಹೇಳಿಕೆ ನೀಡಿ ಸಮಜಾಯಿಸಿದ್ದರು. ಅದನ್ನ ಹೌದು ಹೌದು ಎಂಬಂತೆ ಹೇಳಿದ ಅಧಿಕಾರಿ ಮಾತು ಮತ್ತೆ ಟುಸ್ಸಾಗಿ



ಇಲಾಖೆ ನರಿ ಬುದ್ಧಿ ಪ್ರದರ್ಶಿಸಿದೆ ಎಂದಿದ್ದಾರೆ.

ಮಧುಕೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಹಾಗೂ ಸದಸ್ಯರು ಅಲ್ಲದೆ ಸ್ವತಃ ಶಾಸಕರು ಜಾತ್ರಾ ದಿನದ ಹೋರಾಟ ಮುಂದೂಡುವಂತೆ ಹೇಳಿದ್ದರು. ಅದನ್ನೇ ಬಂಡವಾಳ ಮಾಡಿಕೊಂಡ ಇಲಾಖೆ ಅಧಿಕಾರಿ ಜಾಣತನದಿಂದ ಅಂದಿನ ಸಭೆಗೆ ಬಂದು ಮಾತನಾಡಿ ಬೀಸೋ ದೊಣ್ಣೆಯಿಂದ ತಪ್ಪಿಸಿ ಕೊಳ್ಳಲು ಮುಂದಾದರು ಎಂದು ಖಾರವಾಗಿ ಹೇಳಿದ್ದಾರೆ.

ಹಾಗಾಗಿ ಈ ಬಾರಿ ವಿಶೇಷ ರೀತಿಯಲ್ಲಿ ಅರೆ ಬೆತ್ತಲೆ ಪ್ರತಿಭಟನೆಗೆ ಮುಂದಾಗಿದ್ದೇವೆ. ಸಮಿತಿ ಗೌರವಾಧ್ಯಕ್ಷ ಸಿ.ಎಫ್. ನಾಯಕ ಮಾಳಂಜಿ ವಿವರಣೆ ನೀಡಿ ಹಳ್ಳಿ ಹಳ್ಳಿಗಳಲ್ಲಿ ಸಭೆ ನಡೆಸಿ ಅಧಿಕೃತವಾಗಿ ಒಂದು ದಿನಾಂಕ ನಿಗದಿ ಪಡಿಸಿ ಶಾಸಕರು, ಸಂಸದರು, ಸೇರಿದಂತೆ ವಲಯದ ವ್ಯಾಪ್ತಿಯ ಜನರ ವಿಶ್ವಾಸ ಪಡೆದು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದ್ದಾರೆ.

ಅರೆ ಬೆತ್ತಲೆ ಮೆರವಣಿಗೆ ಎಚ್ಚರಿಕೆ

ಈಗ ಮಳೆ ಆರಂಭವಾಗಿದೆ. ದೇವಸ್ಥಾನ ಮತ್ತೆ ಸೋರುವುದು ನಿಶ್ಚಿತ. ಇಲಾಖೆ ಅಧಿಕಾರಿ ರಾಕೇಶ್ ನಮ್ಮೊಂದಿಗೆ ಮಾತನಾಡುವಾಗ ಹೇಳಿದ್ದನ್ನು ನಡೆಸಿ ಕೊಡಬೇಕು. ಈ ಬಾರಿ ಮಳೆಗಾಲದಲ್ಲಿ ಸೋರಿಕೆ ತಡೆಗಟ್ಟುವಲ್ಲಿ ಪ್ರಯತ್ನ ನಡೆಸುತ್ತೇವೆ. ಎಂದಿದ್ದರು. ಅವರು ಹೇಳಿದಂತೆ ನಡೆದುಕೊಳ್ಳಲಿ ಎನ್ನುವ ಹೋರಾಟ ಸಮಿತಿ ಆ ಕುರಿತು ತಕ್ಷಣವೇ ಕ್ರಮವಾಗದಿದ್ದಲ್ಲಿ ಇಲಾಖೆ ವಿರುದ್ಧವಾಗಿ ಅರೆಬೆತ್ತಲೆ ಮೆರವಣಿಗೆ ಮಳೆಯಲ್ಲಿಯೇ ನಡೆಸಿ ದೇಶಾದ್ಯಂತ ಈ ಕುರಿತು ವ್ಯಾಪಕ ಪ್ರಚಾರ ಮೂಲಕ ಭಾರತೀಯ ಪುರಾತತ್ವ ಇಲಾಖೆಯ ಮಾನ ಹರಾಜು ಹಾಕುವುದಾಗಿ ಎಚ್ಚರಿಸಿದೆ.

ಸಮಿತಿ ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಎಷ್ಟು ಹೇಳಿದರು ಕಿವಿಗೆ ಹಾಕಿಕೊಳ್ಳದ ದಪ್ಪ ಚರ್ಮದ ಇಲಾಖೆಗೆ ಮನವರಿಕೆ ಮಾಡಲು ನಾವು ಏನು ಬೇಕಾದರೂ ಮಾಡುತ್ತೇವೆ. ಇದು ನಮ್ಮ ಮನೆ ಕೆಲಸ ಅಲ್ಲ, ಮನೆ ಕೆಲಸ ಬಿಟ್ಟು ಮಧುಕೇಶ್ವರ ದೇವಸ್ಥಾನದ ಉಳಿವಿಗಾಗಿ ಮಾಡುವ ಹೋರಾಟಕ್ಕೆ ಸರ್ವ ಸೀಮಾ ಭಕ್ತರು ಒಳಗೊಂಡಂತೆ ಎಲ್ಲರೂ ಪಕ್ಷಾತೀತ ವಾಗಿ ಸ್ಪಂದನೆ ಮಾಡಬೇಕು ಎಂದು ವಿನಂತಿ ಮಾಡಿದ್ದಾರೆ.

ಶಿಷ್ಟಾಚಾರ ಉಲ್ಲಂಘನೆಯಾಗದಂತೆ ಗಮನ ಹರಿಸಿ: ಸಂಸದ ಕಾಗೇರಿ

◆ **ಕಾರವಾರ:** ಜಿಲ್ಲೆಯಲ್ಲಿ ನಡೆಯುವ ಸರ್ಕಾರಿ ಕಾರ್ಯಕ್ರಮಗಳಲ್ಲಿ ಜನಪ್ರತಿನಿಧಿಗಳಿಗೆ ಆಹ್ವಾನಿಸುವ ಶಿಷ್ಟಾಚಾರದ ಉಲ್ಲಂಘನೆಯಾಗುತ್ತಿದೆ. ಕೆಲವು ಅಧಿಕಾರಿಗಳು ನಿರ್ಲಕ್ಷಿಸುತ್ತಿದ್ದಾರೆ. ಶಿಷ್ಟಾಚಾರ ಉಲ್ಲಂಘನೆಯಾಗಿರುವ ಪಟ್ಟಿದೊಡ್ಡದಿದೆ. ಇನ್ನು ಮುಂದೆ ಅಧಿಕಾರಿಗಳು ಗಮನ ಹರಿಸುವಂತೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಧಿಕಾರಿಗಳಿಗೆ ತಾಕೀತು ಮಾಡಿದ ಘಟನೆ ಕುಡಿಯುವ ನೀರು ಸಭೆಯಲ್ಲಿ ನಡೆಯಿತು.

ವಿಶ್ವೇಶ್ವರ ಹೆಗಡೆ ಕಾಗೇರಿಯವರು ಜಿಲ್ಲಾ ಮಟ್ಟದ ಕುಡಿಯುವ ನೀರು ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ನಡೆಯುವ ಎಷ್ಟೋ ಸರ್ಕಾರಿ ಕಾರ್ಯಕ್ರಮಗಳಲ್ಲಿ ಕೇಂದ್ರದ ಜನಪ್ರತಿನಿಧಿಗಳಿಗೆ ಗೌರವ ನೀಡದೇ ಇರುವದು ಕಂಡು ಬಂದಿದೆ. ಅಧಿಕಾರ ಎನ್ನುವದು ಒಂದೇ ರೀತಿಯಲ್ಲಿ ಇರುವುದಿಲ್ಲ.ಅದು ಬದಲಾವಣೆ ಆಗುತ್ತಲೇ ಇರುತ್ತದೆ. ಅಧಿಕಾರಿಗಳು ಕೂಡ ನಿಯಮವನ್ನು ಪಾಲಿಸಬೇಕು. ಜಿಲ್ಲೆಯಲ್ಲಿ ನಡೆದ ಸರ್ಕಾರಿ ಕಾರ್ಯಕಮಗಳಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿರುವ ಪಟ್ಟಿಯನ್ನು ನೋಡಿದರೆ ಅದು ದೊಡ್ಡದಿದೆ.

ಹೇಳುತ್ತ ಹೋದರೆ ಗಂಟೆಗಳೇ ಬೇಕು. ಶಿಷ್ಟಾಚಾರ ಪಾಲನೆ ಬಗ್ಗೆ ಜಿಲ್ಲಾಧಿ ಕಾರಿಗಳು ಓರ್ವ ಅಧಿಕಾರಿಯನ್ನೇ ನಿಯೋಜಿಸಬೇಕಾಗಬಹುದು. ಇದು ಯಾರ ಕುಮ್ಮಕ್ಕಿನಿಂದ ನಡೆಯುತ್ತಿದೆ ಎನ್ನುವದು ನನಗೆ ಗೊತ್ತಿದೆ. ಆದರೆ ಯಾವುದೇ ಕೆಲಸ ಆಗಬೇಕಾದರೂ ಅದು ರಾಜ್ಯ ಇರಲಿ ಕೇಂದ್ರ ಇರಲಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವೆ ಸಮನ್ವಯತೆ ಇರಬೇಕು ಇನ್ನು ಮುಂದಾದರೂ ಅಧಿಕಾರಿಗಳು ಈ ರೀತಿ ಉಲ್ಲಂಘನೆಯಾಗದಂತೆ ಕಾರ್ಯನಿರ್ವಹಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿಗಳು, ಜಿ.ಪಂ ಸಿ.ಇ.ಓ ಹಾಗೂ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಹಾಜರಿದ್ದರು.

ಆರೋಗ್ಯ ಕಾರ್ಯಕ್ರಮ ಮೇ 16ರಂದು

◆ **ಶಿರಸಿ:** ನಗರದ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಟಿ.ಎಂ.ಎಸ್. ಹಾಗೂ ಮಣಿಪಾಲ್ ಆಸ್ಪತ್ರೆಯ ಜಂಟಿ ಸಹಯೋಗದಲ್ಲಿ ಮಹಿಳೆಯರಿಗಾಗಿ ವಿಶೇಷ ಸಮುದಾಯ ಆರೋಗ್ಯ ಕಾರ್ಯಕ್ರಮ ಮೇ 16ರಂದು ಹಮ್ಮಿಕೊಳ್ಳಲಾಗಿದೆ.ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಕ್ಯಾನ್ಸರ್ ರೋಗದ ಲಕ್ಷಣಗಳು ಹಾಗೂ ಮೂಳೆ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಆರಂಭಿಕ ಪತ್ತೆ ಮತ್ತು ಜಾಗೃತಿ ಮೂಡಿಸುವ ಕಾರ್ಯಕ್ರಮ ಶನಿವಾರ ಮಧ್ಯಾಹ್ನ 12 ಗಂಟೆಗೆ ಶಿರಸಿಯ ಟಿ.ಎಂ.ಎಸ್. ಸಭಾಭವನದಲ್ಲಿ ನಡೆಯಲಿದೆ. ಸಿದ್ದಾಪುರ ಹಾಗೂ ಶಿರಸಿ ಭಾಗದ ಟಿ.ಎಂ.ಎಸ್. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಈ ವೈದ್ಯಕೀಯ ಜಾಗೃತಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಟಿ.ಎಂ.ಎಸ್. ಸಂಸ್ಥೆಯು ಪ್ರಕಟಣೆಯಲ್ಲಿ ಕೋರಿದೆ.

ಇಂದು ವಿದ್ಯುತ್ ವ್ಯತ್ಯಯ

◆ **ಕಾರವಾರ:** ಕಾರವಾರ ಉಪ ವಿಭಾಗ ವ್ಯಾಪ್ತಿಯಲ್ಲಿ ಹೆಚ್.ಟಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಮೇ 13ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಂದನಗದ್ದಾ, ತೆಲಂಗರೋಡ, ಕೆ.ಎಚ್.ಬಿ, ಸುಂಕೇರಿ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್‌ಎಸ್‌ಎಂಪಿ ಸಂಘ ಸರ್ವವ್ಯಾಪಿ: ಸಿದ್ದಿ

◆ **ಯಲ್ಲಾಪುರ:** ಎಲ್‌ಎಸ್‌ಎಂಪಿ ಸಂಘ ಸರ್ವವ್ಯಾಪಿ ಸರ್ವ ಸ್ಪರ್ಶಿಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ನಿಜವಾಗಿಯೂ ರೈತರ ಬೆನ್ನೆಲುಬು ಎಂದರೆ ಇಂತಹ ವಿವಿದೋದ್ದೇಶ ಸಹಕಾರಿ ಸಂಘಗಳು ಎಂದು ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಹೇಳಿದರು.

ಅವರು ಮಂಗಳವಾರ ಪಟ್ಟಣದ ಯಲ್ಲಾಪುರ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರಿ ಸಂಘದ ವಜ್ರ ಮಹೋತ್ಸವ ಮತ್ತು ನೂತನ ಕಟ್ಟಡ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವನವಾಸಿ ಕಲ್ಯಾಣಕ್ಕೂ ತಮ್ಮದೇ ಆದ ಕೊಡುಗೆ ನೀಡಿ ಸಹಕಾರ ನೀಡುತ್ತಿದೆ. ಇಂದು ಸಹಕಾರಿ ಸಂಘಗಳ ಬಗ್ಗೆ ರೈತರು ಜಾಗೃತರಾಗಿದ್ದು ತಪ್ಪೆಜ್ಜೆ ಇಡದಂತೆ ಎಚ್ಚರಿಸುವ ಕಾರ್ಯ ಮಾಡುವ ಮೂಲಕ ಸಂಸ್ಥೆಯ ಯಶಸ್ಸಿಗೂ ಅದು ಒಂದು ಕಾರಣ ಎನ್ನಬಹುದು ಎಂದರು.

ಮೀಟಿಂಗ್ ಹಾಲ್ ಉದ್ಘಾಟಿಸಿ ಟಿಎಸ್ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಮಾತನಾಡಿ, ಇಂತಹ ಸುಂದರ ಸುಸಜ್ಜಿತ ಕಟ್ಟಡದಲ್ಲಿ ಕೆಲಸ ಮಾಡುವವರಿಗೂ, ವ್ಯವಹರಿಸುವವರಿಗೂ ಉತ್ತಮ ಪ್ರಚೋದನೆ ಕೊಡುತ್ತದೆ. ಸಹಕಾರಿ ಕ್ಷೇತ್ರದಲ್ಲಿ ಆರೋಗ್ಯ ಪೂರ್ಣ ಸ್ಪರ್ಧೆ ಇರಬೇಕು. ರೈತರಿಗೆ ಅಡಿಕೆ ಖರೀದಿಯ ಮೇಲೆ ರಿಬೇಟ್ ನೀಡಲಾಗುತ್ತದೆ ಹೆಚ್ಚಿನ ವ್ಯವಹಾರ ಸಹಕಾರಿ ಸಂಘಗಳಲ್ಲಿಯೇ ಮಾಡಿ ಎಂದರು.

ವಿಶ್ವದರ್ಶನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಹರಿಪ್ರಕಾಶ್ ಕೋಣೆಮನೆ ಮಾತನಾಡಿ, ಜಿಲ್ಲೆಯ ಸಹಕಾರಿ ಕ್ಷೇತ್ರ ರಾಜ್ಯದಲ್ಲಿಯೇ ಹೆಸರು ಮಾಡಿದೆ. ಆದರೆ ತಿಳಿಕೊಳವಾಗಿದ್ದ ಸಹಕಾರಿ ಕ್ಷೇತ್ರ ಕದಡಿದ ಕೊಳವಾಗಿ ರಾಜಕೀಯ ನುಸುಳುತ್ತಿರುವದು ವಿಷಾದನೀಯ. ಅನಾರೋಗ್ಯಕರ ಪೈಪೋಟಿಯಿಂದ ಕೋರ್ಟ್ ಮೆಟ್ಟಿಲು ಹತ್ತಿ ಕಾಲವ್ಯಯವಾಗುತ್ತಿರುವದು ಒಳ್ಳೆಯ ಬೆಳವಣಿಗೆಯಲ್ಲ. ಅಹಂ ಬಿಟ್ಟು ಉದಾರತನದಿಂದ ನಡೆದುಕೊಳ್ಳಬೇಕು.

ಇಂದು ಸಹಕಾರಿ ಕ್ಷೇತ್ರದಲ್ಲಿ ಅನೇಕ ಚಿಂತನ ಮಂಥನ ನಡೆದಿದೆ ಅದನ್ನು ಗಂಭೀರವಾಗಿ ಪರಿಗಣಿಸಿದರೆ ಸಮಸ್ಯೆಗೆ ಪರಿಹಾರ ಸಾಧ್ಯಎಂದರು. ಸಂಘದ ಅಧ್ಯಕ್ಷ ನಾಗರಾಜ ಕವಡಿಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಕಲ್ಪ ಸೇವಾ ಸಂಸ್ಥೆ ಅಧ್ಯಕ್ಷ ಪ್ರಮೋದ ಹೆಗಡೆ, ವಿವಿಧ ಸಹಕಾರಿ ಸಂಸ್ಥೆ ಅಧ್ಯಕ್ಷರುಗಳಾದ ಎಂ ಆರ್.ಹೆಗಡೆ, ಉಮೇಶ್ ಭಾಗ್ವತ್, ಆರ್.ಎಸ್.ಹೆಗಡೆ, ಹೇರಂಭ ಹೆಗಡೆ, ವ್ಯವಸ್ಥಾಪಕ ಎಂ.ಎಸ್.ಹೆಗಡೆ ಇತರರು ಉಪಸ್ಥಿತರಿದ್ದರು.ನಿರ್ದೇಶಕ ನರಸಿಂಹ ಕೋಣೆ ಮನೆ ಪ್ರಾಸ್ತವಿಕಗೈದರು. ಉಪಾಧ್ಯಕ್ಷ ಟಿ.ಆರ್ ಹೆಗಡೆ ಸ್ವಾಗತಿಸಿದರು. ಪ್ರಿಯಾ ಭಟ್ ಪ್ರಾರ್ಥಿಸಿದರು. ಸುಬ್ರಾಯ ಭಟ್ ನಿರ್ವಹಿಸಿದರು.ನಿರ್ದೇಶಕ ಮಹಾಬಲೇಶ್ವರ ಭಟ್ ಮಾಲದ ಮನೆ ವಂದಿಸಿದರು.



ಅಸಮರ್ಪಕ ವಿದ್ಯುತ್ ಪೂರೈಕೆ: ಪ್ರತಿಭಟನೆ

◆ **ಶಿರಸಿ:** ಬನವಾಸಿ ಭಾಗದಲ್ಲಿ ದಶಕಗಳಿಂದಲೂ ಮುಂದುವರಿದಿರುವ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿರುವುದನ್ನು ಖಂಡಿಸಿ, ಬಿಜೆಪಿ ರೈತ ಮೋರ್ಚಾ ಬನವಾಸಿ ಮಂಡಲದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಬನವಾಸಿಯಿಂದ ಶಿರಸಿಯವರೆಗೆ ಬೈ ರ್‍ಯಾಲಿ ಹಾಗೂ ಪಾದಯಾತ್ರೆ ನಡೆಸಿದ ನೂರಾರು ಕಾರ್ಯಕರ್ತರು ಮತ್ತು ರೈತರು, ಶಿರಸಿಯ ಹೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಬಿಜೆಪಿ ಬನವಾಸಿ ಮಂಡಲದ ಅಧ್ಯಕ್ಷ ರಮೇಶ ನಾಯ್ಕ ಮಾತನಾಡಿ, ವಿದ್ಯುತ್ ಪೂರೈಕೆಯಲ್ಲಿ ಶಿರಸಿ ಪೂರ್ವ ಭಾಗದ ಜನರಿಗೆ ನಿರಂತರ ತಾರತಮ್ಯ ಎಸಗಲಾಗುತ್ತಿದೆ. ಕಡಗೋಡದಲ್ಲಿ ಗ್ರಿಡ್ ಉದ್ಘಾಟನೆಯಾಗಿ ಐದು ವರ್ಷ ಕಳೆದರೂ ಪೂರ್ಣ ಪ್ರಮಾಣದ ವಿದ್ಯುತ್ ಲಭ್ಯವಾಗುತ್ತಿಲ್ಲ. ಇದು ಸ್ಥಳೀಯ ಶಾಸಕರ ಆಡಳಿತಾತ್ಮಕ ಫಲ್ಯಕ್ಕೆ ಸಾಕ್ಷಿ. ವಿದ್ಯುತ್ ಇಲ್ಲದೆ ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡಿದ್ದು, ಕೃಷಿಕರು ಸಂಕಷ್ಟದಲ್ಲಿದ್ದಾರೆ. ತಕ್ಷಣವೇ ಎಸಳೆ ಗ್ರಿಡ್‌ನಿಂದ ಬದಲಿ ಮಾರ್ಗ ನಿರ್ಮಿಸಿ ಸ್ಥಿರ ವಿದ್ಯುತ್ ನೀಡಬೇಕು ಎಂದು ಒತ್ತಾಯಿಸಿದರು.ಮೋರ್ಚಾ ಪ್ರಮುಖ ವಿ.ಎಂ. ಹೆಗಡೆ ಮಾತನಾಡಿದರು. ಸ್ಥಳಕ್ಕೆ ಆಗಮಿಸಿದ ಹೆಸ್ಕಾಂ ಅಧಿಕಾರಿ ಸುನೀಲಕುಮಾರ ಜಿ. ಅವರು ರೈತರಿಂದ ಮನವಿ ಸ್ವೀಕರಿಸಿದರು. ಪ್ರತಿಭಟನೆಯಲ್ಲಿ ಪ್ರಮುಖರಾದ ಆನಂದ ಸಾಲೇರ, ಉಷಾ ಹೆಗಡೆ, ಶಂಕರ ಗೌಡ, ರಾಘವೇಂದ್ರ ನಾಯ್ಕ ಸೇರಿದಂತೆ ಬನವಾಸಿ ಭಾಗದ ನೂರಾರು ರೈತರು ಹಾಗೂ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.



ಹೆಸ್ಕಾಂ ಅಧಿಕಾರಿಗಳು ಕೇವಲ ಭರವಸೆ ನೀಡದೆ ಪ್ರಾಯೋಗಿಕವಾಗಿ ಸಮಸ್ಯೆ ಬಗೆಹರಿಸಬೇಕು, ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳ್ಳಲಿದೆ.

■ ಅನಂತಮೂರ್ತಿ ಹೆಗಡೆ, ರೈತ ಮೋರ್ಚಾ ಜಿಲ್ಲಾಧ್ಯಕ್ಷ

ಪಿಎಸ್‌ಐ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹ

◆ **ಕುಮಟಾ:** ನಮ್ಮ ಸ್ನೇಹಿತರಾದ ಅಕ್ಷಯ ನಾಯ್ಕರನ್ನು ಸಾರ್ವಜನಿಕವಾಗಿ ನಿಂದಿಸಿ, ಅಕ್ರಮವಾಗಿ ದಂಡ ವಸೂಲಿ ಮಾಡಿದ ಕುಮಟಾ ಪಿಎಸ್‌ಐ ಖಾದರ್ ಭಾಷಾ ವಿರುದ್ಧ ಸೂಕ್ತ ಕ್ರಮವಾಗಬೇಕು. ಇಲ್ಲವಾದರೆ ಡಿಐಜಿ ಕಚೇರಿ ಎದುರು ಧರಣಿ ಸತ್ಯಾಗ್ರಹ ಮಾಡುತ್ತೇವೆ ಎಂದು ಕೆಪಿಸಿಸಿ ಮುಖಂಡ ಮಂಜುನಾಥ ಎಲ್. ನಾಯ್ಕ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಮುಖಂಡ ಮಂಜುನಾಥ ಎಲ್. ನಾಯ್ಕ ಅವರು, ನನ್ನ ಸ್ನೇಹಿತರಾದ ಅಕ್ಷಯ ನಾಯ್ಕರು ತಮ್ಮ ಸ್ಕೂಟರ್ ಮೇಲೆ ತೆರಳುತ್ತಿದ್ದಾಗ ಗಿಬ್ ಸರ್ಕಲ್ ಬಳಿ ತಡೆದ ಪಿಎಸ್‌ಐ ಖಾದರ್ ಬಾಷಾ ಅವರು, ಸಾರ್ವಜನಿಕರ ಎದುರು ಅಕ್ಷಯ ಜೊತೆ ಅವಮಾನಕಾರಿ ರೀತಿಯಲ್ಲಿ ದುರ್ವರ್ತನೆ ತೋರಿ ಅಕ್ರಮವಾಗಿ ದಂಡ ವಸೂಲಿ ಮಾಡಿರುವುದು ಸರಿಯಲ್ಲ, ಇಂಥ ಪೊಲೀಸ್ ಅಽಕಾರಿಗಳ ದರ್ಪ, ದೌರ್ಜನ್ಯಗಳಿಂದ ಇಡೀ ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ಬರುತ್ತಿದೆ. ಈಗ ಪೊಲೀಸ್ ಇಲಾಖೆ ತಮ್ಮ ಅಧಿಕಾರಿಗಳಿಗೆ ಬಾಡಿ ಕ್ಯಾಮರಾ, ಅತ್ಯಾಧುನಿಕ ತಂತ್ರಜ್ಞಾನ ನೀಡಿದೆ. ಹೀಗಿರುವಾಗ ಹೆದ್ದಾರಿಯಲ್ಲಿ ಹೋಗುತ್ತಿರುವ ಬೈಕ್ ಸವಾರರನ್ನು ಬಲವಂತವಾಗಿ ಕೈ ಹಿಡಿದು, ಎಳೆದರೆ ಅಪಘಾತವಾಗುವ ಸಾಧ್ಯತೆ ಅಧಿಕವಾಗಿದೆ ಎಂದರು.ಅಕ್ಷಯ ಅವರು ಏನಾದರೂ ತಪ್ಪು ಮಾಡಿದರೆ, ಸಾಕ್ಷ್ಯ ಒದಗಿಸಿ, ಇಲ್ಲವೇ ಕಾನೂನು ರೀತಿಯ ದಂಡ ವಿಧಿಸಿ, ಅದರ ಬದಲು ಜನರ ಎದುರು ಅವಾಚ್ಯ ಶಬ್ದಗಳಿಂದ ಬೈಯ್ಯುವುದು, ಮೊಬೈಲ್, ಕೀ ಕಸಿಯುವುದು ಮಾಡಬಾರದು. ಮೊಬೈಲ್ ಬಳಸಿದ್ದಾರೆ ಎಂದು ಸುಳ್ಳು ಹೇಳಿ, ಅಕ್ರಮ ದಂಡ ವಸೂಲಿ ಮಾಡುವುದು ಸರಿಯಲ್ಲ, ಒಂದು ವೇಳೆ ಅಕ್ಷಯ ಅವರು ತಪ್ಪು ಮಾಡಿರುವುದನ್ನು ಸಾಕ್ಷ್ಯ ಸಮೇತ ಸಾಭೀತು ಮಾಡಿದರೆ, ಬಹಿರಂಗವಾಗಿ ಕ್ಷಮೆ ಯಾಚಿಸುತ್ತೇವೆ. ಪೊಲೀಸ್ ಅಧಿಕಾರಿ ತಪ್ಪು ಮಾಡಿದ್ದರೆ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮವಾಗಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಪೊಲೀಸ್ ವಿರುದ್ಧ ಹೋರಾಟ ಅನಿವಾರ್ಯ ಎಂದು ಮಂಜುನಾಥ ನಾಯ್ಕ ಎಚ್ಚರಿಸಿದರು.ಧಾರೇಶ್ವರದ ಅಕ್ಷಯ ನಾಯ್ಕ , ಉದ್ಯಮಿ ಹರೀಶ್ ಶೇಟ್, ಕಾಂಗ್ರೆಸ್ ಮುಖಂಡ ಗಜು ನಾಯ್ಕ ಅಳ್ವೆಕೋಡಿ, ಪ್ರಮುಖರುಗಳಾದ ಸಂದೇಶ ಶೆಟ್ಟಿ, ಸುರೇಶ ಹರಿಕಂತ್ರ, ಈಶ್ವರ ಮುಕ್ರಿ, ಗೋಪಾಲ ನಾಯ್ಕ ಮೂರೂರು ಇದ್ದರು.



ಆರೋಪಿಗಳ ಹೆಡೆಮುರಿ ಕಟ್ಟಲು ಪೊಲೀಸ್ ಇಲಾಖೆ ಸಜ್ಜು

▸ ಸಂತೋಷ ರಾಯ್ಕರ

◆ **ಮುಂಡಗೋಡ:** ಪಟ್ಟಣದಲ್ಲಿ ಈಚೆಗೆ ನಡೆದಿದ್ದ ಜಮೀರ ಅಹ್ಮದ ದರ್ಗಾವಾಲೆ (ಎಂಎನ್‌ಡಿ) ಕೊಲೆ ಪ್ರಕರಣದ ತೆರೆಮರೆಯ ಎಲ್ಲ ಆರೋಪಿಗಳನ್ನು ಹೆಡೆಮುರಿ ಕಟ್ಟುತ್ತಿರುವ ಪೊಲೀಸ್ ಇಲಾಖೆ, ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಹಲವು ಆರೋಪಿಗಳ ಪಟ್ಟಿ ರೆಡಿ ಮಾಡಿಕೊಂಡಿದ್ದು, ದೊಡ್ಡ ಮಟ್ಟದ ಕಾರ್ಯಾಚರಣೆ ನಡೆಸಲು ಪ್ಲ್ಯಾನ್ ತಯಾರು ಮಾಡಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಮೀಟರ್ ಬಡ್ಡಿ ಹಾಗೂ ಗುಂಡಾ ಗರ್ದಿ ಪ್ರಕರಣಗಳಲ್ಲಿ ಭಾಗಿ ಆಗಿದ್ದವರನ್ನು ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್. ಅವರು ಖಡಕ್ಕಾಗಿ ಹೇಳಿದ್ದರಿಂದ, ರಾಜಾರೋಷವಾಗಿ ಬಡ್ಡಿ ದಂಧೆ ಮಾಡುತ್ತಿರುವರು, ಅಪರಾಧ ಕೃತ್ಯಗಳಲ್ಲಿ ತೊಡಗಿಕೊಂಡವರಲ್ಲಿ ಸದ್ಯ ನಡುಕ ಹುಟ್ಟಿದೆ. ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದೇ ಆದರೆ, ತಾಲೂಕಿನಲ್ಲಿ ಮೀಟರ್ ಬಡ್ಡಿ ಮಾಫಿಯಾದಿಂದ ಬೇಸತ್ತು, ಬಡ್ಡಿ ಕೊಡಲಾಗದೇ ಊರು ಬಿಟ್ಟವರು, ನೆಮ್ಮದಿಯಿಂದ ಮನೆಗೆ ಮರಳಿ ಬಂದು ಬದುಕುಬಹುದು ಎಂದು ಜನತೆ ಮಾತನಾಡಿಕೊಳ್ಳುತ್ತಿದ್ದಾರೆ.

ಕಳೆದ ವರ್ಷ ಮೀಟರ್ ಬಡ್ಡಿ ದಂಧೆ ವಿರುದ್ಧ ಸಾರ್ವಜನಿಕರು ಒಕ್ಕೊರಲಿನಿಂದ ಆಕ್ರೋಶ ವ್ಯಕ್ತಪಡಿಸಿ, ಪೊಲೀಸ್ ಇಲಾಖೆಯಿಂದ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿಯೇ ಸಾರ್ವಜನಿಕರು ಎಳೆಎಳೆಯಾಗಿ ಹೇಳಿದ್ದರು. ಅಂದಿನ ಎಸ್‌ಪಿ ನಾರಾಯಣ ಎಂ. ಅವರ ನೇತೃತ್ವದಲ್ಲಿಯೇ ನಡೆದಿದ್ದ ಸಭೆಯಲ್ಲಿ ಮೀಟರ್ ಬಡ್ಡಿ ದಂದೆಯ ಗಂಭೀರತೆ ಪೊಲೀಸ್ ಇಲಾಖೆಗೆ ಸವಾಲು ಒಡ್ಡಿತ್ತು. ಎಸ್‌ಪಿ ನಾರಾಯಣ ಅವರು ಇದಕ್ಕೆ ಕಡಿವಾಣ ಹಾಕಲು ಯೋಜಿತ ದಾಳಿ ನಡೆಸಿ, ಯಶಸ್ವಿಯಾಗಿದ್ದರು. ಮೂವತ್ತಕ್ಕೂ ಹೆಚ್ಚು ಮೀಟರ್ ಬಡ್ಡಿ ದಂದೆ ನಡೆಸುವರ ಮೇಲೆ ಪ್ರಕರಣ ದಾಖಲಿಸಿ ಜಿಲ್ಲೆಯಲ್ಲಿ ಜನರು ನೆಮ್ಮದಿಯಿಂದ ಜೀವನ ನಡೆಸುವಂತೆ ಮಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ಈಗಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್ ಅವರು ಸಹ ತಾಲೂಕಿನಲ್ಲಿ ಮೀಟರ್ ಬಡ್ಡಿ ದಂದೆಗೆ ಬ್ರೆಕ್ ಹಾಕಲು, ನಿರಂತರ ದಾಳಿ ಮಾಡಿಸಿ, ಆರೋಪಿಗಳ ಹೆಡೆಮುರಿ ಕಟ್ಟುತ್ತಿದ್ದಾರೆ.



ಅಪರಾಧ ಚಟುವಟಿಕೆಗಳಲ್ಲಿ ಇರುವರ ಮೇಲೆ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಲಿದೆ. ಮೀಟರ್ ಬಡ್ಡಿ ವಿರುದ್ಧ ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗದೇ ದೂರು ನೀಡಬೇಕು. ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿರುವರ ಮೇಲೆ ಇಲಾಖೆ ಕಣ್ಣಿಟ್ಟಿದ್ದು, ಅಗತ್ಯ ಬಿದ್ದರೆ ಗಡಿಪಾರು ಮಾಡಲಾಗುವುದು. ತಾಲೂಕಿನ ಜನರು ಭಯ ಇಲ್ಲದೇ ನೆಮ್ಮದಿ ಜೀವನ ನಡೆಸಲು, ಪೊಲೀಸ್ ಇಲಾಖೆ ನಿರಂತರವಾಗಿ ಶ್ರಮಿಸಲಿದೆ.

■ ದೀಪನ್ ಎಂ.ಎನ್, ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ, ಉಕ

ಗೃಹ ಮಂತ್ರಿ ಹೆಸರು ಬಳಕೆ ಸರಿಯಲ್ಲ: ಪಟಗಾರ

◆ **ಕಾರವಾರ:** ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ನಾಯಕರ ವಿರುದ್ದವಾಗಿ ಬಿಜೆಪಿ ವಕ್ತಾರ ನಾಗರಾಜ ನಾಯಕರ ರವರು ಪ್ರತಿಭಟನೆಗೆ ಕುಳಿತು ಅನಾವಶ್ಯಕವಾಗಿ ಗೃಹಮಂತ್ರಿಯವರ ಹೆಸರನ್ನು ಎಳೆತಂದಿದ್ದಾರೆ ಇದನ್ನು ಖಂಡಿಸುತ್ತೇನೆ. ಅವರ ಹೋರಾಟ ಏನೇ ಇದ್ದರೂ ಕಾನೂನಿನ ಚೌಕಟ್ಟಿನಲ್ಲಿ ನಡೆಯಲಿ ಎಂದು ಕಾಂಗ್ರೆಸ್ ಪಕ್ಷದ ಸಂಯೋಜಕ ಭಾಸ್ಕರ ಪಟಗಾರ ಹೇಳಿದರು.


ಅವರು ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ನಾಗರಾಜ ನಾಯಕರ ಬಗ್ಗೆ ತನಗೆ ವಯಕ್ತಿಕವಾಗಿ ಗೌರವವಿದೆ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಹೋರಾಟ ಮಾಡಲು ಹಕ್ಕಿದೆ. ಗೋಪಾಲಕೃಷ್ಣ ನಾಯಕರ ವಿರುದ್ದದ ಘಟನೆ ಏನೆ ಇದ್ದರೂ ಹೋರಾಟ ಮಾಡಲು ಒಂದು ಚೌಕಟ್ಟು ಇರಬೇಕು. ಗೋಪಾಲಕೃಷ್ಣರಿಗೆ ಗೃಹ ಸಚಿವರು ಆತ್ಮೀಯರಾಗಿದ್ದಾರೆ ಎಂದ ಮಾತ್ರಕ್ಕೆ ಸಚಿವ ಡಾ.ಪರಮೇಶ್ವರರ ಹೆಸರನ್ನು ಬಳಸಿ, ಅವರು ತನ್ನ ಪ್ರತಿಭಟನಾ ಸ್ಥಳಕ್ಕೆ ಬರುಬೇಕು ಎಂದು ಹೇಳುವದರಲ್ಲಿ ಅರ್ಥವಿಲ್ಲದಾಗಿದೆ. ಇಲ್ಲಿ ಅನಾವಶ್ಯಕವಾಗಿ ಗೃಹಸಚಿವರ ಹೆಸರನ್ನು ಬಳಸಿಕೊಂಡು ಮಾತನಾಡುವದು ಸರಿಯಲ್ಲ. ಇದನ್ನು ನಾನು ಪಕ್ಷದ ವತಿಯಿಂದ ಖಂಡಿಸುತ್ತೇನೆ. ಇದರಿಂದ ಕಾಂಗ್ರೆಸ್ ಪಕ್ಷದ ಹೆಸರೂ ಕೂಡ ಬರುವಂತಾಗಿದೆ. ಇದು ಸರಿಯಲ್ಲ, ಬಿಜೆಪಿ ನಾಯಕರಾದ ನಾಗರಾಜ ನಾಯಕರ ರವರು ಈ ಕೂಡಲೆ ತಮ್ಮ ಪ್ರತಿಭಟನೆಯನ್ನು ಬಿಡಬೇಕು ಎಂದರು.

ಪ್ರಕರಣದ ವಿಚಾರಣೆ ಮೇ 19ಕ್ಕೆ ಮುಂದೂಡಿಕೆ

◆ **ಅಂಕೋಲಾ:** ತಾಲೂಕಿನ ಬೊಬ್ರವಾಡದ ಗೇರುಕೊಪ್ಪದಲ್ಲಿ ಮುಸ್ಲಿಂ ಸಮುದಾಯದವರು ಖಬರಸ್ತಾನ ಆಗಿ ಬಳಸುತ್ತಿರುವ ಹಿಂದೂ ರೈತ ಕುಟುಂಬದ ಹಕ್ಕಿನ ಜಮೀನು ಎಂದು ಪ್ರತಿಪಾದಿಸಲ್ಪಡುತ್ತಿರುವ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಮಂಡಳಿಯ ವಿಚಾರಣೆ ಸಹಾಯಕ ಆಯುಕ್ತರ ವಿಶೇಷ ನ್ಯಾಯಾಲಯದಲ್ಲಿ ನಡೆಯಿತು.ಜಮೀನಿನ ಹಕ್ಕುದಾರರು ಎಂದು ಹೇಳಿಕೊಳ್ಳುವ ರೈತ ಕುಟುಂಬ ಮತ್ತು ಅಂಜುಮನ್ ಸಂಸ್ಥೆಯ ಪ್ರಮುಖರು ಹಾಜರಿದ್ದರು.

ಸಾಕ್ಷಿದಾರರ ಪಾಟಿ ಸವಾಲಿಗೆ ಕಾಲಾವಕಾಶ ನೀಡುವಂತೆ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಹಾಯಕ ಆಯುಕ್ತರು ಪ್ರಕರಣದ ವಿಚಾರಣೆಯನ್ನು ಮೇ 19 ಕ್ಕೆ ಮುಂದೂಡಿದರು.ತಾಲೂಕಿನ ಬೊಬ್ರವಾಡದ ಗೇರುಕೊಪ್ಪ ಬಳಿಯ 5 ಎಕರೆ ಜಮೀನು ರೈತರ ಹಕ್ಕಿನದಾಗಿದ್ದು ಸ್ಥಳೀಯ ಅಂಜುಮನ ಇಸ್ಲಾಂ ಸಂಸ್ಥೆಯವರು ಎರಡು ಎಕರೆ ಜಮೀನು ಅತಿಕ್ರಮಣ ಮಾಡಿ ಖಬರಸ್ತಾನ್ ಆಗಿ ಉಪಯೋಗಿಸುತ್ತಿದ್ದಾರೆ ಎಂದು ರೈತರ ಕುಟುಂಬದವರು ವಾದಿಸುತ್ತ ಬಂದಿದ್ದು ಹಿಂದೂ ರೈತ ಕುಟುಂಬದವರಿಗೆ ಹಿಂದೂ ಸಂಘಟನೆಗಳು ಬೆಂಬಲ ನೀಡಿದ್ದವು.

ಶ್ರೀರಾಮ ಸೇನೆಯ ಮುಖಂಡ ಪ್ರಮೋದ ಮುತಾಲಿಕ್ ಅವರು ಅಂಕೋಲಾಕ್ಕೆ ಆಗಮಿಸಿ ಸ್ಥಳಕ್ಕೆ ಭೇಟಿ ನೀಡಿ ಹಿಂದೂ ಸಮಾಜದ ರೈತರ ಹಕ್ಕಿನ ಜಮೀನಿನಲ್ಲಿ ಯಾವುದೇ ಘೋರಿ ಕಟ್ಟಲು ಅವಕಾಶವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ ಭೂ ನ್ಯಾಯ ಮಂಡಳಿಯ ತೀರ್ಪು ಶೀಘ್ರ ಪ್ರಕಟಿಸುವಂತೆ ಒತ್ತಾಯಿಸಿದ್ದರು.



ಅದೇ ಸ್ಥಳದಲ್ಲಿ ದಫನ್ ಕಾರ್ಯ ಮುಂದುವರಿದಾಗ ರೈತ ಕುಟುಂಬ ಮತ್ತು ಹಿಂದೂ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿದ್ದರಿಂದ ಪೊಲೀಸ್ ಬಂದೋಬಸ್ತಿನಲ್ಲಿ ದಫನ್ ಕಾರ್ಯ ಮಾಡಲಾಗಿದ್ದರಿಂದ ಹಿಂದೂ ಸಂಘಟನೆಗಳ ಪ್ರಮುಖರು ಅಂಕೋಲಾ ಪೊಲೀಸ್ ಠಾಣೆಗೆ ಭೇಟಿ ನೀಡಿ ನ್ಯಾಯಮಂಡಳಿಯ ತೀರ್ಪು ಬರುವ ವರೆಗೆ ರೈತರ ಹಕ್ಕಿನ ಜಮೀನಿನಲ್ಲಿ ಅನ್ಯ ಸಮುದಾಯದ ಯಾವುದೇ ಕಾರ್ಯಗಳಿಗೆ ಅವಕಾಶ ನೀಡಬಾರದು ತೀರ್ಪು ಅವರ ಪರವಾಗಿ ಬಂದರೆ ಅವರು ಜಮೀನಿನ್ನು ಉಪಯೋಗಿಸಲಿ ಆದರೆ ತೀರ್ಪು ರೈತರ ಪರ ಬಂದರೆ ಜಮೀನಿಗೆ ಬೇಲಿ ಹಾಕುವುದಾಗಿ ತಿಳಿಸಿದ್ದರು.

ಇದೀಗ ಪ್ರಕರಣದ ವಿಚಾರಣೆ ಭೂ ನ್ಯಾಯ ಮಂಡಳಿಯಲ್ಲಿ ನಡೆದು ಸಾಕ್ಷಿಗಳ ಪಾಟಿ ಸವಾಲಿಗೆ ಮುಂದಿನ ದಿನಾಂಕ ನೀಡಲಾಗಿದೆ.

ಕಿರುಸುದ್ದಿ

ಅರಿವು ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಹಾವೇರಿ: ಪ್ರಸಕ್ತ 2026-27ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಇಸಿಟಿ ಹಾಗೂ ನೀಟ್ ಪರೀಕ್ಷೆಯಲ್ಲಿ ವೈದ್ಯಕೀಯ, ಬಿ.ಡಿ.ಎಸ್, ಬಿ.ಇ, ಬಿ.ಟೆಕ್, ಕೃಷಿ, ಫಾರ್ಮಸಿ, ಪಶುವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಆಯ್ಕೆಯಾಗುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ (ಕ್ರಿಶ್ಚಿಯನ್ ಸಮುದಾಯ ಹೊರತುಪಡಿಸಿ) ಅರಿವು ವಿದ್ಯಾಭ್ಯಾಸ ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಯು ಮುಸ್ಲಿಂ, ಜೈನ್, ಸಿಖ್, ಬೌದ್ಧ, ಆಂಗ್ಲೋ ಇಂಡಿಯನ್ ಜನಾಂಗದವರಾಗಿರಬೇಕು. ಅರ್ಹ ವಿದ್ಯಾರ್ಥಿಗಳು ಮೇ 30ರೊಳಗಾಗಿ ವೆಬ್‌ಸೈಟ್ http://kmdconline.karnataka.gov.inನಲ್ಲಿ ಸಲ್ಲಿಸಬೇಕು. ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಹಾರ್ಡ್ ಪ್ರತಿಯನ್ನು ಹಾವೇರಿ ಜಿಲ್ಲಾ ವ್ಯವಸ್ಥಾಪಕರ ಕಚೇರಿಗೆ ಸಲ್ಲಿಸಬೇಕು ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಹಾವೇರಿ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿ ಶೈಕ್ಷಣಿಕ ವರ್ಷಕ್ಕೆ ಚಾಲನೆ



ಕುಮಟಾ: ತಾಲೂಕಿನಾದ್ಯಂತ 2026-27 ನೇ ಸಾಲಿನ ಶೈಕ್ಷಣಿಕ ವರ್ಷದ ಅಂಗನವಾಡಿ ತರಗತಿಗಳು ಸೋಮವಾರದಿಂದ ಆರಂಭಗೊಂಡವು. ಹೊಸ ಶೈಕ್ಷಣಿಕ ವರ್ಷದ ಪ್ರಯುಕ್ತ ಅಂಗನವಾಡಿ ಕೇಂದ್ರಗಳನ್ನು ತಳಿರು ತೋರಣಗಳು ಹಾಗೂ ಬಣ್ಣ ಬಣ್ಣದ ಅಲಂಕಾರಗಳಿಂದ ಸಿಂಗರಿಸಲಾಗಿತ್ತು. ಅಂಗನವಾಡಿಗೆ ಆಗಮಿಸಿದ ಪುಟಾಣಿ ಮಕ್ಕಳನ್ನು ಶಿಕ್ಷಕಿಯರು ಹಾಗೂ ಸಿಬ್ಬಂದಿ ಸ್ವಾಗತಿಸಿದರು. ಮಕ್ಕಳಿಗೆ ಸಿಹಿ ವಿತರಿಸಿ ಸಂತಸದ ವಾತಾವರಣದಲ್ಲಿ ಪಾಠ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು. ಮೊದಲ ದಿನವೇ ಮಕ್ಕಳು ಉತ್ಸಾಹದಿಂದ ಅಂಗನವಾಡಿಗೆ ಆಗಮಿಸಿದ್ದು, ಪೋಷಕರಲ್ಲಿಯೂ ಸಂತಸ ಕಂಡುಬಂತು. ಮಕ್ಕಳ ಕಲಿಕೆ, ಆಟ ಹಾಗೂ ಸೃಜನಾತ್ಮಕ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಹೊಸ ಶೈಕ್ಷಣಿಕ ವರ್ಷವನ್ನು ಅರ್ಥಪೂರ್ಣವಾಗಿ ಆರಂಭಿಸಲಾಯಿತು.

ಸಿಡಿಲು: ತೆಂಗಿನ ಮರಕ್ಕೆ ಬೆಂಕಿ

ಕುಂದಗೋಳ: ಪಟ್ಟಣ ಸೇರಿದಂತೆ ತಾಲೂಕಿನ ಶಿರೂರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಂಗಳವಾರ ಸಂಜೆ ಸುಮಾರು 40 ನಿಮಿಷಗಳು ಗಾಳಿ, ಗುಡುಗು ಸಹಿತ ಉತ್ತಮ ಮಳೆಯಾಯಿತು. ಬಿಸಿಲಿನ ತಾಪದಿಂದ ಬಳಲುತ್ತಿದ್ದ ಜನರಿಗೆ ಮಳೆಯ ತಂಪು ನಿರಾಳತೆ ತಂದಿತು. ಶಿರೂರ ಗ್ರಾಮದ ಇಮಾಮಹುಸೇನ ರಾಜೆಖಾನವರ ಅವರ ಮನೆಯ ಮುಂಭಾಗದ ತೆಂಗಿನ ಮರಕ್ಕೆ ಸಿಡಿಲು ಬಡಿದ ಪರಿಣಾಮ ಮರಕ್ಕೆ ಬೆಂಕಿ ಕಾಣಿಸಿಕೊಂಡಿತು. ಸ್ಥಳೀಯರು ತಕ್ಷಣವೇ ಎಚ್ಚರಿಕೆ ವಹಿಸಿದ ಪರಿಣಾಮ ಯಾವುದೇ ದೊಡ್ಡ ಅನಾಹುತ ಸಂಭವಿಸಿಲ್ಲ. ಕಳೆದ ಕೆಲವು ದಿನಗಳಿಂದ ಉಷ್ಣತೆಯಿಂದ ಕಂಗೆಟ್ಟಿದ್ದ ಜನರು ಮಳೆ ಆಗಮನದಿಂದ ಹರ್ಷ ವ್ಯಕ್ತಪಡಿಸಿದರು. ಮುಂಗಾರು ಬಿತ್ತನೆಗೆ ಹೊಲ ಸಿದ್ಧಪಡಿಸಿಕೊಂಡಿರುವ ರೈತರಿಗೆ ಈ ಮಳೆ ಆಶಾಭಾವನೆ ಮೂಡಿಸಿದೆ.



ಬೈಕ್ ಮುಖಾಮುಖಿ ಡಿಕ್ಕಿ

ಹಾವೇರಿ: ಎರಡು ಬೈಕ್‌ಗಳ ಮಧ್ಯೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದರಿಂದ ಬೈಕ್ ಸವಾರರು ಗಾಯಗೊಂಡಿರುವ ಘಟನೆ ತಾಲೂಕಿನ ಸೋಮನಕಟ್ಟಿ ಶಿಬಾರ ಗ್ರಾಮದ ಹೊರ ವಲಯದಲ್ಲಿ ನಡೆದಿದೆ. ತಾಲೂಕಿನ ಕನವಳ್ಳಿ ಗ್ರಾಮದ ರಾಮಪ್ಪ ಹೊನ್ನಪ್ಪ ಮುದಕಣ್ಣನವರ ಹಾಗೂ ಗುತ್ತಲ ತಾಂಡಾ ನಿವಾಸಿ ಅಭಿ ಪರಮೇಶ ಲಮಾಣಿ ಎಂಬ ಇಬ್ಬರು ಬೈಕ್ ಸವಾರರು ಗಾಯಗೊಂಡಿದ್ದಾರೆ. ರಾಮಪ್ಪ ಮುದಕಣ್ಣನವರ ಯಲಗಚ್ಚ ಗ್ರಾಮದಿಂದ ಕನವಳ್ಳಿ ಕಡೆಗೆ ಹೋಗುತ್ತಿರುವಾಗ, ಅದೇ ಮಾರ್ಗದಲ್ಲಿ ಕನವಳ್ಳಿಯಿಂದ ಶಿಬಾರ ಕಡೆಗೆ ಹೋಗುತ್ತಿದ್ದ ಬೈಕ್ ಸವಾರ ಬೈಕ್‌ನ್ನು ನಿಯಂತ್ರಿಸಲಾಗದೆ ಮುಖಾಮುಖಿ ಡಿಕ್ಕಿ ಹೊಡೆದು ಅಪಘಾತ ಪಡಿಸಿಕೊಂಡಿದ್ದಾರೆ ಎಂದು ಪರಮೇಶ ಮುದಕಣ್ಣವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ತಾಲೂಕಿನ ಕರ್ಜಗಿ ಬಳಿ ವರದಾ ನದಿ ಒಡಲಲ್ಲಿ ವರ್ತಿ ತೆರೆದು ನೀರು ಸಂಗ್ರಹಿಸುತ್ತಿರುವ ಗ್ರಾಮಸ್ಥರು.

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

ಲಕ್ಷ್ಮೇಶ್ವರ: ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಜನಿವಾರ ಬಲವಂತವಾಗಿ ತೆಗೆಸುವುದು, ವಿವಾಹಿತ ಹಿಂದೂ ಮಹಿಳೆಯರ ಮಂಗಳಸೂತ್ರ, ಕಾಲುಂಗುರ, ಮೂಗುತಿ, ಕಿವಿಯೋಲೆ, ಕೈದಾರ ಮುಂತಾದವುಗಳನ್ನು ತೆಗೆಯಲು ಒತ್ತಾಯಿಸುವ ಕ್ರಮಗಳನ್ನು ತಕ್ಷಣ ನಿಲ್ಲಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪಟ್ಟಣದಲ್ಲಿ ತಹಶೀಲ್ದಾರ್ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕರಿಗೆ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಮನವಿ ಅರ್ಪಿಸಲಾಯಿತು. ರಾಜ್ಯವ್ಯಾಪಿ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಹಿಂದೂ ವಿದ್ಯಾರ್ಥಿಗಳ ಸಂವಿಧಾನದತ್ತವಾದ ಧರ್ಮಾಚರಣೆಯ ಮೇಲಿನ ಘಟನೆಯು ಸಮಸ್ತ ಹಿಂದೂ ಸಮಾಜವನ್ನು ತೀವ್ರವಾಗಿ ನೋವುಗೊಳಿಸಿದೆ. ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳಿಂದ ತಪಾಸಣೆ ನೆಪದಲ್ಲಿ ತಡೆದು ಅವರು ಧರಿಸಿದ್ದ ಜನಿವಾರ ಬಲವಂತವಾಗಿ ತೆಗೆಸಲಾಗಿದೆ. ಜನಿವಾರ ತೆಗೆದಿಲ್ಲದಿದ್ದರೆ ಪರೀಕ್ಷಾ ಕೇಂದ್ರಕ್ಕೆ ಪ್ರವೇಶವಿಲ್ಲ ಎಂದು ಬೆದರಿಕೆ ಹಾಕಲಾಗಿದೆ. ಪೋಷಕರು ಅನಿವಾರ್ಯವಾಗಿ ಜನಿವಾರ ತೆಗೆಸಿ ಮಕ್ಕಳನ್ನು ಪರೀಕ್ಷಾ ಕೊಠಡಿಗೆ ಕಳುಹಿಸಿರುವುದು, ಕೇವಲ ಒಂದು ವಿದ್ಯಾರ್ಥಿಯ ಅವಮಾನವಲ್ಲ; ಇದು ಸಂಪೂರ್ಣ ಹಿಂದೂ ಧಾರ್ಮಿಕ ಸಂಪ್ರದಾಯದ ಮೇಲೆ ನಡೆದ ಗಂಭೀರ ದಾಳಿ ಆಗಿದೆ ಎಂದು ಆರೋಪಿಸಲಾಗಿದೆ. ಗ್ರೇಡ್-2 ತಹಶೀಲ್ದಾರ್ ಮಂಜುನಾಥ ಅಮಾಸಿ ಮನವಿ ಸ್ವೀಕರಿಸಿದರು. ಹಿಂದೂ ಜನಜಾಗೃತಿ ಸಮಿತಿಯ ಶಂಕರ ಬ್ಯಾಡಗಿ, ಮಹಾದೇವಪ್ಪ ಕೊತ್ತಲ್, ಪ್ರಕಾಶ ಗುತ್ತಲ, ಅನಸೂಯಾ ಸಜ್ಜನರ, ಗೀತಾ ಬಡಿಗೇರ, ಮಹೇಶ ಗೋಡಿ ಮುಂತಾದವರಿದ್ದರು.



ಹಾನಗಲ್ಲ: ಮಾಸನಕಟ್ಟಿ ಗ್ರಾಮದಲ್ಲಿ ವಿವಿಧ ಕಂದಾಯ ಗ್ರಾಮ, ಉಪ ಗ್ರಾಮಗಳ ಫಲಾನುಭವಿ ಕುಟುಂಬಗಳಿಗೆ ಶಾಸಕ ಶ್ರೀನಿವಾಸ ಮಾನೆ ಹಕ್ಕುಪತ್ರ ವಿತರಿಸಿದರು.

ನಗರಸಭೆಯಿಂದ ಕಸದ ತೊಟ್ಟಿ ತೆರವು | ಎಲ್ಲೆಂದರಲ್ಲಿ ಕಸದ ರಾಶಿ

ಜನರಲ್ಲಿ ರೋಗ ಹರಡುವ ಭೀತಿ

ಹಾವೇರಿ: ನಗರೀಕರಣ ಬೆಳೆದಂತೆ ಸಾರ್ವಜನಿಕ ಆರೋಗ್ಯದ ಕುರಿತ ಅರಿವು, ನಗರದ ಸ್ವಚ್ಛತೆಯ ನಿರ್ಲಕ್ಷ್ಯ ಎದ್ದು ಕಾಣುತ್ತಿದೆಯೇ ಎಂಬ ಜಿಜ್ಞಾಸೆ ಮೂಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಮನೆ ಮನೆಯಿಂದ ಕಸ ಸಂಗ್ರಹಿಸುವ ಜತೆಗೆ ಸಾರ್ವಜನಿಕ ಸ್ಥಳಗಳಲ್ಲಿ ಇದ್ದ ಕಸದ ತೊಟ್ಟಿಗಳನ್ನು ನಗರಸಭೆ ತೆರವು ಮಾಡಿದೆ. ಇದು ಹಲವು ಸಮಸ್ಯೆಗಳಿಗೆ, ಸಾರ್ವಜನಿಕ ತ್ಯಾಜ್ಯದ ವಿಲೇವಾರಿಗೆ ತೊಡಕುಂಟು ಮಾಡಿದ್ದು, ತರಕಾರಿ ಮಾರುಕಟ್ಟೆ, ವಿವಿಧ ಅಂಗಡಿ ಮುಂಗಟ್ಟೆ ಹಾಗೂ ಮಾಂಸದ ಅಂಗಡಿಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಎಲ್ಲಿ ವಿಲೇವಾರಿ ಮಾಡಬೇಕೆಂಬ ಗೊಂದಲಕ್ಕೆ ಕಾರಣವಾಗಿದ್ದು, ಇದರಿಂದ ನಗರದ ಅಂದಗೆಡುತ್ತಿದೆ.

ನಗರದ ಪ್ರಮುಖ ಪ್ರವೇಶ ದ್ವಾರ ಎನಿಸುವ ಗುತ್ತಲ ಭಾಗದಿಂದ ನಗರಕ್ಕೆ ಒಳಬರುವ ಹಳೆಯ ಎಪಿಎಂಸಿ, ಹಾನಗಲ್ಲ ರಸ್ತೆ, ಕಾಗಿನೆಲೆ ರಸ್ತೆ, ರಾಣೆಬೆನ್ನೂರ ಮತ್ತು ಹುಬ್ಬಳ್ಳಿಯಿಂದ ನಗರವನ್ನು ಒಳಪ್ರವೇಶಿಸುವ ನಗರದ ಹೊರವಲಯದ ರಸ್ತೆ ಬದಿಗಳಲ್ಲಿ ಪ್ಲಾಸ್ಟಿಕ್, ತರಕಾರಿ, ಹೋಟೇಲ್‌ಗಳ ಉಳಿಕೆ ಆಹಾರ ತ್ಯಾಜ್ಯಗಳ ರಾಶಿಯನ್ನು ಅಲ್ಲಲ್ಲಿ ಹಾಕುತ್ತಿದ್ದು ಈ ಕುರಿತು ಯಾರೂ ಹೇಳುವವರು ಕೇಳುವವರು ಇಲ್ಲವಾಗಿದೆ. ಇದನ್ನು ಪ್ರಶ್ನಿಸುವವರೂ ಇಲ್ಲವಾಗಿದ್ದು, ಇದರಿಂದ ನಗರಕ್ಕೆ ಬರುವವರು 'ಹಾವೇರಿ ಯಾವಾಗ ಸುಧಾರಿಸುತ್ತೋ' ಎಂಬ ಗೊಣಗಾಟದೊಂದಿಗೆ ನಗರವನ್ನು ಪ್ರವೇಶಿಸುವಂತಾಗಿದೆ.

ಇನ್ನು ನಗರದ ಒಳಗಿನ ಕಾಗಿನೆಲೆ ರಸ್ತೆಯ ಸರ್ವಿಸ್ ರೋಡ ಹಾಗೂ ಹೆಗ್ಗೇರಿ ರಸ್ತೆಗಳಲ್ಲಿ ಅಂದರೆ ನಗರ ವ್ಯಾಪ್ತಿಯ ಒಳಗೆ ಸಹ ರಸ್ತೆ ಬದಿಗಳಲ್ಲಿ ರಾಶಿಗಟ್ಟಲೇ ಹಳೆಯ ಮನೆಗಳನ್ನು ತೆರವುಗೊಳಿಸಿದ ತ್ಯಾಜ್ಯವನ್ನು ಸುರಿಯಲಾಗುತ್ತಿದ್ದು ಈ ಬಗ್ಗೆ ಹೇಳುವವರು ಕೇಳುವವರು ಇಲ್ಲವಾಗಿದೆ. ಇದರಿಂದ ನಗರದ ಸೌಂದರ್ಯಕ್ಕೆ ತೀವ್ರ ಧಕ್ಕೆ ಉಂಟಾಗುವ ಜತೆಗೆ ಎಲ್ಲೆಂದರಲ್ಲಿ ಕಸದ ರಾಶಿ ಎದ್ದು ಕಾಣುವ ಜತೆಗೆ ಸಾರ್ವಜನಿಕ ಆರೋಗ್ಯಕ್ಕೂ ಕುತ್ತು ತರುತ್ತಿವೆ ಎಂಬುದು ಸಾರ್ವಜನಿಕರ ಆರೋಪ.

ಕೂಡಲೇ ನಗರಸಭೆ ಈ ಬಗ್ಗೆ ತುರ್ತು ಕ್ರಮಕ್ಕೆ ಮುಂದಾಗುವ ಜತೆಗೆ ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ದುಬಾರಿ ದಂಡದ ಬಿಸಿ ಮುಟ್ಟಿಸುವ ಜತೆಗೆ ಜಾಗೃತಿ ಮೂಡಿಸುವ ತುರ್ತು ಅಗತ್ಯವಿದೆ ಎಂಬುದು ಪತ್ರಿಕೆಯ ಕಳಕಳಿ.



ಕಸದ ತೊಟ್ಟಿ ಇರಿಸಲು ಒತ್ತಾಸೆ

ಈ ಹಿಂದೆ ನಗರದ ಅಲ್ಲಲ್ಲಿ ಸಾರ್ವಜನಿಕರ ಕಸದ ವಿಲೇವಾರಿಗೆಂದು ಕಸದ ತೊಟ್ಟಿಗಳನ್ನು ಅಳವಡಿಸಲಾಗಿತ್ತು. ಆದರೆ ಮನೆ ಮನೆಯಿಂದ ಕಸ ಸಂಗ್ರಹಣೆ ಆರಂಭಗೊಂಡ ಬೆನ್ನಲ್ಲೇ ಅವುಗಳನ್ನು ತೆರವುಗೊಳಿಸಿದ್ದರಿಂದ ನಗರದ ಅಲ್ಲಲ್ಲಿ ಖಾಲಿ ಇರುವ ನಿವೇಶನಗಳೆ ತಿಪ್ಪೆಗಳಂತೆ ಭಾಸವಾಗುತ್ತಿವೆ. ಇವುಗಳ ನಿರ್ವಹಣೆಗೆ ನಗರಸಭೆ ಮತ್ತೆ ಅಲ್ಲಲ್ಲಿ ಕಸದ ತೊಟ್ಟಿಗಳನ್ನು ಇರಿಸಲೇ ಬೇಕು ಎಂಬುದು ಜನರ ಒತ್ತಾಸೆ.

ನಗರದ ಹೆಗ್ಗೇರಿ ರಸ್ತೆಯ ಬದಿಗಳಲ್ಲಿ ತ್ಯಾಜ್ಯ ಸುರಿಯುತ್ತಿರುವುದರಿಂದ ಈ ಭಾಗದಲ್ಲಿ ಜನರು ಓಡಾಡುವುದೇ ಕಷ್ಟವಾಗುತ್ತಿದೆ. ಇದರಿಂದ ಇಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಈ ಭಾಗದಲ್ಲಿ ಪ್ರಮುಖ ಎರಡು ಆಸ್ಪತ್ರೆಗಳಿದ್ದು ಇಲ್ಲಿ ಓಡಾಡಲು ಸಾರ್ವಜನಿಕರು ಆತಂಕ ಎದುರಿಸುವಂತಾಗಿದೆ. ಕೂಡಲೇ ನಗರಸಭೆ ಅಧಿಕಾರಿ ಮತ್ತು ಸಿಬ್ಬಂದಿಗಳು ಇದರ ನಿರ್ವಹಣೆಗೆ ಒತ್ತು ನೀಡಲಿ.


■ ಅಭಿಷೇಕ ಮರಿರೇವಣ್ಣನವರ, ಸ್ಥಳೀಯ ನಿವಾಸಿ

ಪಂಚಪೀಠಾಧೀಶ್ವರ ಜಗದ್ಗುರುಗಳ ಅದ್ದೂರಿ ಅಡ್ಡಪಲ್ಲಕ್ಕಿ ಮಹೋತ್ಸವ

ರಾಣೇಬೆನ್ನೂರ: ತಾಲೂಕಿನ ಆರೇಮಲ್ಲಾಪುರ ಗ್ರಾಮದಲ್ಲಿ ಪಂಚಪೀಠಾಧೀಶ್ವರ ಜಗದ್ಗುರಗಳ ಅಡ್ಡಪಲ್ಲಕ್ಕಿ ಮಹೋತ್ಸವವು ಮಹಿಳೆಯರ ಕುಂಬ ಮೇಳದೊಂದಿಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು.

ಅಡ್ಡಪಲ್ಲಕ್ಕಿ ಮಹೋತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಧರ್ಮ ಸಮಾರಂಭದ ವೇದಿಕೆಗೆ ಬಂದು ತಲುಪಿತು. ಗ್ರಾಮದಲ್ಲಿ ಹಬ್ಬದ ವಾತಾವರಣ ಕಂಡು ಬಂದಿತು. ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಬಾಳೆಹೊನ್ನೂರ, ಉಜ್ಜಯನಿ, ಕೇದಾರ, ಕಾಶಿ, ಶ್ರೀಶೈಲ ಜಗದ್ಗುರುಗಳ ಪ್ರತ್ಯೇಕ ಅಡ್ಡಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರವಣಿಗೆ ಮೂಲಕ ಜೈಕಾರ ಸುರಿಮಳೆಯೊಂದಿಗೆ ಭಕ್ತಿ ಮೆರೆದರು.

ಮಹೋತ್ಸವದಲ್ಲಿ ಹರಗುರು ಚರಮೂರ್ತಿಗಳು, ಮಾಜಿ ಶಾಸಕ ಅರುಣ ಕುಮಾರ ಪೂಜಾರ, ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಹಾಗೂ ಸವಿರಾರು ಭಕ್ತರು ಪಾಲ್ಗೊಂಡಿದ್ದರು.



ಬಿಎಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಕಾರ್ಯ ಶ್ಲಾಘನೀಯ: ಶ್ರೀಗಳು

ರಾಣೇಬೆನ್ನೂರ: ತಾಂತ್ರಿಕತೆ, ಆಧುನಿಕತೆಯ ಭರಾಟೆಯಲ್ಲಿ ಭಾರತೀಯ ಹಲವು ಸಂಸ್ಕೃತಿಗಳು ನಶಿಸುವ ಸಂದರ್ಭದಲ್ಲಿ ಬಿಎಜೆಎಸ್‌ಎಸ್ ಶಿಕ್ಷಣಸಂಸ್ಥೆಯು ಭಾರತೀಯ ಶ್ರೇಷ್ಠ ಸಂಸ್ಕೃತಿಯ ಪುನರುತ್ಥಾನ ಕಾರ್ಯ ಮಾಡುತ್ತಿರುವದು ಶ್ಲಾಘನೀಯವಾಗಿದೆ ಎಂದು ವೀರಾಪೂರ ಹಿರೇಮಠದ ಡಾ. ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಬಿಎಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಜರುಗಿದ ಕೋಟಿ ಗಾಯತ್ರಿ ಮಹಾಯಜ್ಞದ ಇಪ್ಪತ್ತನೇ ವಾರ್ಷಿಕೋತ್ಸವದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಡಾ. ಆರ್. ಎಂ.ಕುಬೇರಪ್ಪ ಮಾತನಾಡಿ, ಗ್ರಾಮೀಣ ಜನರ, ದೀನ ದಲಿತರ, ಶೋಷಿತರ ಪರವಾಗಿ ಸ್ಥಾಪಿತವಾದ ಬಿಎಜೆಎಸ್‌ಎಸ್ ಶಿಕ್ಷಣ ಸಂಸ್ಥೆಯು ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ ಹೆಮ್ಮೆ ಇದೆ. ಹೊಸ ಹೊಸ ಯೋಜನೆಗಳನ್ನು ಜಾರಿಗೊಳಿಸುವ ಯೋಜನೆ ಇದೆ ಎಂದರು.

ವಿಧಾನ ಸಭೆಯ ಉಪಾಧ್ಯಕ್ಷ ಹಾಗೂ ಬಿಎಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ರುದ್ರಪ್ಪ ಲಮಾಣಿ ಮಾತನಾಡಿ, ಗುರು ಹಿರಿಯರ ಕೃಪಾಶೀರ್ವಾದದಿಂದ ನಮ್ಮ ಶಿಕ್ಷಣ ಸಂಸ್ಥೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಹಾಗೂ ಸಂಸ್ಕಾರಯುತ ಜೀವನ ನಡೆಸಲು ಮಾರ್ಗದರ್ಶನ ನೀಡುತ್ತಿರುವುದಾಗಿ ತಿಳಿಸಿದರು.

ಹುಲಿಕೇರಿಯ ಬಸವರಾಜ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕುಪ್ಪೂರಿನ ತೇಜಶ್ವರ ಶಿವಾಚಾರ್ಯ ಮಹಾ ಸ್ವಾಮಿಗಳ ಸಾನಿಧ ವಹಿಸಿದ್ದರು.

ಈ ಸಂದರ್ಭದಲ್ಲಿ ರಾಜ್ಯ ಮಟ್ಟದ ಕೃಷಿ ಪಂಡಿತ ಪುರಸ್ಕೃತ ಶಂಕರಗೌಡ ಚನ್ನಬಸನಗೌಡ ಪಾಟೀಲ, ತಾಲೂಕ ಬ್ರಾಹ್ಮಣ ಸಮಾಜದ ಅಧ್ಯಕ್ಷ ಗೋವಿಂದ ನಾರಾಯಣಾಚಾರ್ ಚಿಮ್ಮಲಗಿ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪುಟ್ಟಪ್ಪ ಮರಿಯಮ್ಮನವರ, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಪ್ಪ ಬೇಡರ, ಕೆ.ಸಿ. ನಾಗರಜ್ಜಿ, ಪ್ರಾಚಾರ್ಯ ಡಾ. ಸುರೇಶ ಬಣಕಾರ, ಬೀರೇಶ ಚೌಡಣ್ಣನವರ, ಉಪನ್ಯಾಸಕ ಮಮತಾ ಓಲೇಕಾರ ಮತ್ತಿತರರು ಇದ್ದರು.



ಉತ್ತಮ ಸಮಾಜಕ್ಕಾಗಿ ಓದಿನ ಅಭಿರುಚಿ ಹೆಚ್ಚಿಸಿ: ಹಿರೇಮಠ

ಹಾವೇರಿ: ನಾಡಿನ ಸಾಹಿತ್ಯ ಚರಿತ್ರೆಯಲ್ಲಿ ಅಮರರಾದ ಗಳಗನಾಥರನ್ನು ನೆನಪಿಸುವಂತೆ ಕಲಾ ಪ್ರಪಂಚದ ಲೇಖಕ ಎನ್. ಸಿ. ದೇಸಾಯಿ ಅವರನ್ನು ಮರೆಯಬಾರದು. ತಮ್ಮ ಕುಂಚ ಮತ್ತು ಬರವಣಿಗೆಯಿಂದ ಯಾವ ಅಪೇಕ್ಷೆಗಳಿಲ್ಲದೆ ಬೃಹತ್ ಕೃತಿಯನ್ನು ರಚಿಸಿ ಜಗತ್ತಿನ ಹಲವು ಸಂಗತಿಗಳ ಬಗ್ಗೆ ಬರೆದವರು ದೇಸಾಯಿ ಅವರು. ಗಳಗನಾಥರು ಮತ್ತು ದೇಸಾಯಿ ಇಬ್ಬರೂ ಅಗಡಿ ಗ್ರಾಮದವರು, ಇವರ ಕೊಡುಗೆ ಅಪಾರ ಎಂದು ಆಂಜನೇಯ ಈಳಿಗೇರ ನುಡಿದರು.

ಇಲ್ಲಿಯ ಅಗಡಿಯಲ್ಲಿರುವ ಗುಡ್ಡಪ್ಪ ಚಟ್ರಮ್ಮನವರ ಅವರ ಮನೆಯಲ್ಲಿ ಮನೆಗೊಂದು ಗ್ರಂಥಾಲಯದ ಉದ್ಘಾಟನೆ ನೆರವೇರಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗಯ್ಯ ಹಿರೇಮಠ ಮಾತನಾಡಿ, ಓದಿನ ಅಭಿರುಚಿ ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ ಗ್ರಂಥಾಲಯಗಳಿಂದ ಇಂತಹ ಅಭಿರುಚಿ ಬೆಳೆಸಿ ಒಳ್ಳೆಯ ಸಮಾಜ ಕಟ್ಟಬಹುದು ಎಂದರು.

ಅಧ್ಯಕ್ಷತೆಯನ್ನು ಪ್ರಾಚಾರ್ಯ ಸೋಮನಾಥ ವಹಿಸಿಕೊಂಡು ಮಾತನಾಡಿ, ಪುಸ್ತಕ ಪ್ರೀತಿಯು ಇಂದು ಕಡಿಮೆಯಾಗುತ್ತಿದೆ. ಪುಸ್ತಕ ಮನೆಯೆಂದರೆ ಅರಿವಿನ ಮನೆ ಇದ್ದಂತೆ. ಇಂತಹ ಅರಿವು ನಶಿಸಿ ಹೋಗುತ್ತಿರುವುದು ಕಳವಳಕಾರಿ ಎಂದರು. ವೇದಿಕೆಯಲ್ಲಿ ಹೇಮಂತ ಬಸೆಗಣ್ಣಿ, ಪುಟ್ಟಪ್ಪ ಈಳಿಗೇರ, ಸುಭಾಸ ಮಡಿವಾಳರ ಮುಂತಾದವರಿದ್ದರು. ಕಾರ್ಯಕ್ರಮವನ್ನು ಡಾ.ಲಕ್ಷ್ಮೀಕಾಂತ ಮಿರಜಕರ ನಡೆಸಿಕೊಟ್ಟರು. ಸಂಚಾಲಕರಾದ ಎಸ್.ಆರ್. ಹಿರೇಮಠ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈರಣ್ಣ ಬೆಳವಡಿ ವಂದಿಸಿದರು.



ಸಭೆಯಲ್ಲಿ ಅವ್ಯವಸ್ಥೆ: ಮುಖಂಡರ ಅಸಮಾಧಾನ



ಹಾವೇರಿ: ಇಲ್ಲಿನ ತಹಶೀಲ್ದಾರ ಕಚೇರಿಯಲ್ಲಿ ಮಂಗಳವಾರ ವಿವಿಧ ರಾಜಕೀಯ ಪಕ್ಷಗಳ ಬಿಎಲ್‌ಒ 1 ಮತ್ತು 2ಗಳಿಗೆ ಸಭೆಯನ್ನು ಕರೆಯಲಾಗಿತ್ತು. ಸಭೆಗೆ ತಹಶೀಲ್ದಾರ್ ಆಗಲಿ ಉಪವಿಭಾಗಾಧಿಕಾರಿಗಳು ಪಾಲ್ಗೊಳ್ಳದೇ ತಹಶೀಲ್ದಾರ ಕಚೇರಿಯ ಎಸ್‌ಡಿಎ ಸಭೆ ನಡೆಸಲು ಮುಂದಾಗಿದ್ದರು. ಅಲ್ಲದೇ ಸಭೆಯಲ್ಲಿ ಅವ್ಯವಸ್ಥೆ, ಸಭೆಯನ್ನು ಸರಿಯಾದ ಜಾಗದಲ್ಲಿ ನಡೆಸದೇ ಇರುವುದನ್ನ ಖಂಡಿಸಿ, ತಾಲೂಕಾಡಳಿತದ ನಿರ್ಲಕ್ಷ್ಯಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಎಲ್ಲಾ ರಾಜಕೀಯ ಪಕ್ಷದ ಮುಖಂಡರು ಸಭೆಯನ್ನು ಬಹಿಷ್ಕರಿಸಿ ಹೊರನಡೆದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಪ್ರಭು ಬಿಷ್ಟನಗೌಡ್ರ, ಕರಬಸಪ್ಪ ಹಲಗನ್ನವರ, ರಮೇಶ ಮಾಳೋದೆ, ಜೆಡಿಎಸ್ ಪಕ್ಷದ ಬೇಪಾರಿ, ಬಿಜೆಪಿಯ ಪ್ರವೀಣ ಶೆಟ್ಟರ, ವಿಜಯಕುಮಾರ ಚಿನ್ನಿಕಟ್ಟಿ, ಸಿ.ಎಸ್. ಲಕ್ಮೇಶ್ವರಮಠ, ಶಿವಯೋಗಿ ಹುಲಿಕಂತಿಮಠ, ಪ್ರಕಾಶ ಹಂದ್ರಾಳ ಸೇರಿದಂತೆ ವಿವಿಧ ರಾಜಕೀಯ ಪಕ್ಷದ ಮುಖಂಡರು ಇದ್ದರು.

ವಿದ್ಯುತ್ ಸ್ಪರ್ಶಿಸಿ ಕಾರ್ಮಿಕ ಸಾವು

ಹಾನಗಲ್ಲ: ತಾಲೂಕಿನ ಬೊಮ್ಮನಹಳ್ಳಿ ಆರೋಗೊಪ್ಪ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶಿಸಿ ಕಾರ್ಮಿಕನೋರ್ವ ಮೃತಪಟ್ಟ ಘಟನೆ ನಡೆದಿದೆ. ರಮೇಶ್ ಗೊಲ್ಲರ್ (38) ಮೃತಪಟ್ಟ ದುರ್ದೈವಿ ಆಗಿದ್ದಾನೆ. ವಿದ್ಯುತ್ ಕಂಬದಲ್ಲಿ ಕೆಲಸ ನಿರ್ವಹಿಸುತ್ತಿರುವ ವೇಳೆ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಿದ್ದಾನೆ. ಕಂಬದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಏಕಾಏಕಿ ವಿದ್ಯುತ್ ಬಂದಿದ್ದರಿಂದ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ. ಸ್ಥಳಕ್ಕೆ ಹೆಸ್ಕಾಂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕುಟುಂಬಕ್ಕೆ ಸೂಕ್ತವಾದ ಪರಿಹಾರ ನೀಡುವಂತೆ ಸ್ಥಳೀಯರು ಅಧಿಕಾರಿಗಳಿಗೆ ಒತ್ತಾಯಿಸಿದ್ದಾರೆ. ಈ ಕುರಿತು ಹಾನಗಲ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಗುರುಬಲದಿಂದ ಮನುಷ್ಯನ ಬಾಳು ಸುಭದ್ರ: ರಂಭಾಪುರಿ ಶ್ರೀ

ರಾಣೇಬೆನ್ನೂರ: ಶಿವನ ಸಾಕಾರ ರೂಪ ಶ್ರೀ ಗುರು. ಗುರು ದರ್ಶನವಾದರೆ ಶಿವದರ್ಶನವಾಯಿತೆಂಬ ನಂಬಿಕೆಯಿದೆ. ಜಗ ಬೆಳಗಲು ಸೂರ್ಯ ಬೇಕು. ಬಾಳುಬೆಳಗಲು ಗುರುಬೇಕು. ಗುರುಬಲದಿಂದ ಮನುಷ್ಯನ ಬಾಳು ಸುಭದ್ರಗೊಳ್ಳುವುದೆಂದು ಬಾಳೆಹೊನ್ನೂರು ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲೂಕಿನ ಆರೇಮಲ್ಲಾಪುರ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಗೋಪುರ ಕಳಸಾರೋಹಣ ಹಾಗೂ ಸಾಮೂಹಿಕ ವಿವಾಹ ಸಮಾರಂಭದ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಬ್ರಹ್ಮ ಸೃಷ್ಠಿ ಮಾಡಬಲ್ಲ, ವಿಷ್ಣು ಸಂರಕ್ಷಣೆ ಮಾಡಬಲ್ಲ, ಮಹೇಶ್ವರ ದುಷ್ಟ ಶಕ್ತಿ ನಾಶ ಮಾಡಬಲ್ಲ, ಈ ಮೂರು ಗುಣಗಳು ಶ್ರೀ ಗುರುವಿನಲ್ಲಿ ಅಡಕವಾಗಿವೆ ಎಂದರು.

ಸಾನ್ನಿಧ್ಯ ವಹಿಸಿದ ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳು ಮಾತನಾಡಿ, ಕಾಲ ಕಾಲಕ್ಕೆ ಉತ್ತಮ ಮಳೆಯಾಗಲಿ. ಉತ್ತಮ ಬೆಳೆ ಬೆಲೆ ಬಂದು ರೈತರು ಸುಖವಾಗಿ ಬಾಳಲಿ. ದೇಶ ಕಾಯುವ ಯೋಧ ಅನ್ನ ನೀಡುವ ರೈತ ಇವರನ್ನು ಯಾರೂ ಮರೆಯಬಾರದು. ಆರೇಮಲ್ಲಾಪುರ ಸದ್ಭಕ್ತರ ಭಕ್ತಿ ಅತ್ಯಂತ ಶ್ರೇಷ್ಠವಾದದ್ದು. ಸರ್ವರಿಗೂ ಭಗವಂತ ಸುಖ ಶಾಂತಿ ಅನುಗ್ರಹಿಸಲೆಂದು ಶುಭ ಹಾರೈಸಿದರು.

ಸಾನ್ನಿಧ್ಯ ವಹಿಸಿದ ಶ್ರೀ ಶ್ರೀಶೈಲ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಜಗದ್ಗುರುಗಳು

ಶ್ರೀ ಕಾಶೀ ಡಾ. ಚಂದ್ರಶೇಖರ ಜಗದ್ಗುರುಗಳು, ಕಾಶಿ ನೂತನ ಡಾ.ವಿಶ್ವಾರಾಧ್ಯ ಮಲ್ಲಿಕಾರ್ಜುನ ಜಗದ್ಗುರುಗಳು, ನೆಗಳೂರು ಹಿರೇಮಠದ ಗುರು ಶಾಂತೇಶ್ವರ ಶಿವಾಚಾರ್ಯರು ಮಾತನಾಡಿದರು.

ಶಾಸಕ ಪ್ರಕಾಶ ಕೋಳಿವಾಡ ಕಾರ್ಯಕ್ರಮ ಉದ್ಘಾಟಿಸಿದರು. ಮಾಜಿ ಶಾಸಕರಾದ ಅರುಣ ಕುಮಾರ ಪೂಜಾರ, ಹೆಚ್.ಎಸ್.ಶಿವಶಂಕರ್, ವಿರೂಪಾಕ್ಷಪ್ಪ ಬಳ್ಳಾರಿ, ಹಿರಿಯ ನ್ಯಾಯವಾದಿ ಪಿ.ಆರ್. ಕುಪ್ಪೇಲೂರ ಮಾತನಾಡಿದರು.

ಹೊನ್ನಾಳಿ ಹಿರೇಕಲ್ಮಠ ವಡೆಯರ ಡಾ. ಚನ್ನಮಲ್ಲಿಕಾಜುನ ಶಿವಾಚಾರ್ಯ ಶ್ರೀಗಳು, ಹಾವೇರಿ ಕರ್ಜಗಿಮಠ ಶಿವಯೋಗ ಶಿವಾಚಾರ್ಯ ಶ್ರೀಗಳು, ಅಕ್ಕಿಆಲೂರು ಹಿರೇಮಠ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು, ದಿಂಡದಹಳ್ಳಿ ಹಿರೇಮಠ ಪಶುಪತಿ ಶಿವಾನಂದ ಶಿವಾಚಾರ್ಯ ಶ್ರೀಗಳು, ಲಿಂಗದಹಳ್ಳಿ ಹಿರೇಮಠ ವೀರಭದ್ರ ಶಿವಾಚಾರ್ಯ ಶ್ರೀಗಳು, ಹಾವೇರಿ ಬಣ್ಣದಮಠ ಅಭಿನವ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು, ರಾಣೆಬೆನ್ನೂರು ಹಿರೇಮಠ ಶಿವಯೋಗಿ ಶಿವಾಚಾರ್ಯ ಶ್ರೀಗಳು, ಮಳಲಿ ಸಂಸ್ಥಾನಮಠ, ಮಣಕೂರು, ನಾಗವಂದ, ಹಿರೇಮಣಕಟ್ಟಿ, ಗಂಜಿಗಟ್ಟಿ, ಕೂಡಲ, ಹರಪನಹಳ್ಳಿ, ರಾಂಪುರ ಬೃಹನ್ಮಠದ ಶ್ರೀಗಳವರು ಉಪಸ್ಥಿತರಿದ್ದರು.

ಕೆ.ಸಿ.ನಾಗರಜ್ಜಿ ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಝೀ ಟಿ.ವಿ.ಸರಿಗಮ ಖ್ಯಾತಿಯ ದಿಯಾ ಹೆಗಡೆ ವಿಶೇಷ ಆಹ್ವಾನಿತರಾಗಿದ್ದರು.

ಈ ಸಂದರ್ಭದಲ್ಲಿ ಕಲ್ಮೇಶ್ವರ ದೇವರ ಮರು ಪ್ರಾಣ ಪ್ರತಿಷ್ಠಾಪನೆ, ಕರಗಲ್ಲು ಸ್ಥಾಪನೆ ನಡೆಯಿತು.



ಫಲಾನುಭವಿ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿದ ಶಾಸಕ ಮಾನೆ

ಹಾನಗಲ್ಲ: ಸದಾಕಾಲ ಬಡವರಿಗಾಗಿ ಕಾರ್ಯಕ್ರಮಗಳ ಮೂಲಕಶಕ್ತಿ ತುಂಬಿ, ರಕ್ಷಣೆಕೊಡುತ್ತಿರುವ ಕಾಂಗ್ರೆಸ್ ಸರ್ಕಾರ ಇದೀಗ ಯಾವುದೇ ದಾಖಲೆಗಳಿಲ್ಲದೇ ಹಾಗೆಯೇ ವಾಸಿಸುತ್ತಿದ್ದ ತಾಲೂಕಿನ 13 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಕಳೆದ 2 ವರ್ಷಗಳಿಂದ ನಿರಂತರ ಶ್ರಮ ವಹಿಸಿ ಶಾಶ್ವತ ಮನೆ ಮಾಲಿಕತ್ವ ದೊರಕಿಸಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಮಾಸನಕಟ್ಟಿ ಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ವಿವಿಧ ಕಂದಾಯ ಗ್ರಾಮ, ಉಪ ಗ್ರಾಮಗಳ ಒಟ್ಟು 483 ಫಲಾನುಭವಿ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್, ನೋಂದಣಿ, ಸರ್ವೆ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯ ಶ್ರಮ ಈ ಕಾರ್ಯದಲ್ಲಿ ಹೆಚ್ಚಿದೆ. ಕನಿಷ್ಠ 10 ಲಕ್ಷ ರೂ. ಬೆಲೆ ಬಾಳುವ ಆಸ್ತಿಯ ಮಾಲಿಕತ್ವ ಬಡ ಮತ್ತು ಮಧ್ಯಮ ವರ್ಗಗಳಿಗೆ ಸೇರಿದ ಕುಟುಂಬಗಳಿಗೆ ಸಿಕ್ಕಿದೆ. ಹಕ್ಕುಪತ್ರ ವಿತರಿಸುವ ಕೆಲಸ ಒಂದೇ ದಿನದಲ್ಲಿ ಆಗಿಲ್ಲ, ಇದರ ಹಿಂದಿನ ಪರಿಶ್ರಮ ದೊಡ್ಡದಿದೆ. ಕಾಂಗ್ರೆಸ್ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿದ್ದರಿಂದಲೇ ಇಷ್ಟೊಂದು ದೊಡ್ಡ ಪ್ರಮಾಣದ ಕುಟುಂಬಗಳು ಬದುಕಿನಲ್ಲಿ ನೆಮ್ಮದಿ ಕಾಣುತ್ತಿವೆ ಎಂದು ಹೇಳಿದ ಅವರು ತುರ್ತು ಸಂದರ್ಭದಲ್ಲಿ ಈ ಆಸ್ತಿ ನೆರವಿಗೆ ಬರಲಿದೆ. ಅವಶ್ಯತೆಗೆ ತಕ್ಕಂತೆ ಸಾಲ ಪಡೆಯಬಹುದು, ಉತ್ತಮ ಮನೆ ಕಟ್ಟಿಕೊಳ್ಳಬಹುದು, ಅನಿವಾರ್ಯ ಸಂದರ್ಭ ಬಂದೊದಗಿದರೆ ಮಾರಾಟ ಸಹ ಮಾಡಬಹುದು ಎಂದರು.

ತಹಶೀಲ್ದಾರ್ ರೇಣುಕಾ ಎಸ್. ಮಾತನಾಡಿದರು. ಆಲದಕಟ್ಟಿ ಗ್ರಾಮದ 107, ಇನಾಂ ದ್ಯಾಮನಕೊಪ್ಪ 87, ವಳಗೇರಿ 129, ಮಾಸನಕಟ್ಟಿ ಗ್ರಾಮದ 160 ಫಲಾನುಭವಿ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲಾಯಿತು. ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ಹಾನಗಲ್ ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ ಸೇರಿದಂತೆ ತಾಲೂಕಿನ ಅನೇಕ ಕಾಂಗ್ರೆಸ್ ಮುಖಂಡರು, ಗ್ರಾಮಸ್ಥರು, ಕಂದಾಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.



ಸರ್ಕಾರಿ ಮತ್ತು ಖಾಸಗಿ ಜಮೀನಿನಲ್ಲಿ ಮನೆ ಕಟ್ಟಿಕೊಂಡವರಿಗೆ ಮಾಲಿಕತ್ವ ನೀಡುವ ಕಾಯ್ದೆಯನ್ನು ಹಿಂದಿನ ಬಾರಿ ಸಿದ್ಧರಾಮಯ್ಯ ಮುಖ್ಯಮಂತ್ರಿ ಇದ್ದಾಗಲೇ ಜಾರಿಗೆ ತರಲಾಗಿತ್ತು. ಆದರೆ ಬಿಜೆಪಿ ಸರ್ಕಾರ ಈ ಕಾಯ್ದೆಯ ಲಾಭವನ್ನು ಜನರಿಗೆ ಮಾಡಿಕೊಟ್ಟಿರಲಿಲ್ಲ, ಇದೀಗ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಜನರಿಗೆ ಶಾಶ್ವತ ಪರಿಹಾರ ಕಲ್ಪಿಸಿ, ರಕ್ಷಣೆ ಕೊಡುವ ಕೆಲಸ ಮಾಡುತ್ತಿದೆ.

■ ಶ್ರೀನಿವಾಸ ಮಾನೆ, ಶಾಸಕ

ಕಿರುಸುದ್ದಿ

ರಜಾಕ ನದಾಫಗೆ ಸಮೀರವಾಡಿ ದತ್ತಿ ಪ್ರಶಸ್ತಿ



ಕಲಾದಗಿ: ಗ್ರಾಮದ ಪ್ರತಿಭಾವಂತ ಕವಿ, ನಾಟಕಕಾರ, ಚಿತ್ರಕಲಾವಿದ ರಜಾಕ ನದಾಫ ಅವರು ಬರೆದು ಪ್ರದರ್ಶನಗೊಂಡಿರುವ 'ಬಡವರ ಕಣ್ಣೀರಿಗೆ ಕೊನೆಯಿಲ್ಲವೇ' ನಾಟಕ ಕೃತಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿ ವರ್ಷ ಕೊಡಮಾಡುವ 'ಸಮೀರವಾಡಿ ದತ್ತಿ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. ಚಿತ್ರಕಲಾವಿದರಾಗಿರುವ ಅವರು ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪ್ರದರ್ಶನಗೊಳ್ಳುವ ನಾಟಕ ಬರೆಯುವುದರ ಮೂಲಕ 'ಕವಿ'ಯಾಗಿಯೂ ಹೆಸರುವಾಗಿಯಾಗಿದ್ದರು. ಸಮೀರವಾಡಿ ದತ್ತಿ ಪ್ರಶಸ್ತಿ'ಯನ್ನು ಪಡೆದಿರುವ ರಜಾಕ ನಧಾಪ ಅವರನ್ನು ಸ್ಥಳಿಯ ಕನ್ನಡ ಸಾಹಿತ್ಯ ಪರಿಷತ್ತಿನ ವಲಯ ಘಟಕದವರು, ಸಾಯಿಬಾಬಾ ಸೇವಾ ಸಮಿತಿಯವರು, ಹಣ್ಣು ಬೆಳೆಗಾರರ ವಿದ್ಯಾಸಂಸ್ಥೆಯವರು ಸೇರಿದಂತೆ ಗ್ರಾಮದ ವಿವಿಧ ಸಂಘಟನೆಯವರು ಅಭಿನಂದಿಸಿದ್ದಾರೆ. ಮೇ 24ರಂದು ಭಾನುವಾರ ಮುಧೋಳದಲ್ಲಿ ಖ್ಯಾತ ವೈದ್ಯ ಸಾಹಿತಿ ಡಾ.ಶಿವಾನಂದ ಕುಬಸದ ಅವರ ತೋಟದ ಮನೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಇಂದುಮತಿ ಮಾತಾಜಿ ಕುಶಲೋಪರಿ ವಿಚಾರಿಸಿದ ಶ್ರೀಗಳು



ಇಳಕಲ್: ಶ್ರವಣಬೆಳಗೊಳದಿಂದ ದೇಹಲಿಗೆ ಮೂರು ಗಾಲಿಯ ಸೈಕಲ್ ಮೇಲೆ ಪ್ರಯಾಣ ಮಾಡುತ್ತಿರುವ ಜೈನ ಸಮಾಜದ ಉತ್ತರಪ್ರದೇಶದ ವೈರಾಗ್ಯ ಯೋಗಿನಿ ಆರಿಕಾ 105 ಚಂದ್ರಮತಿ ಮಾತಾಜಿ ಅವರು ಇಳಕಲ್ ಮಾರ್ಗವಾಗಿ ಹೋಗುವಾಗ ಇಳಕಲ್ಲಿನ ಜೈನ ಸಮಾಜದ ಅಧ್ಯಕ್ಷ ಧನಪಾಲ ಪಾಟೀಲ ಅವರ ಮನೆಯಲ್ಲಿ ಆಹಾರ ಸೇವಿಸಿ ಪ್ರಯಾಣ ಬೆಳಿಸಿದರು. ಜೋಶಿ ಗಲ್ಲಿಯ ರಸ್ತೆಯಲ್ಲಿ ಪ್ರಯಾಣ ಮಾಡುತ್ತಿರುವದನ್ನು ಕಂಡ ಡಾ.ಗುರುಮಹಾಂತ ಶ್ರೀಗಳು ಮಾತಾಜಿಯವರನ್ನು ಭೇಟಿಯಾಗಿ ಅವರ ಪ್ರಯಾಣದ ಬಗ್ಗೆ ವಿಚಾರಿಸಿದರು.

ಸಂಚಾರಿ ನಿಯಮ ಪಾಲಿಸಿ



ವಿಜಯಪುರ: ದೇಶದ ರಸ್ತೆ ಅಪಘಾತಗಳಲ್ಲಿ ಸಾವಿಗೀಡಾಗುವವ ರ ಸಂಖ್ಯೆ ಪ್ರತಿ ವರ್ಷ ಹೆಚ್ಚಾಗುತ್ತಿದ್ದು, ಸಂಚಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅಗತ್ಯವಾಗಿದೆ ಬೆಳಗಾವಿ ಲೋಕಾಯುಕ್ತ ಕಚೇರಿ ಎಸ್ಪಿ ಪ್ರಸನ್ನ ದೇಸಾಯಿ ಹೇಳಿದರು.

ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಕಾನೂನು ಶಾಲೆಯಲ್ಲಿ ಸೋಮವಾರ ಹಮ್ಮಿಕೊಂಡ ಅಪಘಾತಗಳನ್ನು ಹೇಗೆ ನಿಯಂತ್ರಿಸಬೇಕು ಎಂಬ ವಿಷಯ ಕುರಿತು ವಿಶೇಷ ಉಪನ್ಯಾನ ನೀಡಿ, ಅವರು ಮಾತನಾಡಿದರು. ಕರ್ನಾಟಕ ಪೊಲೀಸ್ ಕಾಯ್ದೆ, 1963 ರ ಕುರಿತು ತಿಳಿಸಿದ ಅವರು, ಭಾರತದ ಪ್ರತಿ ರಾಜ್ಯಕ್ಕೂ ಪ್ರತ್ಯೇಕ ಪೊಲೀಸ್ ಕಾಯ್ದೆಗಳಿವೆ. ಕ್ರಿಮಿನಲ್ ನ್ಯಾಯ ವ್ಯವಸ್ಥೆ, ಹೆಚ್ಚುತ್ತಿರುವ ಸೈಬರ್ ಅಪರಾಧಗಳು, ಅವುಗಳ ಬಗ್ಗೆ ವಹಿಸಬೇಕಿರುವ ಮುಂಜಾಗ್ರತೆ, ವಿದ್ಯಾರ್ಥಿಗಳು ಡಿಜಿಟಲ್ ವೇದಿಕೆಗಳನ್ನು ಜಾಗರೂಕತೆಯಿಂದ ಬಳಸುವುದು, ಮಾದಕ ದ್ರವ್ಯಗಳ ದುಷ್ಪರಿಣಾಮಗಳು, ಧೂಮ್ರಪಾನದ ದುಷ್ಪರಿಣಾಮಗಳ ಕುರಿತು ತಿಳಿಸಿದರು.

ಬಿಎಲ್‌ಡಿಇ ಡೀಮ್ಡ್ ವಿವಿ ಸಮಕುಲಾಧಿಪತಿ ಡಾ.ವೈ.ಎಂ.ಜಯರಾಜ ಮಾತನಾಡಿ, ಸಂಚಾರಿ ನಿಯಮಗಳನ್ನು ಪಾಲಿಸುವುದು, ಹೆಲ್ಮೆಟ್ ಧರಿಸುವುದು ಮತ್ತು ವಾಹನ ಚಾಲನೆ ವೇಳೆ ವೇಗ ನಿಯಂತ್ರಣ ಕಾಪಾಡಿಕೊಳ್ಳುವುದರಿಂದ ಅಪಘಾತಗಳನ್ನು ಕಡಿಮೆ ಮಾಡಲು ಸಾಧ್ಯ. ದುಶ್ಚಟಗಳನ್ನು ಕೆಟ್ಟ ತೊರೆದು ಉತ್ತಮ ಆರೋಗ್ಯ ಮತ್ತು ಶಿಸ್ತಿನ ಜೀವನವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಕಾನೂನು ಶಾಲೆಯ ಪ್ರಾಚಾರ್ಯ ಡಾ.ರಘುವೀರ ಕುಲಕರ್ಣಿ, ವೈದ್ಯಕೀಯ ಕಾಲೇಜಿನ ಹಿರಿಯ ಉಪಪ್ರಾಚಾರ್ಯ ಡಾ.ವಿಜಯಕುಮಾರ ಕಲ್ಯಾಣಪ್ಪಗೋಳ, ಡೀಮ್ಡ್ ವಿವಿಯ ಸತೀಶ ಪಾಟೀಲ, ಬಿ.ಎಸ್.ಪಾಟೀಲ, ಈರಯ್ಯ ಮಠಪತಿ, ಫಾರೆನ್ಸಿಕ್ ಮೆಡಿಸೀನ್ ವಿಭಾಗದ ಅಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು. ಫಿಸಿಯೋಥೆರಪಿ ವಿಭಾಗದ ವಿದ್ಯಾರ್ಥಿನಿ ಐಶ್ವರ್ಯ ಕಟ್ಟಿ ಪ್ರಾರ್ಥಿಸಿದರು. ಲಾವಣ್ಯ ಕುಲಕರ್ಣಿ ಸ್ವಾಗತಿಸಿದರು. ನಿಖಿತಾ ನಿರೂಪಿಸಿದರು. ಶೇಷಾದ್ರಿ ಕೆ. ವಂದಿಸಿದರು.



ರಬಕವಿ-ಬನಹಟ್ಟಿ: ರಬಕವಿ ಚಂದುಕಾಕಾ ಸರಾಫ್‌ನಲ್ಲಿ ವಿಶ್ವ ತಾಯಂದಿರ ದಿನದ ಅಂಗವಾಗಿ ಏರ್ಪಡಿಸಿದ ಸಮಾರಂಭ ನಡೆಯಿತು. ಗಂಗಾ ಬುದ್ನಿ, ಶ್ರೀನಿಕ್ ಶೆಟ್ಟಿ, ಆನಂದ ಕರಡಿಮಠ, ಸಂಜು ನಾಯಿಕ, ಅಭಿಷೇಕ ಗೌರಾಜಿ ಸೇರಿದಂತೆ ಅನೇಕರಿದ್ದರು

ಬೃಹತ್ ಕ್ಯಾಂಪಸ್ ಡ್ರೈವ್ ಆಯೋಜನೆ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯಲ್ಲಿ ಐಕ್ಯೂಎಸಿ, ಪ್ಲೇಸ್ಮೆಂಟ್ ಶೆಲ್ ಹಾಗೂ ಹಳೆ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಬೃಹತ್ ಕ್ಯಾಂಪಸ್ ಡ್ರೈವ್ ಆಯೋಜಿಸಲಾಯಿತು. ಕ್ಯಾಂಪಸ್ ಡ್ರೈವ್‌ನಲ್ಲಿ 2022, 2023, 2024, 2025, 2026 ನೇ ಸಾಲಿನ ಬ್ಯಾಚ್‌ಗಳ ಬಿಎ, ಬಿಎಸ್ಸಿ, ಬಿಸಿಎ, ಬಿಬಿಎ, ಬಿ.ಕಾಂ, ಎಂಬಿಎ, ಎಂ.ಕಾಂ, ಎಂ.ಎಸ್ಸಿ ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳು, ಐಸಿಐಸಿಐ ಬ್ಯಾಂಕ್, ಬೆಂಗಳೂರಿನ ಅವಿರಾಟಾ ಡಿಫೆನ್ಸ್ ಸಿಸ್ಟಮ್ ಲಿಮಿಟೆಡ್ (ಎಂಎನ್‌ಸಿ), ಮತ್ತು ಆಟೋಲಿವ್ ಕಂಪನಿಗಳ ಮಹಾವಿದ್ಯಾಲಯಕ್ಕೆ ಭೇಟಿ ನೀಡಿಲಾಯಿತು. ಈ ವೇಳೆಯಲ್ಲಿ ವಿವಿಧ ಕಾಲೇಜುಗಳಿಂದ ಒಟ್ಟು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಂದೀಪಕುಮಾರ, ಮಾನವ ಸಂಪನ್ಮೂಲ (ಸಹಾಯಕ ವ್ಯವಸ್ಥಾಪಕ), ರಕ್ಷಿತ್, ಆಟೋಲಿವ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯಿಂದ ಮಂಜುಳಾ ಪಾಟೀಲ್, ಟೊಯೊಡಾ ಗೋಸೆ ಸೌತ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವರ್ಷಿತಾ ಇದ್ದರು.

ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಅನೀಲ ನಾಯಕ, ಐಕ್ಯೂಎಸಿ ಸಂಯೋಜಕ ಡಾ.ಪಿ.ಎಸ್.ಪಾಟೀಲ, ಪ್ಲೇಸ್ಮೆಂಟ್ ಸೆಲ್‌ನ ಅಧ್ಯಕ್ಷ ಪ್ರೊ.ಎಂ.ಎಸ್.ಜೇವೂರ ಮಹಾವಿದ್ಯಾಲಯದ ಬೋಧಕರು ಮತ್ತು ವಿದ್ಯಾರ್ಥಿಗಳು ಇದ್ದರು. ಪ್ರೊ.ಸರಸ್ವತಿ ಗೋನಾಳ ನಿರ್ವಹಿಸಿದರು.



ಗಲಗಲಿ: ಸಮೀಪದ ರಬಕವಿ ಗ್ರಾಮದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು. ಶಿಕ್ಷಕ ರವಿ ಪಾಟೀಲ ಉಪನ್ಯಾಸ ನೀಡಿದರು. ಪ.ಪೂ. ಶಿದ್ದಾನಂದ ಮಹಾಸ್ವಾಮಿಗಳು ಸಿದ್ಧಾರೂಢ ಮಠ ಬುದ್ನಿ, ಮಲ್ಲಿಕಾರ್ಜುನ ಹಿರೇಮಠ, ಸಮೀರ ಚಟ್ನಿಸೆ ಮುಂತಾದವರು ಪಾಲ್ಗೊಂಡಿದ್ದರು.

ಟಾಸ್ಕ್‌ಫೋರ್ಸ್ ಸಮಿತಿ ಸಭೆ | ಜಿಲ್ಲಾಧಿಕಾರಿ ಸಂಗಪ್ಪ ಅಭಿಮತ

ಬೆಂಬಲ ಬೆಲೆಯಲ್ಲಿ ಸೂರ್ಯಕಾಂತಿ ಖರೀದಿ

ಬಾಗಲಕೋಟೆ: ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್‌ಎಕ್ಯೂಝು ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನವನ್ನು ಪ್ರತಿ ಕ್ವಿಂಟಲ್‌ಗೆ 7,721-00 ರೂ.ಗಳಂತೆ ಪ್ರತಿ ಎಕರೆಗೆ ಗರಿಷ್ಟ 4 ಕ್ವಿಂಟಲ್‌ನಂತೆ ಪ್ರತಿ ರೈತರಿಂದ ಗರಿಷ್ಠ ಪ್ರಮಾಣ 20 ಕ್ವಿಂಟಲ್‌ನಂತೆ ಖರೀದಿ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿಂದು ಜರುಗಿದ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಗುಣಮಟ್ಟದ ಸೂರ್ಯಕಾಂತಿ ಖರೀದಿಗೆ ಜಿಲ್ಲೆಯಲ್ಲಿ ಒಟ್ಟು 17 ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ನೋಂದಣಿ ಪ್ರಕ್ರಿಯೆ ಆದೇಶದ ದಿನಾಂಕದಿಂದ 50 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 60 ದಿನಗಳ ವರೆಗೆ ನಿಗದಿಪಡಿಸಲಾಗಿದೆ. ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆ ಪ್ರಾರಂಭಿಸಲಾಗುತ್ತಿದೆ ಎಂದು ತಿಳಿಸಿದರು.

ಸೂರ್ಯಕಾಂತಿ ಗುಣಮಟ್ಟದ ಪ್ರಕಾರ ಗರಿಷ್ಟ ಮಿತಿಗಳು ಪ್ರತಿ ಕ್ವಿಂಟಲ್‌ಗೆ ಕಲ್ಮಶಗಳು (ವಿದೇಶಿ ವಸ್ತು) ಶೇ.2, ಒಡೆದ ಅಥವಾ ಒಡೆದ ಬೀಜಗಳು ಶೇ.3ರಷ್ಟು, ಹಾನಿಗೊಳಗಾದ ಮತ್ತು ಜೇರುಂಡೆ ಬೀಜಗಳು ಶೇ.4ರಷ್ಟು ಅಪಕ್ವ ಮತ್ತು ಕುಗ್ಗಿದ ಶೇ.5 ಹಾಗೂ ತೇವಾಂಶ ಶೇ.9ರಷ್ಟು ಇರುತ್ತದೆ. ಜಿಲ್ಲೆಯ ರೈತರು ನೋಂದಣಿಗಾಗಿ ಆಧಾರ ಕಾರ್ಡ್, ಪಹಣಿ ಪತ್ರಿಕೆ, ಆಧಾರ ಲಿಂಕ್ ಆಗಿರುವ ರಾಷ್ಟ್ರೀಕೃತ ಬ್ಯಾಂಕಿನ ಪಾಸ್‌ಬುಕ್ ಪ್ರತಿ ಸಲ್ಲಿಸಿ ನಿಗಧಿತ ಅವಧಿಯೊಳಗಾಗಿ ನೋಂದಣಿ ಮಾಡಿಕೊಂಡು ಮಾರಾಟ ಮಾಡಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸೂರ್ಯಪಾನ ಉತ್ಪನ್ನಕ್ಕೆ ಜಿಲ್ಲಾ ವ್ಯವಸ್ಥಾಪಕರು, ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ, ಬಾಗಲಕೋಟೆ (9900553056), ಸಹಾಯಕ ನಿರ್ದೇಶಕರು ಎಪಿಎಂಸಿ, ಬಾಗಲಕೋಟೆ (9035353912) ಅವರನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ, ಎಪಿಎಂಸಿ ಸಹಾಯಕ ನಿರ್ದೇಶಕ ಬಿ.ಎಸ್.ಬಾವಿಹಾಳ, ವಿವಿಧ ಎಪಿಎಂಸಿ ಕಾರ್ಯದರ್ಶಿಗಳಾದ ರವಿ ರಾಠೋಡ, ರತ್ನಾಕರ ಎ.ವಾಯ್, ದೇವರಾಜ ಪಟ್ಟಣಶೆಟ್ಟಿ, ಆರ್. ಎಂ.ದಂಡೀನ, ವಿ.ಡಿ.ಪಾಟೀಲ, ಆಹಾರ ಇಲಾಖೆಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಅಂಗಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಖರೀದಿ ಕೇಂದ್ರಗಳ ವಿವರ

ಬಾಗಲಕೋಟೆ ತಾಲೂಕಿನ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ ಖಜ್ಜಿಡೋಣಿ (9901106360), ಟಿಎಪಿಸಿಎಂಎಸ್ ಬಾಗಲಕೋಟೆ (7353861868), ಬಾದಾಮಿ ತಾಲೂಕಿನ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ ಕಗಲಗೊಂಬ (9611859963), ಕೆಂದೂರ (9480410494), ನಂದಿಕೇಶ್ವರ (7624951919), ಪಿ.ಕೆ.ಪಿ.ಎಸ್ ಕೆರೂರ (9972301729), ಮುಧೋಳ ತಾಲೂಕಿನ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ ಜುನ್ನೂರ (7022544942), ಬೀಳಗಿ ತಾಲೂಕಿನ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ ಸೊನ್ನ (9632289239), ಟಿ.ಎ.ಪಿ.ಸಿ.ಎಂ.ಎಸ್ ಬೀಳಗಿ (7019682890), ಹುನಗುಂದ ತಾಲೂಕಿನ ಟಿ.ಎ.ಪಿ.ಸಿ.ಎಂ.ಎಸ್, ಹುನಗುಂದ (9480262655), ಎಫ್‌ಪಿಓ ಸೂಳೇಭಾವಿ (9449762433), ಜಮಖಂಡಿ ತಾಲೂಕಿನ ಟಿ.ಎ.ಪಿ.ಸಿ.ಎಂ.ಎಸ್, ಜಮಖಂಡಿ (9448920992), ಇಲಕಲ್ಲ ತಾಲೂಕಿನ ಪಿ.ಕೆ.ಪಿ.ಎಸ್, ನಂದವಾಡಗಿ (9902377067), ಪಿ.ಕೆ.ಪಿ.ಎಸ್ ಕರಡಿ (9110402689) ಹಾಗೂ ಜಿಎಫ್‌ಪಿಸಿಎಲ್ ಇಳಕಲ್ಲ (8660203311)

ವಿಶ್ವದ ಅತಿದೊಡ್ಡ ಪಕ್ಷ ಬಿಜೆಪಿ: ಗುಡಗುಂಟಿ

ಜಮಖಂಡಿ: ಮೊದಲಿದ್ದ ಜನಸಂಘವು ಭಾರತೀಯ ಜನತಾ ಪಕ್ಷವು ರಾಜಕೀಯ ಪಕ್ಷವಾಗಿದೆ. ರಾಷ್ಟ್ರದ ನಿರ್ಮಾಣ ಕಾರ್ಯವನ್ನು ತನ್ನ ಗುರಿಯನ್ನಾಗಿ ಪ್ರತಿ ಮೂರು ವರ್ಷಕ್ಕೊಮ್ಮೆ ಸದಸ್ಯತ್ವ ಅಭಿಯಾನ ಹಮ್ಮಿಕೊಂಡು ವಿಶ್ವದ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ತಾಲೂಕಿನ ಸಿದ್ದಾಪುರ ಗ್ರಾಮದ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆಯ ಆವರಣದ ಪುಷ್ಪಾತಾಯಿ ಗುಡಗುಂಟಿ ಶಾಲಾ ಆವರಣದ ಸಭಾ ಭವನದಲ್ಲಿ ಭಾರತೀಯ ಜನತಾ ಪಕ್ಷವು ಹಮ್ಮಿಕೊಂಡಿದ್ದ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನದ ಅಂಗವಾಗಿ ಏರ್ಪಡಿಸಿದ್ದ ಮಂಡಲ ಪ್ರಶಿಕ್ಷಣ ವರ್ಗದ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಪಕ್ಷದಿಂದ ಹಮ್ಮಿಕೊಳ್ಳುವ ಸಾರ್ವಜನಿಕ ಹಿತಾಸಕ್ತಿಯ ಕಾರ್ಯಗಳು ಹಾಗೂ ದೇಶದ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಸಾಕಷ್ಟು ಜನ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ. ಭಾಜಪಾ ಕಟ್ಟಿ ಬೆಳೆಸಿದ ಹಲವಾರು ಪ್ರಮುಖರು ಹೇಳಿದಂತೆ ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು ಎಂದು ಹೇಳಿದರು.

ರಾಜ್ಯ ಪ್ರಶಿಕ್ಷಣ ಸಂಚಾಲಕ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಮಾತನಾಡಿ, ಪಕ್ಷಕ್ಕಿಂತ ರಾಷ್ಟ್ರ ಮೊದಲು ಎಂದು ನಂಬಿದ ಪಕ್ಷವು ಅನೇಕ ಮಹನೀಯರ ಶ್ರಮದಿಂದ ಇಂದು ಬೆಳೆದು ನಿಂತಿದೆ ಎಂದರು. 1952ರಂದು ಜನ ಸಂಘದಿಂದ ಪ್ರಾರಂಭವಾದ ಪಕ್ಷವು 1980ರಲ್ಲಿ ಭಾರತೀಯ ಜನತಾ ಪಕ್ಷವಾಗಿ ಹೊರಹೊಮ್ಮಿದೆ ಈ ಸಂಘಟನೆಗೆ ದೀನದಯಾಳಜಿ, ಶ್ಯಾಮಾಪ್ರಸಾದ ಮುಖರ್ಜಿಯವರಂತಹ ಧೀಮಂತ ನಾಯಕರ ಬಲಿದಾನವೂ ಸಹ ಆಗಿದ್ದನ್ನು ಕಾರ್ಯಕರ್ತರು ಸ್ಮರಿಸಿಕೊಳ್ಳಬೇಕು ಎಂದು ಹೇಳಿದರು.

ನಗರ ಮಂಡಲ ಅಧ್ಯಕ್ಷ ಅಜೇಯ ಕಡಪಟ್ಟಿ, ಗ್ರಾಮೀಣ ಮಂಡಲ ಅಧ್ಯಕ್ಷ ಮಲ್ಲು ದಾನಗೌಡ, ಶಶಿಕಾಂತ ವಿಶ್ವಬ್ರಾಹ್ಮಣ, ಸಂಗು ದಳವಾಯಿ, ಈಶ್ವರ ಆದೆಪ್ಪನವರ, ಮಹಾದೇವ ನ್ಯಾಮಗೌಡ, ಶಂಕರ ಹುನ್ನೂರ, ನಾಗಪ್ಪ ಅಂಬಿ, ಬಸವರಾಜ ಯಂಕಂಚಿ, ಡಾ.ರಾಕೇಶ ಲಾಡ ಇದ್ದರು. ಪ್ರಕಾಶ ಹುಗ್ಗೆನ್ನವರ ನಿರೂಪಿಸಿದರು, ಶಂಕರ ಕಾಳೆ ಸ್ವಾಗತಿಸಿದರು, ಗಣೇಶ ಶಿರಗಣ್ಣವರ ವಂದಿಸಿದರು.



ಕಾರ್ಮಿಕ ಕಾಯ್ದೆ ವಿರೋಧಿಸಿ ಪ್ರತಿಭಟನೆ

ವಿಜಯಪುರ: ನಾಲ್ಕು ಕಾರ್ಮಿಕ ಕಾಯ್ದೆ ಜಾರಿಗೊಳಿಸಿರುವುದನ್ನು ವಿರೋಧಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಪದಾಧಿಕಾರಿಗಳು ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಕಾರ್ಮಿಕ ಮುಖಂಡ ಲಕ್ಷ್ಮಣ ಹಂದ್ರಾಳ ಮಾತನಾಡಿ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ ನ.21, 2025ರಂದು ನಾಲ್ಕು ಕಾರ್ಮಿಕ ಸಂಹಿತೆಗಳ ಅನುಷ್ಠಾನಕ್ಕೆ ತರುವ ಅಂತಿಮ ಪ್ರಕಟನೆಯನ್ನು ಕೇಂದ್ರದ ಎನ್‌ಡಿಎ ಸರ್ಕಾರ ಅಂದು ಮಾಡಿತು. ಬಿಹಾರ ರಾಜ್ಯದಲ್ಲಿನ ವಿಧಾನ ಸಭಾ ಚುನಾವಣೆಗಳ ಗೆಲುವಿನ ಅಹಂಕಾರದೊಂದಿಗೆ ಈ ವಂಚನೆಯನ್ನು ಬಿಜೆಪಿ ಪಕ್ಷದ ನೇತೃತ್ವದಲ್ಲಿನ ಕೇಂದ್ರದ ಎನ್‌ಡಿಎ ಸರ್ಕಾರ ಮಾಡಿತು. ಈ ನಾಲ್ಕು ಸಂಹಿತೆಗಳಿಗೆ ನಿಯಮಾವಳಿಗಳನ್ನು ರೂಪಿಸಲು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರಲಾಗುತ್ತಿತ್ತು. ಈ ಸಂಹಿತೆಗಳಿಗೆ ಕೇಂದ್ರ ಸರ್ಕಾರವು ನಿಯಮಾವಳಿಗಳನ್ನು ಅಂತಿಮ ಪ್ರಕಟನೆ ಮಾಡದಿದ್ದ ಕಾರಣ ಈ ಸಂಹಿತೆಗಳು ಜಾರಿಗೆ ಬರಲಿಲ್ಲ. ಸದ್ಯ ಸರ್ಕಾರವು ಹಠಮಾರಿ ಧೋರಣೆಯೊಂದಿಗೆ ಕೇಂದ್ರ ಕಾರ್ಮಿಕ ಸಂಘಗಳ ಯಾವುದೇ ಮನವಿಗಳು, ಪ್ರತಿಭಟನೆಗಳು ಮತ್ತು ಮುಷ್ಕರಗಳನ್ನು ಲಕ್ಷಿಸದೆ, ಬಂಡವಾಳಶಾಹಿಗಳ ಬೇಡಿಕೆಗಳನ್ನು ಪೂರೈಸಲು ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಿದೆ. ಇದು ಅತ್ಯಂತ ದೇಶದ್ರೋಹಿ ಕ್ರಮವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಸಹ ಸಂಚಾಲಕ ಸುರೇಶ ಜೀಬಿ ಮಾತನಾಡಿ, ಹಲವು ದಶಕಗಳಿಂದ ಸಮರಧೀರ ಹೋರಾಟಗಳ ಮೂಲಕ ಗಳಿಸಲಾದ ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಹಾಗೂ ಸವಲತ್ತುಗಳನ್ನು ನಾಶಮಾಡುವ ಕ್ರಮಇದಾಗಿದೆ. ಬಂಡವಾಳಿಗರು ಮಾಡುತ್ತಿದ್ದ ಎಲ್ಲ ಕಾನೂನು ಉಲ್ಲಂಘನೆಗಳನ್ನು ಕಾನೂನು ಬದ್ಧಗೊಳಿಸುವುದಲ್ಲದೆ, ಕಾಯಂ ಉದ್ಯೋಗದ ಅವಕಾಶಗಳೇ ಭಾರತೀಯ ಯುವ ಪೀಳಿಗೆಗಳಿಗೆ ಇಲ್ಲದಂತೆ ಮಾಡುವ ಕ್ರಮವಾಗಿದೆ. ನವ ಗುಲಾಮಗಿರಿಗೆ ಹಾಲಿ ಹಾಗೂ ಬಾವಿ ಕಾರ್ಮಿರನ್ನು ಒಳಪಡಿಸುವ ಕುತಂತ್ರವಾಗಿದೆ. ಕೂಡಲೇ ಕೇಂದ್ರ ಸರ್ಕಾರದ ಈ ಪ್ರಜಾವಿರೋಧಿ ನಿರ್ಧಾರದ ಕಾರ್ಮಿಕ ಸಂಹಿತೆ ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಸುನಂದಾ ನಾಯಕ, ಭಾರತಿ ವಾಲಿ, ಸುರೇಖಾ ವಾಗ್ಮೋರೆ, ಲಾಲ್ ಅಹಮ್ಮದ ಶೇಖ, ಗೀತಾ ನಾಯಕ, ರಿಜ್ವಾನಾ ಕುರೋಶಿ, ರೇಣುಕಾ ಗುಂಡಪ್ಪನವರ, ಶ್ರೀದೇವಿ ವಗ್ಯಾನವರ, ಮಾಯಪ್ಪ ಪಾಂಡಿಚೇರಿ, ಬಸವರಾಜ ಬಿರಾದಾರ, ರಾಜಕುಮಾರ ವಾಲಿಕಾರ ಇದ್ದರು.



ಗುರಿ ತಲುಪಲು ವಿದ್ಯಾರ್ಥಿಗಳಿಗೆ ಶಿಸ್ತು, ಸಂಯಮ ಮುಖ್ಯ

ಸಿಂದಗಿ: ಸಿಂದಗಿ ಶೈಕ್ಷಣಿಕ ಕಾಶಿ. ಶೈಕ್ಷಣಿಕ ಕ್ಷೇತ್ರ ದಲ್ಲಿ ಸಾಧನೆ ಮಾಡಿರುವ ತಾಲೂಕು ಎಂದರೆ ಸಿಂದಗಿ ಎಂದು ಮುಖ್ಯಮಂತ್ರಿ ಪದಕ ಪುರಸ್ಕೃತರು, ಸಿಂದಗಿ ಪಿಎಸ್‌ಐ ಶ್ರೀಕಾಂತ ಕಾಂಬಳೆ ಹೇಳಿದರು.

ಪಟ್ಟಣದ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಜೀವನದಲ್ಲಿ ತಮ್ಮ ಗುರಿಯನ್ನು ತಲುಪಬೇಕಾದರೆ ಪ್ರತಿಭೆ, ಚಾಕುಚಕ್ಯತೆ, ಶಿಸ್ತು, ಸಂಯಮ ಬಹಳ ಅತ್ಯವಶ್ಯಕ ಎಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಸಂಸ್ಥೆಯ ಚೇರಮನ್ನರು ಡಾ.ಪ್ರಭುಸಾರಂಗದೇವ ಶ್ರೀಗಳು ಆಶೀರ್ವಚನ ನೀಡಿದರು. ಪ್ರಾಚಾರ್ಯ ಎಸ್.ಎಂ.ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಸಹ ಕಾರ್ಯದರ್ಶಿ ಅಶೋಕ ವಾರದ, ಜಿ.ವಿ.ಪಾಟೀಲ, ಪ್ರಧಾನ ಕಾರ್ಯದರ್ಶಿ ಸಂಗಮ್ಮ ಪೂಜಾರಿ, ಆರ್.ಡಿ.ಪಾಟೀಲ ಕಾಲೇಜಿನ ಪ್ರಾಚಾರ್ಯ ಭೀಮನಗೌಡ ಸಿಂಗನಳ್ಳಿ, ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಜೆ.ಸಿ.ನಂದಿಕೋಲ ಮಾತನಾಡಿದರು. ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಜೆ.ಸಿ.ನಂದಿಕೋಲ, ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯದಿಂದ ನಡೆಯುವ 2024-2025ನೇ ಸಾಲಿನ ಪದ್ಮರಾಜ ಮಹಿಳಾ ಮಹಾವಿದ್ಯಾಲಯದ ಬಿ.ಎಸ್.ಡಬ್ಲ್ಯೂ ಪದವಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ (ಚಿನ್ನದ ಪದಕ) ಪಡೆದ ವಿದ್ಯಾರ್ಥಿನಿ ಮೀನಾಜ ಗೋಲಗೇರಿ, ನಾಲ್ಕನೇ ಸ್ಥಾನ ಪಡೆದ ವಿದ್ಯಾರ್ಥಿನಿ ರಿಯಾನಾಬೇಗಂ ಬಂಕಲಗಿ, ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯಕ್ಕೆ ಬ್ಲೂ ಆಗಿ ಆಯ್ಕೆಯಾದ ವಿದ್ಯಾರ್ಥಿನಿಯರಾದ ಸಿದ್ದಮ್ಮ ಬಿರಾದಾರ ಹಾಗೂ ಶೈಲಜಾ ಪಾಟೀಲ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಮಹಿಳಾ ಪಪೂ ಕಾಲೇಜಿನ ನಿವೃತ್ತ ಪ್ರಾಚಾರ್ಯ ಎಮ್.ಎಸ್.ಹೈಯಾಳಕರ, ಪ್ರಾಚಾರ್ಯ ವಿ.ಡಿ.ಪಾಟೀಲ, ವಿಶ್ವನಾಥ ನಂದಿಕೋಲ, ಮಹಾವಿದ್ಯಾಲಯದ ಸಿಬ್ಬಂದಿಗಳಾದ ಮಹಾಂತೇಶ ನೂಲಾನವರ, ಉಮೇಶ ಪೂಜೇರಿ, ಗಿರೀಶ ಕುಲಕರ್ಣಿ, ಮುರ್ತುಜಬಿಬೇಗಂ ಬಿರಾದಾರ, ನಿಲಮ್ಮ ಬಿರಾದಾರ, ಭಾಗ್ಯಶ್ರೀ ನಂದಿಮಠ, ಸರೋಜಿನಿ ಹಿರೇಮಠ, ಎಸ್.ಎಸ್.ಕಲಶೆಟ್ಟಿ, ಎಸ್.ಸಿ.ದುದ್ದಗಿ, ಮಂಗಳಾ ಈಳಗೇರ, ಡಿ.ಎಂ.ಪಾಟೀಲ್, ಮಮತಾ ಹರನಾಳ, ಶಿವಶಂಕರ ಕುಂಬಾರ, ಬಸು, ವಿಜಯಲಕ್ಷ್ಮೀ ಭಜಂತ್ರಿ, ಉಪನ್ಯಾಸಕ ಎ.ಆರ್., ಕಾರ್ಯಾಧ್ಯಕ್ಷೆ ಭ್ಯಾಗ್ಯ ಬಬಲೇಶ್ವರ, ಜಿ.ಎ.ನಂದಿಮಠ ಸೇರಿದಂತೆ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



7,721 ರೂ. ಬೆಂಬಲ ಬೆಲೆಯಡಿ ಸೂರ್ಯಕಾಂತಿ ಖರೀದಿ

ವಿಜಯಪುರ: 2026 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನವನ್ನು ಪ್ರತಿ ಕ್ವಿಂಟಾಲ್‌ಗೆ 7,721 ರೂ. ಬೆಂಬಲೆ ಬೆಲೆಯಡಿ ಖರೀದಿಗೆ ರೈತರ ನೋಂದಣಿಯನ್ನು 50 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 60 ದಿನಗಳವರೆಗೆ ನಿಗದಿಪಡಿಸಿ ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆ ಪ್ರಾರಂಭಿಸಲು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅಧ್ಯಕ್ಷತೆಯಲ್ಲಿರುವ ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ.

ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಜಿಲ್ಲೆಯಲ್ಲಿ ಬೆಂಬಲ ಬೆಲೆಯಡಿ ಸೂರ್ಯಕಾಂತಿ ಉತ್ಪನ್ನ ಖರೀದಿಗಾಗಿ ಜಿಲ್ಲೆಯ ಬಬಲೇಶ್ವರ, ಸವನಹಳ್ಳಿ, ಬೆಳ್ಳುಬ್ಬಿ, ತಾಜಪುರ, ವಿಜಯಪುರ, ಮುದ್ದೇಬಿಹಾಳ, ತಾಳಿಕೋಟಿ, ತಂಗಡಗಿ, ಇಂಡಿ, ಚಡಚಣ, ಹಲಸಂಗಿ, ಸಿಂದಗಿ, ಬಸವನಬಾಗೇವಾಡಿ ಸೇರಿದಂತೆ ಒಟ್ಟು 13 ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ನಾಫೆಡ್ ಸಂಸ್ಥೆಯನ್ನು ಕೇಂದ್ರದ ಖರೀದಿ ಏಜೆನ್ಸಿಯಾಗಿ, ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ ಸಂಸ್ಥೆಯನ್ನು ರಾಜ್ಯ ಮಟ್ಟದ ಖರೀದಿ ಏಜೆನ್ಸಿಯನ್ನಾಗಿ ನೇಮಿಸಲಾಗಿದ್ದು, ನಾಫೆಡ್ ಸಂಸ್ಥೆಗಳ ಮೂಲಕ ಖರೀದಿ ಕೇಂದ್ರಗಳಲ್ಲಿ ನೋಂದಣಿಯೊಂದಿಗೆ ಖರೀದಿ ಪ್ರಾರಂಭಿಸುವಂತೆ ಜಿಲ್ಲಾ ವ್ಯವಸ್ಥಾಪಕರಿಗೆ ಸೂಚಿಸಲಾಯಿತು.

ಸಹಕಾರ ಸಂಘಗಳ ಉಪನಿಬಂಧಕರು, ಕೆಓಎಫ್ ಜಿಲ್ಲಾ ವ್ಯವಸ್ಥಾಪಕರು, ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರು, ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆ ಸಮಿತಿ ಸದಸ್ಯ ಕಾರ್ಯದರ್ಶಿ ಶಿವಾನಂದ ಗೋರೆ ಇತರರು ಇದ್ದರು.

ಉತ್ತಮ ನಾಯಕನಾಗಿದ್ದ ತೀರ್ಥಪ್ಪನವರ



ಬಾದಾಮಿ: ಮೂರು ಬಾರಿ ಪುರಸಭೆ ಸದಸ್ಯರಾಗಿ ಆಯ್ಕೆಯಾಗಿದ್ದ ದಿಂ.ಬಸವರಾಜ ತೀರ್ಥಪ್ಪನವರ ಅವರು ಜನರ ಧ್ವನಿಯಾಗಿದ್ದರು ಎಂದು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪೂರ ಹೇಳಿದರು.

ನಗರದ ಹೊರವಲಯದಲ್ಲಿರುವ ತೀರ್ಥಪ್ಪನವರ ಲೇಔಟ್‌ನಲ್ಲಿ ದಿ.ಬಸವರಾಜ್ ತೀರ್ಥಪ್ಪನವರ ಅವರ ಪ್ರಥಮ ಪುಣ್ಯ ಸ್ಮರಣೆ ಅಂಗವಾಗಿ ದಿಂ.ಬಸವರಾಜ್ ತೀರ್ಥಪ್ಪನವರ ಅವರ ಮೂರ್ತಿ ಪ್ರತಿಷ್ಠಾಪಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಜಿಪಂ ಮಾಜಿ ಸದಸ್ಯ ಹನಮಂತ ಮಾವಿನಮರದ ಮಾತನಾಡಿ, ಎಲ್ಲ ಜನರೊಂದಿಗೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದರು, ಬಡಜನರಿಗೆ ಸಹಾಯ ಮಾಡುವ ಮೂಲಕ ಜನಮಾನಸದಲ್ಲಿ ಉಳಿದಿದ್ದಾರೆ ಎಂದರು. ಮುಖಂಡರಾದ ಎಂ.ಎಸ್.ರುದ್ರಗೌಡ್ರ, ಆರ್.ಬಿ ಸಂಕದಾಳ, ರವೀಂದ್ರ ಮೂಲಿಮನಿ, ಬಿ.ಎಸ್.ಪಾಟೀಲ, ಶಂಕ್ರಪ್ಪ ಉಳ್ಳಾಗಡ್ಡಿ, ಹುಚ್ಚಪ್ಪ ಹದ್ದನ್ನವರ, ಪ್ರೊ.ಶಶಿಧರ ಮೂಲಿಮನಿ, ರಮೇಶ ಹಾದಿಮನಿ, ವೀರಣ್ಣ ಸಾತನ್ನವರ, ಗುಂಡಪ್ಪ ತೀರ್ಥಪ್ಪನವರ, ಸಂಜು ಬರಗುಂಡಿ, ಈರಣ್ಣ ಆಲೂರ, ಪ್ರಕಾಶ ಕೋಟಿ, ಬಸವರಾಜ್ ಉಳ್ಳಾಗಡ್ಡಿ, ಬಸವರಾಜ ಅಮರಗೋಳ ಸೇರಿದಂತೆ ಅಪಾರ ಅಭಿಮಾನಿಗಳು ಪಾಲ್ಗೊಂಡಿದ್ದರು.

ಅಂಬೇಡ್ಕರ್ ಜಯಂತಿ: ಮೆರವಣಿಗೆ

ಜಮಖಂಡಿ: ನಗರದ ಚಂದ್ರಗಿರಿ ಪೇಠೆಯಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿ ಅಂಗವಾಗಿ ಡಿಜೆ ಮೆರವಣಿಗೆ ನಡೆಯಿತು. ಮಾಜಿ ಶಾಸಕ ಆನಂದ ನ್ಯಾಮಗೌಡ, ನಗರದಸಭೆ ಮಾಜಿ ಅಧ್ಯಕ್ಷ ಈಶ್ವರ ವಾಳೆನ್ನವರ, ಪ್ರಮುಖರಾದ ಸುರೇಶ ನಡವಿನಮನಿ, ವಿಲಾಸ ನಡವಿನಮನಿ, ಸಿಪಿಐ ಮಲ್ಲಪ್ಪ ಮಡ್ಡಿ, ಪಿಎಸ್‌ಐ ಅನೀಲ ಕುಂಬಾರ ಸೇರಿದಂತೆ ಅನೇಕ ಗಣ್ಯರು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಪ್ರತಿಮೆಗೆ ಪೂಜಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ನಗರದ ಜೋಳದ ಬಜಾರ್ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಅಂಬೇಡ್ಕರ್ ವೃತ್ತಕ್ಕೆ ಆಗಮಿಸಿ ಅಂಬೇಡ್ಕರ್ ವೃತ್ತದಲ್ಲಿನ ಪುಥ್ಥಳಿಗೆ ಪುಷ್ಪಹಾರ ಅರ್ಪಿಸಿ ನಮನ ಸಲ್ಲಿಸಲಾಯಿತು. ಮೆರವಣಿಗೆಯಲ್ಲಿ ಮಾಜಿ ಶಾಸಕ ಆನಂದ ನ್ಯಾಮಗೌಡ ಡಿಜೆ ಸೌಂಡ್‌ಗೆ ಹೆಜ್ಜೆ ಹಾಕಿದಾಗ ಯುವಕರ ಪಡೆಯೂ ಸಹ ಅವರೊಂದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ರಮೇಶ ನಡವಿನಮನಿ, ಅರುಣ ಹಾದಿಮನಿ, ಶರಣ ಮೂಲಂಗಿ, ಪರಶುರಾಮ ಹಾದಿಮನಿ, ದೀಪಕ ನಡವಿನಮನಿ, ಅನೀಲ ದಡ್ಡಿಮನಿ, ವಿಠ್ಠಲ ಲೊಖಂಡೆ, ರಾಮು ನಡವಿನಮನಿ, ನಂದೀಶ ಹಾದಿಮನಿ, ವಿಠ್ಠಲ ನಡುವಿನಮನಿ, ಕಿರಣ ಮಾಂಗ, ಪ್ರಜ್ವಲ್ ಕಡಕೋಳ, ನಂದೇಶ ನಡುವಿನಮನಿ, ಸಂತೋಷ ಮಾಂಗ, ಕಾಳು ಮಾಂಗ, ನವೀನ್ ನಡುವಿನಮನಿ, ಪ್ರಕಾಶ ನಡುವಿನಮನಿ ಇದ್ದರು.



ಶ್ರೀಗಳಿಂದ ಮಕ್ಕಳಿಗೆ ಸೈಕಲ್ ವಿತರಣೆ



ಇಳಕಲ್ : ಅಂತಾರಾಷ್ಟ್ರೀಯ ಥಲಸ್ಸೆಮಿಯಾ ದಿನಾಚರಣೆಯ ಅಂಗವಾಗಿ ರಾಮಾನುಜಾಚಾರ್ಯ ಫೌಂಡೇಶನ್ ಮತ್ತು ಮಕ್ಕಳ ಹೆಮ್ಯಾಟೋಲೋಜಿ, ಅಂಕೊಲೊಜಿ ಮತ್ತು ಅಸ್ತಿಮಜ್ಜೆ ಕಸಿ ವಿಭಾಗ, ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯ ಮಕ್ಕಳ ಹೆಮಟಾಲಜಿ, ಆಂಕೊಲಾಜಿ ಹಾಗೂ ಅಸ್ತಿಮಜ್ಜೆ ಕಸಿ ವಿಭಾಗದ ಸಹಯೋಗದಲ್ಲಿ ನಗರದ ಮಹೇಶ್ವರಿ ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮಕ್ಕೆ ಇಳಕಲ್ ಡಾ.ಗುರುಮಹಾಂತ ಶಿವಯೋಗಿಗಳು ಚಾಲನೆ ನೀಡಿದರು. ಈ ವೇಳೆ ಗುರುಮಹಾಂತ ಶ್ರೀಗಳು ಮಾತನಾಡಿ, ಥಲಸ್ಸೆಮಿಯಾ ಎಂಬುದು ಕೇವಲ ಚಿಕಿತ್ಸೆಯಲ್ಲ. ಇದು ಸತತ ಪ್ರಯತ್ನ ಮತ್ತು ಧೈರ್ಯದ ಸಂಕೇತ. ಥಲಸ್ಸೆಮಿಯಾ ಪೀಡಿತ ಮಕ್ಕಳು ಚಿಕಿತ್ಸೆಯ ನಂತರ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ನುಡಿದರು. ಮಹೇಶ್ವರಿ ಆಸ್ಪತ್ರೆ ವೈದ್ಯ ಡಾ.ಪವನ ದರಕ ಮಾತನಾಡಿ, ಥಲಸ್ಸೆಮಿಯಾ ನಿವಾರಣೆಯಲ್ಲಿ ಅಸ್ತಿಮಜ್ಜೆ ಕಸಿ ಚಿಕಿತ್ಸೆಯ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ರಾಮಾನುಜಾಚಾರ್ಯ ಫೌಂಡೇಶನ, ಇಳಕಲ್ ಹಾಗೂ ಮಕ್ಕಳ ಹೆಮ್ಯಾಟೋಲೋಜಿ, ಅಂಕೊಲೊಜಿ ಮತ್ತು ಅಸ್ತಿಮಜ್ಜೆ ಕಸಿ ವಿಭಾಗ, ಕಿಮ್ಸ್ ಆಸ್ಪತ್ರೆ, ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ಮಾರಕ ಥಲಸ್ಸೆಮಿಯಾ ಕಾಯಿಲೆ ಗೆದ್ದು ಬಂದ ಮಕ್ಕಳಿಗೆ ಸೈಕಲ್ ವಿತರಿಸಿದರು. ರಾಮಾನುಜಾಚಾರ್ಯ ಫೌಂಡೇಶನ್‌ನ ಪದಾಧಿಕಾರಿಗಳು, ವಿವಿಧ ವೈದ್ಯರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಟವರ್ ಕಂಬಗಳ ಸ್ಥಳಾಂತರಕ್ಕೆ ಆಗ್ರಹ



ಬಸವನಬಾಗೇವಾಡಿ: ಪಟ್ಟಣದ 5ನೇ ವಾರ್ಡ್‌ನಲ್ಲಿ ಮಂಗಗಳು ಚಿಕ್ಕ ಮಕ್ಕಳಿಗೆ ಕಚ್ಚುತ್ತಿವೆ. ಅಕ್ಕ-ಪಕ್ಕದಲ್ಲಿ 25 ವರ್ಷಗಳಿಂದ 3 ಮೊಬೈಲ್ ಟವರ್‌ಗಳು ಇರುವುದರಿಂದ ಮಂಗಗಳು ಟವರ್‌ಗಳ ಮೇಲೆ ವಾಸಿಸುತ್ತಿವೆ. ಸಾರ್ವಜನಿಕರಿಗೆ ಮಂಗಗಳಿಂದ ಒಂದು ಕಡೆ ಭಯವಾದರೆ ಇನ್ನೊಂದು ಕಡೆ ಟವರ್‌ಗಳು ಯಾವಾಗ ಬೀಳುತ್ತವೆ ಎಂಬುವುದು ಭಯ, ಪಟ್ಟಣದಲ್ಲಿ ಮಂಗಗಳ ಹಾವಳಿ ಹೆಚ್ಚಾಗಿರುವುದರಿಂದ ಪುರಸಭೆ ಅಧಿಕಾರಿಗಳು ಕೂಡಲೇ ಅರಣ್ಯ ಇಲಾಖೆಯವರಿಗೆ ತಿಳಿಸಿ ಅರಣ್ಯದಲ್ಲಿ ಬಿಡುವಂತೆ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಅವಳಿ ಜಿಲ್ಲೆಗಳ ಉಸ್ತುವಾರಿ ಅಶೋಕ ಹಾರಿವಾಳ ಆಗ್ರಹಿಸಿದರು.

ಪಟ್ಟಣದ ಮಧ್ಯೆ ಒಂದೇ ವಾರ್ಡ್‌ನಲ್ಲಿ ಮೂರು ಟವರ್‌ಗಳು ಇರುವುದರಿಂದ ಸಾರ್ವಜನಿಕರಿಗೆ ಯಾವಾಗ ಬೀಳುತ್ತವೆ ಎಂಬ ಭಯ ಹುಟ್ಟಿದೆ. ಕೂಡಲೇ ಪುರಸಭೆ ಮುಖ್ಯಾಕಾರಿಗಳು ಊರು ಹೊರಗಡೆ ಟವರ್ ಸ್ಥಳಾಂತರಿಸಬೇಕು. ಮಂಗಗಳನ್ನು ಹಿಡಿಯಿಸಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಬೇಕು. ಇಲ್ಲವಾದರೆ ಸಾರ್ವಜನಿಕರ ಚಿಕ್ಕ ಮಕ್ಕಳಿಗೆ ದೊಡ್ಡ ಸಮಸ್ಯೆಯಾಗಿದೆ. ದಿನದಿಂದ ದಿನಕ್ಕೆ ಮಂಗಗಳು ಮಕ್ಕಳಿಗೆ ಕಚ್ಚುತ್ತಿವೆ. ಒಂದೇ ವಾರದಲ್ಲಿ ಎಂಟು ಮಕ್ಕಳಿಗೆ ಮಂಗಗಳು ಕಚ್ಚಿವೆ. ಕೂಡಲೇ ಪುರಸಭೆ ಮುಖ್ಯಾಕಾರಿಗಳು ಕೂಡಲೇ ಕ್ರಮ ಜರುಗಿಸದೇ ಹೋದರೆ ಕರವೇ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಕಿರುಸುದ್ದಿ



ನಾಲತವಾಡ: ಪಟ್ಟಣ ಪಂಚಾಯತಿ ನೂತನ ಹಂಗಾಮಿ ಅಧ್ಯಕ್ಷ ಬಸವರಾಜ ಗಂಗನಗೌಡ್ರ(ಗಡ್ಡಿ) ಅವರಿಗೆ ಅಮರ (ಅಪ್ಪುಧಣಿ) ದೇಶಮುಖ, ರಫೀಕ್ ತೆಗ್ಗಿನಮನಿ, ಮಲ್ಲು ಗಂಗನಗೌಡ್ರ(ಮಣಿಕಂಠ), ಮೌಲಾನಾಜೀ, ಹಳ್ಳೂರ, ರಮೇಶ ಆಲಕೊಪ್ಪರ, ನಾಲತವಾಡ, ರವಿ ನವಲಿ ಸನ್ಮಾನಿಸಿದರು.



ಝುಳಕಿ: ನೂತನವಾಗಿ ಪಿಎಸ್ಐ ಆಗಿ ನೇಮಕಗೊಂಡ ಶ್ರೀಧರ ಸೋನಕನಳ್ಳಿ ಅವರಿಗೆ ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು. ಗ್ರಾಪಂ ಮಾಜಿ ಅಧ್ಯಕ್ಷ ಸಣ್ಣಪ್ಪ ತಳವಾರ, ಎಸ್.ಕೆ.ಸೊನಕನಳ್ಳಿ, ಜಿ.ಡಿ.ಹೂಗಾರ, ಪಾಂಡುರಂಗ ಜಹಾಗಿದಾರ, ರವಿ ತೇಲಿ, ಎಂ.ಎ.ಕಂಬಾರ, ಪಿ.ಡಿ.ಕಾಸರ, ಎಸ್.ಟಿ.ಕೋಳಿ ಉಪಸ್ಥಿತರಿದ್ದರು.

ಮೃತ ಡಾಂಗೆ ಕುಟುಂಬಕ್ಕೆ ಮನಗೂಳಿ ಸಾಂತ್ವನ

ಸಿಂದಗಿ: ಡಾಂಗೆ ಅವರ ಸಾವು ನಿಜಕ್ಕೂ ನಮಗೆಲ್ಲ ನೋವಾಗಿದೆ. ಕುಟುಂಬಸ್ಥರು ಆತಂಕ ಪಡುವುದು ಬೇಡ ನಿಮ್ಮ ಜೊತೆ ನಾನಿದ್ದೇನೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಶಾಸಕ ಅಶೋಕ ಮನಗೂಳಿ ಅವರು ಮೃತ ವ್ಯಕ್ತಿಯ ಸ್ವಂತ ಊರಾದ ತಾಲೂಕಿನ ಹಂದಿಗನೂರ ಗ್ರಾಮದ ಅವರ ನಿವಾಸಕ್ಕೆ ತೆರಳಿ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು. ಇತ್ತಿಚಿಗೆ ಸಿಂದಗಿ ನಗರದ ಹೆಸ್ಕಾಂ ಕಚೇರಿಯ ಮಹಡಿಯ ಮೇಲಿಂದ ಆಯಾ ತಪ್ಪಿ ಬಿದ್ದು ಸಾವನ್ನಪ್ಪಿದ ಕೆಇಬಿ ನೌಕರ ಮುತ್ತಪ್ಪ ಡಾಂಗೆ ಅವರ ಅವರ ನಿವಾಸಕ್ಕೆ ತೆರಳಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಮಾತನಾಡಿದ ಅವರು, ಮೃತ ವ್ಯಕ್ತಿಯ ಕುಟುಂಬಕ್ಕೆ ಸರ್ಕಾರದಿಂದ ದೊರೆಯುವ ಎಲ್ಲ ರೀತಿಯ ಸೌಲಭ್ಯಗಳನ್ನು ನೀಡುವುದಾಗಿ ಭರವಸೆ ನೀಡಿದರು. ಕೂಡಲೇ ಸಂಭಂದಿಸಿದ ಸಚಿವರಿಗೆ ಮತ್ತು ಅಧಿಕಾರಿಗಳೊಂದಿಗೆ ಮಾತನಾಡಿ ಆದಷ್ಟು ಬೇಗ ಸಹಾಯ ಸಹಕಾರ ನೀಡಲು ಮನವಿ ಮಾಡುತ್ತೇನೆ ಎಂದರು.

ಮೃತನ ಹೆಂಡತಿ ಮುತ್ತಮ್ಮ ಡಾಂಗೆ ಅವರ 2 ಮಕ್ಕಳು, ತಂದೆ ಹಣಮಂತ ಡಾಂಗೆ, ತಾಯಿ ರೇಣುಕಾ ಡಾಂಗೆ, ಮುಖಂಡರಾದ ಶಿವಾನಂದ ವಾಲಿ, ಸಿದ್ದನಗೌಡ ಬಿರಾದಾರ, ಅರವಿಂದ ದೇಸಾಯಿ, ಸಲೀಮ್ ಕಣ್ಣಿ, ಶ್ರೀನಾಥ ಬಿರಾದಾರ, ಮಡು ರೋಡಗಿ, ಸೋಮನಗೌಡ ಬಿರಾದಾರ ಸೇರಿದಂತೆ ಇತರರು ಇದ್ದರು.



ಸಿಂದಗಿ: ನಗರದ ಹೆಸ್ಕಾಂ ಕಚೇರಿಯ ಮಹಡಿಯ ಮೇಲಿಂದ ಆಯಾ ತಪ್ಪಿ ಬಿದ್ದು ಸಾವನ್ನಪ್ಪಿದ ಕೆಇಬಿ ನೌಕರ ಮುತ್ತಪ್ಪ ಡಾಂಗೆ ಅವರ ಅವರ ನಿವಾಸಕ್ಕೆ ಶಾಸಕ ಅಶೋಕ ಮನಗೂಳಿ ತೆರಳಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಮೃತನ ಹೆಂಡತಿ ಮುತ್ತಮ್ಮ ಡಾಂಗೆ ಅವರ 2 ಮಕ್ಕಳು, ತಂದೆ ಹಣಮಂತ ಡಾಂಗೆ, ತಾಯಿ ರೇಣುಕಾ ಡಾಂಗೆ, ಮುಖಂಡರಾದ ಶಿವಾನಂದ ವಾಲಿ, ಸಿದ್ದನಗೌಡ ಬಿರಾದಾರ, ಅರವಿಂದ ದೇಸಾಯಿ, ಸಲೀಮ್ ಕಣ್ಣಿ, ಶ್ರೀನಾಥ ಬಿರಾದಾರ, ಮಡು ರೋಡಗಿ, ಸೋಮನಗೌಡ ಬಿರಾದಾರ ಇದ್ದರು.

ನಾಳೆಯಿಂದ ಲಕ್ಕಮ್ಮದೇವಿ ಜಾತ್ರಾ ಮಹೋತ್ಸವ

ಬಸವನಬಾಗೇವಾಡಿ: ತಾಲೂಕಿನ ಇವಣಗಿ ಗ್ರಾಮದ ವರದಾನಿ ಲಕ್ಕಮ್ಮದೇವಿ ಜಾತ್ರಾ ಮಹೋತ್ಸವವು ಮೇ 14ರಿಂದ ಮೇ 18ರ ವರೆಗೆ ಕಾ.ಬೂದಿಹಾಳದ ಲಿಂ.ಅಡವೆಪ್ಪ ಮಹಾರಾಜರ, ಬಸಪ್ಪ ಮುತ್ಯಾ ಪೂಜಾರಿಯವರ ಸಧೀಚ್ಛೆಯಂತೆ ಸಂಭ್ರಮ ಸಡಗರದಿಂದ ಜರುಗುವುದು. ಮೇ 14ರಂದು ಬೆಳಗ್ಗೆ 10ಗಂಟೆಗೆ ಸಕಲ ವಾದ್ಯವೈಭವಗಳೊಂದಿಗೆ ಪಟ್ಟಣದ ಏಳು ಪಾಂಡವರ ಗಿಡಕ್ಕೆ ಹೋಗಿ ಲಕ್ಕಮ್ಮದೇವಿಯನ್ನು ಬರಮಾಡಿಕೊಳ್ಳುವುದು ವಿವಿಧ ಗ್ರಾಮಗಳಿಂದ 9 ಪಲ್ಲಕ್ಕಿಗಳನ್ನು ಬರಮಾಡಿಕೊಳ್ಳುವುದು, ರಾತ್ರಿ 9ಗಂಟೆಗೆ ಯಂಕಂಚಿಯ ಬೀರಲಿಂಗೇಶ್ವರ ಸಂಘದಿಂದ ಮಾಯವ್ವನ ಹಬ್ಬ ಕಾರ್ಯಕ್ರಮ, ಮೇ 15ರಂದು ಬೆಳಗ್ಗೆ 8ಗಂಟೆಗೆ ಶ್ರೀದೇವಿಯ ಗಂಗ ಸ್ಥಳ ಪೂಜೆ ವಾದ್ಯವೈಭವ ಡೊಳ್ಳು ವಾದನಗಳೊಂದಿಗೆ 11 ಪಲ್ಲಕ್ಕಿ ಉತ್ಸವದೊಂದಿಗೆ ಗ್ರಾಮದ ಬೀದಿಗಳಲ್ಲಿ ಹಾಯ್ದು ಮೆರವಣಿಗೆಯೊಂದಿಗೆ ದೇವಿಯನ್ನು ದೇವಸ್ಥಾನಕ್ಕೆ ಬರಮಾಡಿಕೊಳ್ಳುವುದು, ರಾತ್ರಿ 9ಗಂಟೆಗೆ ಡೊಳ್ಳಿನ ಪದಗಳು ಜರುಗುವವು, ಮೇ 16ರಂದು ಬೆಳಗ್ಗೆ9ಕ್ಕೆ ಭಾರ ಎತ್ತುವ ಸ್ಪರ್ಧೆ ಗುಂಡು ಸಂಗ್ರಾಣಿ ಕಲ್ಲು, ಚೀಲ ಎತ್ತುವ ಕಾರ್ಯಕ್ರಮ, ಮ.3ಗಂಟೆಗೆ ಸುಪ್ರಸಿದ್ಧ ಜಂಗೀ ಕುಸ್ತಿಗಳು ಜರುಗುವವು. ರಾತ್ರಿ 10 ಗಂಟೆಗೆ ಗ್ರಾಮದವರಿಂದ ಕಲಿಯುಗದಲ್ಲಿ ಘರ್ಜಿಸಿದ ಕರ್ಣಾರ್ಜುನ ಅರ್ಥಾತ ಒಡಹುಟ್ಟಿದವರು ಸಾಮಾಜಿಕ ನಾಟಕ ಜರುಗಲಿದೆ. ಮೇ 17ರಂದು ಬೆಳಗ್ಗೆ 9 ಗಂಟೆಯಿಂದ ತೇರ ಬಂಡಿ ಸ್ಪರ್ಧೆ, ರಾತ್ರಿ 8ಗಂಟೆಗೆ ಪ್ರತಿಭಾ ಪುರಸ್ಕಾರ, ಜಾನಪದ ಉತ್ಸವ, ಮೇ 18ರಂದು ಬೆಳಗ್ಗೆ 8 ಗಂಟೆಗೆ ಸಂಜೆ 6ಗಂಟೆವರೆಗೆ ಗೀಗೀ ಪದಗಳು ಜರುಗುವವು. ರಾತ್ರಿ 8ಗಂಟೆಗೆ ಪುರಾಣ ಮಂಗಲ, ರಾತ್ರಿ 9ಗಂಟೆಗೆ ಕಲಿಯುಗದಲ್ಲಿ ಘರ್ಜಿಸಿದ ಕರ್ಣಾರ್ಜುನ ಅರ್ಥಾತ ಒಡಹುಟ್ಟಿದವರು ಸಾಮಾಜಿಕ ನಾಟಕ ಜರಗುವುದು ಎಂದು ಜಾತ್ರಾ ಉತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ವಿಜಯಪುರ: ಜಿಲ್ಲಾ ಜಂಗಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ನಗರದ ಜಿಲ್ಲಾ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಕಚೇರಿಯಲ್ಲಿ ಜಿಲ್ಲಾಧ್ಯಕ್ಷ ಸಂಜೀವ ಹಿರೇಮಠ ಅವರ ನೇತೃತ್ವದಲ್ಲಿ ಹಮ್ಮಿಕೊಂಡ ಪೂರ್ವಭಾವಿ ಸಭೆಯಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಎಸ್ಎಸ್ಎಲ್ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚಿನ ಅಂಕಗಳೊಂದಿಗೆ ಪಾಸಾದ ವಿದ್ಯಾರ್ಥಿಗಳಿಗೆ ಧನ ಸಹಾಯದೊಂದಿಗೆ ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡುವುದರೊಂದಿಗೆ ಸನ್ಮಾನಿಸಿ ಗೌರವಿಸಲು ನಿರ್ಧಾರ ತೆಗೆದುಕೊಳ್ಳಲಾಯಿತು. ಅರ್ಜಿ ಸಲ್ಲಿಸುವವರು ವಿಜಯಪುರ ನಗರದ ಬಸವೇಶ್ವರ ಸರ್ಕಲ್‌ನಲ್ಲಿರುವ ಚಂದ್ರಕಾಂತ ಎಲೆಕ್ಟ್ರಿಕಲ್ ಅಂಗಡಿ ವಿಳಾಸಕ್ಕೆ ತಮ್ಮ ಸ್ವವಿವರವದೊಂದಿಗೆ ಎಸ್ಎಸ್ಎಲ್ಸಿ ಹಾಗೂ ಪಿಯುಸಿ ಅಂಕಪಟ್ಟಿಯ ಪ್ರತಿಗಳನ್ನು ಸಲ್ಲಿಸಬಹುದಾಗಿದೆ. ಸಮಾಜದ ವಿದ್ಯಾರ್ಥಿಗಳು ಮೇ 22 ರ ಒಳಗೆ (ಮೊ. 9448179237) ಸಂಪರ್ಕಿಸಿ ಹೆಸರನ್ನು ನೊಂದಾಯಿಸಿಕೊಳ್ಳಬಹುದಾಗಿದೆ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಕೆ.ಸಾವಳಗಿಮಠ, ಜಿಲ್ಲಾ ಗೌರವಾಧ್ಯಕ್ಷ ಎಸ್.ಎಲ್.ನಿಂಬರಗಿಮಠ, ಕಾರ್ಯಾಧ್ಯಕ್ಷ ಎನ್.ಆರ್.ಮಠ, ಬಸಯ್ಯ ಚಿನ್ನಕಾಳಿಮಠ, ಗುರಯ್ಯ ಯಾದವಾಡಮಠ, ಗುರುಸಿದ್ದಯ್ಯ ಹಿರೇಮಠ, ನಂಜುಡಿ ಮಠಪತಿ, ಎಸ್.ಎ.ಹಿರೇಮಠ, ಎಸ್.ಎಸ್.ಹಿರೇಮಠ ಇದ್ದರು.

ದುರ್ವಾಸನೆ: ಆಕ್ರೋಶ

ಝುಳಕಿ: ಸಮೀಪದ ಭತಗುಣಕಿ ಗ್ರಾಮದಲ್ಲಿರುವ ಜೈಅಂಬಾ ಭವಾನಿ ದೇವಸ್ಥಾನ ಹತ್ತಿರ ಚರಂಡಿ ನೀರಿನಿಂದ ದುರ್ವಾಸನೆ ಕುರಿತು ಗ್ರಾಪಂ ಅಧಿಕಾರಿಗಳಿಗೆ ಹಲವು ಬಾರೀ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಯುವ ಮುಖಂಡ ಶಂಕರ ಕಮತೆ ಆರೋಪಿಸಿದರು. ಗ್ರಾಮದಲ್ಲಿರುವ ಎಲ್ಲ ಕಡೆಗೂ ಚರಂಡಿ ನೀರು ಸ್ವಚ್ಛವಾಗದೆ ದುರ್ವಾಸನೆ ಮುಂದಿವರದಿದೆ. ಗ್ರಾಪಂ ಅಧಿಕಾರಗಳಿಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಯುವ ಮುಖಂಡ ಹಣಮಂತ ಹೊಟಗಾರ ಆರೋಪಿಸಿದರು. ಯುವ ಮುಖಂಡ ರಾಜು ಪವಾರ, ಪರಮೇಶ್ವರ ಕಮತೆ, ಕಾಸು ಶೇಡಬಾಳ ಇದ್ದರು.

ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿಕೆ

ಶೈಕ್ಷಣಿಕವಾಗಿ ಇಂಡಿ ಪ್ರಗತಿ ಸಾಧಿಸಲಿ

ಇಂಡಿ: ಆರು ತಿಂಗಳಲ್ಲಿ ಮತಕ್ಷೇತ್ರ ಶೇ.90ರಷ್ಟು ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ. 40 ವರ್ಷಗಳ ಕಾಲ ನಮ್ಮ ಮನೆತನಕ್ಕೆ ಮತ ನೀಡಿ ಆಶೀರ್ವಾದ ಮಾಡಿದ ಮತದಾರರನ್ನು ಜೀವನದುದ್ದಕ್ಕೂ ಸ್ಮರಿಸುವೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ತಾಲೂಕಿನ ಸಾಲೋಟಗಿ ಗ್ರಾಮದಲ್ಲಿ ಲೊಕೋಪಯೋಗಿ ಇಲಾಖೆಯ ರಸ್ತೆ ಅಭಿವೃದ್ಧಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಇಂಡಿ ಮತಕ್ಷೇತ್ರ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಬೇಕು. ಗಡಿಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು. ಶಿಕ್ಷಣದಿಂದ ಪ್ರಗತಿ ಸಾಧ್ಯ ಎಂಬ ಚಿಂತನೆಯಿಂದ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ತಂದಿರುವೆ. ಜಿಟಿಟಿಸಿ ಕಾಲೇಜು ಶೈಕ್ಷಣಿಕ ಪ್ರಗತಿ ಪ್ರಗತಿಗೆ ಮುಕುಟವಾಗಿದೆ. ಈ ಭಾಗದಲ್ಲಿ ನಿರುದ್ಯೋಗ ಹೋಗಲಾಡಿಸಬೇಕು ಎಂಬ ಚಿಂತನೆ ಇಟ್ಟುಕೊಂಡು ಜಿಟಿಟಿಸಿ ಕಾಲೇಜು ತಂದಿದ್ದು, ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಹೊರಬಂದರೆ ಉದ್ಯೋಗ ಗ್ಯಾರಂಟಿ ಎಂದರು. ಜಿಟಿಟಿಸಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಎಷ್ಟೋ ವಿದ್ಯಾರ್ಥಿಗಳು ವಿದೇಶದಲ್ಲಿ ಉದ್ಯೋಗ ಮಾಡುತ್ತಿದ್ದಾರೆ ಎಂದು ಸ್ಮರಿಸಿದರು.

ಜಲಧಾರೆ ಯೋಜನೆ ಒಂದು ವರ್ಷದಲ್ಲಿ ಪೂರ್ಣಗೊಳ್ಳಲಿದೆ. ಈ ಯೋಜನೆ ಪೂರ್ಣಗೊಂಡರೆ ತಾಲೂಕಿನ ಯಾವುದೇ ಗ್ರಾಮಕ್ಕೂ ಕುಡಿಯುವ ನೀರಿನ ಸಮಸ್ಯೆ ತಲೆದೋರುವುದಿಲ್ಲ. ಭೀಮಾನದಿ ದಂಡೆಯ ಗ್ರಾಮಗಳಿಗೆ ಕುಡಿಯುವ ನೀರಿನ ಅನುಕೂಲಕ್ಕಾಗಿ ಮಹಾರಾಷ್ಟ್ರ ಸರ್ಕಾರದಿಂದ ಭೀಮಾನದಿಗೆ ನೀರು ಮಳೆಗಾಲದಲ್ಲಿ ಭೀಮಾನದಿ ಹರಿಯುವಂತೆ ಬೇಸಿಗೆಯಲ್ಲಿಯೂ ಭೀಮಾನದಿಗೆ ನೀರು ಹರಿಸಲಾಗಿದೆ ಎಂದರು.



ಸಂಗಮೇಶ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಎಸ್.ಜೆ.ಮಾಡ್ಯಾಳ ಮಾತನಾಡಿದರು. ಭೀಮಣ್ಣ ಕವಲಗಿ, ಎಸಿ ಚಿದಾನಂದ ಗುರುಸ್ವಾಮಿ, ಪ್ರಶಾಂತ ಕಾಳೆ, ತಾಪಂ ಇಒ ಮಹಾದೇವಪ್ಪ ಏವೂರ, ಎಇಇ ದಯಾನಂದ ಮಠ, ಅಜೀತ ಧನಶೆಟ್ಟಿ, ಜೀತಪ್ಪ ಕಲ್ಯಾಣಿ, ಶಿವಯೋಗೆಪ್ಪ ಚನಗೊಂಡ, ಶಿವಯೋಗೆಪ್ಪ ಜೊತಗೊಂಡ, ಜಾವೀದ ಮೋಮಿನ, ಅಯುಬ ಬಾಗವಾನ, ಜಟ್ಟೆಪ್ಪ ರವಳಿ, ಶ್ರೀಕಾಂತ ಕುಡಿಗನೂರ, ಬಿಇಒ ಎಸ್.ಎಸ್.ಮುಜಾವರ, ಸಿಡಿಪಿಒ ಗೀತಾ ಗುತ್ತರಗಿಮಠ, ಎಚ್.ಎಸ್.ಪಾಟೀಲ, ಧರ್ಮು ವಾಲಿಕಾರ, ಕೆ.ಎಸ್.ಮರಡಿ, ನೀಲಕಂಠ ರೂಗಿ, ಎಸ್.ಆರ್.ಗದ್ಯಾಳ, ಎಂ.ಆರ್.ಪಾಟೀಲ, ಮಲ್ಲನಗೌಡ ಪಾಟೀಲ, ಸಿಪಿಐ ಸುನೀಲ ಪಾಟೀಲ, ಚನಮಲ್ಲ ಚನಗೊಂಡ, ಸೊಮಣ್ಣ ಅಕ್ಕಲಕೋಟ, ಶೇಖರ ನಾಯಕ, ಸುದೀರ ಕರಕಟ್ಟಿ, ಸತೀಶ ಕುಂಬಾರ, ಎಇ ಮಹಿಬೂಬ ಸಂಜವಾಡ, ಸಂತೋಷ ಪರಸೆನವರ, ಅಪ್ಪು ಅಡಗಲ್ಲ, ಅವಿನಾಶ ಬಗಲಿ, ನಿಂಗಯ್ಯ ಗಿರಡಿಮಠ, ಚಂದು ಸೊನ್ನ, ಅಶೋಕ ಬಗಲಿ, ವಿಜಯಕುಮಾರ ಚನಗೊಂಡ, ಬಸು ಬಂಗಲಿ, ರಮೇಶ ಕಲ್ಯಾಣಿ, ಶಂಕ್ರಪ್ಪ ಸರ್ಜಾಪೂರ, ರಾಜು ಖೇಡಗಿ, ಗಂಗು ಗುಳೆದ, ಬಾಬುರಾವ ಗುಡಮಿ ಇತರರಿದ್ದರು.

ಜಿಲ್ಲೆಯಲ್ಲಿ ಆಸರೆ ಯೋಜನೆ ಯಶಸ್ವಿ ಅನುಷ್ಠಾನ

ವಿಜಯಪುರ: ಪೊಲೀಸ್ ಇಲಾಖೆಯು ರಾಜ್ಯಾದ್ಯಂತ ಹಿರಿಯ ನಾಗರಿಕರ ಮತ್ತು ಒಂಟಿ ಮಹಿಳೆಯರ ಸುರಕ್ಷತೆ ಕುರಿತಾಗಿ ಆಸರೆ ಅನ್ನುವ ಯೋಜನೆ ಜಾರಿಗೊಳಿಸಿದ್ದು, ಅದನ್ನು ಜಿಲ್ಲೆಯಾದ್ಯಂತ ಯಶಸ್ವಿ ಅನುಷ್ಠಾನ ಮಾಡಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸರೆ ಎಂಬ ಈ ಯೋಜನೆ ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರಿಕರಿಗೆ ಮತ್ತು ಒಂಟಿ ಮಹಿಳೆಯರಿಗೆ ಸುರಕ್ಷೆ ಮತ್ತು ಅವರಲ್ಲಿ ಒಂಟಿ ಭಾವನೆಯನ್ನು ಹೋಗಲಾಡಿಸಿ, ವಿಶ್ವಾಸ ಮೂಡಿಸುವ ಉದ್ದೇಶದಿಂದ ಮಾಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಸರ್ಕಾರದ ಆಸರೆ ಯೋಜನೆ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲಾಗಿದೆ. ಜಿಲ್ಲೆಯ ಎಲ್ಲ 28 ಪೊಲೀಸ್ ಠಾಣೆಗಳ ವ್ಯಾಪ್ತಿಯ 329 ಬೀಟ್‌ಗಳಲ್ಲಿ ಈ ಯೋಜನೆ ಜಾರಿಗೊಳಿಸಲಾಗಿದೆ. ಈಗಾಗಲೇ ಮನೆ-ಮನೆಗೆ ಪೊಲೀಸ್ ಕಾರ್ಯಕ್ರಮವು ಜಾರಿಯಲ್ಲಿದ್ದು, ಅದರ ಒಂದು ಭಾಗವಾಗಿ ಆಸರೆಕಾರ್ಯಕ್ರಮವನ್ನು ಅಳವಡಿಸಿಕೊಂಡು ಎಲ್ಲ 329 ಬೀಟ್ ಸಿಬ್ಬಂದಿ ಜನರು ತಮ್ಮ ತಮ್ಮ ಬೀಟ್ ವ್ಯಾಪ್ತಿಯಲ್ಲಿ ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರೀಕರ, ಒಂಟಿ ಮಹಿಳೆಯರನ್ನು ಗುರುತಿಸಿ, ಖುದ್ದಾಗಿ ಭೇಟಿಯಾಗಿ ಅವರು ಎದುರಿಸುತ್ತಿರುವ ತೊಂದರೆ, ಸಮಸ್ಯೆಗಳ ಬಗ್ಗೆ ಆಲಿಸಿ ಇದರ ಜೊತೆಗೆ ಪ್ರಸ್ತುತ ಸರ್ಕಾರದಿಂದ ಹಿರಿಯ ನಾಗರಿಕರು, ಒಂಟಿ ಮಹಿಳೆಯರಿಗೆ ಸರ್ಕಾರದಿಂದ ಜಾರಿಗೊಳಿಸಲಾದ ಯೋಜನೆಗಳ ಬಗ್ಗೆ ಅರಿವು ಮೂಡಿಸಿ ಕಾರ್ಯ ಮಾಡಲಾಗುತ್ತಿದೆ ಎಂದರು.

ತಂದೆ- ತಾಯಿಯರ ಮತ್ತು ಹಿರಿಯ ನಾಗರೀಕರ ಪಾಲನೆ, ಪೋಷಣೆ ಮಾಡುವುದು. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆ. ಹಿರಿಯ ನಾಗರಿಕರಿಗೆ ಬಸ್ ಪ್ರಯಾಣ ದರದಲ್ಲಿ ರಿಯಾಯಿತಿ. ಒಂಟಿ ಮಹಿಳೆಯರಿಗೆ ವಿಧವಾ ವೇತನ, ಬಡತನ ರೇಖೆಗಿಂತ ಕೆಳಗಿರುವ 40 ರಿಂದ 64 ವರ್ಷದೊಳಗಿನ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರಿಗೆ ಆರ್ಥಿಕ ಸೌಲಭ್ಯವನ್ನು ಒದಗಿಸುವುದು. ಇಲ್ಲಿಯವರೆಗೆ ಒಟ್ಟು ವಿವಿಧ ಯೋಜನೆಗಳಡಿ 73 ಫಲಾನುಭವಿಗಳಿಗೆ ಇದರ ಸದುಪಯೋಗ ಆಗುವಂತೆ ಪೊಲೀಸರು ಮಾಡಿದ್ದಾರೆ ಎಂದರು.

ಮನೆಗಳಲ್ಲಿನ ಕಳ್ಳತನ ಪ್ರಕರಣಗಳನ್ನು ನಿಯಂತ್ರಿಸಲು ತಂತ್ರಜ್ಞಾನ ಬಳಸಿಕೊಂಡು (ಐಎಲ್‌ಎಚ್) ವಿಶೇಷ ಯೋಜನೆ ರೂಪಿಸಿದ್ದು, ಸಾರ್ವಜನಿಕರು ವಿವಿಧ ಕಾರಣಗಳಿಗೆ ಮನೆಗೆ ಕೀಲಿ ಹಾಕಿ ಹೋಗುವ ವೇಳೆ ಜಿಲ್ಲಾ ನಿಸ್ತಂತು ಕೋಣೆ (ಮೊ.8277970747) ಇಲ್ಲಿಗೆ ಮಾಹಿತಿ ವಿನಿಮಯ ಮಾಡಿಕೊಳ್ಳಬೇಕು. ಸಾರ್ವಜನಿಕರು ಹಂಚಿಕೊಂಡ ಮಾಹಿತಿ ಗೌಪ್ಯವಾಗಿ ಇಡಲಾಗುವುದು. ಅಲ್ಲದೆ ಕಳ್ಳತನ ಪ್ರಕರಣಗಳಿಗೆ ಕಡಿವಾಣ ಹಾಕಲು ಇದು ಅನುಕೂಲವಾಗಲಿದೆ ಎಂದರು.

ಪೂರ್ಣ ಪ್ರಮಾಣ ಕೆರೆಗಳ ಭರ್ತಿಗೆ ಆಗ್ರಹ

ಆಲಮಟ್ಟಿ: ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿ ಬರುವ ಮುದ್ದೇಬಿಹಾಳ ಹಾಗೂ ತಾಳಿಕೋಟೆ ತಾಲೂಕಿನ 36 ಕೆರೆಗಳನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೇತೃತ್ವದಲ್ಲಿ ರೈತರು ಮಂಗಳವಾರ ಇಲ್ಲಿನ ಮುಖ್ಯ ಎಂಜಿನಿಯರ್ ಕಚೇರಿ ಎದುರು ಪ್ರತಿಭಟಿಸಿದರು.

ಈಗಾಗಲೇ ಏಪ್ರಿಲ್‌ನಲ್ಲಿ ಕೆರೆಗಳ ಭರ್ತಿಗಾಗಿ ನೀರು ಹರಿಸಲಾಗಿದೆ. ಆದರೆ ಈ 36 ಕೆರೆಗಳ ಭರ್ತಿಗೆ ಒಂದು ಹನಿ ನೀರೂ ಕಾಲುವೆಗೆ ಹರಿದಿಲ್ಲ. ವಿದ್ಯುತ್ ಪ್ರಸರಣದ ಟಾವರ್ ಬಿದ್ದು ವಿದ್ಯುತ್ ಸಮಸ್ಯೆಯ ನೆಪವನ್ನು ಕೆಬಿಜೆಎನ್ನೆಲ್ ಅಧಿಕಾರಿಗಳು ಹೇಳುತ್ತಿದ್ದಾರೆ. ಈ ಕಂಬ ಬಿದ್ದು ಒಂದು ತಿಂಗಳು ಕಳೆದರೂ ಈ ದುರಸ್ತಿ ಕಾರ್ಯ ಪೂರ್ಣಗೊಂಡಿಲ್ಲ ಎಂದು ರೈತರು ಆರೋಪಿಸಿದರು. ಹುಲಗಬಾಳ, ಜಕ್ಕದಾಳ, ಹಗರಗೊಂಡ, ತಾರನಾಳ, ತಮದಡ್ಡಿ, ಹಡಲಗೇರಿ, ಗುಂಡಕರ್ಜಗಿ , ಪಡೇಕನೂರ, ಆಲಕೊಪ್ಪರ ಮತ್ತೀತರ 36 ಕೆರೆಗಳನ್ನು ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು.

ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಮ್ಮ ಭಾಗದ ರೈತ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಕೆರೆಗಳ ಭರ್ತಿಯಾಗಿದೆ ಎಂದು ಅಧಿಕಾರಿಗಳು ಸುಳ್ಳು ಹೇಳುತ್ತಿದ್ದಾರೆ ಎಂದು ಆರೋಪಿಸಿದರು. ಸ್ಪಷ್ಟ ಭರವಸೆ ನೀಡದ ಹೊರತು ಪ್ರತಿಭಟನೆ ಹಿಂದಕ್ಕೆ ಪಡೆಯುವುದಿಲ್ಲ ರೈತ ಸಂಘಟನೆಯ ರಾಜ್ಯ ಘಟಕದ ಉಪಾಧ್ಯಕ್ಷ ಶಾಂತಗೌಡ ಪಾಟೀಲ (ನಡಹಳ್ಳಿ), ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ಸಗರ, ನಿಡಗುಂದಿ ತಾಲ್ಲೂಕಾಧ್ಯಕ್ಷ ಕೆ.ಎಂ.ಗುಡ್ನಾಳ ಮತ್ತೀತರರು ಪಟ್ಟು ಹಿಡಿದರು.

ಐದು ದಿನದೊಳಗೆ ವಿದ್ಯುತ್ ಟಾವರ್ ನಿರ್ಮಾಣ ಪೂರ್ಣಗೊಳಿಸಿ, ಶೀಘ್ರವೇ ಕೆರೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಕೆಬಿಜೆಎನ್ ಎಲ್ ಅಧಿಕಾರಿಗಳಾದ ಅಮರೇಗೌಡ ಹಾಗೂ ಅಬೂಬಕರ ಬಾಗವಾನ ಪ್ರತಿಭಟನಾಕಾರರಿಗೆ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂದಕ್ಕೆ ಪಡೆಯಲಾಯಿತು.

ಮಹಾಂತಗೌಡ ಬಿರಾದಾರ, ಸೀತಪ್ಪ ಗಣಿ, ರವಿ ಕೋತಿನ, ರಾಜು ವಾಲಿಕಾರ, ಅಪ್ಪುಗೌಡ ಪಾಟೀಲ, ಬಸವರಾಜ ಪಾಟೀಲ, ಶ್ರೀಕಾಂತ ಬಿರಾದಾರ, ಸಂಗಪ್ಪ ಟಕ್ಕೇರಿ, ಮಹಾದೇವ ಬನಸೋಡೆ, ಸತ್ಯಪ್ಪ ಕಾಳೆ, ಅಮೋಘಸಿದ್ದ ಡೋಣೂರ ಮತ್ತಿತರರಿದ್ದರು.



ಮನೆಗೆ ಬೀಗ ಹಾಕಿದರೂ ನಿರ್ಲಕ್ಷ್ಯ ಬೇಡ: ಗುರುಶಾಂತ ದಾಶ್ಯಾಳ

ಬಸವನಬಾಗೇವಾಡಿ: ಮನೆಯಲ್ಲಿ ಯಾರು ಇಲ್ಲದೆ ಇರುವ ವೇಳೆಯಲ್ಲಿ ಮನೆಗೆ ಬೀಗ ಹಾಕಿದರೂ ಕೂಡಾ ನಿರ್ಲಕ್ಷ್ಯ ವಹಿಸದೇ ಪೊಲೀಸ್ ಬೀಟ್‌ನವರ ಗಮನಕ್ಕೆ ತರಬೇಕೆಂದು ಪಿಐ ಗುರುಶಾಂತ ದಾಶ್ಯಾಳ ಹೇಳಿದರು.

ಪಟ್ಟಣದ ನಂದಿ ಬಡಾವಣೆ(ಗಂಗಾಧರ ಪ್ಲಾಟ್) ಮಾರುತೇಶ್ವರ ದೇವಸ್ಥಾನದ ಆವರಣದಲ್ಲಿ ಶನಿವಾರ ಸಂಜೆ ಸ್ಥಳೀಯ ಪೊಲೀಸ್ ಠಾಣೆ ನೇತೃತ್ವದಲ್ಲಿ ನೂತನ ಸುರಕ್ಷತಾ ಲೋಕಾರ್ಪಣೆ ಲಾಕ್ಡ್ ಹೌಸ್ ಬೀಟ್ ವ್ಯವಸ್ಥೆ ಜನ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮಗೆ ಅವಶ್ಯಕತೆ ಇರುವಷ್ಟು ಹಣ, ಒಡುವೆ ಇಟ್ಟುಕೊಂಡು ಉಳಿದೆಲ್ಲವುಗಳನ್ನು ಲಾಕರ್‌ಗಳಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು ಎಂದರು.

ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಪೊಲೀಸ್ ಠಾಣೆಯಿಂದ ಈ ವಿನೂತನ ಕಾರ್ಯಕ್ರಮ ಆಯೋಜನೆ ಮಾಡಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಹಾಗೂ ನಮ್ಮ ಕಂಟ್ರೋಲ್ ರೂಂ ಮೊ.8277970747, ಲಾಕ್ಡ್ ಹೌಸ್ ಬೀಟ್ ವ್ಯವಸ್ಥೆ (ಪೂರ್ಣ ಹೆಸರು ಮೂಲಕ ಮಾಹಿತಿ ನೀಡಿ, ಮನೆಯ ವಿಳಾಸ, ಮನೆಯ ಜಿಪಿಎಸ್ ಲೋಕೇಶನ್, ಮನೆಯ ಫೋಟೊ, ಎಷ್ಟು ದಿನ ಮನೆಗೆ ಬೀಗ ಇರುತ್ತದೆ) ಎಂಬ ಮಾಹಿತಿ ತಿಳಿಸಿದರೆ ನಮ್ಮ ತಂಡ ನಿಮ್ಮ ಮನೆ ಮೇಲೆ ನಿಗಾ ವಹಿಸಲಿದೆ ಎಂದು ಹೇಳಿದರು.



ಎಸ್.ಎ.ದೇಗಿನಾಳ, ರಾಜಶೇಖರ ಚಿಂಚೋಳಿ, ಕಲ್ಲನಗೌಡ ಬಿರಾದಾರ, ಮಹೇಶ ಮುಳವಾಡ, ಮಹಾಂತೇಶ ಮನಗೂಳಿ, ಅಪ್ಪು ಧನಶೆಟ್ಟಿ, ಚಿದಾನಂದ ಅಂಗಡಿ, ಅಶೋಕ ಬಿರಾದಾರ, ಎಸ್.ಐ.ಮನಗೂಳಿ, ಅಶೋಕ ಡೋಮನಾಳ, ಮುರುಗೆಪ್ಪ ಪೂಜಾರಿ, ಸುಭಾಸ ಬೂದಗೋಳಿ, ನಾಗಪ್ಪ ಅರಳಿಚಂಡಿ, ಕಲ್ಯಾಣಕುಮಾರ ಪೇಟಕರ್, ಸಾಹೇಬಗೌಡ ಶಾಖಾಪುರ, ರಾಜು ಕಡ್ಡಿ ಎಸ್.ಟಿ.ಬಶೆಟ್ಟಿ ರಾಮಚಂದ್ರ ಹೊರ್ತಿ, ಬಿ.ಬಿ.ಬಾಗೇವಾಡಿ ಸೇರಿ ಸಿಬ್ಬಂದಿ ಇದ್ದರು.

ಸಾಂವಿಧಾನಿಕ ಸಂಸ್ಥೆಗಳ ದುರುಪಯೋಗ: ಯಶವಂತರಾಯಗೌಡ

ವಿಜಯಪುರ: ಸದ್ಯ ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ. ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ರಾಜ್ಯವನ್ನು ಆಳುವ ಪ್ರಯತ್ನ ನಡೆಯುತ್ತಿದೆ ಎಂದು ಇಂಡಿ ಶಾಸಕ ಯಶವಂತರಾಯಗೌಡ ಟೀಕೆ ವ್ಯಕ್ತಪಡಿಸಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಟಿ-ಇಡಿಗಳಂತಹ ಸಂಸ್ಥೆಗಳ ದುರಪಯೋಗ ಆದರೆ ದೇಶ ಎತ್ತ ಸಾಗಬೇಕು. ದೇಶವನ್ನು ಆಳಲು ಸಾಧ್ಯವಾಗದವರು ವಿಶ್ವ ಗುರು ಆಗಲು ಸಾಧ್ಯವೇ?, ದೇಶವನ್ನು ಮುನ್ನಡೆಸುವವರು ವಿವೇಕದಿಂದ ಹೇಳಿಕೆ ನೀಡಬೇಕು, ಈ ಹಿಂದೆ ನೋಟು ಅಮಾನ್ಯೀಕರಣವನ್ನು ಸಹ ತರಾತುರಿಯಲ್ಲಿ ಮೋದಿ ಕೈಗೊಂಡಿದ್ದರು. ಪ್ರಧಾನಮಂತ್ರಿಗಳ ಕಚೇರಿ ಚುನಾವಣೆ ಕೇಂದ್ರಿತವಾಗಬಾರದು, ಚುನಾವಣಾ ಆಯೋಗಕ್ಕೆ ಜೀವವೇ ಇಲ್ಲದಂತಾಗಿದೆ ಎಂದರು. ಪ್ರಧಾನಮಂತ್ರಿಗಳು ಎರಡು ದಿನಗಳಿಂದ ನೀಡುತ್ತಿರುವ ಹೇಳಿಕೆ ಅಪಹಾಸ್ಯಕ್ಕೆ ಗುರಿಯಾಗಿವೆ, ಮುಖ್ಯಮಂತ್ರಿಗಳ ಕಾದಾಟದ ಬಗ್ಗೆ ಮಾತನಾಡುವುದು ಪ್ರಧಾನಿಗೆ ಶೋಭೆ ತರುವ ವಿಷಯವಿಲ್ಲ, ಅವರ ಹೇಳಿಕೆಯಿಂದ ಜನರಲ್ಲಿ ಅಭದ್ರತೆ ಕಾಡುತ್ತಿದೆ, ಚಿನ್ನ ಖರೀದಿಸಬೇಡಿ, ನಡೆದುಕೊಂಡು ಹೋಗಿ ಎಂದು ಹೇಳುವ ಮೂಲಕ ಒಂದು ರೀತಿ ಭಯ ಮೂಡಿಸಿದೆ ಎಂದರು.

ಸಚಿವ ಸಂಪುಟ ವಿಸ್ತರಣೆಯಾಗಬೇಕು ಎಂಬುದು ಹಿರಿಯ ಸಚಿವರ ಬೇಡಿಕೆ, ಆದರೆ ಇನ್ನೂನು ಕೆಲವೇ ಅವಧಿ ಉಳಿದಿದೆ, ಈಗ ಸಚಿವ ಸ್ಥಾನ ತೆಗೆದುಕೊಂಡು ಏನು ಮಾಡುವುದು, ಸಚಿವ ಸಂಪುಟ ವಿಸ್ತರಣೆ ಹೈಕಮಾಂಡ್‌ಗೆ ಕೇಳಬೇಕಾದ ಪ್ರಶ್ನೆ, ಅಭಿವೃದ್ಧಿ ವಿಷಯವಾಗಿ ನವದೆಹಲಿಗೆ ಹೋಗಿದ್ದೆವು, ಮಂತ್ರಿ ಮಂಡಳ ವಿಷಯವಾಗಿ ಅಷ್ಟೇ ಅಲ್ಲ, ಆದರೆ ಅಭಿವೃದ್ಧಿ ವಿಷಯವಾಗಿ ಭೇಟಿಯಾಗಿದ್ದು ಚರ್ಚೆಯೇ ಆಗುವುದಿಲ್ಲ, ರಾಜಕೀಯ ವಿಷಯವೇ ಪ್ರಧಾನವಾಗಿ ಬಿಂಬಿತವಾಗುತ್ತದೆ ಎಂದರು.

ವಿದೇಶಿ ತಳಿ ಬೆಳೆದು ಲಾಭ ಪಡೆದ ಪ್ರಗತಿಪರ ರೈತ

ಮುದ್ದೇಬಿಹಾಳ: ದಾಳಿಂಬರಿ ಮಾವು, ಗೋಡಂಬಿ, ಶ್ರೀಗಂಧ, ಅರಿಶಿಣ, ಅಡಿಕೆ ಹೀಗೆ ಹತ್ತು ಹಲವಾರು ಬೆಳೆ ತೆಗೆಯುವ ಸಾವಯವ ಕೃಷಿಕ, ಪ್ರಗತಿಪರ, ಕೈಗಾರಿಕಾ ಉದ್ಯಮಿ. ದೇಶ ವಿದೇಶದ ತಳಿಗಳನ್ನು ಬೆಳೆಸಿ ಲಾಭದಾಯಕ ಕೃಷಿ ಮಾಡುತ್ತಿರುವ ರಾಜೇಂದ್ರ ಬೋಸಲೆ ಸಹೋದರರು ಲಕ್ಷಾಂತರ ರೂ. ಮೌಲ್ಯದ ಲಾಭ ಪಡೆಯುತ್ತಿದ್ದಾರೆ.

ನಗರದ ಆಲಮಟ್ಟಿ ರಸ್ತೆಯ ಹಡಲುಗೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ 13 ಎಕರೆ ಗುಡ್ಡ ಹಾಗೂ ಬಂಜರು ಭೂಮಿಯನ್ನು ಸಾವಯುವ ಕೃಷಿ ಮಾಡುವ ಮೂಲಕ ಸಮಗ್ರ ಕೃಷಿಗೆ ಕೈ ಹಾಕಿ ಯಶಸ್ಸು ಪಡೆದಿದ್ದಾರೆ. ರಾಸಾಯನಿಕ ಮುಕ್ತ, ಕೃಷಿ ಉತ್ಪನ್ನಗಳಿಗೆ ವಿದೇಶಗಳಿಂದಲೂ ಬೇಡಿಕೆ ಬರುತ್ತಿದೆ. ದಾಳಿಂಬರಿ, ಸೇಬು ಕೃಷಿಯಲ್ಲೂ ಕೂಡ ವಿದೇಶಗಳಿಂದ ಬೇಡಿಕೆ ಇದ್ದು ಶ್ರೀಗಂಧ, ರಕ್ತ ಚಂದನ, ಬಾಳೆ, 100 ಹುಣಸೆ ಹಣ್ಣು 200 ಆಪೋಸು ಮಾವಿನಹಣ್ಣು, ಕಾಸರಗೋಡು ಭಾಗದ ಗೋಡಂಬಿ ಗಿಡಗಳನ್ನು ಹಚ್ಚಿ, 30 ಬಗೆಯ ಹಣ್ಣುಗಳನ್ನು ಬೆಳೆದು ಹುಲುಸಾದ ಕೃಷಿ ಮಾಡುತ್ತಿರುವುದು ರೈತ ವಲಯದಲ್ಲಿ ಕುತೂಹಲಕಾರಿಯಾದ ಸಂಗತಿಯಾಗಿದೆ.



ಭೋಸಲೆ ಕುಟುಂಬ ಸ್ವತಂತ್ರ ಪೂರ್ವದಿಂದಲೂ ಉದ್ಯಮಿಗಳೆಂದು ಹೆಸರುವಾಸಿ. ತಂದೆಯ ಕಾಲದಲ್ಲಿ ಬೇವಿನ ಬೀಜ ಸಂಗ್ರಹ ಮಾಡಿ ಸಾಬೂನು ತಯಾರಿಕೆ, ಕಟ್ಟಿಗೆ ಮಿಲ್ಲು, ಲಕ್ಷ್ಮಿ ಚಿತ್ರಮಂದಿರ, ಹತ್ತಾರು ಲಾರಿಗಳ ಮಾಲೀಕರಾಗಿದ್ದ ಕುಟುಂಬದಲ್ಲಿ ಜೈವಿಕ ಬೇವಿನ ಬೀಜ (ಬಯೋ ನೀಮ್) ಸಂಗ್ರಹಕಾರವಾಗಿ ಹೆಸರುವಾಸಿ ಆಗಿದ್ದಾರೆ. ಇತ್ತೀಚೆಗೆ ಕೃಷಿಯಲ್ಲಿ ಆಸಕ್ತಿ ಬಳಸಿಕೊಂಡು ಸಮಗ್ರ ಕೃಷಿಯನ್ನು ಮಾಡುತ್ತಿದ್ದಾರೆ.

ಸಾವಯುವ ಬೀಜ ಗೊಬ್ಬರಗಳನ್ನು ಬಳಸಿ ಬೆಳೆದ ದಾಳಿಂಬರಿ, ಮಾವಿನ ಉತ್ಪನ್ನಗಳು ವಿದೇಶಗಳಿಗೆ ರಫ್ತು ಆಗುತ್ತವೆ. ಕಳೆದ ವರ್ಷ 35 ಲಕ್ಷ ರೂ. ಲಾಭ ಪಡೆದಿದ್ದಾರೆ. ಸುಮಾರು 20 ವರ್ಷಗಳಿಂದ ಬೆಳೆದಿರುವ 1500 ಶ್ರೀಗಂಧ, ರಕ್ತ ಚಂದನಕ್ಕೆ ವಿಶೇಷ ಬೇಡಿಕೆ ಇದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಟನ್ ಕಟ್ಟಿಗೆಗೆ 50 ಲಕ್ಷ ರೂ.ವರೆಗೆ ಒಂದು ಅಡಿ ಎತ್ತರ ಬೆಳೆದರೆ 1 ಲಕ್ಷ ರೂ ವರೆಗೆ ಬೆಲೆ ಇದೆ.

> ನಾವು ಮಾಡುವ ಕೃಷಿಯಲ್ಲಿ ಗಿಡಮರಗಳಿಗೆ ರಾಸಾಯನಿಕ ಬಳಸುವುದಿಲ್ಲ. ನೈಸರ್ಗಿಕವಾಗಿ ಮತ್ತು ಹುಲಸಾಗಿ ಬೆಳೆಯುವುದರಿಂದ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದೆ. ವಿದೇಶಗಳಿಗೆ ರಫ್ತು ಮಾಡುತ್ತಿರುವುದು ನಮಗೆ ಹೆಮ್ಮೆಯ ವಿಷಯ.
> ■ ರವೀಂದ್ರ ಭೋಸಲೆ

ಕಳೆದ 50 ವರ್ಷಗಳಿಂದ ನಡೆದುಕೊಂಡು ಬಂದಿರುವ ಬೇವಿನ ಬೀಜ ಸಂಗ್ರಹ ಹಾಗೂ ಬೇವಿನ ಎಣ್ಣೆ, ಪೌಡರ್ ತಯಾರಿಕೆ ದೇಶ ವಿದೇಶಿ ಕಂಪನಿಗಳಿಂದ ಸಾಬೂನು ತಯಾರಿಕೆಗೆ ಬೇಡಿಕೆ ಇದೆ. ಒಬ್ಬ ಪ್ರಗತಿಪರ ರೈತ ಸಮಗ್ರ ಕೃಷಿಯನ್ನು ಹೇಗೆ ವಾಣಿಜ್ಯ ಉದ್ದೇಶದಿಂದ ಮಾಡಿ, ಲಾಭ ಪಡೆಯಬಹುದು ಎಂಬುದಕ್ಕೆ ಬೋಸಲೆ ಕುಟುಂಬ ಮಾದರಿಯಾಗಿದೆ.

ಜಿಲ್ಲೆಯಲ್ಲಿರುವ 124 ಕೆರೆಗಳಿಗೆ ನೀರು ಭರ್ತಿ ಮಾಡಲು ಮನವಿ

ಆಲಮಟ್ಟಿ/ವಿಜಯಪುರ: ಲಾಲ್ ಬಹದ್ದೂರ ಶಾಸ್ತ್ರಿ ಜಲಾಶಯದ ವ್ಯಾಪ್ತಿಗೆ ಬರುವ ಮುಳವಾಡ ಹಾಗೂ ಚಿಮ್ಮಲಗಿ ಏತ ನೀರಾವರಿಗೆ ಸಂಬಂಧಿಸಿದ ಎಲ್ಲ ಕಾಲುವೆಗಳಿಗೆ ನೀರು ಹರಿಸಿ ಜಿಲ್ಲೆಯಲಿರುವ 124 ಕೆರೆಗಳಿಗೆ ಮತ್ತೊಮ್ಮೆ ನೀರು ಭರ್ತಿ ಮಾಡಲು ಅನುಮತಿ ನೀಡಬೇಕೆಂದು ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ಜಂಟಿಯಾಗಿ ಬೆಳಗಾವಿ ಪ್ರಾದೇಶಿಕ ಆಯುಕ್ತರಾದ ಎ.ಎಂ.ಜಾನಕಿ ಅವರಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು.



ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂಧ ಕುಲಕರ್ಣಿ, ಕರ್ನಾಟಕ ರಾಜ್ಯ ರೈತ ಸಂಘದ ಹಸಿರು ಸೇನೆಯ ನಿಡಗುಂದಿ ತಾಲೂಕಾಧ್ಯಕ್ಷ ಸೀತಪ್ಪ ಗಣಿ ಮಾತನಾಡಿ, ಏ.28ರ ವರೆಗೂ ಎಲ್ಲ ಕಾಲುವೆಗಳಿಗೆ ನೀರು ಹರಿಸಿದರೂ ಕೂಡಾ ಕೇವಲ ಶೇ.30ರಷ್ಟು ಮಾತ್ರ ನೀರನ್ನು ಕೆರೆಗಳಿಗೆ ಬಿಡಲಾಗಿದೆ ಆದರೆ ಕೆಬಿಜೆಎನ್ನೆಲ್ ಅಧಿಕಾರಿಗಳು ಶೇ.70ರಷ್ಟು ಕೆರೆಗಳಿವೆ ನೀರು ತುಂಬಿಸಿದ್ದೇವೆ ಅಂತ ಹೇಳುತ್ತಾರೆ ಈ ಮಾತು ಸತ್ಯಕ್ಕೆ ದೂರವಾಗಿದೆ ಎಂದರು.

ಮೇ 5ರಂದು ಆಲಮಟ್ಟಿಯ ಕೆಬಿಜೆಎನ್ನೆಲ್ ಮುಖ್ಯ ಅಭಿಯಂತರರ ಕಚೇರಿ ಮುಂದೆ ಪ್ರತಿಭಟನೆಯನ್ನು ಜಂಟಿ ಸಂಘಟನೆಯಿಂದ ಧರಣಿ ನಡೆಸಲಾಗಿತ್ತು. ಮುಖ್ಯ ಅಭಿಯಂತರ ಡಿ.ಬಸವರಾಜ ಅವರು ಮನವಿ ಸ್ವೀಕರಿಸಿ, ಮತ್ತೆ ಕಾಲುವೆಗಳಿಗೆ ನೀರು ಹರಸಿ ಕೆರೆಗಳನ್ನು ಭರ್ತಿ ಮಾಡಲು ಪ್ರಾದೇಶಿಕ ಆಯುಕ್ತರ ಅನುಮತಿಗೆ ಪತ್ರ ಬರೆದಿದ್ದಾರೆ. ಆದ್ದರಿಂದ ಕೂಡಲೇ ಕಾಲುವೆಗಳಿಗೆ ನೀರು ಹರಿಸಲು ಅನುಮತಿ ನೀಡಬೇಕು ಎಂದರು.

ಜಿಲ್ಲೆಯ ಕೆಲವೊಂದು ಭಾಗಗಳಿಗೆ ಕೆರೆಗಳಿಗೆ ನೀರು ತಲುಪಿಲ್ಲ. ಈ ಭಾರಿ ಬೇಸಿಗೆಯ ಬಿಸಿಲಿನ ಪ್ರಖರತೆ ಅತಿಯಾಗಿದೆ. ಹಿಂದೆಂದೂ ಇಂತಹ ಬಿಸಿಲು ಕಂಡಿಲ್ಲ. ಈಗ ಕೆರೆಗಳಿಗೆ ಹರಿಸಿದ ನೀರು ಬಾಸ್ಪೀರಣವಾಗಿ ಬೇಗನೆ ಬರಿದಾಗುತ್ತೆ. ಆದ್ದರಿಂದ ತಕ್ಷಣ ಆದೇಶ ನೀಡಿ ಎಲ್ಲ ಕಾಲುವೆಗಳಿಗೆ ನೀರು ಹರಿಸಿ 75% ರಿಂದ 80% ಕೆರೆಗಳನ್ನು ಭರ್ತಿ ಮಾಡಿ ಜನ ಹಾಗೂ ಜಾನುವಾರಗಳಿಗೆ ಕುಡಿಯುವ ನೀರಿನ ಅನುಕೂಲತೆ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಇದಕ್ಕೆ ಸ್ಪಂದಿಸಿದ ಪ್ರಾದೇಶಿಕ ಆಯುಕ್ತರು ತಕ್ಷಣ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು, ನೀರು ಹರಿಸಲು ಅನುಮತಿ ನೀಡಲಾಗುವುದೆಂದು ಭರವಸೆ ನೀಡಿದರು.

ಶಶಿಕಾಂತ ದೇಸಾಯಿ, ಫೀರಸಾಬ್ ನದಾಫ್, ವೆಂಕಟೇಶ ವಡ್ಡರ, ಸಾಯಿಬಣ್ಣಾ ಅಂಗಡಿ, ಇಬ್ರಾಹಿಂ ವಾಲಿಕಾರ, ಲಂಕೇಶ ತಳವಾರ, ನಾಗಪ್ಪ ಬೂಧಗೋಳಿ, ಮಂಜು ಛಲವಾದಿ, ಬಸವರಾಜ ಬೋಳಿ, ಚಂದಪ್ಪ ಬೋಮ್ಮನಗಿ, ಹೊನ್ನಪ್ಪ ಕೆಂಗುತ್ತಿ ಸೇರಿದಂತೆ ಮತ್ತಿತರರಿದ್ದರು.

ಕಿರುಸುದ್ದಿ

ಹುಲಿಗಿ ಜಾತ್ರೆ: ಭಕ್ತರಿಗೆ ಅನ್ನದಾಸೋಹ



ಮುನಿರಾಬಾದ್: ಐತಿಹಾಸಿಕ ಕ್ಷೇತ್ರ ಶ್ರೀಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ರಥೋತ್ಸವಕ್ಕೆ ಹುಲಿಗಿಗೆ ಹೋಗುವಂತ ಭಕ್ತಾದಿಗಳಿಗೆ ಶಿವಪುರ ಕ್ರಾಸ್‌ನಲ್ಲಿ ಹೋಟೆಲ್ ಮಾಲೀಕ ಬಾಬಣ್ಣ ಸುಮಾರು 1400 ರಿಂದ 1500 ನೂರು ಭಕ್ತಾದಿಗಳಿಗೆ ಬೆಳಿಗ್ಗೆಯಿಂದ ಸಂಜೆ ವರೆಗೂ ಅನ್ನ ಸಂತರ್ಪಣೆ ಮಾಡಿದರು.

ನಂತರ ಮಾತನಾಡಿ ನನ್ನದೊಂದು ಚಿಕ್ಕ ಅಳಿಲು ಸೇವೆ ಶ್ರೀದೇವಿಗೆ ಹೋಗುವಂತ ಭಕ್ತಾದಿಗಳು ಹಸಿವಿನಿಂದ ಹೋಗಬಾರದು ಎಂಬ ಕಾರಣಕ್ಕೆ ನನ್ನ ಕೈಲಾದಷ್ಟು ಸೇವೆ ಸಲ್ಲಿಸಿದ್ದೇನೆ. ದೇವಿ ಇನ್ನು ಹೆಚ್ಚು ಆಶೀರ್ವಾದ ಮಾಡಿದರೆ ಮುಂದಿನ ವರ್ಷ ಇನ್ನೂ ಹೆಚ್ಚಿನದಾಗಿ ಅನ್ನ ದಾಸೋಹ ಮಾಡುವುದಾಗಿ ಹೇಳಿದರು.

ಸಂಗೊಳ್ಳಿ ರಾಯಣ್ಣನ ಮೂರ್ತಿ ಅನಾವರಣ



ಸಿಂಧನೂರು: ತಾಲೂಕಿನ ರೌಡಕುಂದ ಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೂರ್ತಿಯನ್ನು ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಹಾಗೂ ಬಿಜೆಪಿ ಹಿರಿಯ ಮುಖಂಡರಾದ ಕೆ.ಕರಿಯಪ್ಪನವರು ಜೊತೆಯಾಗಿ ಸೇರಿಕೊಂಡು ಅನಾವರಣಗೊಳಿಸಿದರು.

ಮೂರ್ತಿ ಅನಾವರಣಗೊಳಿಸಿದ ನಂತರ ಕೆ.ವಿರುಪಾಕ್ಷಪ್ಪ ನವರು ಮಾತನಾಡಿ, ಸಂಗೊಳ್ಳಿ ರಾಯಣ್ಣ ನಲ್ಲಿದ್ದ ದೇಶಭಕ್ತಿ,ಸ್ವಾಮಿ ನಿಷ್ಠೆ, ಕೆಚ್ಚೆದೆಯ ಹೋರಾಟ ಈಗಿನ ಯುವಕರಲ್ಲಿ ಬರಬೇಕು. ಇಂತಹ ಸ್ವಾತಂತ್ರ್ಯ ಹೋರಾಟಗಾರರು ಯುವಕರಿಗೆ ಆದರ್ಶಪ್ರಾಯವಾಗಬೇಕು ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಬಿಜೆಪಿ ನಗರ ಮಂಡಲ ಅಧ್ಯಕ್ಷ ಸಿದ್ರಾಮೇಶ ಮನ್ನಾಪುರ, ಬಸವರಾಜ ಹಿರೇಗೌಡರ, ಮುತ್ತು ಬರ್ಸಿ ಹಾಗೂ ಹಾಲುಮತ ಸಮಾಜದ ಬಂಧುಗಳು, ಅಭಿಮಾನಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನೂತನ ಜಿಲ್ಲಾಧಿಕಾರಿ ಪೂವಿತಾಗೆ ಸನ್ಮಾನ



ಸಿಂಧನೂರು: ರಾಯಚೂರು ಜಿಲ್ಲೆಯ ನೂತನ ಜಿಲ್ಲಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿಕೊಂಡಿರುವ ಪೂವಿತಾ ಎಸ್. ಅವರಿಗೆ ಸಿಂಧನೂರಿನ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಿಂದ ಕಾರ್ಯಾಧ್ಯಕ್ಷ ಡಾ.ಚನ್ನಬಸವ ಸ್ವಾಮಿ ಹಿರೇಮಠ ಸನ್ಮಾನಿಸಿ, ಗೌರವಿಸಿ ನೆನಪಿನ ಕಾಣಿಕೆಯನ್ನು ವಿತರಿಸಿ ಆಶ್ರಮಕ್ಕೆ ಆಹ್ವಾನಿಸಿದರು.

ಈ ಸಮಯದಲ್ಲಿ ಆಶ್ರಮಕ್ಕೆ ಸ್ವಂತ ಜಾಗ ಇಲ್ಲದಿರುವುದು ಹಾಗೂ ಅನುದಾನ ಇಲ್ಲದಿರುವುದನ್ನು ಜಿಲ್ಲಾಧಿಕಾರಿ ಗಮನಕ್ಕೆ ತರಲಾಯಿತು. ನಂತರ ಜಿಲ್ಲಾಧಿಕಾರಿ ಒಮ್ಮೆ ಆಶ್ರಮಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡುವುದಾಗಿ ಭರವಸೆ ನೀಡಿದರು.

ಆಶ್ರಮದ ಕಾರ್ಯಾಧ್ಯಕ್ಷ ಡಾ.ಚನ್ನಬಸವ ಸ್ವಾಮಿ ಹಿರೇಮಠ, ಸಿಬ್ಬಂದಿ ಮರಿಯಪ್ಪ ನಾಯಕ, ರಡ್ಡಿ ಲೀಡರ್ ಅಮೀನಗಡ, ಅಮರೇಶ ಪಾಟೀಲ ರೇಕಲಮರಡಿ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.



ಸಿಂಧನೂರು: ತಾಲೂಕಿನ ಚಿಕ್ಕಬೇರ್ಗಿ ಗ್ರಾಮದ ಆರಾಧ್ಯ ದೈವ ಶ್ರೀಮರಿದೇವಿ ದೇವಸ್ಥಾನದ ನೂತನ ಕಟ್ಟಡಕ್ಕೆ ಶಾಸಕ ಆರ್.ಬಸನಗೌಡ ತುರವಿಹಾಳ ಅವರು ಭೂಮಿಪೂಜೆ ನೆರವೇರಿಸಿದರು. ಕಾಂತಯ್ಯ ಸ್ವಾಮಿ ಹಿರೇಮಠ, ಶಿವಪ್ಪ ಕೋಡಡದ, ಗುಂಡಪ್ಪ ನ್ಯಾಯ ಬೆಲೆ ಅಂಗಡಿ, ಕಲಮಂಗಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಆಂಜನೇಯ ನಾಯಕ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಸಹಜ ರಂಗ ಪುರಸ್ಕಾರ ಕಾರ್ಯಕ್ರಮ

ಯಲಬುರ್ಗಾ: ತಾಲೂಕಿನ ತರಲಕಟ್ಟಿ ಗ್ರಾಮದ ವಾಲ್ಮೀಕಿ ಸಮುದಾಯ ಭವನದ ಬಯಲು ಜಾಗೆಯಲ್ಲಿ ಸಹಜಾ ಟ್ರಸ್ಟ್ ಕೊಪ್ಪಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದಲ್ಲಿ ಎರಡು ದಿನಗಳವರೆಗೆ ಸಹಜ ನಾಟಕೋತ್ಸವ ಹಾಗೂ ಸತತ ಮೂವತ್ತು ವರ್ಷಗಳ ಕಾಲ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರಿಗೆ 'ಸಹಜ ರಂಗ ಪುರಸ್ಕಾರ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಮೇ 16ರಂದು ರಾತ್ರಿ 10-30ಕ್ಕೆ ಜಗದೀಶ ಆರ್. ಜಾತಿ ನಿರ್ದೇಶನದ ಶಿವಶರಣ ಹರಳಯ್ಯ ಭಕ್ತಿ ಪ್ರಧಾನ ನಾಟಕ ಹಾಗೂ ಮೇ 17ರಂದು ಸಂಜೆ 10-30ಕ್ಕೆ ಚಿತ್ರ ನಟ ಮಂಡ್ಯ ರಮೇಶ್ ನಿರ್ದೇಶನದ 'ಸಂಸಾರದಲ್ಲಿ ಸನಿದಪ' ಹಾಸ್ಯ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಸಹಜಾ ಟ್ರಸ್ಟ್ ಕಾರ್ಯದರ್ಶಿ ಶೀಲಾ ಹಾಲಕುರ್ಕಿ, ಸಂಚಾಲಕ ಶ್ರೀಕಾಂತಗೌಡ ಮಾಲಿಪಾಟೀಲ ತಿಳಿಸಿದ್ದಾರೆ.



ಹಗರಿಬೊಮ್ಮನಹಳ್ಳಿ: ತಾಲೂಕಿನ ಪಿಂಜಾರ್ ಹೆಗ್ಡಾಳ್ ಗ್ರಾಮದಲ್ಲಿ ಗ್ರಾಮಸ್ಥರು ಪ್ರತಿ ವರ್ಷದ ಪದ್ಧತಿಯಂತೆ ಸಾಮೂಹಿಕವಾಗಿ ಕಳುವಮ್ಮನ ಕಳುಹಿಸಿದರು.

ಬೇಸಾಯದ ಜತೆಗೆ ಉಪಕಸಬು ಶುರು | ದಿನಕ್ಕೆ 30-40 ಲೀ. ಹಾಲು ರವಾನೆ

ಹೈನುಗಾರಿಕೆಯಲ್ಲಿ ಯಶ ಕಂಡ ಯಮನೂರಪ್ಪ

ಶರಣಪ್ಪ ಲೈನದ ಹಿರೇಮನ್ನಾಪುರ



ಕುಷ್ಟಗಿ: ಕೃಷಿ ಜತೆಗೆ ಹೈನೋದ್ಯಮ ಆರಂಭಿಸುವ ಮೂಲಕ ಯಶ ಕಂಡುಕೊಂಡು ಇತರ ರೈತರಿಗೆ ಆದರ್ಶರಾಗಿ ಹೊರ ಹೊಮ್ಮಿದ್ದಾರೆ.

ತಾಲೂಕಿನ ಹೊಮ್ಮಿನಾಳ ಗ್ರಾಮದ ಯಮನೂರಪ್ಪ ಕೆರೆಪ್ಪನವರ್. ಸದ್ಯ ತೋಟದಲ್ಲಿ ಮನೆ ಮಾಡಿಕೊಂಡ ಜಮೀನಿನಲ್ಲಿ ಬೆಳೆಯುವ ವಿವಿಧ ಬೆಳೆಗಳ ಜತೆಗೆ ಹಸುಗಳನ್ನು ಸಾಕಿದರೆ ಜೀವನ ಉತ್ತಮವಾಗಿ ಸಾಗಿಸಬಹುದು ಎಂದು ಅರಿತು ಕೊಂಡು ರೈತರು ಕೃಷಿ ಚಟುವಟಿಕೆಯಲ್ಲಿ ಸಮಯ ವ್ಯರ್ಥಗೊಳಿಸದೇ ಸದಾ ಕಾಯಕವೇ ಕೈಲಾಸದಂತೆ ನಿರತರಾಗಿದ್ದಾರೆ. ರೈತ ಯಮನೂರಪ್ಪ ಅವರಿಗೆ 3 ಎಕರೆ ಜಮೀನಲ್ಲಿ ಬೇಸಾಯ ಮಾಡುತ್ತಿದ್ದು, ವ್ಯವಸಾಯದಲ್ಲಿ ಆಹಾರ ಬೆಳೆಗಳಾದ ಸಜ್ಜೆ, ಜೋಳ, ನವಣೆ, ಹೆಸರು, ತೊಗರಿ ಸೇರಿದಂತೆ ಇನ್ನಿತರ ಬೆಳಗಳನ್ನು ಬೆಳೆಸಲಾಗಿದೆ. ಕೃಷಿಯೊಂದಿಗೆ ಹೈನುಗಾರಿಕೆ ಆರಂಭಿಸಿದ್ದು, ನೆಮ್ಮದಿ ಜೀವನ ನಡೆಸುತ್ತಿದ್ದಾರೆ.

40 ಲೀ..ಹಾಲು: ಹಸುಗಳಿಗೆ ತೋಟದಲ್ಲಿ ಸುಸಜ್ಜಿತವಾದ ಶೆಡ್ ನಿರ್ಮಿಸಿಕೊಂಡು ಸುಮಾರು 10 ಹಸುಗಳನ್ನು ಹೊಂದಿರುವ ರೈತ ಅವರು ಜಮೀನಲ್ಲಿ ದಿನ ನಿತ್ಯವೂ 40 ಲೀ. ಹಾಲು ಸ್ವ-ಗ್ರಾಮದ ಹಾಲಿನ ಕೇಂದ್ರಕ್ಕೆ ರವಾನೆ ಮಾಡುತ್ತಿದ್ದಾರೆ. ಪ್ರತಿ ತಿಂಗಳಿಗೆ 30-40 ಸಾವಿರ ರೂ. ಆದಾಯ ದೊರೆಯುತ್ತಿದ್ದು, ಉಪ ಕಸಬು ಕೈಹಿಡಿಯುವಂತಾಗಿದೆ. ಎಚ್ ಎಫ್ ತಳಿ ಹಾಗೂ ಜರ್ಸಿ ತಳಿಯ ಹಸುಗಳಿವೆ. ಅರ್ಧ ಎಕರೆ ಜಮೀನಿನಲ್ಲಿ ರಾಸು ಹುಲ್ಲನ್ನು ಬೆಳೆಸಿದ್ದು, ಹಸುಗಳಿಗೆ ಮೇವಿನ ಅಭಾವ ಉಂಟಾದ ಸಂದರ್ಭದಲ್ಲಿ ಸೇಂಗಾ ಹೊಟ್ಟು, ಮೆಕ್ಕೆಜೋಳ ಸೊಪ್ಪು, ಹುಲ್ಲು ಖರೀದಿಸಿಕೊಂಡು ಹಸುಗಳು ಆರೈಕೆ ಮಾಡುತ್ತಿದ್ದಾರೆ. ಈವರೆಗೆ ಯಾವುದೇ ಬ್ಯಾಂಕ್‌ನಲ್ಲಿ ಲೋನ್ ಪಡೆಯದೇ ಸ್ವಂತ ಉದ್ಯೋಗ ಕಾಣುವ ಮೂಲಕ ಯಶಸ್ವಿ ಕಂಡಿದ್ದಾರೆ. ಮುಂದಿನ ದಿನಗಳಲ್ಲಿ ಜೇನು ಕೃಷಿ ಆರಂಭಿಸುವ ನೀರಿಕ್ಷೆ ಹೊಂದಿದ್ದಾರೆ ಎನ್ನುವುದು ರೈತ ಯಮನೂರಪ್ಪ ಅಭಿಲಾಷೆ.

ಕುಟುಂಬದವರು ಭಾಗಿ: ರೈತ ಯಮನೂರಪ್ಪ ಸ್ವ-ಗ್ರಾಮದಲ್ಲಿ ವಿನೂತನವಾಗಿ ಏನಾದರೂ ಕೆಲಸ ಆರಂಭಿಸುವ ಮೂಲಕ ಬದುಕು ಕಟ್ಟಿಕೊಳ್ಳಲು ಆಲೋಚನೆ ಮಾಡಿದರೆ ತಲೆಯಲ್ಲಿ ಒಳಿತಿದ್ದು, ಹೈನುಗಾರಿಕೆ. ಈಗತೋಟದಲ್ಲಿ ಉತ್ತಮ ವಾತವರಣ ನಿರ್ಮಿಸಿಕೊಂಡು ಇಡೀ ಕುಟುಂಬದವರು ಹೈನೋದ್ಯಮದಲ್ಲಿ ತೊಡಗಿದ್ದಾರೆ. ಯಮನೂರಪ್ಪ ಅವರಿಗೆ ಕುಟುಂಬದವರು ಆಸರೆಯಾಗಿ ನಿಂತಿದ್ದಾರೆ. ಹಸು ಸಾಕುವ ಮೂಲಕ ನಿತ್ಯವೂ ಸಾವಿರಾರು ರೂ. ಆದಾಯ ಬರುತ್ತಿದ್ದು ಸಹಕಾರಿಯಾಗಿದೆ.

ಇಂದಿನ ದಿನಗಳಲ್ಲಿ ಯುವಕರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಕೃಷಿ ಜೊತೆಗೆ ಬೇರೆ ಉಪ ಕಸಬು ಆರಂಭಿಸಿ ಉತ್ತಮ ಆದಾಯ ಗಳಿಸಿಕೊಂಡು ಜೀವನ ನಡೆಸಬೇಕು. ಹೈನುಗಾರಿಕೆ ಆರಂಭಿಸಿ ಉತ್ತಮ ಆದಾಯ ಗಳಿಸುವ ಮೂಲಕ ನೆಮ್ಮದಿ ಜೀವನ ನಡೆಸಲಾಗಿದೆ. ಈ ಭಾಗದಲ್ಲಿ ಬಹುತೇಕ ಅನ್ನದಾತರು ಏಕ ಬೆಳೆಗೆ ಅವಲಂಬಿತರಾಗದೇ ಉಪ ಕಸಬುನ್ನು ಅಳವಡಿಸಿಕೊಳ್ಳಬೇಕು.

■ ಯಮನೂರಪ್ಪ ಕೆರೆಯಪ್ಪನವರ್, ರೈತ ಹೊಮ್ಮಿನಾಳ

ದಿಗಂತ ವಿಶೇಷ

ಕುಡಿಯುವ ನೀರು ಪೂರೈಸಿ: ಜಿಲ್ಲಾಧಿಕಾರಿ

ಕಲಬುರಗಿ: ಜಿಲ್ಲೆಯ ಯಾವುದೇ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಕೂಡಲೆ ಬಾಡಿಗೆ ಮೇಲೆ ಕೊಳವೆ ಬಾವಿ ಪಡೆದು ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಂಗಳವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ 3-4 ವರ್ಷಗಳ ಸಮಸ್ಯಾತ್ಮಕ ಗ್ರಾಮಗಳನ್ನು ಮೊದಲ ಪಟ್ಟಿ ಮಾಡಿ ಅಲ್ಲಿ ಹೆಚ್ಚು ನಿಗಾ ವಹಿಸಬೇಕು ಮತ್ತು ಎಲ್ಲಿಯೂ ಕುಡಿಯುವ ನೀರಿನ ತೊಂದರೆಯಾಗದಂತೆ ಎಚ್ಚರದಿಂದ ಕಾರ್ಯನಿರ್ವಹಿಸಿ ಎಂದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಇ.ಇ.ಜಗದೇವ ಜೀವಣಗಿ ಮಾತನಾಡಿ, ಜಿಲ್ಲೆಯಲ್ಲಿ 26 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, ಬಾಡಿಗೆ ಕೊಳವೆ ಬಾವಿ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ ಎಂದಾಗ ಡಿಸಿ ಅವರು ಮಾತನಾಡಿ, ರೈತರೊಂದಿಗೆ ಬಾವಿ ಬಾಡಿಗೆ ಒಪ್ಪಂದ ಪತ್ರಕ್ಕೆ ಸಹಿ ಹಾಕಿಸಿಕೊಂಡು ದಾಖಲಾತಿ ನಿರ್ವಹಣೆ ಮಾಡಬೇಕು ಎಂದರು.

ಕೆಯುಡಿಐಎಫ್‌ಸಿ ಅಧೀಕ್ಷಕ ಅಭಿಯಂತ ಆರ್.ಪಿ.ಜಾಧವ್, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಮಾತನಾಡಿದರು.

ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತಾರಾದ ಸಾಹಿತ್ಯಾ ಆಲದಕಟ್ಟಿ, ಪ್ರಭುರೆಡ್ಡಿ ಸೇರಿದಂತೆ ತಾಲೂಕಿನ ತಹಶೀಲ್ದಾರರು, ತಾ ಪಂ ಇಒಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು, ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಗ್ರಾಮೀಣ ಭಾಗದಲ್ಲಿ ಪಿಡಿಒಗಳು ಕುಡಿಯುವ ನೀರಿನ ವಿಷಯದಲ್ಲಿ ಜವಾಬ್ದಾರಿಯಿಂದ ವರ್ತಿಸಬೇಕು. ಹಣ ಇಲ್ಲ ಎನ್ನುವ ಬೇಜವಾಬ್ದಾರಿತನ ಉತ್ತರ ನೀಡಬಾರದು.ಹಣಕ್ಕೆ ಯಾವುದೇ ಕೊರತೆ ಇಲ್ಲ. ಟಾಸ್ಕ್ ಫೋರ್ಸ್ ಕಮಿಟಿಯಲ್ಲಿ ಎಲ್ಲಾ ರೀತಿಯ ಕಾಮಗಾರಿ ಗಳನ್ನು ಅನುಮೋದನೆ ಪಡೆದು ಕೈಗೆತ್ತಿಕೊಳ್ಳ ಬಹುದಾಗಿದೆ.ಇದಲ್ಲದೆ ಕೆ.ಕೆ.ಆರ್.ಡಿ.ಬಿ ಮಂಡಳಿಯಿಂದ 17.30 ಕೋಟಿ ರೂ. ಜಿಲ್ಲೆಗೆ ನೀಡಲಾಗಿದೆ. ಗ್ರಾಮೀಣ ಭಾಗ ದಲ್ಲಿ ನೀರು ಪೂರೈಕೆಗೆ 7 ಸರ್ಕಾರಿ ಟ್ಯಾಂಕರ್‌ಗಳಿವೆ, ಇದನ್ನು ಸಮರ್ಪಕ ಬಳಸಿಕೊಳ್ಳಬೇಕು.

■ ಭಂವರ್ ಸಿಂಗ್ ಮೀನಾ, ಜಿಪಂ ಸಿಇಒ



ಅಲ್ಪಸಂಖ್ಯಾತರು ಎಲ್ಲ ಕ್ಷೇತ್ರದಲ್ಲಿ ಮುಂಚೂಣಿ

ರಾಯಚೂರು: ಅಲ್ಪಸಂಖ್ಯಾತರು ಇತ್ತೀಚೆಗೆ ಶೈಕ್ಷಣಿಕವಾಗಿ ಸಾಕಷ್ಟು ಪ್ರಮಾಣದಲ್ಲಿ ಮುಂದುವರಿಯುತ್ತಿರುವುದು ಸಂತೋಷದ ವಿಷಯವಾಗಿದೆ. ಅಲ್ಪಸಂಖ್ಯಾತರು ಹೊರ ರಾಷ್ಟಗಳಲ್ಲಿನ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ವ್ಯಾಪಾರದ ಪ್ರಗತಿಯನ್ನು ಅವಲೋಕಿಸಿಕೊಂಡು ಮುನ್ನಡೆಯಬೇಕು ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಅಂಜುಮನ್-ಎ ರಾಯಚೂರು ಸಂಸ್ಥೆ ಹಮ್ಮಿಕೊಂಡಿದ್ದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಮತ್ತು ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ರಾಜ್ಯದ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ ನೇತೃತ್ವದ ಸರ್ಕಾರ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಮೊದಲನೇ ವರ್ಷದಲ್ಲಿ ನಾಲ್ಕು ಸಾವಿರ ಕೋಟಿ, ಎರಡನೇ ವರ್ಷದಲ್ಲಿ ಐದು ಸಾವಿರ ಕೋಟಿ ಮತ್ತು ಪ್ರಸಕ್ತ ಸಾಲಿನಲ್ಲಿ ಆರುವರೆ ಸಾವಿರ ಕೋಟಿ ರೂ. ಅನುದಾನ ನೀಡಿದೆ. ಜೊತೆಗೆ 150 ಮೌಲಾನ ಅಜಾದ ಆಂಗ್ಲ ಮಾಧ್ಯಮ ಶಾಲೆಗಳಿಗೆ ಮಂಜೂರಾತಿ ನೀಡಿದೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಿದೆ ಹಾಗೂ ನೂರಾರು ವಸತಿ ನಿಲಯಗಳನ್ನು ಸರ್ಕಾರ ಮಂಜೂರು ಮಾಡಿದೆ. ಸರ್ಕಾರ ಅಲ್ಪಸಂಖ್ಯಾತರ ಪ್ರಗತಿಗಾಗಿ ಇಷ್ಟೆಲ್ಲಾ ಸೌಕರ್ಯ ಒದಗಿಸುತ್ತಿದ್ದರೂ, ತೃಪ್ತಿಕರವಾದ ಅಭಿವೃದ್ಧಿ ಆಗಿಲ್ಲ ಎಂದರು.

ಪ್ರಾಧ್ಯಾಪಕ ಡಾ.ಸೈಯದ ಮಿನ್ಹಾಜುಲ್ ಹಸನ್ ಮಾತನಾಡಿ, ವಿದ್ಯಾರ್ಥಿಗಳು ತಂದೆ ತಾಯಿಗಳಿಗೆ ವಿಧೇಯರಾಗಿರಬೇಕು, ಶಿಕ್ಷಕರ ಮಾತನ್ನು ಕೇಳಬೇಕು, ಉನ್ನತ ಶಿಕ್ಷಣ ಪಡೆಯುವಲ್ಲಿ ಯಾವುದೇ ಕಾರಣಕ್ಕೂ ಹಿಂಜರಿಯಬಾರದು ಎಂದು ಹೇಳಿದರು.

ಅಂಜುಮಾನ-ಎ ರಾಯಚೂರು ಸಂಸ್ಥೆಯ ಸಂಚಾಲಕ ಹ್ಯಾರಿಸ್ ಸಿದ್ದಿಖಿ ಪ್ರಾಸ್ತವಿಕವಾಗಿ ಮಾತನಾಡಿದರು. ಹತ್ತನೇ ತರಗತಿಯಲ್ಲಿ ಹಾಗೂ ಪಿಯುಸಿ ಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸತ್ಕರಿಸಿ, ಗೌರವಿಸಲಾಯಿತು.

ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಅಂಜುಮನ್ ಸಂಸ್ಥೆ ಮುಖಂಡರಾದ ಡಾ.ರಝಾಕ್ ಉಸ್ತಾದ್, ಅಬ್ದುಲ್ ಕರೀಂ, ಕೆ.ಅಸ್ಲಾಂ ಪಾಷಾ, ಮೌಲಾನಾ ಸೈಯದ್ ಅಬ್ದುಲ್ ಲತೀಫ ಲೌಬಲಿ ಸಾಹೇಬ್, ಸೈಯದ್ ತಾರೀಖ ಹಸನ್ ರಿಜ್ವಿ ವಕೀಲರು, ಸೈಯದ್ ಅಮೀನುಲ್ ಹಸನ್, ಶೇಖ ಮಹಿಬೂಬ, ಸೈಯದ್ ಜುಬೇರ ಮೋಹಿಯುದ್ದೀನ, ಡಾ.ಬಂದೇನವಾಜ್, ರಮಹತ್ ಬೇಗ್ ಇತರರಿದ್ದರು.



ಹಿಂಗಾರು ಹಂಗಾಮಿನ ಜೋಳ ಖರೀದಿಗೆ ಒತ್ತಾಯಿಸಿ ಮನವಿ

ಮಾನ್ವಿ: ಪಟ್ಟಣದ ಬಸವ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಿಲ್ಲಾ ಉಪನಿರ್ದೇಶಕ ನಜೀರ್ ಅಹ್ಮದ್ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ಸೂಗುರಯ್ಯ ಸ್ವಾಮಿ ಆರ್.ಎಸ್.ಮಠ ಮನವಿ ಸಲ್ಲಿಸಿದರು.




ಬಳಿಕ ಮಾತನಾಡಿ, ತಾಲೂಕಿನ ಮುಂಗಾರಿನಲ್ಲಿ ಜೋಳವನ್ನು ಬೆಳೆದ ರೈತರಿಂದ ಖರೀದಿ ಮಾಡಿದ ಜೋಳದ ಹಣವನ್ನು ಕೂಡಲೇ ರೈತರ ಖಾತೆಗೆ ಜಮಾ ಮಾಡಬೇಕು. ತಾಲೂಕಿನ ಜೋಳ ಖರೀದಿ ಕೇಂದ್ರಗಳಲ್ಲಿ ಹಿಂಗಾರ ಹಂಗಾಮಿನ ಜೋಳವನ್ನು ಖರೀದಿ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ತಾಲೂಕಿನ ಹೆಚ್ಚಿನ ನೈಜ ಜೋಳ ಬೆಳೆಗಾರರ ಎಫ್‌ಐಡಿ ಲಾಕ್ ಮಾಡಲಾಗಿರುವುದರಿಂದ ಜೋಳ ಮಾರಾಟ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೂಡಲೇ ರೈತರ ಜಮೀನಿಗೆ ಭೇಟಿ ನೀಡಿ ನೊಂದಾಣಿಯನ್ನು ಅನ್ ಬ್ಲಾಕ್ ಮಾಡಬೇಕು. ಫಸಲ್ ಭೀಮ ಯೋಜನೆಯಡಿಯಲ್ಲಿ ವ್ಯಾಪಕವಾಗಿ ಭ್ರಷ್ಟಚಾರ ನಡೆದಿದು ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ಎಂದು ಒತ್ತಾಯಿಸಿದರು.

ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ, ಜಿಲ್ಲಾ ಉಗ್ರಾಣ ನಿಗಮದ ಜಿಲ್ಲಾ ವ್ಯವಸ್ಥಾಪಕ ಪ್ರಕಾಶ್, ತಾಲೂಕು ಆಹಾರ ನಿರೀಕ್ಷಕರಾದ ವಿರುಪಣ್ಣ, ಕರ್ನಾಟಕ ರಾಜ್ಯ ರೈತ ಸಂಘದ ತಾ. ಅಧ್ಯಕ್ಷ ಸಿದ್ದಯ್ಯಸ್ವಾಮಿ, ಬಸನಗೌಡ ಬಲ್ಲಟಗಿ, ಯಂಕಪ್ಪ ಕಾರಬಾರಿ, ಲಿಂಗಾರೆಡ್ಡಿ ಪಾಟೀಲ, ಬಸವರಾಜ ಮಾಲಿಪಾಟೀಲ, ಬೂದಯ್ಯಸ್ವಾಮಿ, ಚಾಮರಸ ಜಾನೇಕಲ್, ಎಚ್.ಶಂಕರಪ್ಪಗೌಡ, ಬಸವರಾಜ ತಡಕಲ್, ಶರಣಪ್ಪ ಗೌಡ ಗವಿಗಟ್ಟ, ದೇವೇಂದ್ರಪ್ಪ, ಚೆನ್ನಾರೆಡ್ಡಿ,ಅಮರೇಶ ಅಲ್ದಾಳ್, ಬಸವಲಿಂಗಯ್ಯ, ಬಸವನಗೌಡ ಬೆಟ್ಟದೂರು, ಅಮರೇಶನಾಯಕ, ನಬಿಸಾಬ್, ಕಲ್ಯಾಣಬಸವ, ನಾಗಪ್ಪ, ಪಂಪಯ್ಯಸ್ವಾಮಿ. ವಿಜಯಕುಮಾರ, ಮಲ್ಲೇಶಗೌಡ, ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

ಪ್ರಧಾನಿ ಹೇಳಿಕೆ ತಪ್ಪಾಗಿ ಅರ್ಥೈಸಬೇಡಿ: ಸುರೇಶ ಭೂಮರಡ್ಡಿ

ಕೊಪ್ಪಳ: ಜಾಗತಿಕ ಸಂಕಷ್ಟದ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಲಹೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ತಪ್ಪಾಗಿ ಅರ್ಥೈಸುತ್ತಿರುವುದು ದೇಶದ ಪ್ರಗತಿಗೆ ಪೂರಕವಲ್ಲ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಸುರೇಶ ಭೂಮರಡ್ಡಿ ಹೇಳಿದ್ದಾರೆ.



ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ಜಗತ್ತಿನ ಪ್ರತಿಯೊಂದು ರಾಷ್ಟ್ರಕ್ಕೂ ಸಂಕಷ್ಟವನ್ನು ತಂದಿಟ್ಟಿದೆ. ಹಾಗೆ ನೋಡಿದರೆ ಬಹುತೇಕ ರಾಷ್ಟಗಳಲ್ಲಿ ಭೀಕರ ಪರಿಸ್ಥಿತಿ ಇದೆ. ಅಂತಹ ಪರಿಸ್ಥಿತಿ ನಮ್ಮ ದೇಶದಲ್ಲಿ ಇಲ್ಲ. ಈ ಸಂಘರ್ಷ ಕೊನೆಗೊಳ್ಳುವ ಲಕ್ಷಣ ಕಾಣುತ್ತಿಲ್ಲ. ಆದ್ದರಿಂದ ವಿದೇಶಿ ವಿನಿಮಯ ಸಂಗ್ರಹವನ್ನು ಉಳಿಸುವ ಸಲುವಾಗಿ ಮಿತವ್ಯಯದ ಕ್ರಮಗಳ ಅಗತ್ಯತೆಯನ್ನು ಪ್ರಧಾನಿಯವರು ಪ್ರತಿಪಾದಿಸಿದ್ದಾರೆ. ಈ ವಾಸ್ತವವನ್ನು ನಾವು ಸರಿಯಾಗಿ ಗ್ರಹಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಸದೃಢ ಆರ್ಥಿಕತೆಗೆ ವಿದೇಶಿ ವಿನಿಮಯ ಹೆಚ್ಚಿನ ಪ್ರಮಾಣದಲ್ಲಿ ಮೀಸಲಿನಲ್ಲಿರಬೇಕು. ಆಮದು ಪ್ರಮಾಣ ಕಡಿಮೆಗೊಂಡರೆ ಹಾಗೂ ದೇಶದ ಸಂಪತ್ತು ದೇಶದಲ್ಲಿಯೇ ವ್ಯಯಗೊಂಡರೆ ಇದು ಸಾಧ್ಯ. ಇಲ್ಲದಿದ್ದರೆ ರೂಪಾಯಿ ಮೌಲ್ಯ ಕುಸಿತಗೊಂಡು ಆರ್ಥಿಕತೆಗೆ ಧಕ್ಕೆ ಉಂಟಾಗುತ್ತದೆ. ಮೋದಿಯವರು ವೆಚ್ಚ ಕಡಿಮೆ ಮಾಡಿ ಉಳಿತಾಯಕ್ಕೆ ಮಹತ್ವ ಕೊಡಿ ಎಂದು ಹೇಳಿದ್ದಾರೆಯೆ ಹೊರತು ತ್ಯಾಗ ಮಾಡಿ ಎಂದು ಹೇಳಿಲ್ಲ. ಅವರ ಈ ಸಲಹೆ ಯುದ್ಧ ಕೊನೆಗೊಂಡು ಸಹಜ ಸ್ಥಿತಿ ಮರಳುವ ತನಕ ಮಾತ್ರ ಎಂಬುದನ್ನು ಗಮನಿಸಬೇಕಿದೆ ಎಂದು ಭೂಮರೆಡ್ಡಿ ವಿವರಿಸಿದ್ದಾರೆ.

ಡಾಲರ್ ಎದುರು ರೂಪಾಯಿ ಮೌಲ್ಯ ಕಡಿಮೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯನ ಮೇಲಿದೆ. ಪ್ರಧಾನಿಯವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡು ಐಷಾರಾಮಿ ಬದುಕಿಗೆ ಪ್ರಚೋದಿಸುವ ವಿರೋಧ ಪಕ್ಷಗಳ ಹೇಳಿಕೆ ದೇಶದ ಆರ್ಥಿಕ ಭದ್ರತೆಗೆ ಬಹುದೊಡ್ಡ ಅಪಾಯ. ರಾಜಕೀಯ ವಿಷಯಗಳನ್ನು ಆಚೆಗಿಟ್ಟು ದೇಶದ ಹಿತ ದೃಷ್ಟಿಯಿಂದ ವಿಚಾರಿಸುವ ಸಮಯವಿದು ಎಂದು ಹೇಳಿದ್ದಾರೆ.

ಮೇ 20ರಿಂದ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

ಕಲಬುರಗಿ: ಸಾರಿಗೆ ನೌಕರರ 38 ತಿಂಗಳ ಬಾಕಿ ವೇತನ ಪಾವತಿ ಸೇರಿದಂತೆ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೇ 20ರಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಸಂಚಾಲಕ ಜಯದೇವ ರಾಜೇಅರಸ್ ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಸ್ಪಂದಿಸದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಬೇಡಿಕೆಗಳು ಈಡೇರುವವರೆಗೂ ಮುಷ್ಕರದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸರ್ಕಾರದ ಧೋರಣೆಗೆ ಆಕ್ರೋಶ ಪ್ರತಿ ಬಾರಿ ಮುಷ್ಕರದ ಎಚ್ಚರಿಕೆ ನೀಡಿದಾಗಲೂ ಸರ್ಕಾರ ಮಾತುಕತೆಯ ನಾಟಕವಾಡಿ ಅಲ್ಪ-ಸ್ವಲ್ಪ ಭರವಸೆ ನೀಡಿ ಕೈತೊಳೆದುಕೊಳ್ಳುತ್ತಿದೆ. ಈ ಬಾರಿ ಏ.29ರಂದೇ ಮುಷ್ಕರದ ಸೂಚನೆ ನೀಡಿದ್ದರೂ ಸರ್ಕಾರ ಇದುವರೆಗೆ ಚರ್ಚೆಗೆ ಆಹ್ವಾನಿಸಿಲ್ಲ. ಕೋವಿಡ್ ಸಂದರ್ಭದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡಿದ ನೌಕರರಿಗೆ ವೇತನ ನೀಡಲು ಸರ್ಕಾರ ಮೀನಮೇಷ ಎಣಿಸುತ್ತಿರುವುದು ಸರಿಯಲ್ಲ ಎಂದು ಸಮಿತಿಯ ಎಚ್.ಎಸ್.ವಿಜಯಭಾಸ್ಕರ ಅಸಮಾಧಾನ ವ್ಯಕ್ತಪಡಿಸಿದರು.

ಎಸ್ಮಾ ಬೆದರಿಕೆಗೆ ಮಣಿಯಲ್ಲ: ಸಾರ್ವಜನಿಕರಿಗೆ ತೊಂದರೆ ನೀಡುವ ಉದ್ದೇಶ ನಮಗಿಲ್ಲ, ಆದರೆ ಕುಟುಂಬ ನಿರ್ವಹಣೆಗಾಗಿ ನಮಗೆ ನ್ಯಾಯಯುತ ವೇತನದ ಅಗತ್ಯವಿದೆ. ಸರ್ಕಾರ ಮುಷ್ಕರ ಹತ್ತಿಕ್ಕಲು 'ಎಸ್ಮಾ' ಜಾರಿ ಮಾಡುವ ಮೂಲಕ ದಮನಕಾರಿ ನೀತಿ ಅನುಸರಿಸುತ್ತಿದೆ. ಬೆದರಿಕೆ ಹಾಕುವ ಬದಲು ಪ್ರಜಾತಾಂತ್ರಿಕವಾಗಿ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಲಿ ಎಂದು ಸಮಿತಿಯ ಎಚ್.ಎಸ್. ಮಂಜುನಾಥ ಆಗ್ರಹಿಸಿದರು. ಸಮಿತಿಯ ಪ್ರಮುಖರಾದ ಜಗದೀಶ, ನಾರಾಯಣ ಸ್ವಾಮಿ, ಚಂದ್ರಕಾಂತ ಗದ್ದಗಿ, ಸಿದ್ದಪ್ಪ ಪಾಲ್ಕಿ ಇತರರಿದ್ದರು.

ನಾವು ಜನರ ಸೇವೆ ಮಾಡುವವರು, ಆದರೆ ನಮ್ಮ ಸಂಸಾರದ ದೋಣಿ ಸಾಗಿಸಲು ವೇತನವೇ ಆಧಾರ. ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಿದರೆ ಸಾರ್ವಜನಿಕರಿಗೆ ಆಗುವ ಅನನುಕೂಲವನ್ನು ತಪ್ಪಿಸಬಹುದು.

■ ಎಚ್.ಎಸ್.ಮಂಜುನಾಥ, ಸಮಿತಿ ಮುಖಂಡ

ಕುಷ್ಟಗಿ: ಮೈತ್ರಿ ಕಾರ್ಯಕರ್ತರ ಸಭೆ

ಕುಷ್ಟಗಿ: ಪಟ್ಟಣದ ಸರ್ಕಾರಿ ಪಶು ಆಸ್ಪತ್ರೆಯಲ್ಲಿ ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಕೊಪ್ಪಳ ಮೈರಾಡಾ ಸಂಸ್ಥೆಯ ಸಹಭಾಗಿತ್ವದಲ್ಲಿ ಭಾರತ ಸಂಜೀವಿನಿ ಕರ್ನಾಟಕ ಮೈತ್ರಿ ಕಾರ್ಯಕರ್ತರ ಸಭೆ ಮಂಗಳವಾರ ನಡೆಯಿತು.

ಪಶು ಇಲಾಖೆಯ ಸಹಾಯಕ ನಿರ್ದೇಶಕ ಡಾ.ಆನಂದ ದೇವರನಾವದಗಿ ಮಾತನಾಡಿ, ಜಾನುವಾರಗಳಿಗೆ ಕೃತಕ ಗರ್ಭಧಾರಣೆ ಮಾಡುವಾಗ ಮುನ್ನೆಚ್ಚರಿಕೆ ಕ್ರಮಗಳನ್ನು ಕ್ರಮಕೈಗೊಳ್ಳಬೇಕು ಸುರಕ್ಷತೆಯಿಂದ ಕೃತಕ ಗರ್ಭಧಾರಣೆ ಮಾಡಬೇಕು ಎಂದರು.

ನಂತರ ಮೈತ್ರಿ ಕಾರ್ಯಕರ್ತರಿಗೆ ಕೃತಕ ಗರ್ಭಧಾರಣೆ ಸಲಕರಣೆ ವಿತರಣೆ ಮಾಡಲಾಯಿತು.

ಡಾ.ಮಂಜುನಾಥ ಅಮರಾವತಿ, ಜಿಲ್ಲಾ ಸಂಯೋಜಕ ಚನ್ನಬಸವ ಹಳೆಮನಿ, ಜಾನುವಾರು ವೈದ್ಯಾಧಿಕಾರಿ ಡಾ.ಡಿ.ಬಿ. ಇಟ್ನಳ್ಳಿ, ಮಣಿಕಂಠ ಹಳ್ಳೂರು ಸೇರಿದಂತೆ ಮೈತ್ರಿ ಕಾರ್ಯಕರ್ತರು ಹಾಗೂ ಪಶು ಆಸ್ಪತ್ರೆಯ ಸಿಬ್ಬಂದಿ ಇದ್ದರು. ಪುಟ್ಟರಾಜ ಗಟ್ಟಿ ನಿರ್ವಹಿಸಿದರು.



ಲಿಂಗನಬಂಡಿ ಹುಲಿಗೆಮ್ಮದೇವಿ ಜಾತ್ರೆ ಅದ್ದೂರಿ

ಯಲಬುರ್ಗಾ: ತಾಲೂಕಿನ ಲಿಂಗನಬಂಡಿ ಗ್ರಾಮದ ಗುಡ್ಡದ ಮೇಲಿರುವ ಆರಾಧ್ಯ ಅದಿದೇವತೆ ಶ್ರೀಹುಲಿಗೆಮ್ಮದೇವಿ ಜಾತ್ರೆ ಭಕ್ತಿ ಸಂಭ್ರಮ ಸಡಗರದಿಂದ ಅದ್ದೂರಿಯಾಗಿ ನಡೆಯಿತು.

ಮೂರು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ಇಂದು ಮೊದಲನೆ ದಿನ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ದೇವಸ್ಥಾನದಲ್ಲಿ ವಾತಾವರಣ ಶತಮಾನಗಳ ಇತಿಹಾಸ ಹೊಂದಿರುವ ಈ ದೇವಸ್ಥಾನವು ಪ್ರಸಿದ್ಧ ಶಕ್ತಿದೇವಿ ಕ್ಷೇತ್ರಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಇಂದು ಬೆಳಿಗ್ಗೆ ದೇವಸ್ಥಾನದಲ್ಲಿ ದೇವಿ ಮೂರ್ತಿಗೆ ಅಲಂಕಾರ, ಕುಂಕುಮಾರ್ಚನೆ, ಪುಷ್ಪಾರ್ಚನೆ ಸೇರಿದಂತೆ ವಿಶೇಷವಾಗಿ ಬಾಳೆ ದಂಡಿಗೆ ಕಾರ್ಯಕ್ರಮ ನಡೆಯಿತು. ಇದಕ್ಕೂ ಮೊದಲು ದೇವಸ್ಥಾನ ಆವರಣದ ಪವಿತ್ರ ಬಾವಿಯಲ್ಲಿ ಗಂಗಾಪೂಜೆ ನೆರವೇರಿಸಲಾಯಿತು.



ಹುಲಗಿಯಲ್ಲಿ ನಡೆಯುವ ಪ್ರಸಿದ್ಧ ಹುಲಿಗೆಮ್ಮದೇವಿ ಜಾತ್ರೆ ಮಾದರಿಯಲ್ಲಿಯೇ ಇಲ್ಲಿ ಜಾತ್ರೆ ನಡೆಯುವುದು ಈ ಭಾಗದ ವಿಶೇಷ. ಈ ಕ್ಷೇತ್ರದ ಮಹಿಮೆ ಕುರಿತು ಭಕ್ತರಲ್ಲಿ ಅಪಾರ ಭಕ್ತಿ ಇದೆ. ದೇವಿಯ ಕೃಪೆಯಿಂದ ಸಂಕಷ್ಟಗಳು ದೂರವಾಗಿ, ಮನೋಭಿಲಾಷೆಗಳು ಈಡೇರುತ್ತವೆ ಎಂಬ ಭಕ್ತರಲ್ಲಿ ಬಲವಾದ ವಿಶ್ವಾಸವಿದೆ. ಆರಾಧ್ಯ ದೇವತೆ ಶ್ರೀಹುಲಿಗೆಮ್ಮದೇವಿಯ ದರ್ಶನಕ್ಕಾಗಿ ಪ್ರತಿವರ್ಷ ಸಾವಿರಾರು ಭಕ್ತರು ವಿವಿಧ ಜಿಲ್ಲೆಗಳಿಂದ ಆಗಮಿಸುತ್ತಾರೆ. ಇಂದು ಮಡಿ ಹುಡಿಯಿಂದ ಆಗಮಿಸಿದ ಅಪಾರ ಭಕ್ತರು ಶ್ರೀದೇವಿಗೆ ಹರಕೆ, ದೀಡದಂಡ ನಮಸ್ಕಾರ ಸಲ್ಲಿಸಿ ಪುನೀತರಾದರು.

ಮೇ 12ರಂದು ಅಗ್ನಿಕೊಂಡ, ಅಕ್ಕಿ ಪಾಯಸ ಸೇರಿದಂತೆ ವಿಶೇಷ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ. ಮೇ 13ರಂದು ಸಮಾರೋಪ ಸಮಾರಂಭ ಮಹಾಮಂಗಳಾರತಿ ಹಾಗೂ ವಿವಿಧ ಪೂಜಾ ಕೈಂಕರ್ಯಗಳು ವಿಜೃಂಭಣೆ ನೆರವೇರಲಿದೆ.

ಮೇ 12ರಂದು ಮಂಗಳವಾರ ದಿನ ಶ್ರೀದೇವಿ ಆರಾಧಕ ಗ್ರಾಮದ ದಿ.ಮಳಿಯಪ್ಪ ಹೊಳಿಯಪ್ಪ ಚೌಡ್ಕಿ ಇವರ ಕುಟುಂಬ ಸದಸ್ಯರಿಂದ ಭಕ್ತರಿಗೆ ಪ್ರಸಾದ ವ್ಯವಸ್ಥೆಯ ಸೇವೆ ಸಲ್ಲಿಸಲಿದ್ದೇವೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಕಿರುಸುದ್ದಿ

ಲಿಂಕ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಬಳ್ಳಾರಿ: ನಗರದ 34ನೇ ವಾರ್ಡ್ ವ್ಯಾಪ್ತಿಯ ವಿದ್ಯಾನಗರ 7ನೇ ಅಡ್ಡ ರಸ್ತೆಯ ಬಳಿ 81.93 ಲಕ್ಷ ರೂ.ಗಳ ಅನುದಾನದ ವೆಚ್ಚದಲ್ಲಿ ಲಿಂಕ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ನಾರಾ ಭರತ್ ರೆಡ್ಡಿ ಅವರು ಮಂಗಳವಾರ ಭೂಮಿ ಪೂಜೆ ನೆರವೇರಿಸಿದರು.

ಮಹಾನಗರ ಪಾಲಿಕೆ ಸದಸ್ಯರು, ಮಾಜಿ ಮೇಯರ್ ಎಂ.ರಾಜೇಶ್ವರಿ ಸುಬ್ಬರಾಯಡು, ಯುವ ಉತ್ಸಾಹಿ ಮುಖಂಡ ಸುಬ್ಬರಾಯುಡು, ವಿಷ್ಣು ಬೋಯಪಾಟಿ, ಮಲ್ಲಿ, ಯೋಗಾನಂದ ರೆಡ್ಡಿ, ಹಗರಿ ಹೊನ್ನೂರಪ್ಪ, ಪರಶುರಾಮುಡು, ಹೊನ್ನಪ್ಪ, ಯೋಗೇಂದ್ರ ಕಟ್ಟ, ಇಟ್ಟಾವರಂ ಮಲ್ಲಿಕಾರ್ಜುನ, ಲಾಲ್ ಮೋಹನ್, ಭತ್ರಿ ಮಂಜು, ರಘು ಕಟ್ಟ, ಹರ್ಷ, ಸತೀಶ್ ಸೇರಿದಂತೆ ಇತರರಿದ್ದರು.

ರೂಪಾಗೆ ರಾಷ್ಟ್ರಮಟ್ಟದ ಶಿಕ್ಷಣ ರತ್ನ ಪ್ರಶಸ್ತಿ



ಸುರಪುರ: ಬಳ್ಳಾರಿ ಗಡಿನಾಡು ಸಮ್ಮೇಳನದಲ್ಲಿ ಕು. ರೂಪಾ ಶಂಕರರಾವ್ ಪಾಟೀಲ ಅವರಿಗೆ 'ರಾಷ್ಟ್ರಮಟ್ಟದ ಶಿಕ್ಷಣ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಳ್ಳಾರಿಯ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ರಾಯಚೂರಿನ ಬೆಳಕು ಸಾಹಿತ್ಯ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ 'ಗಡಿನಾಡು ಸಮ್ಮೇಳನ'ದಲ್ಲಿ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಸುಗೂರೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯಾದ ಕುಮಾರಿ ರೂಪಾ ಶಂಕರರಾವ್ ಪಾಟೀಲ ಅವರಿಗೆ ಪ್ರತಿಷ್ಠಿತ 'ರಾಷ್ಟ್ರಮಟ್ಟದ ಶಿಕ್ಷಕ ರತ್ನ ಪ್ರಶಸ್ತಿ ಅವಾರ್ಡ್ ನೀಡಿ ಗೌರವಿಸಲಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ನಿರಂತರ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಅಮರೇಶ ನುಗಡೋಣಿ ಕಾರ್ಯಕ್ರಮವನ್ನು ಉದ್ಘಾಟಿಸಿದರೆ, ಬೆಳಕು ಸಂಸ್ಥೆಯ ಅಧ್ಯಕ್ಷರಾದ ಶ್ರೀಅಣ್ಣಪ್ಪ ಮೇಟಿಗೌಡ ಅವರ ನೇತೃತ್ವದಲ್ಲಿ ಸಾಧಕರಿಗೆ ಸನ್ಮಾನ ನೆರವೇರಿಸಲಾಯಿತು. ಸಮಾರಂಭದಲ್ಲಿ ಗಣ್ಯರ ಸಮ್ಮುಖದಲ್ಲಿ ಕೃತಿ ಲೋಕಾರ್ಪಣೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಪ್ರಶಸ್ತಿ ಸ್ವೀಕರಿಸಿದ ರೂಪಾ ಶಂಕರರಾವ್ ಪಾಟೀಲ್ ಅವರಿಗೆ ಅವರ ಕುಟುಂಬಸ್ಥರು, ಅಭಿಮಾನಿಗಳು ಮತ್ತು ಸಂಘಟನೆಯ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದರು.

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಸರ್ಕಾರಿ ಶತಮಾನ ಶಾಲೆಯಲ್ಲಿ ಭಾನುವಾರ ಮಹಾಸಾದ್ವಿ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿ ಆಚರಿಸಲಾಯಿತು.

ಈ ವೇಳೆ ಶಾಲೆಯ ಮುಖ್ಯ ಗುರು ಬಿಎಸ್ ಸದ್ಯೋಜಾತಪ್ಪ ಮಾತನಾಡಿ, ಮಹಾಸಾದ್ವಿ ಹೇಮರೆಡ್ಡಿ ಮಲ್ಲಮ್ಮ ಕೌಟುಂಬಿಕ ಜೀವನದಲ್ಲಿ ಮೌಲ್ಯಗಳನ್ನು ಬಿತ್ತುವ ಮೂಲಕ ಸನ್ಮಾರ್ಗದಲ್ಲಿ ಪ್ರತಿಯೊಬ್ಬರನ್ನು ತೆಗೆದುಕೊಂಡು ಹೋಗಲು ಪ್ರಯತ್ನಿಸಿದ ಮಹಾಶರಣೆ ಅವರ ಹಾಕಿಕೊಟ್ಟ ಮಾರ್ಗದಲ್ಲಿ ಸಾಗುವ ಮೂಲಕ ಪ್ರತಿಯೊಂದು ಕುಟುಂಬಗಳು ಸಮಾಜದಲ್ಲಿ ಸರಿಯಾದ ಮಾರ್ಗದಲ್ಲಿ ಸಾಗುವ ಮೂಲಕ ಸ್ವಾಸ್ಥ ಸಮಾಜದ ನಿರ್ಮಾಣಕ್ಕೆ ಸಹಕಾರಿಯಾಗಬೇಕು ಎಂದರು.

ಈ ವೇಳೆ ಶಿಕ್ಷಕರಾದ ಎಸ್.ರಾಮಪ್ಪ, ಮಂಜುನಾಥ್, ದೇವರಾಜ್ ಸೇರಿದಂತೆ ಮಕ್ಕಳು ಇತರರಿದ್ದರು.



ಬಳ್ಳಾರಿ: ನಗರದಲ್ಲಿ ಹನುಮಾನ್ ಜಯಂತ್ಯುತ್ಸವ ನಿಮಿತ್ತ ಶ್ರೀಬಾಲಾಂಜನೇಯ ಸ್ವಾಮಿ ದೇವಸ್ಥಾನಕ್ಕೆ ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅವರು ತೆರಳಿ, ಸ್ವಾಮಿಯ ದರ್ಶನ ಪಡೆದು, ವಿಶೇಷ ಪೂಜೆ ಅರ್ಚನೆ ಸಲ್ಲಿಸಿ, ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು. ನಗರ ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ ನೂರಾರು ಭಕ್ತರು ದೇವರ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು.

ಬ್ರಾಹ್ಮಣ ವಟುಗಳ ಪ್ರವೇಶಕ್ಕೆ ಸುವರ್ಣಾವಕಾಶ

ಬಳ್ಳಾರಿ: ಶ್ರೀಗುರು ಸಾರ್ವಭೌಮ ಸಂಸ್ಕೃತ ವಿದ್ಯಾಪೀಠ ಮಂತ್ರಾಲಯ ಹಾಗೂ ರಾಯಚೂರಿನಲ್ಲಿ 2026-27ನೇ ಸಾಲಿನ ವಿದ್ಯಾಪೀಠದ ಪ್ರವೇಶ ಪ್ರಾರಂಭವಾಗಿದ್ದು, ಜೂ.15ರಿಂದ ವಿದ್ಯಾಪೀಠದ ತರಗತಿಗಳು ಪುನಃ ಪ್ರಾರಂಭವಾಗಲಿವೆ ಎಂದು ಬಳ್ಳಾರಿಯ ಶ್ರೀರಾಘವೇಂದ್ರ ಸ್ವಾಮಿ ಶ್ರೀಮಠದ ಆಡಳಿತಾಧಿಕಾರಿ ಪಂ.ಪ್ರಸನ್ನಾಚಾರ ಅವರು ತಿಳಿಸಿದ್ದಾರೆ.



8 ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಪ್ರವೇಶಕ್ಕೆ ಸುವರ್ಣಾವಕಾಶ. ಉಚಿತ ಲೌಕಿಕ ಶಿಕ್ಷಣ ಜೊತೆಗೆ, ಉಚಿತ ಭೋಜನವ್ಯವಸ್ಥೆ, ವಸ್ತ್ರ ವಸತಿ ಸಂಪೂರ್ಣ ಉಚಿತವಾಗಿದೆ ಹಾಗೂ ಅನುಮತಿ ಪಡೆದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರಥಮ, ಕಾವ್ಯ, ಸಾಹಿತ್ಯ, ಬಿ.ಎ., ಎಂ.ಎ. ಪರೀಕ್ಷೆಗಳನ್ನು ವಿದ್ಯಾಲಯದಲ್ಲಿ ನಡೆಸಲಾಗುವುದು. ವೇದ, ಕಾವ್ಯ, ಸಾಹಿತ್ಯ, ವ್ಯಾಕರಣ, ತರ್ಕ, ವೇದಾಂತ, ಪೌರಹಿತ್ಯ, ಜ್ಯೋತಿಷ್ಯ ಶಾಸ್ತ್ರಗಳ ಅಧ್ಯಯನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. 2026-27ನೇ ಸಾಲಿನ ವಿದ್ಯಾಪೀಠದ ಪ್ರವೇಶಗಳು ಪ್ರಾರಂಭವಾಗಿದ್ದು, ಜೂ.15ರಿಂದ ವಿದ್ಯಾಪೀಠದ ತರಗತಿಗಳು ಪ್ರಾರಂಭವಾಗಿವೆ. ಕೂಡಲೇ ಆಸಕ್ತರು, ಹೆಚ್ಚಿನ ಮಾಹಿತಿಗಾಗಿ ಡಾ.ಎನ್.ವಾದಿರಾಜಾಚಾರ್ಯ 9492570190 ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.



ಬಳ್ಳಾರಿ: ಕಂಪ್ಲಿ ಪಟ್ಟಣದ ಕೆನರಾ ಬ್ಯಾಂಕ್ ಶಾಖೆಯ ಮುಖ್ಯಪ್ರಬಂಧಕಾಗಿ ಅಧಿಕಾರ ವಹಿಸಿಕೊಂಡ ಶಿಶಿರ ಜನಾರ್ಧನ್ ಅವರನ್ನು ಸಿಬ್ಬಂದಿ ಅತ್ಯಂತ ಪ್ರೀತಿಯಿಂದ ಸ್ವಾಗತಿಸಿ ಸನ್ಮಾನಿಸಲಾಯಿತು. ವರ್ಗಾವಣೆಗೊಂಡ ಹಿರಿಯ ವ್ಯವಸ್ಥಾಪಕ ಕೆ.ಲಕ್ಷ್ಮೀ ನರಸಯ್ಯ, ಸಹಾಯಕ ವ್ಯವಸ್ಥಾಪಕ ಎಚ್.ಮಂಜಪ್ಪ, ರಂಗನಾಥ ಹಾಗೂ ಅವಿನಾಶ್ ಜವಾರೆ ಅವರನ್ನು ಸನ್ಮಾನಿಸಿ ಬೀಳ್ಕೊಡುಗೆ ನೀಡಲಾಯಿತು.

ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ | ಭರತ್ ರೆಡ್ಡಿ ಮನವಿ

ಸುವರ್ಣ ಬಳ್ಳಾರಿ ಸಂಕಲ್ಪಕ್ಕೆ ಕೈಜೋಡಿಸಿ

ಬಳ್ಳಾರಿ: ನಗರವನ್ನು ವಿವಿಧ ರೀತಿಯಲ್ಲಿ ಅಭಿವೃದ್ಧಿ ಪಡಿಸಿ ರಾಜ್ಯದಲ್ಲಿಯೇ ಮಾದರಿ ನಗರವನ್ನಾಗಿ ಮಾಡುವೆ, ನನ್ನ ಕನಸಿನ ಸುವರ್ಣ ಬಳ್ಳಾರಿ ಮಾಡುವ ಸಂಕಲ್ಪ ನನ್ನದು, ನಾಗರಿಕರು ಕೈಜೋಡಿಸಬೇಕು ಎಂದು ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಮನವಿ ಮಾಡಿದರು.

ನಗರದ ವಿವಿಧ ವಾರ್ಡ್‌ಗಳಲ್ಲಿ ಮಂಗಳವಾರ ಕೋಟ್ಯಂತರ ವೆಚ್ಚದ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ವಿರೋಧ ಪಕ್ಷಗಳ ನಾಯಕರ ಸುಳ್ಳು ಆರೋಪಗಳಿಗೆ ಜನರು ಕಿವಿ ಕೊಡಬೇಡಿ, ನುಡಿದಂತೆ ನಡೆಯುವ ಜಾಯಮಾನ ನನ್ನದು, ಅವಧಿಯಲ್ಲಿ ಇನ್ನೂ ವಿವಿಧ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡು ಬಳ್ಳಾರಿಯನ್ನು ನಿಮ್ಮೆಲ್ಲರ ಕನಸಿನ ಬಳ್ಳಾರಿಯನ್ನಾಗಿ ಮಾಡುವೆ ಎಂದರು.

ನಾನು ಅಧಿಕಾರಕ್ಕಾಗಿ ಅಂಟಿಕೊಂಡವನಲ್ಲ, ನನಗೆ ನನ್ನ ಬಳ್ಳಾರಿ ಜನರೇ ಪ್ರಾಣ, ಅವಧಿಯಲ್ಲಿ ನನ್ನ ಜನರ ನಿರೀಕ್ಷೆಯಂತೆ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಂಡು ಬಳ್ಳಾರಿಯ ಕೀರ್ತಿಯನ್ನು ಇನ್ನೂ ಉತ್ತುಂಗಕ್ಕೆ ಕೊಂಡೊಯ್ಯಬೇಕು ಎನ್ನುವ ಕನಸು, ಹಂಬಲ ನನ್ನದು. ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯ. ರಾಜ್ಯದಲ್ಲಿ ನಮ್ಮದೇ ಸರ್ಕಾರ ಇದ್ದು, ಅನುದಾನದ ಕೊರತೆಯಾಗೋಲ್ಲ ಎನ್ನುವ ವಿಶ್ವಾಸವಿದೆ. ಅವಧಿಯಲ್ಲಿ ಬಳ್ಳಾರಿ ಅಭಿವೃದ್ಧಿಯಲ್ಲಿ ರಾಜ್ಯದ ಗಮನಸೆಳೆಯಲಿದೆ, ಇದರಲ್ಲಿ ಅನುಮಾನವೇ ಬೇಡ ಎಂದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಎಂ. ರಾಜೇಶ್ವರಿ ಸುಬ್ಬರಾಯಡು, ಚಾನಾಳ್ ಶೇಖರ್, ಶಿವಶಂಕರಗೌಡ, ಯಾಳ್ಪಿ ಪಂಪನಗೌಡ, ತಿಮ್ಮನಗೌಡ, ನಾಗೇಶ್ವರ ರಾವ್, ರವಿ, ಶಶಿಧರ ಮೇಟಿ, ಗುತ್ತಿಗನೂರು ವಿರೂಪಾಕ್ಷಗೌಡ, ಅಂಗಡಿ ಪಂಪಾಪತಿ, ಮೇಟಿ ದಿವಾಕರಗೌಡ, ಶ್ಯಾಮ್, ಯುಧಿಷ್ಠಿರ, ವಾಸು ರೆಡ್ಡಿ ಇತರರಿದ್ದರು. ನಂತರ ಇದೇ ವಾರ್ಡ ಸಿದ್ದಾರ್ಥ ನಗರದಲ್ಲಿ 50 ಲಕ್ಷ ರೂ.ಗಳ ಅನುದಾನದ ವೆಚ್ಚದಲ್ಲಿ ಲಿಂಕ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ,

ಬಳಿಕ ವಾರ್ಡ್ ಸಂಖ್ಯೆ 24ರ ಬ್ರಹ್ಮಯ್ಯ ಕಾಲೋನಿಯಲ್ಲಿ 50 ಲಕ್ಷ ರೂ.ಗಳ ಅನುದಾನದ ವೆಚ್ಚದಲ್ಲಿ ಲಿಂಕ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ, ನಂತರ ವಾರ್ಡ್ ಸಂಖ್ಯೆ 34ರ ವಿದ್ಯಾನಗರ 7ನೇ ಅಡ್ಡ ರಸ್ತೆಯ ಬಳಿ 81.93 ಲಕ್ಷ ರೂ.ಗಳ ಅನುದಾನದ ವೆಚ್ಚದಲ್ಲಿ ಲಿಂಕ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ, ಬಳಿಕ ವಾರ್ಡ್ ಸಂಖ್ಯೆ 4ರ ಗುಗ್ಗರಹಟ್ಟಿಯ ಮುಖ್ಯ ರಸ್ತೆ 1.50 ಕೋಟಿ ರೂ.ಗಳ ವೆಚ್ಚದಲ್ಲಿ ಪಾಂಡುರಂಗ ಗುಡಿಯಿಂದ ಹೆಚ್‌ಎಲ್ ಕಾಲುವೆ ಹೊನ್ನಳ್ಳಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ, ನೆರವೇರಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಡಿ.ಸೂರಿ, ಸುಬ್ಬರಾಯುಡು, ಗುಗ್ಗರಹಟ್ಟಿ ಅನ್ವರ್, ಎಂಎನ್ಪಿ ಮಾಬು, ಸಿ.ಡಿ. ಹೊನ್ನೂರಸ್ವಾಮಿ, ಪರಶುರಾಮುಡು, ಹೊನ್ನಪ್ಪ ಸೇರಿದಂತೆ ಇತರರಿದ್ದರು.



ಕಾಮಗಾರಿಗಳಿಗೆ ಚಾಲನೆ

ನಗರದ ವಾರ್ಡ್ ಸಂಖ್ಯೆ 21ರ ಹರಿಪ್ರಿಯ ನಗರದಲ್ಲಿ 5 ಕೋಟಿ ರೂ.ಗಳ ಅನುದಾನದ ವೆಚ್ಚದಲ್ಲಿ ಬೀದಿ ದೀಪ, ಚರಂಡಿ, ಒಳ ಚರಂಡಿ, ಪೇವರ್ಸ್ ಅಳವಡಿಕೆ ಕಾಮಗಾರಿಗೆ ಶಾಸಕ ಚಾಲನೆ ನೀಡಿದರು.

ಬಾಳೆ ಸಸಿಗಳು ಕಳಪೆ: ಕಂಪನಿ ವಿರುದ್ಧ ಕ್ರಮಕ್ಕೆ ಒತ್ತಾಯ

ವಿಜಯನಗರ: ಕಳಪೆ ಗುಣಮಟ್ಟದ ಬಾಳೆಸಸಿ ನೀಡಿರುವ ಕಂಪನಿ ವಿರುದ್ಧ ಕ್ರಮ ಕೈಗೊಳ್ಳಬೇಕು. ರೋಗಗ್ರಸ್ತ ಸಸಿಗಳನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪರೀಕ್ಷೆಗೆ ಒಳಪಡಿಸುವಂತೆ ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ಈ ಕುರಿತು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಿರುವ ರೈತ ಸಂಘದ ಮುಖಂಡರು, ಹೊಸಪೇಟೆ ಹೋಬಳಿ ವ್ಯಾಪ್ತಿಗೆ ಬರುವ ರಾಜಾಪುರ ರೈತರು ತಮ್ಮ ಜಮೀನುಗಳಲ್ಲಿ ಬಾಳೆ ಸಸಿ ನಾಟಿ ಮಾಡಲು ವಿವಿದ ಕಂಪನಿಯಿಂದ ಪ್ರತಿ ಗಿಡಕ್ಕೆ 22 ರೂ. ಗಳಂತೆ ಸುಮಾರು 6000 ಗಿಡಗಳನ್ನು ಒದಗಿಸಿದೆ. ನಾಟಿ ಮಾಡಿದ ಬಾಳೆ ಸಸಿಗಳು ವೈರಸ್ ಖಾಯಿಲೆಗೆ ತುತ್ತಾಗಿ ಬೆಳೆದು ನಿಲ್ಲುವ ಮೊದಲೇ ಕಮರಿ ಹೋಗುತ್ತಿವೆ. ಕಂಪನಿಯವರು ಗಿಡಗಳು ಹಾನಿಗೀಡಾದರೆ, ಅದರ ಒಟ್ಟು ಸಸಿಗಳ ಹಣವನ್ನು ಹಾಗೂ ಅದರ ನಾಟಿಯ ಆರಂಭದಲ್ಲಿ ತಗುಲಿದ ಕೃಷಿ ನಷ್ಟವನ್ನು ಭರಿಸುವುದಾಗಿ ಹೇಳಿದ್ದರು. ಈ ಭರವಸೆಗಳಿಂದ ಸಾವಿರಾರು ರೂಪಾಯಿಗಳು ಸಾಲ ಮಾಡಿ ಸಸಿ ಖರೀದಿಸಿದ ರೈತರು ನಾಟಿ ಮಾಡಿದ್ದಾರೆ.

ಸಸಿ ನೀಡಿದ ಕಂಪನಿಯಿಂದ ಮೋಸ ಹೋದ ರೈತರಿಗೆ ಪರಿಹಾರ ಕೊಡಿಸುವಂತೆ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಿಗೆ ಆಗ್ರಹಿಸಿದರು.

ರೈತ ಸಂಘದ ಮುಖಂಡರಾದ ಆನಂದ್, ಎನ್.ಯಲ್ಲಾಲಿಂಗ, ಚಂದ್ರು, ಕರೆ ಹನುಮಂತ, ಕರಿಯಣ್ಣ, ನಬೀಸಾಬ, ಕಣಿಮಪ್ಪ, ಎ.ಸ್ವಾಮಿ, ದುರುಗಪ್ಪ, ಗಣೇಶ ಸೇರಿದಂತೆ ಇತರರಿದ್ದರು.



ಸಿಮೆಂಟ್ ಕಂಪನಿ ಧೋರಣೆ ವಿರೋಧಿಸಿ ಧರಣಿ

ಕಲಬುರಗಿ: ಕಾರ್ಖಾನೆ ಸ್ಥಾಪನೆ ನೆಪದಲ್ಲಿ ಭೂಮಿ ಪಡೆದು ದಶಕ ಕಳೆದರೂ ಉದ್ಯಮ ಆರಂಭಿಸದ ಗುಲಬರ್ಗಾ ಸಿಮೆಂಟ್ ಕಂಪನಿ ಧೋರಣೆ ವಿರೋಧಿಸಿ, ಕೀರಣಗಿ, ಸೋಮನಾಥಹಳ್ಳಿ ಹಾಗೂ ಫಿರೋಜಾಬಾದ್ ಗ್ರಾಮಗಳ ನೂರಾರು ರೈತರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ರೈತ ಮುಖಂಡ ಶರಣಬಸಪ್ಪ ಮಮಶೆಟ್ಟಿ ಅವರ ನೇತೃತ್ವದಲ್ಲಿ ನಡೆದ ಈ ಬೃಹತ್ ಪ್ರತಿಭಟನೆಯಲ್ಲಿ ಭೂ ಸಂತ್ರಸ್ತರು ಜಿಲ್ಲಾಡಳಿತ ಮತ್ತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. 2013ರಲ್ಲಿ ಕೆಐಎಡಿಬಿ ಮುಖಾಂತರ 1821 ಎಕರೆ ಫಲವತ್ತಾದ ಭೂಮಿಯನ್ನು ಸಿಮೆಂಟ್ ಕಾರ್ಖಾನೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆದರೆ, ಈವರೆಗೆ ಕಾರ್ಖಾನೆ ಸ್ಥಾಪನೆಯಾಗದ ಕಾರಣ ನಿಯಮದಂತೆ ಭೂಮಿಯನ್ನು ಮರಳಿಸಬೇಕು ಎಂದು ರೈತರು ಪಟ್ಟು ಹಿಡಿದರು.

ಪರಿಹಾರ ಮೊತ್ತದ ವಿಚಾರದಲ್ಲೂ ರೈತರಿಗೆ ಅನ್ಯಾಯವಾಗಿದ್ದು, ಪ್ರತಿ ಎಕರೆಗೆ ನಿಗದಿಪಡಿಸಿದ್ದ 16 ಲಕ್ಷ ರೂ. ಪರಿಹಾರವನ್ನು ನಂತರ 12 ಲಕ್ಷಕ್ಕೆ ಇಳಿಸಲಾಗಿದೆ. ಕಳೆದ 13 ವರ್ಷಗಳಿಂದ ಬಾಕಿ ಇರುವ 4 ಲಕ್ಷ ರೂ.ಗಳ ಹಣ ನೀಡದೆ ಅಧಿಕಾರಿಗಳು ಸತಾಯಿಸುತ್ತಿದ್ದಾರೆ. ಇದರಿಂದಾಗಿ ರೈತರು ಭೂಮಿಯೂ ಇಲ್ಲದೆ, ಹಣವೂ ಇಲ್ಲದೆ ಬೀದಿಗೆ ಬಿದ್ದಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ಈ ನಿರ್ಣಾಯಕ ಹೋರಾಟದಲ್ಲಿ ರೈತ ಮುಖಂಡರಾದ ಶಂಕ್ರೆಪ್ಪಾ ಗೊಬ್ಬುರು, ಇರಣ್ಣಾ ಉಳಾಗಡ್ಡಿ, ಭಿಮಾಶಂಕರ ಸರಡಗಿ, ಪ್ರಭು ಭೈರಾಡಗಿ ಹಾಗೂ ಮಹಿಳಾ ರೈತ ಹೋರಾಟಗಾರರಾದ ಸಿದ್ದಮ್ಮ ನರಿಬೋಳಿ, ಗುರಮ್ಮಾ ರಾವೂರು, ನಾಗಮ್ಮಾ ಮಡಿಕ್ಯಾಳ ಸೇರಿದಂತೆ ಮೂರು ಗ್ರಾಮಗಳ ನೂರಾರು ಭೂ ಸಂತ್ರಸ್ತರು ಪಾಲ್ಗೊಂಡಿದ್ದರು.

ಜಿಲ್ಲಾಧಿಕಾರಿ ಮೂಲಕ ಮನವಿ

ರೈತರ ಜಮೀನು ವಾಪಸಾತಿ ಮತ್ತು ಪರಿಹಾರದ ಕುರಿತಾದ ವಿವಿಧ ಬೇಡಿಕೆಗಳ ಹಕ್ಕೊತ್ತಾಯ ಪತ್ರವನ್ನು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು. ಶಾಸಕ ಎಂ.ವೈ.ಪಾಟೀಲ ಹಾಗೂ ವಿಧಾನ ಪರಿಷತ್ ಸದಸ್ಯ ಜಗದೇವ್ ಗುತ್ತೇದಾರ್ ಅವರ ಸಮ್ಮುಖದಲ್ಲಿ ಮೂರು ಗ್ರಾಮಗಳ ರೈತರು ಈ ಮನವಿ ಸಲ್ಲಿಸಿ, ಸರ್ಕಾರ ಕೂಡಲೇ ಮಧ್ಯಪ್ರವೇಶಿಸುವಂತೆ ಆಗ್ರಹಿಸಿದರು.



ಹೇಮರೆಡ್ಡಿ ಮಲ್ಲಮ್ಮನ ಬದುಕು ಸರ್ವಕಾಲಕ್ಕೂ ಶ್ರೇಷ್ಠ: ರೆಡ್ಡಿ

ಹೂವಿನಹಡಗಲಿ: ಸಹನೆ ಮತ್ತು ತಾಳ್ಮೆಯನ್ನು ತನ್ನ ಬದುಕಿನ ವಜ್ರ ಕವಚವನ್ನಾಗಿ ಮಾಡಿಕೊಂಡು ಕೆಡುಕನ್ನ ಬಯಸಿದವರಿಗೆ ಎಂದು ಕೆಡುಕಾಗದಿರಲೆಂದು ಸದಾ ಸಾತ್ವಿಕ ಕಾರ್ಯಗಳನ್ನೇ ಮಾಡುತ್ತಾ ಸ್ತ್ರೀ ಕುಲಕ್ಕೆ ಆದರ್ಶವಾದ ಶಿವಶರಣೆ ಮಹಾಸಾದ್ವಿ ಹೇಮರೆಡ್ಡಿ ಮಲ್ಲಮ್ಮನ ಬದುಕು ಸರ್ವಕಾಲಕ್ಕೂ ಅನುಕರಣೀಯವಾದದ್ದು ಎಂದು ರೆಡ್ಡಿ ಸಮಾಜ ಸೇವಾ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಎಸ್.ದ್ವಾರಕೀಶ್ ರೆಡ್ಡಿ ಹೇಳಿದರು.

ತಾಲೂಕಿನ ಹಿರೇಮಲ್ಲನಕೇರಿ ಗ್ರಾಮದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ ಕುರಿತು ಅವರು ಮಾತನಾಡಿದರು.

ಜಯಂತ್ಯುತ್ಸವ ಆಚರಣೆ ಅತ್ಯಂತ ಅರ್ಥಪೂರ್ಣವಾಗಿ ನೆರವೇರಿತು. ಹೇಮರೆಡ್ಡಿ ಮಲ್ಲಮ್ಮ ಸಮುದಾಯ ಭವನಕ್ಕೆ ಗ್ರಾಮದ ಮಕಾಸಿ ದೇವಪ್ಪನವರು ತಮ್ಮ ಸ್ವಂತ ನಿವೇಶನವನ್ನು ದಾನ ಮಾಡಿದರು. ಹೂವಿನಹಡಗಲಿ ತಾಲೂಕು ರೆಡ್ಡಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು. ರೆಡ್ಡಿ ಸಮಾಜದ ಉಪಾಧ್ಯಕ್ಷ ರಾಜೂರ ಮಲ್ಲಪ್ಪ ಖಜಾಂಚಿ ವಿಶ್ವನಾಥ ರೆಡ್ಡಿ, ಡಂಬಳ ಮುಖಂಡರಾದ ಮಲ್ಲಪ್ಪ ಡಂಬಳ, ಫಕ್ಕೀರಡ್ಡಿ ಡಂಬಳ, ರಾಜೂರು ಶಿವಣ್ಣ, ಬಂಡಿ ಮಲ್ಲಪ್ಪ, ಮಕಾಶಿ ನಿಂಗರೆಡ್ಡಿ, ದಾಟುನಾಳು ಹನುಮಂತಪ್ಪ, ತೇರಿನ ಮನೆ ಬಸವ ರೆಡ್ಡಪ್ಪ, ಬಸ್ರಳ್ಳಿ ಎಸ್.ಬಸರೆಡ್ಡಿ, ಹಾಗೂ ಹಿರೇಮಲ್ಲನಕೆರೆಯ ರೆಡ್ಡಿ ಸಮಾಜದ ಮುಖಂಡರು, ತಾಯಂದಿರು ಶ್ರದ್ಧಾ-ಭಕ್ತಿಯಿಂದ ಭಾಗವಹಿಸಿ ಭೂಮಿ ಪೂಜಾ ನೆರವೇರಿಸಿದರು. ಹಿರೇಮಲ್ಲನಕೆರೆಯ ಚೆನ್ನಬಸವ ಮಹಾಸ್ವಾಮೀಜಿ ಸಾನಿಧ್ಯ ವಹಿಸಿ ಆಶೀರ್ವಚನ ಮಾಡಿದರು. ಗ್ರಾಮದ ಯುವಕರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು. ಆಗಮಿಸಿದ ಸರ್ವರಿಗೂ ಪ್ರಸಾದವನ್ನು ಏರ್ಪಡಿಸಲಾಗಿತ್ತು.



ವಾಲ್ಮೀಕಿ ಪುತ್ಥಳಿ ಪ್ರತಿಷ್ಠಾಪನೆಗೆ ಮನವಿ

ಯಲಬುರ್ಗಾ: ಪಟ್ಟಣದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿಯನ್ನು ಪ್ರತಿಷ್ಠಾಪನೆ ಮಾಡುವಂತೆ ತಾಲೂಕು ವಾಲ್ಮೀಕಿ ಸಮಾಜದ ವತಿಯಿಂದ ಕ್ಷೇತ್ರದ ಶಾಸಕ, ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರಿಗೆ ಸಮಾಜದ ವತಿಯಿಂದ ಮನವಿ ಸಲ್ಲಿಸಿದರು.

ಸಮಾಜದ ಅಧ್ಯಕ್ಷ ಯಲ್ಲಪ್ಪ ಹಡಗಲಿ ಅವರ ನೇತೃತ್ವದಲ್ಲಿ ಇಲ್ಲಿಯ ಶಾಸಕರ ಕಚೇರಿಗೆ ತೆರಳಿದ ಸಮಾಜ ಬಾಂಧವರು ಶಾಸಕರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ ಸೂಕ್ತ ಸ್ಥಳದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿಯನ್ನು ಸರ್ಕಾರದ ಪರವಾಗಿ ಪ್ರತಿಷ್ಠಾಪಿಸಬೇಕೆಂದು ಮನವಿ ಮಾಡಿದರು.

ಬಳಿಕ ಶಾಸಕ ಬಸವರಾಜ ರಾಯರಡ್ಡಿ ಅವರು ಮನವಿ ಸ್ವೀಕರಿಸಿ ಮಾತನಾಡಿ, ಮಹರ್ಷಿ ವಾಲ್ಮೀಕಿ ಪುತ್ಥಳಿಯನ್ನು ಪಟ್ಟಣದ ಪ್ರಮುಖ ಸೂಕ್ತ ಸ್ಥಳದಲ್ಲಿ ಪುತ್ಥಳಿಯನ್ನು ಪ್ರತಿಷ್ಠಾಪನೆ ನಿರ್ಮಿಸಿ ಕೊಡಲಾಗುವುದು ಎಂದು ಭರವಸೆ ನೀಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆರಿಬಸಪ್ಪ ನಿಡಗುಂದಿ, ಉಪಾಧ್ಯಕ್ಷ ಸಂಗಣ್ಣ ಟೆಂಗಿನಕಾಯಿ, ವಾಲ್ಮೀಕಿ ಸಮಾಜದ ಗೌರವಾಧ್ಯಕ್ಷ ಹಂಚ್ಯಾಳಪ್ಪ ಪೂಜಾರ, ತಾಪಂ ಮಾಜಿ ಸದಸ್ಯ ಓಬಳಪ್ಪ ಕುಲಕರ್ಣಿ, ಶ್ರೀಕಾಂತಗೌಡ ಮಾಲಿಪಾಟೀಲ, ಅಶೋಕ ಮಾಲಿಪಾಟೀಲ, ಭೀಮಣ್ಣ ಹವಳಿ, ಕನಕಪ್ಪ ಪೂಜಾರ, ಮುತ್ತಣ್ಣ ತಳವಾರ, ಬಸವರಾಜ ಲಿಂಗನಬಂಡಿ, ಹನಮಂತಪ್ಪ ವಾಲ್ಮೀಕಿ, ಹನುಮಂತಪ್ಪ ಸಾಲಭಾವಿ, ಲಕ್ಷ್ಮಣ ಕುಲಕರ್ಣಿ ಸೇರಿದಂತೆ ಸಮಾಜ ಬಾಂಧವರು ಮತ್ತಿತ್ತರರು ಇದ್ದರು.



ಸರಣಿ ಮನೆಗಳ್ಳತನ: ಅಂತರ್ ಜಿಲ್ಲಾ ಕಳ್ಳರಿಬ್ಬರ ಬಂಧನ

ವಿಜಯನಗರ: ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಸರಣಿ ಕಳ್ಳತನ ಮಾಡಿ, ಸಾರ್ವಜನಿಕರ ನಿದ್ದೆಗೆಡಿಸಿದ್ದ ಇಬ್ಬರು ಅಂತರ್ ಜಿಲ್ಲಾ ಮನೆಗಳ್ಳರನ್ನು ಬಂಧಿಸುವಲ್ಲಿ ಹಗರಿಬೊಮ್ಮನಹಳ್ಳಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಬಂಧಿತರಿಂದ 14,06 ಲಕ್ಷ ರೂ. ಬೆಲೆ ಬಾಳುವ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಎಸ್.ತಿಳಿಸಿದರು.

ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂಧಿತರನ್ನು ಹಗರಿಬೊಮ್ಮನಹಳ್ಳಿ ತಾಲೂಕಿನ ಗದ್ದಿಕೇರಿ ಗ್ರಾಮದ ಕುಮಾರನಹಳ್ಳಿ ಆನಂದ(24) ಹಾಗೂ ಅರಳೇಹಳ್ಳಿಯ ಜಹಾಂಗೀರ್ ಭಾಷಾ(36) ಎಂದು ಗುರುತಿಸಲಾಗಿದೆ. ಈ ಪೈಕಿ ಜಹಾಂಗೀರ್ ಭಾಷಾ ಎಂಬಾತ ಹಳೆಯ ಅಪರಾಧಿಯಾಗಿದ್ದು, ಈ ಹಿಂದೆ ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ ಹಾಗೂ ಅರಸೀಕೆರೆ ಪೊಲೀಸ್ ಠಾಣೆಗಳಲ್ಲಿ ಬೈಕ್ ಕಳ್ಳತನ ಮತ್ತು ಮನೆಗಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿ ಜೈಲು ಶಿಕ್ಷೆ ಅನುಭವಿಸಿದ್ದ ಎಂದು ವಿಚಾರಣೆ ವೇಳೆ ಗೊತ್ತಾಗಿದೆ. ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ ಅವರ ನೇತೃತ್ವದಲ್ಲಿ ಸಿಪಿಐ ವಿಕಾಸ್ ಪಿ.ಲಮಾಣಿ, ಪಿಎಸ್‌ಐಗಳಾದ ಉಮಾಪತಿ ಬಿ, ತಾರಾಬಾಯಿ, ನಾಗರಾಜ ಕೊಟಗಿ ಹಾಗೂ ಸಿಬ್ಬಂದಿ ಒಳಗೊಂಡ ತಂಡ ಹಗಲಿರುಳು ಕಾರ್ಯಾಚರಣೆ ನಡೆಸಿ ಇಬ್ಬರು ಆರೋಪಿಗಳನ್ನು ಜಾಲಕ್ಕೆ ಬೀಳಿಸಿದ್ದಾರೆ ಎಂದು ಎಸ್ಪಿ ಎಸ್. ಜಾಹ್ನವಿ ಅವರು ಶ್ಲಾಘಿಸಿದ್ದಾರೆ.



ನಾಲ್ಕು ಪ್ರಕರಣಗಳು ಪತ್ತೆ

ಬಂಧಿತ ಆರೋಪಿಗಳ ವಿಚಾರಣೆಯಿಂದ ಹಗರಿಬೊಮ್ಮನಹಳ್ಳಿ ಠಾಣೆಯ 2, ತಂಬ್ರಹಳ್ಳಿ ಹಾಗೂ ಮರಿಯಮ್ಮನಹಳ್ಳಿ ಠಾಣೆಯ ತಲಾ ಒಂದು ಪ್ರಕರಣ ಸೇರಿದಂತೆ ಒಟ್ಟು 4 ಪ್ರಮುಖ ಮನೆಗಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಬಂಧಿತರಿಂದ 96.54 ಗ್ರಾಂ ಚಿನ್ನಾಭರಣ (ಮೌಲ್ಯ 12.56 ಲಕ್ಷ ರೂ.) ಹಾಗೂ 750 ಗ್ರಾಂ ಬೆಳ್ಳಿ (ಮೌಲ್ಯ 1.50 ಲಕ್ಷ ರೂ.) ವಶಕ್ಕೆ ಪಡೆಯಲಾಗಿದೆ. ಎಎಸ್‌ಪಿ ಮಂಜುನಾಥ, ಸಿಪಿಐ ವಿಕಾಸ ಲಮಾಣಿ ಮತ್ತಿತರೆ ಅಧಿಕಾರಿಗಳು ಇದ್ದರು.

ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ

ಬಳ್ಳಾರಿ: ಮಹಾಯೋಗಿ ವೇಮನ ಪೀಠದಲ್ಲಿ ನಡೆದ ಮಹಾಸಾದ್ವಿ ಶ್ರೀಮಲ್ಲಮ್ಮ ಅವರ 604ನೇ ವಾರ್ಷಿಕ ಜಯಂತ್ಯುತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ವೇಮನಪೀಠದ ಗೌರವಾಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ರೆಡ್ಡಿ ಜನಸಂಘದ ನಿರ್ದೇಶಕ ಗಣಪಾಲ ಐನಾಥ ರೆಡ್ಡಿ ಅವರು ಮಾತನಾಡಿ, ಮಹಾಸಾದ್ವಿ ಶ್ರೀಮಲ್ಲಮ್ಮ ಅವರ ಜೀವನ ಆದರ್ಶ, ಸಕಲ ಮನುಕುಲಕ್ಕೆ ದಾರಿದೀಪವಾಗಿದೆ ಎಂದರು. ಲೋಕೋಪಯೋಗಿ ಇಲಾಖೆಯ ನಿವೃತ್ತ ಸೂಪರಿಂಡೆಂಟ್ ವೈ. ಎಲ್.ಕೃಷ್ಣ ರೆಡ್ಡಿ, ಅಧ್ಯಕ್ಷ ಡಾ.ಬಸವರಾಜ ರೆಡ್ಡಿ, ಕಾರ್ಯದರ್ಶಿ ಸಂಜೀವರೆಡ್ಡಿ, ಎನ್.ಟಿ.ಶ್ರೀನಿವಾಸ ರೆಡ್ಡಿ, ಹಸಿರು ಸೇನೆ ರಾಜ್ಯ ಅಧ್ಯಕ್ಷ ಕರೂರು ಮಾಧವ ರೆಡ್ಡಿ, ಚಾಗನೂರು ಸೇಷಾರೆಡ್ಡಿ, ರೆಡ್ಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಎಂ.ನಾಗರಾಜ ರೆಡ್ಡಿ ಸಾಗರ್ ಎಂ., ಆದರ್ಶ ಎಂ., ಪ್ರಾಚಾರ್ಯರಾದ ಶಾವಂತಿ, ಶಾರದಾ, ರಾಯದುರ್ಗ ಮೋಹನ ರೆಡ್ಡಿ, ಗಂಗಿರೆಡ್ಡಿ, ಸೂರಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು. ನಿವೃತ್ತ ಉಪನ್ಯಾಸಕರು ಹಾಗೂ ಗಾಯಕರಾದ ಎನ್. ಬಸವರಾಜ ಅವರು ಮಲ್ಲಮ್ಮ ಗೀತೆಗಳನ್ನು ಪ್ರಸ್ತುತಪಡಿಸಿದರು. ಇದಕ್ಕೂ ಮುನ್ನ ಮಲ್ಲಮ್ಮ ಹಾಗೂ ವೇಮನವರ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಅರ್ಚಕ ವೇದಮೂರ್ತಿ ವೀರಭದ್ರಯ್ಯ ಸ್ವಾಮಿ ಅವರು ನೆರವೇರಿಸಿದರು. ನಂತರ ತೀರ್ಥ ಪ್ರಸಾದ ವಿತರಣೆ ಮಾಡಲಾಯಿತು.



ಕೆಪಿಎಸ್ ಶಾಲೆಗೆ ಮಕ್ಕಳನ್ನು ಸೇರಿಸಲು ವಿರೋಧ

ಕುರುಗೋಡು: ತಾಲೂಕಿನ ಮದಿರೆ ಗ್ರಾಮದಲ್ಲಿ ಮಂಗಳವಾರ ಎಐಡಿಎಸ್‌ಓ (ಆಲ್ ಇಂಡಿಯಾ ಡೆಮೊಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್) ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದಲ್ಲಿ ಕೋಳೂರಿನಲ್ಲಿ ಆರಂಭವಾಗುವ ಕೆಪಿಎಸ್ ಶಾಲೆಗೆ ಮಕ್ಕಳನ್ನು ಸೇರಿಸಲು ಒಪ್ಪಿಗೆ ಇರುವುದಿಲ್ಲ ಎಂದು ಶಾಲೆ ಮುಂದೆ ಬ್ಯಾನರ್ ಕಟ್ಟಿ, ಹೋರಾಟ ಮಾಡಲಾಯಿತು.

ಎಐಡಿಎಸ್‌ಓ ಜಿಲ್ಲಾ ಉಪಾಧ್ಯಕ್ಷೆ ಎಂ.ಶಾಂತಿ ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ವಿರುದ್ಧ ಇಡೀ ರಾಜ್ಯದಲ್ಲಿ ತೀವ್ರ ವಿರೋಧ ನಡುವೆ ರಾಜ್ಯ ಸರ್ಕಾರವು ತನ್ನ ಹಟಮಾರಿ ಧೋರಣೆ ಬೀಡದೆ ಕೆಪಿಎಸ್ ಶಾಲೆಗಳನ್ನು ಆರಂಭಿಸಲು ಮುಂದಾಗಿದೆ. ಇದರಿಂದಾಗಿ ಬಡವರು ಮಕ್ಕಳು ಓದುವ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿರುವ ಅತ್ಯಂತ ಖಂಡನೀಯ. ಮಹಾತ್ಮ ಜ್ಯೋತಿಬಾಫುಲೆ ಅವರದು ಈ ವರ್ಷ ಜನ್ಮ ದ್ವಿ ಶತಮಾ ನೋತ್ಸವ ಸಂದರ್ಭದಲ್ಲಿ ಜೀವನ ಹೋರಾಟದಿಂದ ಸ್ಪೂರ್ತಿ ಪಡೆದು ನಮ್ಮೂರ ಶಾಲೆಯನ್ನು ಉಳಿಸಿಕೊಳ್ಳಲು ಪಣ ತೊಡಣ ಎಂದು ಹೇಳಿದರು.

ನಂತರ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಗುರಳ್ಳಿ ರಾಜ ಮಾತನಾಡಿ, ಪುಲೆ ದಂಪತಿಗಳ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಮತ್ತು ಶೋಷಿತ ಜನರಿಗಾಗಿ ನಡೆಸಿದ ಹೋರಾಟದ ಕಥೆಯನ್ನು ಮಕ್ಕಳಿಗೆ ಹೇಳುತ್ತಾ ಮಕ್ಕಳು ಜ್ಯೋತಿಬಾಪುಲೆ ಅವರಂತಹ ಮಹಾನ್ ವ್ಯಕ್ತಿಗಳ ಜೀವನದಿಂದ ಸ್ಪೂರ್ತಿ ಪಡೆಯಬೇಕು. ಸಮಾಜದ ಒಳಿತಿಗಾಗಿ ಮತ್ತು ಶಿಕ್ಷಣಕ್ಕಾಗಿ ಅವರ ಬದುಕನ್ನೇ ಮುಡುಪಾಗಿಟ್ಟ ಅವರ ಆದರ್ಶಗಳು ಇಂದಿನ ಪೀಳಿಗೆಗೆ ದಾರಿದೀಪವಾಗಿವೆ ಎಂದರು. ಮತ್ತು ನಿಸ್ವಾರ್ಥ ಸೇವೆ ಮತ್ತು ಹೋರಾಟದ ಕಿಚ್ಚನ್ನು ಮಕ್ಕಳು ಮೈಗೂಡಿಸಿಕೊಳ್ಳಬೇಕು ಸಾಮಾಜಿಕ ಬದ್ಧತೆ ಮತ್ತು ಉನ್ನತ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಕರೆ ನೀಡಿದರು.

ಈ ವೇಳೆ ಎಐಡಿಎಸ್‌ಓ ಜಿಲ್ಲಾ ಉಪಾಧ್ಯಕ್ಷರಾದ ಶಾಂತಿ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಸದಸ್ಯರಾದ ಸುರೇಶ್, ರಾಜಶೇಖರ್, ಬಸವರಾಜ್ ಇತರರಿದ್ದರು.

